ಶನಿವಾರ, ಜನವರಿ 29, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 29 | ಪುಟ 18

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ

ಹಲವು ಆಯಾಮಗಳನ್ನು ಹೊಂದಿರುವ 'ಸಿಸೇರಿಯನ್' ಹೆರಿಗೆಯ ಹಿಂದೆ ಸಾಕಷ್ಟು ವೈಯಕ್ತಿಕ, ಮಾನಸಿಕ, ಶಾರೀರಿಕ ಕಾರಣಗಳೂ ಅಡಕವಾಗಿವೆ ಎನ್ನುವುದನ್ನೂ ಒಪ್ಪಿಕೊಳ್ಳಬೇಕಿದೆ.



ಚರ್ಚೆ ಐಎಎಸ್ ಅಧಿಕಾರಿಗಳ ನಿಯೋಜನೆ ನಿಯಮಕ್ಕೆ ತಿದ್ದುಪಡಿ ತರುವ ಕೇಂದ್ರದ ಪ್ರಸ್ತಾವ ಸರಿಯೇ? 9

ಗೋವಾ ಬಿಜೆಪಿ: 4 ಕ್ಷೇತ್ರಗಳಲ್ಲಿ ತಣಿಯದ ಬಂಡಾಯ 11

ಅನಂತ ನಾಗೇಶ್ವರನ್ ಹೊಸ ಸಿಇಎ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,200 ▼	17,102 ▼	₹49,550 (ಬೆಂಗಳೂರು) ▼	₹63,200 (ಬೆಂಗಳೂರು) ▼	75.07 ▲

ಪಿಜಿ ನೀಟ್: ದಂತ ವೈದ್ಯಕೀಯ ಕೋರ್ಸ್ ಸೀಟು ಹಂಚಿಕೆ 31ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2021ನೇ ಸಾಲಿನ ಸ್ನಾತಕೋತ್ತರ ದಂತ ವೈದ್ಯಕೀಯ ಪ್ರವೇಶಕ್ಕಾಗಿ 'ಮಾಪ್‌ಅಪ್' ಸುತ್ತಿನ ಸೀಟು ಹಂಚಿಕೆ ಜ.31ರಂದು ನಡೆಯಲಿದೆ. ಈ ಬಗ್ಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ವೇಳಾಪಟ್ಟಿ ಪ್ರಕಟಿಸಿದೆ.

ಈಗಾಗಲೇ ದಾಖಲಾತಿ ಪರಿಶೀಲನೆ ಮಾಡಿಕೊಂಡು ಸೀಟು ಹಂಚಿಕೆಯಾಗದೇ ಇರುವ ಅಭ್ಯರ್ಥಿಗಳು ಸ್ನಾತಕೋತ್ತರ ದಂತ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ಹಾಜರಾಗಬಹುದು ಎಂದು ಕೆಇಎ ತಿಳಿಸಿದೆ.

ಮಾಪ್ ಅಪ್ ಸುತ್ತಿನಲ್ಲಿ ಸೀಟುಗಳು ಮುಗಿದರೆ ಕೌನ್ಸೆಲಿಂಗ್ ಸ್ಥಗಿತಗೊಳಿಸಲಾಗುವುದು. ಮಾಪ್‌ಅಪ್ ಸುತ್ತಿಗೆ ಮೊದಲು ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಸೀಟುಗಳ ಲಭ್ಯತೆ ಪರಿಶೀಲಿಸಬೇಕು ಎಂದು ಕೆಇಎ ಸೂಚಿಸಿದೆ.

ವಿವರವಾದ ಮಾಹಿತಿಗೆ: http://kea.kar.nic.in ವೀಕ್ಷಿಸಬೇಕು.

'12 ಶಾಸಕರ ಅಮಾನತು ಅಸಾಂವಿಧಾನಿಕ' 3A

ಚಿನಕುರಳಿ

ಪ್ರಕಾಶ್ ಶೆಟ್ಟಿ

ಬಡ್ತಿ ಮೀಸಲು ನಿಗದಿ ರಾಜ್ಯ ಸರ್ಕಾರಗಳ ಹೊಣೆ: ನ್ಯಾಯಾಲಯದ ಸ್ಪಷ್ಟನೆ

'ಸುಪ್ರೀಂ' ಮಾನದಂಡ ಇಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಎಸ್‌ಸಿ ಮತ್ತು ಎಸ್‌ಟಿ) ಉದ್ಯೋಗಿಗಳಿಗೆ ಸರ್ಕಾರಿ ನೌಕರಿಯಲ್ಲಿ ಬಡ್ತಿ ಮೀಸಲು ನೀಡಲು ಮಾನದಂಡ ರೂಪಿಸಬೇಕು ಎಂಬ ಕೋರಿಕೆಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ತಿರಸ್ಕರಿಸಿದೆ.

ಎಸ್‌ಸಿ, ಎಸ್‌ಟಿ ಸಮುದಾಯಗಳ ನೌಕರರಿಗೆ ಅಗತ್ಯ ಪ್ರಾತಿನಿಧ್ಯ ಇಲ್ಲ ಎಂಬುದನ್ನು ದತ್ತಾಂಶಗಳ ಮೂಲಕ ರಾಜ್ಯ ಸರ್ಕಾರವೇ ಸ್ಥಾಪಿಸಬೇಕು ಎಂದು ನ್ಯಾಯಮೂರ್ತಿ ನಾಗೇಶ್ವರ ರಾವ್ ನೇತೃತ್ವದ ತ್ರಿಸದಸ್ಯ ಪೀಠವು ಹೇಳಿದೆ.

ಎಂ. ನಾಗರಾಜ್ ಮತ್ತು ಜರ್ನೈಲ್ ಸಿಂಗ್ ಪ್ರಕರಣದ ತೀರ್ಪುಗಳ ಆಧಾರದಲ್ಲಿ ಹೇಳುವುದಾದರೆ, ಸುಪ್ರೀಂ ಕೋರ್ಟ್ ಮಾನದಂಡ ರೂಪಿಸುವುದು ಸಾಧ್ಯವಿಲ್ಲ. ಪ್ರಾತಿನಿಧ್ಯಕ್ಕೆ ಸಂಬಂಧಿಸಿದ ದತ್ತಾಂಶಗಳನ್ನು ರಾಜ್ಯ ಸರ್ಕಾರಗಳೇ ಸಂಗ್ರಹಿಸಬೇಕು ಎಂದು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ಬಿ.ಆರ್.ಗವಾಯಿ ಅವರಿದ್ದ ಪೀಠ ಸ್ಪಷ್ಟಪಡಿಸಿದೆ.

ಎಸ್‌ಸಿ ಮತ್ತು ಎಸ್‌ಟಿಗಳಿಗೆ ಅಗತ್ಯ ಪ್ರಾತಿನಿಧ್ಯ ಇಲ್ಲ ಎಂಬುದನ್ನು ಇಡೀ ಸೇವೆಯಲ್ಲಿ ಅಥವಾ ವರ್ಗದಲ್ಲಿ ಇರುವ ಪ್ರಾತಿನಿಧ್ಯದ ಆಧಾರದಲ್ಲಿ ನಿರ್ಧಾರ ಮಾಡುವಂತಿಲ್ಲ. ಯಾವ ಶ್ರೇಣಿ ಅಥವಾ ಹುದ್ದೆಯ ವರ್ಗಕ್ಕೆ ಬಡ್ತಿ ಕೇಳಲಾಗಿದೆಯೋ ಆ ಶ್ರೇಣಿ ಅಥವಾ ಹುದ್ದೆ ವರ್ಗದಲ್ಲಿ ಪ್ರಾತಿನಿಧ್ಯ ಎಷ್ಟಿದೆ ಎಂಬುದನ್ನು ನೋಡಿಕೊಂಡು ನಿರ್ಧಾರ ತೆಗೆದುಕೊಳ್ಳಬೇಕು ಎಂದು ಪೀಠವು ಸ್ಪಷ್ಟಪಡಿಸಿದೆ.

ಪ್ರಮಾಣಬದ್ಧ ಪ್ರಾತಿನಿಧ್ಯ ಮತ್ತು ಅಗತ್ಯ ಪ್ರಾತಿನಿಧ್ಯದ ವಿಚಾರದಲ್ಲಿ ಹೆಚ್ಚಿನ ವಿಶ್ಲೇಷಣೆ ನಡೆಸಿಲ್ಲ. ಎಸ್‌ಸಿ ಮತ್ತು ಎಸ್‌ಟಿ ಸಮುದಾಯದ ನೌಕರರಿಗೆ ಬಡ್ತಿಯಲ್ಲಿ ಮೀಸಲಾತಿ ನೀಡಲು ಪ್ರಾತಿನಿಧ್ಯ ಮತ್ತು ಇತರ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವ ವಿಚಾರಗಳನ್ನು ರಾಜ್ಯಗಳಿಗೆ ಬಿಡಲಾಗಿದೆ ಎಂದು ಪೀಠವು ಹೇಳಿದೆ.

2021ರ ಅಕ್ಟೋಬರ್ 26ರಂದು ತೀರ್ಪನ್ನು ಕಾಯ್ದಿರಿಸಲಾಗಿತ್ತು.

ಬಡ್ತಿ ಮೀಸಲಾತಿಯನ್ನು ಜಾರಿಗೊಳಿಸಲು ನಿಖರ ಮತ್ತು ನಿರ್ದಿಷ್ಟ ಮಾನದಂಡವನ್ನು ರೂಪಿಸುವಂತೆ ಕೇಂದ್ರ ಸರ್ಕಾರ ಕೂಡ ಸುಪ್ರೀಂ ಕೋರ್ಟನ್ನು ಕೋರಿತ್ತು.

ಎಸ್‌ಸಿ, ಎಸ್‌ಟಿ ಸಮುದಾಯಗಳು ವರ್ಷಗಳಿಂದ ಮೂಲೆಗುಂಪಾಗುತ್ತಾ ಬಂದಿವೆ. ಅವರಿಗೆ ಸಮಾನ ಅವಕಾಶ ಕೊಡುವುದಕ್ಕಾಗಿ ಮೀಸಲಾತಿಯ ರೂಪದಲ್ಲಿ ಸಮಾನತೆಯನ್ನು ಜಾರಿ ಮಾಡಬೇಕು ಎಂದು ಕೇಂದ್ರದ ಪರವಾಗಿ ವಾದಿಸಿದ್ದ ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್ ಹೇಳಿದ್ದರು.

10ನೇ ಪುಟ ನೋಡಿ

ರಾಜ್ಯದಲ್ಲಿ ಬಡ್ತಿ ಮೀಸಲಾತಿ ನೀತಿ ಮರುಪರಿಶೀಲನೆ?

ಬೆಂಗಳೂರು: ಸರ್ಕಾರಿ ನೌಕರರಿಗೆ ಬಡ್ತಿಯಲ್ಲೂ ಮೀಸಲಾತಿ ನಿಗದಿಪಡಿಸುವುದಕ್ಕೆ ಅದನ್ನು ಸಮರ್ಥಿಸುವಂತಹ ಬೃಹತ್ ಪ್ರಮಾಣದ ಅಂಕಿಅಂಶ ಅಗತ್ಯವಿದೆ ಎಂದು ಸುಪ್ರೀಂಕೋರ್ಟ್ ಹೇಳಿರುವ ಕಾರಣದಿಂದ ರಾಜ್ಯದಲ್ಲಿ ಬಡ್ತಿ ಮೀಸಲಾತಿ ನೀತಿ ಕುರಿತು ಸರ್ಕಾರ ಮರುಪರಿಶೀಲನೆಗೆ ಮುಂದಾಗುವ ಸಾಧ್ಯತೆ ಇದೆ.

ಹಾಗಾದಲ್ಲಿ, ಪರಿಶಿಷ್ಟ ಜಾತಿ (ಎಸ್.ಸಿ) ಮತ್ತು ಪರಿಶಿಷ್ಟ ಪಂಗಡಗಳ (ಎಸ್.ಟಿ) ಸಾವಿರಾರು ಸರ್ಕಾರಿ ನೌಕರರು ಸಮಸ್ಯೆಗೆ ಸಿಲುಕಲಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, 'ನ್ಯಾಯಾಲಯದ ನಿಲುವಿನ ಕುರಿತು ತಕ್ಷಣಕ್ಕೆ ನನಗೆ ಮಾಹಿತಿ ಇಲ್ಲ. ವಿಸ್ತೃತವಾದ ಮಾಹಿತಿ ಪಡೆದ ಬಳಿಕ ಅಧಿಕಾರಿಗಳ ಜತೆ ಚರ್ಚಿಸಿ, ಮುಂದುವರಿಯಲಾಗುವುದು' ಎಂದರು.

10ನೇ ಪುಟ ನೋಡಿ

ಆಯುಷ್ಮಾನ್: ಚಿಕಿತ್ಸೆಗೆ ತಪ್ಪದ ಅಲೆದಾಟ

ಕೋವಿಡ್‌ನಿಂದಾಗಿ ಅನ್ಯ ಕಾಯಿಲೆಗಳಿಗೆ ಸವಾಲಾದ ಚಿಕಿತ್ಸೆ

● ವರುಣ ಹೆಗಡೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಕಾಣಿಸಿಕೊಂಡ ಬಳಿಕ 'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ' ಯೋಜನೆಗೆ ಹಿನ್ನಡೆಯಾಗಿದೆ. ಕೋವಿಡೇತರ ರೋಗಿಗಳಿಗೆ ಯೋಜನೆಯಡಿ ವೈದ್ಯಕೀಯ ಸೇವೆ ಪಡೆದುಕೊಳ್ಳುವುದು ಸವಾಲಾಗಿದೆ.

ದುಬಾರಿ ವೆಚ್ಚದ ಚಿಕಿತ್ಸೆಗಳನ್ನು ಪಡೆಯಲಾಗದ ಬಡ–ಮಧ್ಯಮ ವರ್ಗದ ರೋಗಿಗಳಿಗೆ ಸರ್ಕಾರಿ ಆಸ್ಪತ್ರೆಗಳಲ್ಲೇ ಅದೇ ಮಾದರಿಯ ಚಿಕಿತ್ಸೆ ಉಚಿತವಾಗಿ ಒದಗಿಸುವುದು ಈ ಯೋಜನೆಯ ಗುರಿ. ಆದರೆ, ರಾಜ್ಯದಲ್ಲಿ 2020ರ ಮಾರ್ಚ್‌ನಲ್ಲಿ ಕೋವಿಡ್ ಕಾಣಿಸಿಕೊಂಡ ಬಳಿಕ ಕೋವಿಡೇತರ ಬಹುತೇಕ ಚಿಕಿತ್ಸೆಗಳು ಕಡೆಗಣಿಸಲ್ಪಟ್ಟಿವೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಕೋವಿಡ್ ಚಿಕಿತ್ಸೆಗೆ ಮೊದಲ ಆದ್ಯತೆ ನೀಡಿ, ಹಾಸಿಗೆಗಳನ್ನು ಮೀಸಲಿರಿಸಲಾಗಿದೆ. ಅದೇ ರೀತಿ, ಖಾಸಗಿ ಆಸ್ಪತ್ರೆಗಳಲ್ಲಿಯೂ ಕೆಲ ಶಸ್ತ್ರಚಿಕಿತ್ಸೆಗಳನ್ನು ಮುಂದೂಡುವಂತೆ ಸೂಚಿಸಲಾಗುತ್ತಿದೆ. ಇದರಿಂದಾಗಿ ಅನ್ಯ ಕಾಯಿಲೆ ಎದುರಿಸುತ್ತಿರುವವರು ಯೋಜನೆಯಡಿ ಚಿಕಿತ್ಸೆ ಪಡೆದುಕೊಳ್ಳುವುದು ಸಮಸ್ಯೆಯಾಗಿದೆ.

ಸರ್ಕಾರಿ ಆಸ್ಪತ್ರೆಗಳಲ್ಲಿ ಸಮಸ್ಯೆಯಾಗದಂತೆ ಈ ಯೋಜನೆಯಡಿ ವೈದ್ಯಕೀಯ ಸೇವೆ ಒದಗಿಸಲಾಗುತ್ತಿದೆ. ತುರ್ತಾಗಿ ಅಗತ್ಯವಿಲ್ಲದ ಚಿಕಿತ್ಸೆಗಳನ್ನು ಮುಂದೂಡಲು ಸೂಚಿಸಲಾಗಿತ್ತು

ಡಿ. ರಂದೀಪ್, ಆರೋಗ್ಯ ಇಲಾಖೆ ಆಯುಕ್ತ

ಕೋವಿಡ್ ಮೂರನೇ ಅಲೆ ಕಾಣಿಸಿದ ಬಳಿಕ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ 19 ಸಾವಿರ ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ 31 ಸಾವಿರ ಹಾಸಿಗೆಗಳನ್ನು ಮೀಸಲಿರಿಸಲಾಗಿದೆ. 1.94 ಲಕ್ಷ ಹಾಸಿಗೆಗಳನ್ನು ಕೋವಿಡ್ ಚಿಕಿತ್ಸೆಗೆ ಗುರುತಿಸಲಾಗಿದೆ. ಹೀಗಾಗಿ, ಕೋವಿಡೇತರ ಕೆಲ ಚಿಕಿತ್ಸೆಗಳನ್ನು ಸದ್ಯಕ್ಕೆ ಮುಂದೂಡಲು ಇಲಾಖೆಯೇ ಕೋರಿದೆ.

ಆಯುಷ್ಮಾನ್ ಮಿಷನ್ ಅಡಿ 2018ರಲ್ಲಿ ಪ್ರಾರಂಭವಾಗಿರುವ 'ಆಯುಷ್ಮಾನ್ ಭಾರತ್' ಯೋಜನೆಯಡಿ ವರ್ಷಕ್ಕೆ ₹ 5 ಲಕ್ಷದವರೆಗೆ ಆರೋಗ್ಯ ವಿಮೆ ಕಲ್ಪಿಸಲು ಅವಕಾಶವಿದೆ.

10ನೇ ಪುಟ ನೋಡಿ

ನಮ್ಮದು ಅಂತಃಕರಣದ ಸರ್ಕಾರ: ಬೊಮ್ಮಾಯಿ

'ಜನ ಫಲಾನುಭವಿಯಾದರೆ ಸಾಲದು, ಆಡಳಿತದ ಪಾಲುದಾರರಾಗಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮದು ಅಂತಃಕರಣ ಮತ್ತು ಮಾನವೀಯ ನೆಲೆಗಟ್ಟಿನಲ್ಲಿ ಕೆಲಸ ಮಾಡುವ ಸರ್ಕಾರ. ರಾಜ್ಯದ ಜನರ ಸಮಸ್ಯೆ ಮತ್ತು ಸವಾಲುಗಳ ಅರಿವಿನ ಜತೆಗೆ ಅಂತಃಕರಣವೂ ಸರ್ಕಾರಕ್ಕಿದೆ. ಆರ್ಥಿಕ ಸಂಕಷ್ಟಗಳ ಮಧ್ಯೆಯೂ ಎಲ್ಲ ಜನರಿಗೂ ನೆರವು ನೀಡುವಂತಹ ಕೆಲಸಗಳನ್ನು ಸತತವಾಗಿ ಮಾಡುತ್ತಿದ್ದೇವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನೂತನ ಸರ್ಕಾರ ಆರು ತಿಂಗಳು ಪೂರೈಸುತ್ತಿರುವ ಪ್ರಯುಕ್ತ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ ನಲ್ಲಿ ಶುಕ್ರವಾರ ನಡೆದ ಸಮಾರಂಭದಲ್ಲಿ ಆರು ತಿಂಗಳ ಸಾಧನೆಯ ಚಿತ್ರಣ ನೀಡುವ ಕಿರುಹೊತ್ತಿಗೆ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಪ್ರವಾಹ ಸಂತ್ರಸ್ತರಿಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಯ ದುಪ್ಪಟ್ಟು ಮೊತ್ತವನ್ನು ಪರಿಹಾರ ರೂಪದಲ್ಲಿ ನೀಡಿರುವುದೇ ನಮ್ಮ ಸರ್ಕಾರ ಸರ್ವಸ್ಪರ್ಶಿ, ಸಂವೇದನಾಶೀಲ ಎಂಬುದಕ್ಕೆ ಸಾಕ್ಷಿ' ಎಂದರು.

ಆಡಳಿತದಲ್ಲಿ ಜನರು ಕೇವಲ ಫಲಾನುಭವಿಗಳಾಗಿ ಉಳಿಯಬಾರದು. ಪಾಲುದಾರರೂ ಆಗಬೇಕು ಎಂಬುದು ಸರ್ಕಾರದ ಆಶಯ ಎಂದು ಹೇಳಿದರು.

10ನೇ ಪುಟ ನೋಡಿ

'ಆಕ್ರಮಣಕಾರಿ ಆಟವೂ ಗೊತ್ತು'



'ನಮ್ಮದು ಒಂದು ಒಳ್ಳೆಯ ತಂಡ. ಆತ್ಮರಕ್ಷಣೆ, ಸಮಾಧಾನದಿಂದ ಆಡಲು ತಿಳಿದಿದೆ. ಅಗತ್ಯ ಇರುವಾಗ ಆಕ್ರಮಣಕಾರಿ ಆಟವನ್ನೂ ಆಡಲು ಗೊತ್ತು' ಎಂದು ಬೊಮ್ಮಾಯಿ ಹೇಳಿದರು.'ಆಡಳಿತ ನಡೆಸುವುದು ಫುಟ್‌ಬಾಲ್ ಆಟವಿದ್ದಂತೆ. ಯಾರೂ ಹೆಚ್ಚು ಕಾಲ ಚೆಂಡನ್ನು ತಮ್ಮ ಬಳಿ ಇರಿಸಿಕೊಳ್ಳುವಂತಿಲ್ಲ. ಒಬ್ಬರಿಂದ ಒಬ್ಬರಿಗೆ ದಾಟಿಸಲೇಬೇಕು. ಅಂತಿಮವಾಗಿ ಗೋಲ್ ಹೊಡೆಯುವುದೊಂದೇ ಗುರಿ' ಎಂದರು.

ನೇಣು ಬಿಗಿದ ಸ್ಥಿತಿಯಲ್ಲಿ ಮೃತದೇಹ

ಬಿಎಸ್‌ವೈ ಮೊಮ್ಮಗಳ ನಿಗೂಢ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮೊಮ್ಮಗಳು ಸೌಂದರ್ಯ (30) ಅವರು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ನೇಣು ಬಿಗಿದ ಸ್ಥಿತಿಯಲ್ಲಿ ಶುಕ್ರವಾರ ಬೆಳಿಗ್ಗೆ ಮೃತದೇಹ ಪತ್ತೆಯಾಗಿದೆ.

'ಯಡಿಯೂರಪ್ಪ ಪುತ್ರಿ ಪದ್ಮಾವತಿಯವರ ಮಗಳು, ವೈದ್ಯೆಯಾಗಿದ್ದ ಸೌಂದರ್ಯ ಅವರನ್ನು ಎಂ.ಎಸ್. ರಾಮಯ್ಯ ಆಸ್ಪತ್ರೆಯ ವೈದ್ಯ ಡಾ.ನೀರಜ್ ಜೊತೆ ಮೂರು ವರ್ಷಗಳ ಹಿಂದೆ ಮದುವೆ ಮಾಡಿಕೊಡಲಾಗಿತ್ತು. ದಂಪತಿಗೆ 9 ತಿಂಗಳ ಮಗು ಇದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಸೌಂದರ್ಯ

'ವಸಂತನಗರದಲ್ಲಿರುವ ಲೆಗೆಸಿ ಅಪಾರ್ಟ್‌ಮೆಂಟ್ ಸಮುಚ್ಚಯದ ಫ್ಲ್ಯಾಟ್‌ನಲ್ಲಿ ದಂಪತಿ ವಾಸವಿದ್ದರು. ಅದೇ ಮನೆಯಲ್ಲೇ ಸೌಂದರ್ಯ ಮೃತಪಟ್ಟಿದ್ದಾರೆ. ಅವರ ಸಾವಿನ ಬಗ್ಗೆ ಪತಿ ನೀರಜ್ ಹಾಗೂ ಕುಟುಂಬಸ್ಥರು ಹೇಳಿಕೆ ನೀಡಿದ್ದಾರೆ. ಅದನ್ನು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ತನಿಖೆ ಮುಂದುವರಿಸಲಾಗಿದೆ' ಎಂದೂ ತಿಳಿಸಿದರು.

ಗುರುವಾರವಷ್ಟೇ ಬಂದಿದ್ದ ಸೌಂದರ್ಯ: 'ಹೆರಿಗೆಗೆಂದು ಸೌಂದರ್ಯ ತವರು ಮನೆಗೆ ಹೋಗಿದ್ದರು. ಕೆಲದಿನ ಆಸ್ಪತ್ರೆಯಲ್ಲಿ ಇದ್ದರು. ಮಗು ಜನಿಸಿದ ಬಳಿಕ ಯಡಿಯೂರಪ್ಪ ಅವರ ಮನೆಯಲ್ಲಿ ಕೆಲ ತಿಂಗಳು ತಂಗಿದ್ದರು. ಅಲ್ಲಿಂದ, ಮಗು ಸಮೇತ ಗುರುವಾರವಷ್ಟೇ (ಜ.27) ಫ್ಲ್ಯಾಟ್‌ಗೆ ಬಂದಿದ್ದರು' ಎಂದು ಅಧಿಕಾರಿ ಹೇಳಿದರು.

7ನೇ ಪುಟ ನೋಡಿ

‘ಸಂಸತ್ತಿನಲ್ಲಿ ಕನ್ನಡಿಗರ ಪರ ದನಿ ಎತ್ತಿ’

ಬೆಂಗಳೂರು: ‘ಕನ್ನಡದ ಬಾವುಟವನ್ನು ಸುಟ್ಟು, ಸಂಗೊಳ್ಳಿ ರಾಯಣ್ಣನ ಪ್ರತಿಮೆ ಭಗ್ನಗೊಳಿಸಿದ ಕಿಡಿಗೇಡಿಗಳಿಗೆ ತಕ್ಕ ಶಿಕ್ಷೆಯಾಗಬೇಕು. ಈ ಬಗ್ಗೆ ರಾಜ್ಯದ ಎಲ್ಲ ಪಕ್ಷಗಳ ಸಂಸದರು ಸಂಸತ್ತಿನಲ್ಲಿ ಒಗ್ಗಟ್ಟಿನಿಂದ ಧ್ವನಿ ಎತ್ತಬೇಕು’ ಎಂದು ಜಯ ಕರ್ನಾಟಕ ಜನಪರ ವೇದಿಕೆ ಅಧ್ಯಕ್ಷ ಆರ್.ಚಂದ್ರಪ್ಪ ಹೇಳಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,‘ರಾಜ್ಯದಲ್ಲಿ ಈ ರೀತಿಯ ಘಟನೆಗಳು ಮುಂದೆ ನಡೆಯದಂತೆ ತಡೆಯಬೇಕು. ಕನ್ನಡಿಗರಿಗೆ ರಕ್ಷಣೆ ಒದಗಿಸುವ ಸಂಬಂಧ ಶಾಶ್ವತ ಕ್ರಮಗಳನ್ನು ಅನುಷ್ಠಾನಗೊಳಿಸಬೇಕು. ಈ ಕುರಿತು ನಾಯಕರು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕು’ ಎಂದು ಒತ್ತಾಯಿಸಿದರು.

ಅಶೋಕನಗರ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ

ನಂ. 1380/ಬಿ, 6ನೇ ಅಡ್ಡರಸ್ತೆ, ಅಶೋಕನಗರ, ಬನಶಂಕರಿ 1ನೇ ಹಂತ, 2ನೇ ಬ್ಲಾಕ್, ಬೆಂಗಳೂರು–560 050.
ಫೋನ್: 080–26506213, 26606365, 26600513, 26600514 ಮೊಬೈಲ್: +91 91085 10082, 91085 10084

ಬಹಿರಂಗ ಹರಾಜಿನ ಮೂಲಕ ಸ್ಥಿರಾಸ್ತಿಗಳ ಮಾರಾಟ

ಸೆಕ್ಯೂರಟೈಸೇಷನ್ ಮತ್ತು ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇನ್‌ಟ್ರಸ್ಟ್ ಕಾಯ್ದೆ 2002ರಲ್ಲಿರುವಂತೆ ಸ್ಥಿರಾಸ್ತಿ ಸ್ವತ್ತನ್ನು ಹರಾಜು ಮೂಲಕ ಮಾರಾಟ ಮಾಡಲಾಗುವುದು

ಸೆಕ್ಯುರಿಟೈಸೇಷನ್ ಮತ್ತು ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಅಧಿನಿಯಮ 2002ರ ಪ್ರಕರಣ 13(4)ರನ್ವಯ **ಅಶೋಕನಗರ ಕೋ–ಆಪರೇಟೀವ್ ಬ್ಯಾಂಕ್ ನಿ.**, ಅಧಿಕಾರ ಹೊಂದಿದ ಅಧಿಕಾರಿ ಇವರು ಸ್ವಾಧೀನಪಡಿಸಿಕೊಂಡಿರುವ ಮತ್ತು ಈಗ ಇವರ ವಶದಲ್ಲಿರುವ ಕೆಳಕಂಡ ಸ್ಥಿರಾಸ್ತಿಗಳನ್ನು ‘ಎಲ್ಲಿ ಹೇಗಿದೆಯೋ ಹಾಗೆ’ ಮತ್ತು ‘ಎಲ್ಲಿ ಏನಿದೆಯೋ ಹಾಗೆ’ ಸ್ಥಿತಿಯಲ್ಲಿ ಸಾರ್ವಜನಿಕ ಹರಾಜು ವಿಧಾನದಂತೆ ಬ್ಯಾಂಕಿನ ಅಧಿಕೃತ ಅಧಿಕಾರಿಯು ಈ ಕೆಳಕಂಡ ಕರಾರು ಮತ್ತು ಷರತ್ತುಗಳೊಂದಿಗೆ ಬಹಿರಂಗ ಹರಾಜು ಮಾಡಲು ನಿರ್ಧರಿಸಿರುತ್ತಾರೆ.

ಕ್ರ. ಸಂ.	ಸಾಲಗಾರರ ಹೆಸರು	ಸ್ಥಿರಾಸ್ತಿಗಳ ವಿವರ	ಕಾಯಿದಿಟ್ಟ ಬೆಲೆ / ಇಎಂಡಿ ರೂ.	ಬ್ಯಾಂಕಿಗೆ ಬರಬೇಕಾದ ಬಾಕಿ ಮೊಬಲಗು	ಬಹಿರಂಗ ಹರಾಜಿನ ದಿನಾಂಕ ಮತ್ತು ಸ್ಥಳ
1.	**ಶ್ರೀ ಅಲ್ತಫ್ ಪಾಶ,** ನಂ. 14, ಗಂಗಮ್ಮ ಟೆಂಪಲ್ ರಸ್ತೆ, ವಿ.ಬಿ. ಬಡಾವಣೆ, ಬೆಂಗಳೂರು–36. **ಹಾಲಿ ವುಡ್ ಶೂಸ್,** ನಂ. 4, ನೆಲಮಹಡಿ, ಖುರೇಶಿ ಬಿಲ್ಡಿಂಗ್, ಮಾರತ್ತಹಳ್ಳಿ, ಬೆಂಗಳೂರು–37. **ಎಂಎಬಿ ಎಂಟರ್‌ಪ್ರೈಸಸ್** ನಂ. 4, ನೆಲಮಹಡಿ, ಖುರೇಶಿ ಬಿಲ್ಡಿಂಗ್, ಮಾರತ್ತಹಳ್ಳಿ, ಬೆಂಗಳೂರು–37.	ಬೆಂಗಳೂರು–36, ಮಹದೇವಪುರ ವ್ಯಾಪ್ತಿ, ಬಿಬಿಎಂಪಿ ವಾರ್ಡ್ ನಂ. 52, ಕೃಷ್ಣರಾಜಪುರಂ, ಗಂಗಮ್ಮ ಟೆಂಪಲ್ ರಸ್ತೆ, 2ನೇ ಮುಖ್ಯರಸ್ತೆ, ವಿ.ಬಿ. ಬಡಾವಣೆ, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್. ಪುರಂ ಹೋಬಳಿ, ಕೆ.ಆರ್. ಪುರಂ ಗ್ರಾಮದಲ್ಲಿರುವ ಸ್ಥಿರಾಸ್ತಿ ಸ್ವತ್ತು ನಂ. 14, ಖಾತಾ ನಂ. 5/4/14ರ ಸ್ವತ್ತು ಕಟ್ಟಡ ಸಹಿತವಾಗಿದ್ದು, ಅಳತೆ ಪೂರ್ವ ಪಶ್ಚಿಮ ಉತ್ತರದ ಕಡೆ 72.0 ಅಡಿಗಳು + ದಕ್ಷಿಣದ ಕಡೆ 70.0/2 ಅಡಿಗಳು, ಉತ್ತರ ದಕ್ಷಿಣ 40.0 ಅಡಿಗಳ ಸ್ವತ್ತಿಗೆ ಚಕ್ಕುಬಂದಿ – ಪೂರ್ವಕ್ಕೆ – ರಸ್ತೆ, ಪಶ್ಚಿಮಕ್ಕೆ – ಖಾಸಗಿ ಸ್ವತ್ತು, ಉತ್ತರಕ್ಕೆ – ಕೆರೆ ಕಾಂಪೌಂಡ್, ದಕ್ಷಿಣಕ್ಕೆ – ಸೈಟ್ ನಂ. 13.	**ರೂ.** 85,00,000/– (ಎಂಬತ್ತೈದು ಲಕ್ಷ ಮಾತ್ರ). ಇಎಂಡಿ **ರೂ.** 8,50,000/– (ಎಂಟು ಲಕ್ಷದ ಐವತ್ತು ಸಾವಿರ ಮಾತ್ರ)	**ರೂ.** 71,22,009/– (ಎಪ್ಪತ್ತೊಂದು ಲಕ್ಷದ ಇಪ್ಪತ್ತೆರಡು ಸಾವಿರದ ಒಂಬತ್ತು ಮಾತ್ರ) ದಿನಾಂಕ 22/07/2021ರಿಂದ ಅನ್ವಯವಾಗುವ ಬಡ್ಡಿ ಎನ್‌ಪಿಎ ದಿನಾಂಕದಿಂದ ಮತ್ತು ಇತರೆ ಖರ್ಚುಗಳು	14/02/2022 ಬೆಳಿಗ್ಗೆ 11.30 ಗಂಟೆ ಅಶೋಕನಗರ ಕೋ–ಆಪರೇಟೀವ್ ಬ್ಯಾಂಕ್ ನಿ., ನಂ. 1380 ಬಿ, 6ನೇ ಕ್ರಾಸ್, ಅಶೋಕನಗರ, ಬನಶಂಕರಿ 1ನೇ ಹಂತ, 2ನೇ ಬ್ಲಾಕ್, ಬೆಂಗಳೂರು–50.
2.	**ಶ್ರೀಮತಿ ಟಿ. ಜಯಮ್ಮ** ಕೋಂ ಭಾಸ್ಕರ ನಾಯ್ಡು ಟಿ., ನಂ. 62, 7ನೇ ಕ್ರಾಸ್, 3ನೇ ಮುಖ್ಯರಸ್ತೆ, ವಿಶ್ವೇಶ್ವರಯ್ಯನಗರ, ಬಿಎಸ್‌ಕೆ 3ನೇ ಹಂತ, ಬೆಂಗಳೂರು–560 085. **ಜಾಮೀನುದಾರರು:** **ಭಾಸ್ಕರ ನಾಯ್ಡು ಟಿ.**	ಬೆಂಗಳೂರು–560 085, ಬನಶಂಕರಿ 3ನೇ ಹಂತ, ಇಟ್ಟಮಡು, ಭುವನೇಶ್ವರಿನಗರ, ರಂಗಪ್ಪ ಲೇಔಟ್, 3ನೇ ಮುಖ್ಯರಸ್ತೆಯಲ್ಲಿರುವ ವಸತಿ ನಿವೇಶನ ನಂ. 30, ಹಳೇ ನಂ. 62, ಹೊಸ ಬಿಬಿಎಂಪಿ ಖಾತಾ ನಂ. 62/7, ಪಿಐಡಿ ನಂ. 55–542–7ರಲ್ಲಿ ಕಟ್ಟಡವನ್ನೊಳಗೊಂಡ ಸ್ವತ್ತು ಶ್ರೀಮತಿ ಟಿ. ಜಯಮ್ಮನವರಿಗೆ ಸೇರಿದ್ದು, ಅಳತೆ ಪೂರ್ವ ಪಶ್ಚಿಮ 30 ಅಡಿ ಮತ್ತು ಉತ್ತರ ದಕ್ಷಿಣ 40 ಅಡಿಗಳು ಮತ್ತು ಅದಕ್ಕೆ ಚಕ್ಕುಬಂದಿ **ಪೂರ್ವಕ್ಕೆ** : ಸೈಟ್ ನಂ. 31, **ಪಶ್ಚಿಮಕ್ಕೆ** : ಸೈಟ್ ನಂ. 29, **ಉತ್ತರಕ್ಕೆ** : ರಸ್ತೆ, **ದಕ್ಷಿಣಕ್ಕೆ** : ಸೈಟ್ ನಂ. 33.	**ರೂ.** 1,38,00,000/– (ಒಂದು ಕೋಟಿ ಮೂವತ್ತೆಂಟು ಲಕ್ಷ ಮಾತ್ರ). ಇಎಂಡಿ **ರೂ.** 13,80,000/– (ಹದಿಮೂರು ಲಕ್ಷದ ಎಂಬತ್ತು ಸಾವಿರ ಮಾತ್ರ)	**ರೂ.** 84,24,893/– (ಎಂಬತ್ತನಾಲ್ಕು ಲಕ್ಷದ ಇಪ್ಪತ್ತನಾಲ್ಕು ಸಾವಿರದ ಎಂಟು ನೂರ ತೊಂಬತ್ತ ಮೂರು ಮಾತ್ರ) ದಿನಾಂಕ 22/07/2021ರಿಂದ ಅನ್ವಯವಾಗುವ ಬಡ್ಡಿ ಮತ್ತು ಇತರೆ ಖರ್ಚುಗಳು	14/02/2022 ಮಧ್ಯಾಹ್ನ 12.30 ಗಂಟೆ ಅಶೋಕನಗರ ಕೋ–ಆಪರೇಟೀವ್ ಬ್ಯಾಂಕ್ ನಿ., ನಂ. 1380 ಬಿ, 6ನೇ ಕ್ರಾಸ್, ಅಶೋಕನಗರ, ಬನಶಂಕರಿ 1ನೇ ಹಂತ, 2ನೇ ಬ್ಲಾಕ್, ಬೆಂಗಳೂರು–50.
3.	**ಶ್ರೀ ರಮೇಶ್ ಕುಮಾರ್ ಬಿ ಬಿನ್ ಬಲರಾಮು ಕೆ.,** ನಂ. 137, ಹೊಸ ನಂ. ಇ–147, 10ನೇ ಕ್ರಾಸ್, 2ನೇ ಮುಖ್ಯರಸ್ತೆ, ಮುನೇಶ್ವರ ಬ್ಲಾಕ್, ಲಗ್ಗೆರೆ, ಬೆಂಗಳೂರು–560058. 2) **ಶ್ರೀ ವೇಣುಗೋಪಾಲ ಹೆಚ್. ಆರ್.**, ನಂ. 931, 2ನೇ ಮೈನ್, 2ನೇ ಹಂತ, ದೇವನಗರ ಪಾಳ್ಯ, ಗೋಕುಲ, ಯಶವಂತಪುರ, ಬೆಂಗಳೂರು ಉತ್ತರ, ಬೆಂಗಳೂರು.	ಬೆಂಗಳೂರು, ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಲಗ್ಗೆರೆ ಗ್ರಾಮದ, ಮುನೇಶ್ವರ ಲೇಔಟ್, 2ನೇ ಮುಖ್ಯರಸ್ತೆ, 10ನೇ ಅಡ್ಡರಸ್ತೆಯಲ್ಲಿರುವ ಸ್ಥಿರಾಸ್ತಿ ಸ್ವತ್ತು ವಸತಿ ನಂ. 39 (ಪಶ್ಚಿಮ ಭಾಗ) ಸರ್ವೆ ನಂ. 94, ಬಿಬಿಎಂಪಿ ಖಾತಾ ನಂ. 863/1/ಎ, ಪಿಐಡಿ ನಂ. 069–ಡಬ್ಲ್ಯೂ0248–58ರ ಸ್ವತ್ತಿನ ಅಳತೆ ಪೂರ್ವ ಪಶ್ಚಿಮ 23.6 ಚದರ ಅಡಿಗಳು ಮತ್ತು 24.0/2 ಅಡಿಗಳು ಮತ್ತು ಉತ್ತರ ದಕ್ಷಿಣ 46.0+45.0/2 ಅಡಿಗಳು ಹಾಗೂ ಇದಕ್ಕೆ ಚೆಕ್ಕುಬಂದಿ– ಪೂರ್ವಕ್ಕೆ : ಸ್ವತ್ತಿನ ನಂ. 39ರ ಪೂರ್ವದ ಭಾಗ, ಪಶ್ಚಿಮಕ್ಕೆ : 30 ಅಡಿಗಳ ರಸ್ತೆ, ಉತ್ತರಕ್ಕೆ : ಸೈಟ್ ನಂ. 40, ದಕ್ಷಿಣಕ್ಕೆ : ರಸ್ತೆ	**ರೂ.** 1,05,00,000/– (ಒಂದು ಕೋಟಿ ಐದು ಲಕ್ಷ ಮಾತ್ರ). ಇಎಂಡಿ **ರೂ.** 10,50,000/– (ಹತ್ತು ಲಕ್ಷದ ಐವತ್ತು ಸಾವಿರ ಮಾತ್ರ)	**ರೂ.** 63,19,280.00 (ಅರವತ್ತ ಮೂರು ಲಕ್ಷದ ಹತ್ತೊಂಬತ್ತು ಸಾವಿರದ ಇನ್ನೂರ ಎಂಬತ್ತು ಮಾತ್ರ)ಗಳನ್ನು ದಿನಾಂಕ 23/02/2021ರಿಂದ ಅನ್ವಯವಾಗುವ ಬಡ್ಡಿ ಮತ್ತು ಇತರೆ ಖರ್ಚುಗಳು	14/02/2022 ಮಧ್ಯಾಹ್ನ 01.00 ಗಂಟೆ ಅಶೋಕನಗರ ಕೋ–ಆಪರೇಟೀವ್ ಬ್ಯಾಂಕ್ ನಿ., ಪ್ರಧಾನ ಕಛೇರಿ ನಂ. 1380ಬಿ, 6ನೇ ಕ್ರಾಸ್, ಅಶೋಕನಗರ, ಬನಶಂಕರಿ 1ನೇ ಹಂತ, 2ನೇ ಬ್ಲಾಕ್, ಬೆಂಗಳೂರು–50

ಬಹಿರಂಗ ಹರಾಜಿನ ನಿಯಮ ಮತ್ತು ಷರತ್ತುಗಳು: 1) ಟೆಂಡರ್ ಫಾರಂಗಳನ್ನು **ಅಶೋಕನಗರ ಕೋ–ಆಪರೇಟೀವ್ ಬ್ಯಾಂಕ್** ನಿ. **ಪ್ರಧಾನ ಕಛೇರಿ ನಂ. 1380/ಬಿ, 6ನೇ ಕ್ರಾಸ್, ಅಶೋಕನಗರ, ಬಿಎಸ್‌ಕೆ 1ನೇ ಹಂತ, 2ನೇ ಬ್ಲಾಕ್, ಬೆಂಗಳೂರು–560 050 (ದೂ : 080–26506213 / 26606365 / 26600513 / 26600514, ಮೊ: 91085 10082, 91805 10084)** ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು. 2) ಇಚ್ಛಿಸುವ ಬಿಡ್‌ದಾರರು ಅವರ ಬಿಡ್‌ಗಳನ್ನು ನಿಗದಿತ ಟೆಂಡರ್ ಫಾರಂಗಳಲ್ಲಿ ಮೊಹರಾದ ಲಕೋಟೆಯಲ್ಲಿ ಮೀಸಲು ಬೆಲೆಯ ಶೇ. 10% ಮೊತ್ತವನ್ನು ಅಧಿಕೃತ ಅಧಿಕಾರಿ, **ಅಶೋಕನಗರ ಕೋ–ಆಪರೇಟೀವ್ ಬ್ಯಾಂಕ್** ನಿ. ಬೆಂಗಳೂರು ಪರವಾಗಿ ಪಡೆದ ಡಿಮ್ಯಾಂಡ್ ಡ್ರಾಫ್ಟ್ / ಬ್ಯಾಂಕರ್ಸ್ / ಚೆಕ್ / ಪೇ ಆರ್ಡರ್‌ಗಳನ್ನು ಈ ಟೆಂಡರ್–ಹರಾಜು ಮಾರಾಟ ಸೂಚನೆ ಪ್ರಕಟವಾದ ದಿನಾಂಕದ ನಂತರ ಪಡೆದಿರಬೇಕು. 3) ಅನಿಗದಿತ ರೂಪದಲ್ಲಿರುವ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಇಎಂಡಿಯೊಂದಿಗೆ ಟೆಂಡರ್‌ಗಳನ್ನು **ಅಶೋಕನಗರ ಕೋ–ಆಪರೇಟೀವ್ ಬ್ಯಾಂಕ್ ಲಿ.** ಬೆಂಗಳೂರು ಇವರಿಗೆ ದಿನಾಂಕ: **11–2–2022**ರ ಸಂಜೆ 5–30 ಘಂಟೆಯ ಒಳಗೆ ಸಲ್ಲಿಸಬೇಕು. ಇಎಂಡಿ ರಹಿತವಾದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. 4) ಒಂದು ವೇಳೆ ಬಿಡ್ಡರ್‌ಗಳು ಯಶಸ್ವಿಯಾಗದಿದ್ದಲ್ಲಿ ಇಎಂಡಿ ಮೊತ್ತವನ್ನು ಬಡ್ಡಿರಹಿತವಾಗಿ ಹಿಂತಿರುಗಿಸಲಾಗುವುದು. 5) ಸ್ವತ್ತನ್ನು ಮೀಸಲು ಬೆಲೆಗಿಂತ ಕಡಿಮೆ ಮೊತ್ತಕ್ಕೆ ಮಾರಾಟ ಮಾಡಲಾಗುವುದಿಲ್ಲ. 6) ಯಶಸ್ವಿ ಬಿಡ್‌ದಾರರು ಹರಾಜು ಮಾರಾಟದ ನಿಯಮ ಮತ್ತು ನಿಬಂಧನೆಗಳನ್ನು ಪಾಲಿಸಲು ವಿಫಲರಾದಲ್ಲಿ ಇಎಂಡಿ ಮೊತ್ತವನ್ನು ಯಾವುದೇ ಸೂಚನೆಯನ್ನು ನೀಡದೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. 7) ಮೊಹರಾದ ಟೆಂಡರ್‌ಗಳನ್ನು ಅಧಿಕೃತ ಅಧಿಕಾರಿಯವರ ಹಾಜರಿರುವ ಟೆಂಡರ್‌ದಾರರ ಸಮ್ಮುಖದಲ್ಲಿ ದಿನಾಂಕ: **14–2–2022**ರಂದು ಬೆಳಿಗ್ಗೆ 11–30 ಘಂಟೆಗೆ ತೆರೆಯುವರು. 8) ಟೆಂಡರ್‌ಗಳನ್ನು ತೆರೆದ ಮೇಲೆ ಬಿಡ್‌ದಾರರಿಗೆ ಪರಸ್ಪರ ಬಿಡ್ ಮಾಡುವ ಪ್ರಕ್ರಿಯೆಯ ಮೂಲಕ ಆಫರ್ ಮೊತ್ತವನ್ನು ಹೆಚ್ಚಿಸುವ ಅವಕಾಶವನ್ನು ಅಧಿಕೃತ ಅಧಿಕಾರಿಯವರ ನಿರ್ಣಯದ ಮೇರೆಗೆ ನೀಡಲಾಗುವುದು. 9) ಯಶಸ್ವಿ ಬಿಡ್‌ದಾರರು ಮಾರಾಟದ ಬೆಲೆಯ ಶೇ. 25% (ಇಎಂಡಿ ಹಣವನ್ನು ಸೇರಿ) ಹಣವನ್ನು ತಕ್ಷಣ ಹರಾಜಿನ ದಿನದಂದು ನಗದು ಅಥವಾ ಡಿಮ್ಯಾಂಡ್ ಡ್ರಾಫ್ಟ್ ರೂಪದಲ್ಲಿ ಪಾವತಿಸಬೇಕು ಮತ್ತು ಬಾಕಿ ಉಳಿದ ಮಾರಾಟದ ಮೊತ್ತವನ್ನು ಮಾರಾಟ ದೃಢೀಕರಣಗೊಂಡ 15 ದಿನಗಳ ಒಳಗೆ ಪಾವತಿಸಬೇಕು. ಒಂದು ವೇಳೆ ಯಶಸ್ವಿ ಬಿಡ್‌ದಾರರು ಹಣ ಪಾವತಿಸದಿದ್ದಲ್ಲಿ ಈವರೆಗೆ ಪಾವತಿಸಿರುವ ಎಲ್ಲಾ ಮೊತ್ತವನ್ನು ಯಾವುದೇ ಸೂಚನೆಯನ್ನು ನೀಡದೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಆಸ್ತಿಯನ್ನು ಮರುಮಾರಾಟ ಮಾಡಲಾಗುವುದು. 10) ಯಶಸ್ವಿ ಬಿಡ್ಡರ್ ಅನ್ವಯವಾಗುವಂತೆ ಕಾನೂನುಬದ್ಧ ವೆಚ್ಚಗಳಾದ ತೆರಿಗೆಗಳು / ಶುಲ್ಕ / ಆಸ್ತಿ ತೆರಿಗೆ / ಬೆಸ್ಕಾಂ ಶುಲ್ಕ / ನೀರಿನ ಶುಲ್ಕ ವರ್ಗಾವಣೆ ವೆಚ್ಚಗಳಾದ ನೋಂದಣಿ ಮತ್ತು ಮುದ್ರಾಂಕ ಶುಲ್ಕವನ್ನು ಅನ್ವಯವಾಗುವ ಕಾನೂನಿನಂತೆ ತಾನೇ ಭರಿಸತಕ್ಕದ್ದು. 11) ಅಧಿಕೃತ ಅಧಿಕಾರಿಯು ಹರಾಜು ಮಾರಾಟವನ್ನು ಯಾವುದೇ ಕಾರಣಗಳನ್ನು ನೀಡದೆ ಮುಂದೂಡುವ ಅಥವಾ ರದ್ದುಮಾಡುವ ಅಧಿಕಾರವನ್ನು ಹೊಂದಿರುತ್ತಾರೆ. ಯಾವುದೇ ಸೂಚನೆಯನ್ನು ನೀಡದೆ, ಜಾಹೀರಾತಿನಲ್ಲಿ ನೀಡಿರುವ ನಿಯಮ ಮತ್ತು ನಿಬಂಧನೆಗಳನ್ನು ಬದಲಾಯಿಸುವ ಅಧಿಕಾರವು ಅಧಿಕೃತ ಅಧಿಕಾರಿಯವರ ನಿರ್ಣಯಕ್ಕೆ ಒಳಪಟ್ಟಿದೆ. 12) ಈ ಮಾರಾಟವು ಬ್ಯಾಂಕಿನ ದೃಢೀಕರಣಕ್ಕೆ ಒಳಪಟ್ಟಿದೆ. 13) ಇಚ್ಛಿಸುವ ಬಿಡ್‌ದಾರರು ಆಸ್ತಿಯನ್ನು ದಿನಾಂಕ: **09–02–2022**ರ ಬೆಳಿಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ಷೆಡ್ಯೂಲ್‌ನಲ್ಲಿ ತಿಳಿಸಿರುವ ವಿಳಾಸದಲ್ಲಿ ಅವರ ಸ್ವಂತ ಖರ್ಚಿನಲ್ಲಿ ಪರಿಶೀಲಿಸಬಹುದಾಗಿದೆ.

ಆಸ್ತಿಯನ್ನು ‘ಎಲ್ಲಿ ಹೇಗಿದೆಯೋ ಹಾಗೇ’ ಮತ್ತು ‘ಎಲ್ಲಿ ಏನಿದೆಯೋ ಹಾಗೇ’ ಆಧಾರ ಮಾಡಿ ಮೇಲೆ ಮಾರಾಟ ಮಾಡಲಾಗುವುದು. ಇಚ್ಛಿಸುವ ಬಿಡ್‌ದಾರರು ಆಸ್ತಿಯ ಮೇಲಿನ ಋಣಭಾರಗಳು (ಎನ್‌ಕಂಬರೆನ್ಸ್) ಟೈಟಲ್ ಮಾಲೀಕತ್ವ ಶಾಸನಬದ್ಧ ಮಂಜೂರಾತಿಗಳು ಮುಂತಾದವುಗಳನ್ನು ಪರಿಶೀಲಿಸಬೇಕು.

ಹೆಚ್ಚಿನ ವಿವರಗಳಿಗೆ ಶಾಖಾ ಕಛೇರಿ, **ಅಶೋಕನಗರ ಕೋ–ಆಪರೇಟಿವ್ ಬ್ಯಾಂಕ್** ನಿ. **ಪ್ರಧಾನ ಕಛೇರಿ ನಂ. 1380/ಬಿ, 6ನೇ ಕ್ರಾಸ್, ಅಶೋಕನಗರ, ಬಿಎಸ್‌ಕೆ 1ನೇ ಹಂತ, 2ನೇ ಬ್ಲಾಕ್, ಬೆಂಗಳೂರು–560 050 (ದೂ : 080–26506213 / 26606365 / 26600513 / 26600514, ಮೊ: + 91 91085 10082, 91085 10084).**

ಸ್ಥಳ: ಬೆಂಗಳೂರು
ದಿನಾಂಕ: 25–01–2022

ಸಹಿ/– ಅಧಿಕೃತ ಅಧಿಕಾರಿ
ಅಶೋಕನಗರ ಕೋ–ಆಪರೇಟೀವ್ ಬ್ಯಾಂಕ್ ನಿಯಮಿತ ಇವರ ಪರವಾಗಿ

ಬಿಜೆಪಿ ಕಚೇರಿಯಲ್ಲಿ ಮುಖ್ಯಮಂತ್ರಿಗೆ ಅಭಿನಂದನೆ • ಬಿಬಿಎಂಪಿ ಚುನಾವಣೆಯಲ್ಲಿ ಗೆಲ್ಲುವ ಭರವಸೆ

‘ಅಂತರರಾಷ್ಟ್ರೀಯ ನಗರವಾಗಿ ಬೆಂಗಳೂರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರನ್ನು ಅಂತರರಾಷ್ಟ್ರೀಯ ನಗರವಾಗಿಸುವ ನಿಟ್ಟಿನಲ್ಲಿ ಅಗತ್ಯವಿರುವ ಎಲ್ಲ ಸೌಲಭ್ಯಗಳನ್ನು ನೀಡಿ ಅಂತರರಾಷ್ಟ್ರೀಯ ನಗರವನ್ನಾಗಿ ಮಾಡಿಯೇ ತೀರುತ್ತೇನೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಬೊಮ್ಮಾಯಿ ನೇತೃತ್ವದ ಸರ್ಕಾರ ಆರು ತಿಂಗಳು ಪೂರ್ಣಗೊಳಿಸಿದ ಸಂದರ್ಭದಲ್ಲಿ ಬಿಜೆಪಿ ಕಾರ್ಯಾಲಯದಲ್ಲಿ ಏರ್ಪಡಿಸಿದ್ದ ಅಭಿನಂದನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಪೂರ್ವದಲ್ಲಿ ಸೂರ್ಯ ಹುಟ್ಟುವುದು ಎಷ್ಟು ನಿಶ್ಚಿತವೋ ಬಿಬಿಎಂಪಿ ಚುನಾವಣೆಯಲ್ಲಿ ಬಿಜೆಪಿ ಮತ್ತೆ ಗೆದ್ದು ಅಧಿಕಾರ ಹಿಡಿಯುವುದು ನಿಶ್ಚಿತ. ನಮ್ಮ ಸರ್ಕಾರ ಮಾಡಿದ ಕೆಲಸಗಳನ್ನು ಮನೆ ಮನೆಗೆ ತಲುಪಿಸುವ ಕೆಲಸ ಆಗಬೇಕಿದೆ. ಬೆಂಗಳೂರಿನ ಜನ ಖಂಡಿತಾ ನಮ್ಮನ್ನು ಬೆಂಬಲಿಸುತ್ತಾರೆ. ಎಲ್ಲರೂ ಆತ್ಮಸ್ಥೈರ್ಯದಿಂದ ಮುನ್ನಡೆಯಬೇಕು’ ಎಂದು ಬೊಮ್ಮಾಯಿ ತಿಳಿಸಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಮಾತನಾಡಿ, ಮುಖ್ಯಮಂತ್ರಿ ಬೊಮ್ಮಾಯಿ ಅವರ ಉತ್ತಮ ಯೋಜನೆಗಳ ಮೂಲಕ ಪಕ್ಷವು ರಾಜ್ಯದಲ್ಲಿ 150 ಕ್ಕೂ ಹೆಚ್ಚು ಕ್ಷೇತ್ರಗಳನ್ನು ಗೆದ್ದು ಮತ್ತೆ ಅಧಿಕಾರಕ್ಕೆ ಬರಲಿದೆ ಎಂದರು.

ಕಾರ್ಯಕ್ರಮದಲ್ಲಿ ಸಂಸದರಾದ ಡಿ.ವಿ.ಸದಾನಂದ ಗೌಡ, ಪಿ.ಸಿ. ಮೋಹನ್ ಮಾತನಾಡಿದರು. ಸಚಿವರಾದ ಎಸ್.ಟಿ.ಸೋಮಶೇಖರ್, ಆನಂದಸಿಂಗ್, ಮುನಿರತ್ನ ಮುಂತಾದವರು ಭಾಗವಹಿಸಿದ್ದರು.

ಕಾರ್ಯಕ್ರಮದ ವೇಳೆ ಪದೇ ಪದೇ ವಿದ್ಯುತ್ ಕೈಕೊಟ್ಟಿದ್ದರಿಂದ ಮುಖ್ಯಮಂತ್ರಿಯವರು ಮುಜುಗರಕ್ಕೆ ಒಳಗಾದರು. ಬೇರೆ ದಾರಿ ಇಲ್ಲದೆ ಕತ್ತಲಲ್ಲೇ ಭಾಷಣ ಮುಗಿಸಬೇಕಾಗಿ ಬಂತು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಮ್ಮ ಪತ್ನಿ ಚನ್ನಮ್ಮ ಅವರೊಂದಿಗೆ ತಮ್ಮ ನಿವಾಸದಲ್ಲಿ ಶುಕ್ರವಾರ ಗೋಪೂಜೆ ನೆರವೇರಿಸಿದರು

ಗೋವುಗಳನ್ನು ದತ್ತು ಪಡೆದ ಸಿಎಂ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶುಕ್ರವಾರ ತಮ್ಮ 62ನೇ ಹುಟ್ಟುಹಬ್ಬದ ಅಂಗವಾಗಿ 11 ಹಸುಗಳನ್ನು ಆಜೀವ ದತ್ತುಪಡೆದರು.

ರಾಷ್ಟ್ರೋತ್ಥಾನ ಗೋಶಾಲೆಯ ಹಸುಗಳನ್ನು ಅವರು ದತ್ತು ಪಡೆದರು. ಬೆಳಿಗ್ಗೆ ಬೊಮ್ಮಾಯಿ ಮತ್ತು ಅವರ ಪತ್ನಿ ಚನ್ನಮ್ಮ ಹಸು, ಕರುವಿಗೆ ಪೂಜೆ ಮಾಡಿದರು. ಬಳಿಕ ಹಸುವನ್ನು ಮನೆಯಲ್ಲಿ ಕರೆದುಕೊಂಡು ಗೋಗ್ರಾಸ ನೀಡಿದರು. ಈ ಸಂದರ್ಭದಲ್ಲಿ ಕುಟುಂಬದ ಸದಸ್ಯರು ಇದ್ದರು. ಬಳಿಕ ಮಾತನಾಡಿದ ಅವರು, ಗೋವುಗಳನ್ನು ದತ್ತು ಪಡೆಯುವ ಯೋಜನೆಯನ್ನು ಇಡೀ ರಾಜ್ಯದಲ್ಲಿ ಜಾರಿ ಮಾಡಲಾಗುವುದು ಎಂದರು.ಬೊಮ್ಮಾಯಿ ತಮ್ಮ ಜನ್ಮದಿನವನ್ನು ಸರಳವಾಗಿ ಆಚರಿಸಿಕೊಂಡರು. ಬಾಲಬ್ರೂಯಿ ಅತಿಥಿಗೃಹದ ಪಕ್ಕದಲ್ಲಿರುವ ಮಾರುತಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದರು.

ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ನಿರ್ವಹಣೆ ಕಾರ್ಯ ಇರುವುದರಿಂದ ನಗರದ ವಿವಿಧೆಡೆ ಜ.29ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ನಶಾ ಸ್ಕ್ವೇರ್, ಕೆಎಸ್‌ಎಸ್‌ಐಡಿಸಿ ಕಾಂಪ್ಲೆಕ್ಸ್ ಇ–ಸಿಟಿ ಮೊದಲನೇ ಹಂತ, ಸೈಬರ್ ಪಾರ್ಕ್, ಇಎಲ್‌ಸಿಐಎ ಕಚೇರಿ, ಐಎಫ್‌ಐಎಂ ಕಾಲೇಜ್, ವಿಪ್ರೊ, ಆರ್.ಎಸ್. ಎಲೆಕ್ಟ್ರಾನಿಕ್ಸ್, ಭಾರತ್ ಪೆಟ್ರೋಲ್ ಬಂಕ್, ಎನ್‌ಟಿಟಿಎಫ್, ಸಿ–ಡಾಟ್, ಪಂಜಾಬ್ ಬ್ಯಾಂಕ್, ಇನ್ಫೊಟೆಕ್, ಎಚ್‌ಸಿಎಲ್ ಇ–ಸಿಟಿ ಮೊದಲನೇ ಹಂತ, ಸಿಂಬಾಸಿಸ್, ಇನ್ಫೊಸಿಸ್ ಸುತ್ತಮುತ್ತ ಪ್ರದೇಶಗಳು

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಹೈಬ್ರಿಡ್ ರೂಪದಲ್ಲಿರಲಿದೆ ಈ ಬಾರಿಯ ಕಾರ್ಯಕ್ರಮ

ರಾಮನವಮಿ ಸಂಗೀತೋತ್ಸವ ಏ.2ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶ್ರೀ ರಾಮ ಸೇವಾ ಮಂಡಳಿ ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್’ ವತಿಯಿಂದ ಏಪ್ರಿಲ್ 2ರಿಂದ ಮೇ 2ರವರೆಗೆ 84ನೇಯ ಶ್ರೀ ರಾಮನವಮಿ ಸಂಗೀತೋತ್ಸವವನ್ನು ನಗರದ ಚಾಮರಾಜಪೇಟೆಯ ಕೋಟೆ ಹೈಸ್ಕೂಲ್ ಆವರಣದಲ್ಲಿ ಆಯೋಜಿಸಲಾಗಿದೆ.

ಕೋವಿಡ್ ನಿರ್ಬಂಧಗಳು ಜಾರಿಯಲ್ಲಿರುವ ಕಾರಣ ಈ ಬಾರಿ ಹೈಬ್ರಿಡ್ ಮಾದರಿಯಲ್ಲಿ ಕಾರ್ಯಕ್ರಮಗಳು ನಡೆಯಲಿವೆ. ದೇಶದ ಖ್ಯಾತ ಸಂಗೀತಗಾರರು ಕಾರ್ಯಕ್ರಮಗಳನ್ನು ನೀಡಲಿದ್ದು, ಪ್ರತಿ ದಿನ ಸಂಜೆ ಶಾಸ್ತ್ರೀಯ ಸಂಗೀತದ ವಿಶಿಷ್ಟ ಕಾರ್ಯಕ್ರಮಗಳು ಸಂಗೀತ ಪ್ರಿಯರಿಗೆ ರಸದೌತಣ ಉಣಬಡಿಸಲಿವೆ.

ಮೊದಲ ದಿನವಾದ ಯುಗಾದಿ ದಿನದಂದು ಪಿ.ಉನ್ನಿಕೃಷ್ಣನ್, ಸಾಯಿ ರಕ್ಷಿತ್, ವಿ.ಪ್ರವೀಣ್, ಜಿ. ಗುರು ಪ್ರಸನ್ ಅವರು ಕಾರ್ಯಕ್ರಮ ನೀಡಲಿದ್ದಾರೆ.

ಏ.3ರಂದು 2020ನೇ ಸಾಲಿನ ‘ರಾಮಗಾನ ಕಲಾಚಾರ್ಯ ರಾಷ್ಟ್ರೀಯ ಪ್ರಶಸ್ತಿ’ಯನ್ನು ಕಲಾವಿದರಾದ ರಂಜನಿ ಮತ್ತು ಗಾಯತ್ರಿ ಅವರಿಗೆ ಪ್ರದಾನ ಮಾಡಲಾಗುವುದು. ಏ.8ರಂದು ವಿಜಯಾ ಶಂಕರ್ ಅವರಿಂದ ವಿಶೇಷ ಸಂಗೀತ ಹಾಗೂ ಪ್ರವೀಣ್ ಗೋಡ್ಖಿಂಡಿ ಮತ್ತು ಷಡಜ್ ಗೋಡ್ಖಿಂಡಿ ಹಾಗೂ ಓಜಸ್ ಅಧಿಯಾ ಅವರ ಕಾರ್ಯಕ್ರಮಗಳಿವೆ.

ದೇಶದ 75ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಏ.10ರಂದು ‘ಭಾರತ ಸ್ವತಂತ್ರ ಸಂಗೀತ ವೈಭವಂ’ ಎನ್ನುವ ವಿಶೇಷ ಕಾರ್ಯಕ್ರಮ ನಡೆಯಲಿದೆ. ಡಾ.ಮೈಸೂರು ಮಂಜುನಾಥ್ ನೇತೃತ್ವದಲ್ಲಿ 75 ಸಂಗೀತಗಾರರು ನೀಡಲಿದ್ದಾರೆ.

ಏ.16ರಂದು ಸಂಗೀತ ಸೇವೆಗಾಗಿ ನೀಡುವ 2022ನೇ ಸಾಲಿನ ಎಸ್.ವಿ. ನಾರಾಯಣಸ್ವಾಮಿ ರಾವ್ ಜಾಗತಿಕ ಪ್ರಶಸ್ತಿಯನ್ನು ಗಣೇಶ್ ಆರ್. ಮತ್ತು ಕುಮಾರೇಶ್ ಆರ್. ಅವರಿಗೆ ಪ್ರದಾನ ಮಾಡಲಾಗುವುದು.

ಏ.17ರಂದು 2022ನೇ ಸಾಲಿನ ರಾಮಗಾನ ಕಲಾಚಾರ್ಯ ರಾಷ್ಟ್ರೀಯ ಪ್ರಶಸ್ತಿಯನ್ನು ವಿಶಾಖ ಹರಿ ಅವರಿಗೆ ಪ್ರದಾನ ಮಾಡಲಾಗುವುದು. ಏ.18ರಂದು ವಿದ್ಯಾಭೂಷಣ ಅವರ ಕಾರ್ಯಕ್ರಮ ನಡೆಯಲಿದೆ.

ಏ.23ರಂದು 2021ನೇ ಸಾಲಿನ ರಾಮಗಾನ ಕಲಾಚಾರ್ಯ ರಾಷ್ಟ್ರೀಯ ಪ್ರಶಸ್ತಿಯನ್ನು ಮಲ್ಲಾಡಿ ಸಹೋದರರಿಗೆ ಪ್ರದಾನ ಮಾಡಲಾಗುವುದು ಎಂದು ಎಂದು ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಎಸ್.ಎನ್. ವರದರಾಜ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಕಾರ್ಯಕ್ರಮಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಇನ್ಫೊಸಿಸ್ ಫೌಂಡೇಷನ್ ಮತ್ತು ಕೇಂದ್ರ ಸರ್ಕಾರದ ಸಂಸ್ಕೃತಿ ಸಚಿವಾಲಯಗಳು ಸಹಕಾರ ನೀಡಿವೆ.

ಟಿಕೆಟ್‌ಗಳಿಗೆ ಮತ್ತು ನೇರ ಪ್ರಸಾರಕ್ಕೆ ಸಂಬಂಧಿಸಿದ ಮಾಹಿತಿಗೆ www.ramanavamitickets.com ನೋಡಬಹುದು.

ಪ್ರಜ್ವಲ್ ರೇವಣ್ಣ ಆಯ್ಕೆ ಅರ್ಜಿ: ಹೈಕೋರ್ಟ್‌ನಲ್ಲಿ ಮರು ವಿಚಾರಣೆ ಆರಂಭ

ಬೆಂಗಳೂರು: ಹಾಸನ ಲೋಕಸಭಾ ಕ್ಷೇತ್ರದ ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಆಯ್ಕೆ ಅಸಿಂಧು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ ಹೈಕೋರ್ಟ್ ಮರು ವಿಚಾರಣೆಗೆ ಕೈಗೆತ್ತಿಕೊಂಡಿದೆ.

ಈ ಕುರಿತಂತೆ ಪರಾಜಿತ ಅಭ್ಯರ್ಥಿ ಎ. ಮಂಜು ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿಯನ್ನು ನ್ಯಾಯಮೂರ್ತಿ ಕೆ. ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಪ್ರಕರಣದ ಐದನೇ ಪ್ರತಿವಾದಿ ಆರ್.ಜಿ.ಸತೀಶ್ (ಕಣದಲ್ಲಿದ್ದ ಪರಾಜಿತ ಅಭ್ಯರ್ಥಿ) ಅವರಿಗೆ ಖುದ್ದು ಸಮನ್ಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ, ವಿಚಾರಣೆಯನ್ನು ಫೆಬ್ರುವರಿ 4ಕ್ಕೆ ಮುಂದೂಡಿದೆ. ಅರ್ಜಿದಾರ ಎ.ಮಂಜು ಪರ ಹಿರಿಯ ವಕೀಲ ಗಂಗಾಧರ ಗುರುಮಠ ಹಾಜರಾಗಿದ್ದರು.

ಪ್ರಕರಣದ ಹಿನ್ನೆಲೆ: ’2019ರ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಪಕ್ಷದಿಂದ ಸ್ಪರ್ಧಿಸಿ ಸಂಸದರಾಗಿ ಆಯ್ಕೆಯಾಗಿರುವ ಪ್ರಜ್ವಲ್ ರೇವಣ್ಣ ಚುನಾವಣಾ ಅಕ್ರಮ ಎಸಗಿದ್ದಾರೆ. ನಾಮಪತ್ರ ಸಲ್ಲಿಸುವ ವೇಳೆ ತಮ್ಮ ಆಸ್ತಿಯ ಕುರಿತು ನಿಖರ ಮಾಹಿತಿ ನೀಡಿಲ್ಲ. ಆದ್ದರಿಂದ, ಅವರ ಆಯ್ಕೆಯನ್ನು ಅಸಿಂಧುಗೊಳಿಸಬೇಕು‘ ಎಂದು ಕೋರಿ ಬಿಜೆಪಿಯಿಂದ ಸ್ಪರ್ಧಿಸಿದ್ದ ಎ.ಮಂಜು ಚುನಾವಣಾ ತಕರಾರು ಅರ್ಜಿ ಸಲ್ಲಿಸಿದ್ದರು.

ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್, ’ಅರ್ಜಿ ದೋಷಪೂರಿತವಾಗಿದೆ. ಇದರಲ್ಲಿನ ಲೋಪಗಳನ್ನು ಸರಿಪಡಿಸಲು ಕಾಲಾವಕಾಶ ನೀಡಿದ ನಂತರವೂ ಕಾಲಮಿತಿಯಲ್ಲಿ ಅವುಗಳನ್ನು ಸರಿಪಡಿಸಿಲ್ಲ‘ ಎಂಬ ಅಭಿಪ್ರಾಯದೊಂದಿಗೆ ವಜಾಗೊಳಿಸಿತ್ತು.

ಇದನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗಿತ್ತು. ಈ ಅರ್ಜಿ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ’ಅರ್ಜಿಯಲ್ಲಿನ ಲೋಪ ಸರಿಪಡಿಸಿ ಅರ್ಜಿದಾರರು ನಿಗದಿತ ನಮೂನೆಯಲ್ಲಿ ಪ್ರಮಾಣಪತ್ರ ಸಲ್ಲಿಸಬೇಕು. ಹೈಕೋರ್ಟ್ ಅದನ್ನು ಪರಿಗಣಿಸಿ ಮರು ವಿಚಾರಣೆ ನಡೆಸಿ ಸೂಕ್ತ ಆದೇಶ ಹೊರಡಿಸಬೇಕು‘ ಎಂದು 2020ರ ಡಿಸೆಂಬರ್ 13ರಂದು ನಿರ್ದೇಶಿಸಿತ್ತು.

‘ರಸ್ತೆ ಗುಂಡಿಗಳಿಗೆ ರಂಗೋಲಿ’

ಬೆಂಗಳೂರು: ‘ನಗರದ ರಸ್ತೆಗಳು ಗುಂಡಿಮಯವಾಗಿವೆ. ಇವುಗಳನ್ನು ದುರಸ್ತಿಗೊಳಿಸುವಂತೆ ಹಲವು ಬಾರಿ ಪ್ರತಿಭಟಿಸಿದರೂ ಸರ್ಕಾರ ಕ್ರಮ ಕೈಗೊಂಡಿಲ್ಲ. ಸರ್ಕಾರ ಹಾಗೂ ಬಿಬಿಎಂಪಿಯ ಈ ನಿರ್ಲಕ್ಷ್ಯ ಧೋರಣೆ ಖಂಡಿಸಿ ಇದೇ 29ರಂದು ರಸ್ತೆ ಗುಂಡಿಗಳಿಗೆ ರಂಗೋಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ’ ಎಂದು ಆಮ್ ಆದ್ಮಿ ಪಕ್ಷದ ರಾಜ್ಯ ಘಟಕದಜಂಟಿ ಕಾರ್ಯದರ್ಶಿ ದರ್ಶನ್ ಜೈನ್ ಶುಕ್ರವಾರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ರಸ್ತೆ ಗುಂಡಿಗಳಿಗೆ ಸಂಬಂಧಿಸಿ ಹೈಕೋರ್ಟ್ ಪದೇ ಪದೇ ಬಿಬಿಎಂಪಿ ಹಾಗೂ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುತ್ತಿದೆ. ಕಳೆದ ಒಂದು ವರ್ಷದಲ್ಲಿ ಹತ್ತಕ್ಕೂ ಹೆಚ್ಚು ಜನ ರಸ್ತೆ ಗುಂಡಿಗಳಿಂದಾಗಿ ಮೃತರಾಗಿದ್ದಾರೆ. ಸಾಕಷ್ಟು ಅಪಘಾತಗಳು ಸಂಭವಿಸಿವೆ. ಆದರೂ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಲಾಗಿಲ್ಲ’ ಎಂದು ದೂರಿದರು.

‘ಒಟ್ಟು 482 ಕಿ.ಮೀ ಉದ್ದದ ರಸ್ತೆಗಳಲ್ಲಿರುವ ಗುಂಡಿಗಳನ್ನು ಈವರೆಗೂ ಮುಚ್ಚಿಲ್ಲ ಎಂದು ಪಾಲಿಕೆಯು ಹೈಕೋರ್ಟ್‌ಗೆ ಮಾಹಿತಿ ನೀಡಿದೆ. ಕಳಪೆ ಕಾಮಗಾರಿಯಿಂದಾಗಿ, ದುರಸ್ತಿಪಡಿಸಿದ ರಸ್ತೆಗಳಲ್ಲಿ ಮತ್ತೆ ಗುಂಡಿಗಳಾಗಿವೆ’ ಎಂದು ಆರೋಪಿಸಿದರು.

‘ಹರ್ ಎಕ್ ಕಾಮ್ ದೇಶ್ ಕೆ ನಾಮ್’

भारत इलेक्ट्रॉनिक्स
BHARAT ELECTRONICS
QUALITY, TECHNOLOGY, INNOVATION

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್

(ರಕ್ಷಣಾ ಸಚಿವಾಲಯದಡಿ ಭಾರತ ಸರ್ಕಾರದ ಒಂದು ಉದ್ಯಮ)
(CIN: L32309KA1954GOI000787)
ನೋಂದಾಯಿತ ಮತ್ತು ಪ್ರಧಾನ ಕಛೇರಿ: ಹೊರವರ್ತುಲ ರಸ್ತೆ, ನಾಗವಾರ, ಬೆಂಗಳೂರು – 560 045. ಇ–ಮೇಲ್: secretary@bel.co.in
ವೆಬ್‌ಸೈಟ್: www.bel-india.in, ಫೋನ್: 080–25039300, ಫ್ಯಾಕ್ಸ್: 080–25039266

31ನೇ ಡಿಸೆಂಬರ್ 2021ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಮತ್ತು ಒಂಬತ್ತು ತಿಂಗಳ ಸ್ಟ್ಯಾಂಡ್‌ಅಲೋನ್ ಹಾಗೂ ಕ್ರೋಢೀಕೃತ ಲೆಕ್ಕ ಪರಿಶೋಧನೆಯಾಗದ ಹಣಕಾಸು ಫಲಿತಾಂಶಗಳ ಸಾರಾಂಶ

(₹ ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ವಿವರಗಳು	ಸ್ಟ್ಯಾಂಡ್ ಅಲೋನ್						ಕ್ರೋಢೀಕೃತ					
		ತ್ರೈಮಾಸಿಕ ಅಂತ್ಯಗೊಂಡ			ಒಂಬತ್ತು ತಿಂಗಳಾಂತ್ಯಕ್ಕೆ		ವರ್ಷಾಂತ್ಯಕ್ಕೆ	ತ್ರೈಮಾಸಿಕ ಅಂತ್ಯಗೊಂಡ			ಒಂಬತ್ತು ತಿಂಗಳಾಂತ್ಯಕ್ಕೆ		ವರ್ಷಾಂತ್ಯಕ್ಕೆ
		31.12.2021	30.09.2021	31.12.2020	31.12.2021	31.12.2020	31.03.2021	31.12.2021	30.09.2021	31.12.2020	31.12.2021	31.12.2020	31.03.2021
		(ಲೆಕ್ಕ ಪರಿಶೋಧನೆ ಆಗದ)			(ಲೆಕ್ಕ ಪರಿಶೋಧನೆ ಆಗದ)		(ಲೆಕ್ಕ ಪರಿಶೋಧಿತ)	(ಲೆಕ್ಕ ಪರಿಶೋಧನೆ ಆಗದ)			(ಲೆಕ್ಕ ಪರಿಶೋಧನೆ ಆಗದ)		(ಲೆಕ್ಕ ಪರಿಶೋಧಿತ)
1.	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	3,69,371	3,66,056	2,29,624	8,98,886	7,15,549	14,06,383	3,70,165	3,67,805	2,32,039	9,02,837	7,19,122	14,10,869
2.	ತೆರಿಗೆ ಮತ್ತು ಅಸಾಧಾರಣ ವಸ್ತುಗಳ ಮುಂಚಿನ ಆವಧಿಯ ನಿವ್ವಳ ಲಾಭ	78,833	82,774	36,882	1,63,124	1,00,428	2,93,481	79,085	82,650	37,955	1,63,511	1,00,581	2,94,178
3.	ತೆರಿಗೆ ಮುಂಚಿನ ಅಸಾಧಾರಣ ವಸ್ತುಗಳ ನಂತರದ ಆವಧಿಯ ನಿವ್ವಳ ಲಾಭ	78,833	82,774	36,882	1,63,124	1,00,428	2,93,481	79,085	82,650	37,955	1,63,511	1,00,581	2,94,178
4.	ತೆರಿಗೆ ಮತ್ತು ಅಸಾಧಾರಣ ವಸ್ತುಗಳ ನಂತರದ ಆವಧಿಯ ನಿವ್ವಳ ಲಾಭ	58,337	61,260	26,186	1,20,712	71,304	2,06,542	59,611	62,461	27,850	1,24,513	73,161	2,09,976
5.	ಒಟ್ಟು ಸಮಗ್ರ ಅವಧಿಯ ಆದಾಯ [ಅವಧಿಯ ಲಾಭವನ್ನು ಒಳಗೊಂಡ (ತೆರಿಗೆ ನಂತರ) ಮತ್ತು ಇತರ ಸಮಗ್ರ ಆದಾಯ (ತೆರಿಗೆ ನಂತರ)]	58,850	63,184	28,786	1,26,490	67,900	1,97,833	60,123	64,385	30,454	1,30,291	69,762	2,01,225
6.	ಪಾವತಿಸಿದ ಇಕ್ವಿಟಿ ಷೇರು ಬಂಡವಾಳ	24,366	24,366	24,366	24,366	24,366	24,366	24,366	24,366	24,366	24,366	24,366	24,366
7.	ಮರುಮೌಲ್ಯಗೊಳಿಸಿದ ಮೀಸಲು ನಿಧಿಯ ಹೊರತಾದ ಇತರೆ ಇಕ್ವಿಟಿಗಳು	-	-	-	-	-	10,56,423	-	-	-	-	-	10,81,592
8.	ಪ್ರತಿ ಷೇರಿನ ಗಳಿಕೆ (₹ 1/- ಪ್ರತಿಯಂತೆ ವಾರ್ಷಿಕರಣಗೊಳ್ಳದ್ದು) (ಮುಂದುವರೆಸಿದ ಮತ್ತು ಸ್ಥಗಿತ ಕಾರ್ಯಾಚರಣೆಗಳಿಗೆ) ಮೂಲ ಮತ್ತು ಕಡಿತಗೊಳಿಸಿದ (₹ ನಲ್ಲಿ)	2.39	2.51	1.08	4.95	2.93	8.48	2.45	2.56	1.14	5.11	3.00	8.62

ಟಿಪ್ಪಣಿಗಳು:

1. ಈ ಮೇಲಿನ ವಿವರಗಳು ಸೆಬಿಯ ನಿಯಂತ್ರಣ ಆಧಿನಿಯಮ 33 (ಪಟ್ಟಿ ನಿರ್ಬಂಧ ಮತ್ತು ಪ್ರಕಟಗೊಳಿಸಿದ ಅಗತ್ಯಗಳು), 2015 ರ ಅಡಿಯಲ್ಲಿ ತಿದ್ದುಪಡಿ ಮಾಡಿದಂತೆ ಷೇರು ವಿನಿಮಯ ಕೇಂದ್ರದಲ್ಲಿ ಸಲ್ಲಿಸಲ್ಪಟ್ಟ ತ್ರೈಮಾಸಿಕ / ಒಂಬತ್ತು ತಿಂಗಳ ಹಣಕಾಸಿನ ಸಾರಾಂಶವಾಗಿದೆ. ತ್ರೈಮಾಸಿಕ / ವಾರ್ಷಿಕ ಹಣಕಾಸು ಫಲಿತಾಂಶಗಳ ಪೂರ್ಣ ರೂಪವು ಷೇರು ವಿನಿಮಯ ಕೇಂದ್ರದ ವೆಬ್‌ಸೈಟ್ ***(www.bseindia.com*** ಮತ್ತು ***www.nseindia.com)*** ನಲ್ಲಿ ಲಭ್ಯವಿದೆ ಮತ್ತು ಕಂಪೆನಿಯ ವೆಬ್‌ಸೈಟ್ ***(www.bel-india.in)*** ನಲ್ಲಿಯೂ ಲಭ್ಯವಿದೆ.
2. ದಿನಾಂಕ 27ನೇ ಜನವರಿ, 2022 ರಂದು ನಡೆದ ಸಭೆಯಲ್ಲಿ ಲೆಕ್ಕ ಪರಿಶೋಧನಾ ಸಮಿತಿಯ ಮೂಲಕ ಈ ಮೇಲಿನ ಹಣಕಾಸಿನ ಫಲಿತಾಂಶಗಳ ವಿವರಣೆಯನ್ನು ಅವಲೋಕನೆ ಮಾಡಲಾಯಿತು ಮತ್ತು ಅದನ್ನು ದಿನಾಂಕ 28ನೇ ಜನವರಿ, 2022 ರಂದು ನಡೆದ ಸಭೆಯಲ್ಲಿನಿರ್ದೇಶಕರ ಮಂಡಳಿಯಿಂದ ಅನುಮೋದಿಸಲಾಯಿತು.

ನಿರ್ದೇಶಕರ ಮಂಡಳಿಯ ಪರವಾಗಿ
ಸಹಿ/-
ಆನಂದಿ ರಾಮಲಿಂಗಮ್
ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು (ಹೆಚ್ಚುವರಿ ಪ್ರಭಾರಿ)

ಸ್ಥಳ: ಬೆಂಗಳೂರು
ದಿನಾಂಕ: 28 ಜನವರಿ, 2022

THE KARNATAKA STATE CRICKET ASSOCIATION (KSCA)

M. Chinnaswamy Stadium, Cubbon Road, Bangalore - 560 001.

Tender Notification

The KSCA invites sealed tenders for the following works at KSCA M Chinnaswamy Stadium from GST compliant Contractors/Dealers who have completed similar works as follows: For work (a) KSEI class 1 electrical contractors, for work (b) authorized dealers and (c) civil contractors

1	Name of work	(a)	Electrical Works for proposed main Kitchen renovation. Estimated Cost - Rs. 19 Lakhs plus taxes, EMD Rs.19,000/- , Cost of tender form- Rs.1,000/- plus GST (Non Refundable).
		(b)	HVAC Works for the proposed main Kitchen renovation. Estimated Cost - Rs.19.5 Lakhs plus taxes, EMD Rs.19,500/- Cost of tender form- Rs.1,000/- plus GST (Non Refundable).
		(c)	Civil & PHE related works to facilitate renovation of the above Kitchen. Estimated Cost - Rs.47 Lakhs plus taxes, EMD Rs. 47,000/- Cost of tender form- Rs.2,500/- plus GST (Non Refundable).
2	Issue of tender form	:	31-01-2022 to 09-02-2022
3	Last date of submission of filled tenders forms.	:	11-02-2022 before 4:30 p.m.
4	Date of opening of tender	:	5 pm on 11-02-2022. In case of delay, Contractors / Dealers would be informed.
5	Completion of work by	:	1 (One) month from the date of work order.

Tender documents may be obtained from the Office of the KSCA, by submitting a requisition in the company's letter head addressed to Hon. Secretary KSCA, between 11.00 a.m. to 5.00 p.m. on any working day. For any clarification on (a) & (b) above please contact Mr. Syamjith, Deputy Manager, Electrical Dept, Mobile No. 98444 41684. For any clarification on (c) above please contact Mr.H.A.Venkatesh Prasad, AGM Civil Engineering Dept, and Mobile No. 9945604515 /8150900022 **Hon.Secretary, KSCA**

(ಲೋಕೋಪಯೋಗಿ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್, ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐ.ಎಫ್.ಟಿ) ಸಂಖ್ಯೆ: 40/2021–22 ದಿನಾಂಕ: 25.01.2022

(ರಸ್ತೆ & ಕಟ್ಟಡ ಕಾಮಗಾರಿಗಳಿಗಾಗಿ–ಸ್ಟ್ಯಾಂಡರ್ಡ್ ಬಿಡ್ಡಿಂಗ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1 ಮತ್ತು 2ರಂತೆ ಏಕ ಲಕೋಟೆ ಪದ್ಧತಿಯಲ್ಲಿ)

ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **ಏಕ ಲಕೋಟೆ** ಪದ್ಧತಿಯಲ್ಲಿ ಕಾಮಗಾರಿಗಳ ಟೆಂಡರ್‌ಗಳನ್ನು ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 2000ರ ಅನ್ವಯ ಈ ಕೆಳಗೆ ಸಹಿ ಮಾಡಿದವರು ಆಹ್ವಾನಿಸಿರುತ್ತಾರೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು **ದಿನಾಂಕ: 28.01.2022 ರಿಂದ 07.02.2022ರ ಸಂಜೆ 4.00 ಗಂಟೆಯವರೆಗೆ** ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. (1) ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕಡೆಯ **ದಿನಾಂಕ: 29.01.2022 (ಮಧ್ಯಾಹ್ನ 3.00 ಗಂಟೆಗೆ ಕಛೇರಿ ವೇಳೆಯಲ್ಲಿ).** (2) ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ **ದಿನಾಂಕ: 07.02.2022 (ಸಂಜೆ 4.00 ಗಂಟೆಯವರೆಗೆ).** (3) ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ: 09.02.2022 ಬೆಳಿಗ್ಗೆ 11.00 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ **www.kpwd.gov.in** ವೆಬ್‌ಸೈಟ್‌ನ್ನು ಸಂಪರ್ಕಿಸಬಹುದು ಅಥವಾ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ತಿಮ್ಮರಾಯಪ್ಪ. ಬಿ., ಕಾರ್ಯಪಾಲಕ ಇಂಜಿನಿಯರ್, ಲೋ.ಇ. ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ331/ಎಂ.ಸಿ.ಎ/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಅಕ್ರಮದಲ್ಲಿ ಅಧಿಕಾರಿಗಳು ಭಾಗಿ ● ಎಸಿಬಿ ತನಿಖೆಗೆ ಬಿಡಿಎ ಸಹಮತಿ

ಬದಲಿ ನಿವೇಶನವಾಗಿ ಬೇರೊಬ್ಬರ ನಿವೇಶನ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಬೇರೊಬ್ಬರಿಗೆ ಹಂಚಿಕೆ ಮಾಡಿದ್ದ ನಿವೇಶನವನ್ನು ಇನ್ನೊಬ್ಬರಿಗೆ ಬದಲಿ ನಿವೇಶನ ರೂಪದಲ್ಲಿ ಹಂಚಿಕೆ ಮಾಡಲಾಗಿದೆ. ಉಪ ಕಾರ್ಯದರ್ಶಿ-4 ವಿಭಾಗದ ಅಧಿಕಾರಿಗಳು ಲೋಪವೆಸಗಿರುವುದು ಬಿಡಿಎ ನಡೆಸಿರುವ ಆಂತರಿಕ ಪರಿಶೀಲನೆಯಲ್ಲಿ ದೃಢಪಟ್ಟಿದ್ದು, ಅವರನ್ನು ಭ್ರಷ್ಟಾಚಾರ ನಿಗ್ರಹ ದಳದಿಂದ (ಎಸಿಬಿ) ವಿಚಾರಣೆಗೆ ಒಳಪಡಿಸುವುದಕ್ಕೆ ಅನುಮತಿ ನೀಡಲು ಬಿಡಿಎ ಸಹಮತಿ ವ್ಯಕ್ತಪಡಿಸಿದೆ.

ಭೂಪಸಂದ್ರದಲ್ಲಿ ಆರ್.ಎಂ.ವಿ ಬಡಾವಣೆಯ ಎರಡನೇ ಹಂತದಲ್ಲಿ 40X60 ಅಡಿ ವಿಸ್ತೀರ್ಣದ ನಿವೇಶನವನ್ನು (ಸಂಖ್ಯೆ 12) ವರದಾಚಾರಿ ಅವರಿಗೆ ಬಿಡಿಎ ಹಂಚಿಕೆ ಮಾಡಿತ್ತು. ಆ ನಿವೇಶನವನ್ನು ಅದಾಗಲೇ ಬೇರೆಯವರಿಗೆ ಹಂಚಿಕೆಯಾಗಿದ್ದರಿಂದ ಅವರು ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿ ಬದಲಿ ನಿವೇಶನ (ಸಂಖ್ಯೆ 40) ಹಂಚಿಕೆ ಮಾಡುವಂತೆ ಮನವಿ ಸಲ್ಲಿಸಿದ್ದರು. ಅವರಿಗೆ ಭೂಪಸಂದ್ರದ ಆರ್.ಎಂ.ವಿ 2ನೇ ಹಂತದ ಮುಂದುವರಿದ ಬಡಾವಣೆಯಲ್ಲಿ ಹಿಂದಿನಷ್ಟೇ ವಿಸ್ತೀರ್ಣದ ನಿವೇಶನವನ್ನು 2013ರ ಫೆ. 6ರಂದು ಹಂಚಿಕೆ ಮಾಡಿತ್ತು. ಪ್ರಾಧಿಕಾರವು 2013ರ ಜೂನ್ 1ರಂದು ಶುದ್ಧ ಕ್ರಯಪತ್ರವನ್ನೂ ನೋಂದಾಯಿಸಿ, ವರದಾಚಾರಿ ಅವರಿಗೆ ಸ್ವಾಧೀನ ಪತ್ರವನ್ನೂ ನೀಡಿತ್ತು.

ಪದ್ಮಾವತಮ್ಮ ಎಂಬುವರಿಗೆ ಜೆ.ಪಿ.ನಗರ ಬಡಾವಣೆಯ ನಾಲ್ಕನೇ ಬ್ಲಾಕ್‌ನ ಒಂಬತ್ತನೇ ಹಂತದಲ್ಲಿ 40X60 ವಿಸ್ತೀರ್ಣದ ನಿವೇಶನವನ್ನು (ಸಂಖ್ಯೆ 358) 1998ರ ಸೆ. 22ರಂದು ಬಿಡಿಎ ಹಂಚಿಕೆ ಮಾಡಿತ್ತು. ಇದಕ್ಕೆ 2004ರ ಜೂನ್ 3ರಂದು ಶುದ್ಧ ಕ್ರಯಪತ್ರ ಹಾಗೂ ಸ್ವಾಧೀನ ಪತ್ರವನ್ನು ನೀಡಿತ್ತು. 'ತಮಗೆ ಮಂಜೂರಾದ ನಿವೇಶನವಿರುವ ಜಮೀನನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಕೈ ಬಿಡಲಾಗಿತ್ತು. ಹಾಗಾಗಿ ಬದಲಿ ನಿವೇಶನ ನೀಡಬೇಕು' ಎಂದು ಪದ್ಮಾವತಮ್ಮ ಅವರು ಆಯುಕ್ತರಿಗೆ ದಶಕಗಳ ಬಳಿಕ ಮನವಿ ಸಲ್ಲಿಸಿದ್ದರು. ಪ್ರಾಧಿಕಾರದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಬದಲಿ ನಿವೇಶನ ಹಂಚಿಕೆ ಸಮಿತಿಯ ಸಭೆಯಲ್ಲಿ ಪದ್ಮಾವತಮ್ಮ ಅವರಿಗೆ ಬದಲಿ ನಿವೇಶನವನ್ನು ನೀಡುವ ತಿರ್ಮಾನ ಕೈಗೊಳ್ಳಲಾಗಿತ್ತು. ಇದರ ಆಧಾರದಲ್ಲಿ, ಪದ್ಮಾವತಮ್ಮ ಅವರಿಗೆ ನೀಡಿದ್ದ ನಿವೇಶನದ (ಸಂಖ್ಯೆ 358) ಮಂಜೂರಾತಿಯನ್ನು ರದ್ದುಪಡಿಸಿ, ಆಯುಕ್ತರ ಅನುಮೋದನೆ ಪಡೆದು ಭೂಪಸಂದ್ರದ ಆರ್.ಎಂ.ವಿ ಎರಡನೇ ಹಂತದ ಮುಂದುವರಿದ ಬಡಾವಣೆಯಲ್ಲಿ ಅಷ್ಟೇ ವಿಸ್ತೀರ್ಣದ ಬದಲಿ ನಿವೇಶನವನ್ನು (ಸಂಖ್ಯೆ 40) 2016ರ ಫೆ.2ರಂದು ಹಂಚಿಕೆ ಮಾಡಲಾಗಿತ್ತು. 2017ರ ಏ.6ರಂದು ಉಪಕಾರ್ಯದರ್ಶಿ-4 ಅವರ ವಿಭಾಗದಿಂದ ಶುದ್ಧ ಕ್ರಯಪತ್ರವನ್ನು ನೋಂದಣಿ ಮಾಡಿಸಲಾಗಿತ್ತು. 2017ರ ಏ. 24ರಂದು ಬದಲಿ ನಿವೇಶನಕ್ಕೆ ಸ್ವಾಧೀನ ಪತ್ರ ನೀಡಲಾಗಿತ್ತು.

ಅಚ್ಚರಿ ಎಂದರೆ, ಬಿಡಿಎ ಈ ಹಿಂದೆ ಇದೇ ನಿವೇಶನವನ್ನು ವರದಾಚಾರಿ ಅವರಿಗೆ ಹಂಚಿಕೆ ಮಾಡಿತ್ತು. 'ಈ ನಿವೇಶನವನ್ನು ತಮ್ಮ ಹೆಸರಿನಲ್ಲೇ ಮುಂದುವರಿಸಬೇಕು. ಪದ್ಮಾವತಮ್ಮ ಅವರಿಗೆ ನೀಡಿರುವ ಬದಲಿ ನಿವೇಶನದ ಶುದ್ಧ ಕ್ರಯಪತ್ರವನ್ನು ರದ್ದುಪಡಿಸಬೇಕು' ಎಂದು ವರದಾಚಾರಿ ಅವರು ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದು, ಇದು ವಿಚಾರಣಾ ಹಂತದಲ್ಲಿರುತ್ತದೆ. ಈ ಪ್ರಕರಣಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಬಿಡಿಎ ವಿಶೇಷ ಕಾರ್ಯ ಪಡೆ ಮತ್ತು ಜಾಗೃತ ವಿಭಾಗ ಪರಿಶೀಲನೆ ನಡೆಸಿದಾಗ ವರದಾಚಾರಿ ಅವರಿಗೆ ಆರ್.ಎಂ.ವಿ 2ನೇ ಹಂತದ ಮುಂದುವರೆದ ಬಡಾವಣೆಯಲ್ಲಿ 2013ರ ಜೂನ್ 1ರಂದು ನಿವೇಶನ (ಸಂಖ್ಯೆ 40) ನೀಡಿ, ಅದಕ್ಕೆ ಶುದ್ಧ ಕ್ರಯಪತ್ರವನ್ನು ನೋಂದಾಯಿಸಿ, ಸ್ವಾಧೀನ ಪತ್ರವನ್ನೂ ನೀಡಿರುವುದು ದೃಢಪಟ್ಟಿದೆ.

ಅದೇ (ಸಂಖ್ಯೆ 40) ನಿವೇಶನವನ್ನೇ ಪದ್ಮಾವತಮ್ಮ ಅವರಿಗೆ ಹಂಚಿಕೆ ಮತ್ತು ನೊಂದಣಿ ಮಾಡಲಾಗಿದೆ. ಆಗಿನ ಉಪಕಾರ್ಯದರ್ಶಿ (ಮಹಿಳಾ ಕೆಎಎಸ್ ಅಧಿಕಾರಿ) ಮತ್ತು ಮೇಲ್ವಿಚಾರಕರಾಗಿದ್ದ ಟಿ.ವಿ.ವಿರೂಪಾಕ್ಷಪ್ಪ ಮತ್ತು ವಿಷಯ ನಿರ್ವಾಹಕಿಯಾಗಿದ್ದ ಮಂಜುಳಾ ಬಾಯಿ ಅವರು ಈ ಮೊದಲೇ ವರದಾಚಾರಿ ಅವರಿಗೆ ಹಂಚಿಕೆಯಾಗಿದ್ದ ನಿವೇಶನಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಪರಿಶೀಲಿಸದೆಯೇ ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ ಎಂದು ಬಿಡಿಎ ಆಯುಕ್ತರು ನಗರಾಭಿವೃದ್ಧಿ ಇಲಾಖೆಗೆ 2022ರ ಜ.10ರಂದು ಪತ್ರ ಬರೆದು ಅಭಿಪ್ರಾಯ ಸಲ್ಲಿಸಿದ್ದಾರೆ ಎಂದು ಗೊತ್ತಾಗಿದೆ.

ಮುಖ್ಯಾಂಶಗಳು

- ನಿವೇಶನ ಮಂಜೂರಾದ ದಶಕಗಳ ಬಳಿಕ ಬದಲಿ ನಿವೇಶನ ಕೋರಿದ್ದ ಮಹಿಳೆ
- ದಾಖಲಾತಿ ಪರಿಶೀಲಿಸದೆಯೇ ಬದಲಿ ನಿವೇಶನ ಹಂಚಿಕೆ
- ಹೈಕೋರ್ಟ್ ಮೊರೆ ಹೋದ ಮೂಲ ನಿವೇಶನದಾರ

ಪ್ರಜಾವಾಣಿ ವಿಶೇಷ

'ಜೆಡಿಎಸ್ ಬಗ್ಗೆ ಸಹಾನುಭೂತಿ ಇರಲಿ'

ಮಂಡ್ಯ: 'ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಜೆಡಿಎಸ್ ಬಗ್ಗೆ ಸಹಾನುಭೂತಿ ತೋರಲಿ. ಎಚ್.ಡಿ.ಕುಮಾರಸ್ವಾಮಿ ಅವರೂ ಸಿದ್ದರಾಮಯ್ಯ ಕುರಿತು ಮಾತನಾಡಬಾರದು' ಎಂದು ಜೆಡಿಎಸ್ ಮುಖಂಡ ಎಲ್.ಆರ್.ಶಿವರಾಮೇಗೌಡ ಸಲಹೆ ನೀಡಿದರು.

ಮದ್ದೂರು ತಾಲ್ಲೂಕಿನ ಕೊಪ್ಪ ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಏರ್ ಇಂಡಿಯಾ ಟಾಟಾ ಸಮೂಹಕ್ಕೆ ಹಸ್ತಾಂತರವಾಗಿದೆ

'ವೈದ್ಯಕೀಯ ಕಾಲೇಜುಗಳಲ್ಲಿ ಅಂಗಾಂಗ ಸಂಗ್ರಹ ಕೇಂದ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಬ್ಬ ವ್ಯಕ್ತಿ ಮರಣ ಹೊಂದಿದ ಮೇಲೆ ಎಂಟು ಮಂದಿಗೆ ಬದುಕು ನೀಡಲು ಸಾಧ್ಯ. ಆದರೆ, ಬಹುತೇಕರು ತಪ್ಪು ಗ್ರಹಿಕೆಯಿಂದ ಅಂಗಾಂಗ ದಾನ ಮಾಡುತ್ತಿಲ್ಲ. ಅಂಗಾಂಗ ದಾನ ಹಾಗೂ ಕಸಿ ಹೆಚ್ಚಿಸಲು ಎಲ್ಲ ವೈದ್ಯಕೀಯ ಕಾಲೇಜುಗಳಲ್ಲಿ ಅಂಗಾಂಗ ಸಂಗ್ರಹ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಸ್ಪರ್ಶ್ ಆಸ್ಪತ್ರೆಯ ಬಹು ಅಂಗಾಂಗ ಕಸಿ ಕೇಂದ್ರಕ್ಕೆ ಶುಕ್ರವಾರ ಚಾಲನೆ ನೀಡಿ ಮಾತನಾಡಿದ ಅವರು, 'ಬದಲಾದ ಜೀವನ ವಿಧಾನ ಸೇರಿದಂತೆ ವಿವಿಧ ಕಾರಣಗಳಿಂದ ಅಂಗಾಂಗ ವೈಫಲ್ಯ ಪ್ರಕರಣಗಳು ಹೆಚ್ಚಳವಾಗುತ್ತಿವೆ. ಅಂಗಾಂಗಗಳ ಕೊರತೆಯಿಂದಾಗಿ ಸಮಸ್ಯೆ ಎದುರಿಸುತ್ತಿರುವವರಲ್ಲಿ ಶೇ 4 ರಷ್ಟು ಮಂದಿಗೆ ಮಾತ್ರ ಕಸಿ ದೊರೆಯುತ್ತಿವೆ. ಹೀಗಾಗಿ, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಬಿಎಂಸಿಆರ್‌ಐ) ಸೇರಿದಂತೆ ವಿವಿಧೆಡೆ ಅಂಗಾಂಗ ಸಂಗ್ರಹ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು' ಎಂದು ಹೇಳಿದರು.

'ಸರ್ಕಾರಿ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುವ ಶಸ್ತ್ರಚಿಕಿತ್ಸಕರಿಗೂ ಅಂಗಾಂಗ ಕಸಿ ಬಗ್ಗೆ ತರಬೇತಿ ನೀಡಲು ಕ್ರಮವಹಿಸಲಾಗುವುದು. ನಿಮ್ಹಾನ್ಸ್‌ನಲ್ಲಿ ಮಿದುಳು ನಿಷ್ಕ್ರಿಯಗೊಂಡ ಪ್ರಕರಣಗಳು ಹೆಚ್ಚಾಗಿ ವರದಿಯಾಗುತ್ತಿವೆ. ಹೀಗಾಗಿ, ಆ ಸಂಸ್ಥೆಯೊಂದಿಗೆ ಬಿಎಂಸಿಆರ್‌ಐ ಒಪ್ಪಂದ ಮಾಡಿಕೊಂಡು ಅಂಗಾಂಗ ಕಸಿಗೆ ಕ್ರಮವಹಿಸಲಿದೆ' ಎಂದು ತಿಳಿಸಿದರು.

ಸ್ಪರ್ಶ್ ಆಸ್ಪತ್ರೆಯ ಅಧ್ಯಕ್ಷ ಡಾ. ಶರಣ್ ಶಿವರಾಜ್ ಪಾಟೀಲ, 'ಅಂಗಾಂಗ ದಾನ ಹಾಗೂ ಕಸಿ ಬಗ್ಗೆ ಜನರಿಗೆ ಜಾಗೃತಿ ಮೂಡಬೇಕು. ಅಂಗಾಂಗ ವೈಫಲ್ಯ ಸಮಸ್ಯೆ ಎದುರಿಸುತ್ತಿರುವವರಲ್ಲಿ ಶೇ 80 ರಷ್ಟು ಮಂದಿಗೆ ಅಂಗಾಂಗಗಳು ಸಿಗುತ್ತಿಲ್ಲ. ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದ ಶೇ 60 ರಷ್ಟು ನವೋದ್ಯಮಗಳು ಬೆಂಗಳೂರಿನಲ್ಲಿಯೇ ಇವೆ. ದೊಡ್ಡ ವೈದ್ಯಕೀಯ ಸಂಸ್ಥೆಗಳೂ ಇಲ್ಲಿವೆ. ನಮ್ಮ ಜನರಿಗೆ ಹಾಗೂ ಹೊರಗಿನವರಿಗೆ ತಂತ್ರಜ್ಞಾನದ ನೆರವಿನಿಂದ ಅತ್ಯಾಧುನಿಕ ವೈದ್ಯಕೀಯ ಸೌಲಭ್ಯವನ್ನು ಒದಗಿಸಬೇಕು. ವಿವಿಧ ಸಂಸ್ಥೆಗಳು ಒಟ್ಟಾಗಿ ಆವಿಷ್ಕಾರ ಮಾಡಿದರೆ ಅಲ್ಪ ವೆಚ್ಚದಲ್ಲಿ ಚಿಕಿತ್ಸೆಗಳನ್ನು ನೀಡಲು ಸಾಧ್ಯ. ಅಂಗಾಂಗ ಕಸಿಯನ್ನು ನಾವು ಮುಂದಿನ ಹಂತಕ್ಕೆ ಕೊಂಡೊಯ್ಯುತ್ತಿದ್ದೇವೆ' ಎಂದರು.

ಸ್ಪರ್ಶ್ ಆಸ್ಪತ್ರೆಯ ಬಹು ಅಂಗಾಂಗ ಕಸಿ ಕೇಂದ್ರಕ್ಕೆ ಡಾ.ಕೆ. ಸುಧಾಕರ್ ಚಾಲನೆ ನೀಡಿದರು. ಡಾ. ಶರಣ್ ಶಿವರಾಜ್ ಪಾಟೀಲ್ ಮತ್ತು ಕಸಿ ತಜ್ಞ ಡಾ. ಕುಮುದ್ ಧಿತಲ್ ಇದ್ದಾರೆ – ಪ್ರಜಾವಾಣಿ ಚಿತ್ರ



ಸುರಂಗ ಕೊರೆಯುವ ಯಂತ್ರ ವರದಾ ರಾಷ್ಟ್ರೀಯ ಮಿಲಿಟರಿ ಶಾಲೆಯ ಬಳಿಯಿಂದ ಸುರಂಗ ಕೊರೆಯುವ ಕಾರ್ಯವನ್ನು ಆರಂಭಿಸಿದೆ

ಮತ್ತೆ ಸುರಂಗ ಕೊರೆಯಲು ಶುರು ಮಾಡಿದ ವರದಾ

ಬೆಂಗಳೂರು: ನಮ್ಮ ಮೆಟ್ರೊ ಯೋಜನೆಯ ಎರಡನೇ ಹಂತದ ಸುರಂಗ ನಿರ್ಮಾಣ ಕಾಮಗಾರಿಗೆ ಬಳಸಲಾಗುತ್ತಿರುವ ವರದಾ ಯಂತ್ರವು (ಟಿಬಿಎಂ) ರಾಷ್ಟ್ರೀಯ ಮಿಲಿಟರಿ ಶಾಲೆಯ ಬಳಿಯಿಂದ ಸುರಂಗ ಕೊರೆಯುವ ಕಾರ್ಯವನ್ನು ಗುರುವಾರ ಮತ್ತೆ ಆರಂಭಿಸಿದೆ.

ವರದಾ ಯಂತ್ರವನ್ನು ಬಳಸಿ ರಾಷ್ಟ್ರೀಯ ಮಿಲಿಟರಿ ಶಾಲೆಯಿಂದ (ವೆಲ್ಲಾರ) ಲ್ಯಾಂಗ್‌ಫೋರ್ಡ್ ಟೌನ್ ನಿಲ್ದಾಣದವರೆಗೆ 594 ಮೀ ಉದ್ದದ ಸುರಂಗ ಕೊರೆಯಲಾಗಿತ್ತು. 2021ರ ಮಾರ್ಚ್ 12ರಂದು ಆರಂಭವಾಗಿದ್ದ ಈ ಕಾಮಗಾರಿ 2021ರ ನ. 11ರಂದು ಪೂರ್ಣಗೊಂಡಿತ್ತು. ರಾಷ್ಟ್ರೀಯ ಮಿಲಿಟರಿ ಶಾಲೆಯಿಂದ (ವೆಲ್ಲಾರ) ಲ್ಯಾಂಗ್‌ಫೋರ್ಡ್ ಟೌನ್ ನಿಲ್ದಾಣದವರೆಗಿನ ಇನ್ನೊಂದು ಸುರಂಗವನ್ನು ನಿರ್ಮಿಸುವುದಕ್ಕೂ ಇದೇ ಯಂತ್ರವನ್ನು ಬಳಸಲಾಗುತ್ತಿದೆ. ಈ ಯಂತ್ರವನ್ನು ಜರ್ಮನಿಯಿಂದ ತರಿಸಿಕೊಳ್ಳಲಾಗಿದೆ. ಇದು 5.80 ಮೀ ವ್ಯಾಸದ ಸುರಂಗವನ್ನು ನಿರ್ಮಿಸುತ್ತಿವೆ.

ನಮ್ಮ ಮೆಟ್ರೊ ಎರಡನೇ ಹಂತದಲ್ಲಿ ಗೊಟ್ಟಿಗೆರೆ– ನಾಗವಾರವರೆಗಿನ 21.25 ಕಿ.ಮೀ ಉದ್ದದ ಮಾರ್ಗದಲ್ಲಿ (ರೀಚ್ -6) ಡೇರಿ ವೃತ್ತದಿಂದ ನಾಗವಾರದವರೆಗೆ 13.76 ಕಿ.ಮೀ ಉದ್ದದ ಸುರಂಗ ಮಾರ್ಗವನ್ನು ನಿರ್ಮಿಸಲಾಗುತ್ತಿದೆ. ಇದು ದೇಶದಲ್ಲೇ ಅತಿ ಉದ್ದದ ಮೆಟ್ರೊ ಸುರಂಗ ಮಾರ್ಗ. ಒಟ್ಟು 9 ಯಂತ್ರಗಳು ಸುರಂಗ ಕೊರೆಯುವ ಕಾರ್ಯದಲ್ಲಿ ತೊಡಗಿವೆ. ಪ್ರತಿ ದಿನ ಸರಾಸರಿ 3.5 ಮೀ. ಉದ್ದದಷ್ಟು ಸುರಂಗ ಕೊರೆಯಲಾಗುತ್ತಿದೆ.

ಸಹಾಯಕ ತೋಟಗಾರಿಕೆ ಅಧಿಕಾರಿ ಹುದ್ದೆಗಳಿಗೆ ನೇಮಕಗೊಂಡ ಅಭ್ಯರ್ಥಿಗಳಿಗೆ ತೋಟಗಾರಿಕೆ ಸಚಿವ ಮುನಿರತ್ನ ನೇಮಕಾತಿ ಆದೇಶ ಪತ್ರ ವಿತರಿಸಿದರು. ತೋಟಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಠಾರಿಯ, ನಿರ್ದೇಶಕ ಕೆ.ನಾಗೇಂದ್ರ ಪ್ರಸಾದ್ ಇದ್ದಾರೆ

ನೇಮಕಾತಿ ಪತ್ರ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೋಟಗಾರಿಕೆ ಇಲಾಖೆಯ ಸಹಾಯಕ ತೋಟಗಾರಿಕೆ ಅಧಿಕಾರಿ ಹುದ್ದೆಗಳಿಗೆ ನೇಮಕಗೊಂಡಿರುವ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಪತ್ರವನ್ನು ತೋಟಗಾರಿಕೆ ಸಚಿವ ಮುನಿರತ್ನ ಶುಕ್ರವಾರ ವಿತರಿಸಿದರು.

ತೋಟಗಾರಿಕೆ ಇಲಾಖೆ ವತಿಯಿಂದ ಲಾಲ್‌ಬಾಗ್ ಉದ್ಯಾನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ನೇಮಕಾತಿ ಆದೇಶ ಪತ್ರಗಳ ವಿತರಣೆ ನಡೆಯಿತು.

'ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುವವರಿಗೆ ವೇತನದಲ್ಲಿ ವ್ಯತ್ಯಾಸ ಇರಲಿದೆ. ಕೌಟುಂಬಿಕ ಸಮಸ್ಯೆಗಳನ್ನು ಮುಂದಿಟ್ಟುಕೊಂಡು, ವರ್ಗಾವಣೆ ಕೋರಿ ಅರ್ಜಿಗಳನ್ನು ಬರೆಯಬೇಡಿ. ಸೇವೆ ಮಾಡಲು ಅವಕಾಶ ಸಿಗುವ ಸ್ಥಳದಲ್ಲಿ ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸಿ. ರೈತರನ್ನು ಕಾಯಿಸದೆ, ಅವರ ಸಮಸ್ಯೆಗಳನ್ನು ಪರಿಹರಿಸಿ' ಎಂದರು.

ಕಾರ್ಯಕ್ರಮದಲ್ಲಿ ತೋಟಗಾರಿಕೆ ಇಲಾಖೆ ನೂತನ ಕ್ಯಾಲೆಂಡರ್ ಅನ್ನು ಮುನಿರತ್ನ ಬಿಡುಗಡೆ ಮಾಡಿದರು. ತೋಟಗಾರಿಕೆ ಇಲಾಖೆ ಉಪ ನಿರ್ದೇಶಕಿ ಕುಸುಮಾ ಹಾಗೂ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು.

ನಿಧನ ವಾರ್ತೆ

ಪಾರ್ವತಮ್ಮ ಮಹಾಲಿಂಗಶೆಟ್ಟಿ

ಬೆಂಗಳೂರು: ಮಾಜಿ ಮುಖ್ಯಮಂತ್ರಿ, ದಿವಂಗತ ಎಸ್. ನಿಜಲಿಂಗಪ್ಪ ಅವರ ಪುತ್ರಿ ಪಾರ್ವತಮ್ಮ ಮಹಾಲಿಂಗಶೆಟ್ಟಿ (94) ಅವರು ಹುಬ್ಬಳ್ಳಿಯಲ್ಲಿ ಗುರುವಾರ ನಿಧನರಾದರು.

ಅವರಿಗೆ ನಾಲ್ವರು ಪುತ್ರರು ಹಾಗೂ ಇಬ್ಬರು ಪುತ್ರಿಯರು ಇದ್ದಾರೆ.

'ರಾಷ್ಟ್ರನಾಯಕ ಎಸ್. ನಿಜಲಿಂಗಪ್ಪ', 'ಹಿಂದೂ ಮಗುವೇ ನಿನಗಾಗಿ ಒಂದು ಪುಟ್ಟ ಪುಸ್ತಕ' ಸೇರಿದಂತೆ ಹಲವು ಪುಸ್ತಕಗಳನ್ನು ಪಾರ್ವತಮ್ಮ ಅವರು ಬರೆದಿದ್ದರು. 'ಹೆಣ್ಣಿನ ದೃಷ್ಟಿಯಲ್ಲಿ ಈ ಶತಮಾನ' ಎಂಬ ಆತ್ಮಚರಿತ್ರೆಯನ್ನೂ ಪ್ರಕಟಿಸಿದ್ದರು.

ಎನ್.ಎಸ್.ಜೋಶಿ

ಬೆಂಗಳೂರು: ರಾಜರಾಜೇಶ್ವರಿನಗರದ ನೇತಾಜಿ ಸುಭಾಷ್‌ಚಂದ್ರಬೋಸ್ ಟ್ರಸ್ಟ್‌ನ ಸಂಸ್ಥಾಪಕ ಟ್ರಸ್ಟಿ ಎನ್.ಎಸ್.ಜೋಶಿ (78) ಅವರು ನಿಧನರಾದರು. ಇವರ ಅಂತ್ಯಕ್ರಿಯೆ ಚಾಮರಾಜಪೇಟೆಯ ರುದ್ರಭೂಮಿಯಲ್ಲಿ ನೆರವೇರಿತು.

ರಾಜರಾಜೇಶ್ವರಿ ನಗರದ ಪ್ರಮೋದ್ ಬಡಾವಣೆಯಲ್ಲಿ ವಾಸವಾಗಿದ್ದರು. ಮೃತರಿಗೆ ಪುತ್ರ ಹಾಗೂ ಪುತ್ರಿ ಇದ್ದಾರೆ.



ಕರ್ಣಾಟಕ ಬ್ಯಾಂಕ್ ಲಿ.
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002 | CIN: L85110KA1924PLC001128 | ಇಮೇಲ್: info@ktkbank.com | ವೆಬ್‌ಸೈಟ್: www.karnatakabank.com

Building **TRUST** through progressive **RESULTS**

ಒಟ್ಟು ವ್ಯವಹಾರ 133918 ಕೋಟಿ | ಠೇವಣಿಗಳು 78429 ಕೋಟಿ | ಮುಂಗಡಗಳು 55489 ಕೋಟಿ | ಕಾಸಾ 31.30 % | ಪಿ.ಸಿ.ಆರ್. 73.74 % | ನಿವ್ವಳ ಲಾಭ 378 ಕೋಟಿ

ದಿನಾಂಕ 31ನೇ ಡಿಸೆಂಬರ್ 2021 ಕ್ಕೆ ಅಂತ್ಯಗೊಂಡ ಸ್ವತಂತ್ರ ಅಪರಿಶೋಧಿತ ತ್ರೈಮಾಸಿಕ / ನವ ಮಾಸಿಕ ಹಣಕಾಸು ಫಲಿತಾಂಶಗಳು

(₹ ಕೋಟಿಗಳಲ್ಲಿ)

ವಿವರಗಳು	31.12.2021 ಕ್ಕೆ ಅಂತ್ಯಗೊಂಡ ತ್ರೈಮಾಸಿಕ (ಅಪರಿಶೋಧಿತ)	31.12.2020 ಕ್ಕೆ ಅಂತ್ಯಗೊಂಡ ತ್ರೈಮಾಸಿಕ (ಅಪರಿಶೋಧಿತ)	31.12.2021 ಕ್ಕೆ ಅಂತ್ಯಗೊಂಡ ನವ ಮಾಸಿಕ (ಅಪರಿಶೋಧಿತ)	31.12.2020 ಕ್ಕೆ ಅಂತ್ಯಗೊಂಡ ನವ ಮಾಸಿಕ (ಅಪರಿಶೋಧಿತ)	31.03.2021 ಕ್ಕೆ ಅಂತ್ಯಗೊಂಡ ವಾರ್ಷಿಕ (ಪರಿಶೋಧಿತ)
ಒಟ್ಟು ನಿರ್ವಹಣಾ ಆದಾಯ (ನಿವ್ವಳ)	1761.55	1878.74	5339.86	5900.90	7636.62
ನಿವ್ವಳ ಲಾಭ / (ನಷ್ಟ) ಪ್ರಸಕ್ತ ಸಾಲಿನಲ್ಲಿ (ತೆರಿಗೆಗೂ ಮುನ್ನ, ಅಸಾಮಾನ್ಯ ಮತ್ತು /ಅಥವಾ ಅಸಾಧಾರಣ ಬಾಬ್ತುಗಳ ಮೊದಲು)	217.82	223.79	410.35	570.06	611.93
ನಿವ್ವಳ ಲಾಭ /(ನಷ್ಟ) ತೆರಿಗೆಗೂ ಮುನ್ನ (ಅಸಾಮಾನ್ಯ ಮತ್ತು /ಅಥವಾ ಅಸಾಧಾರಣ ಬಾಬ್ತುಗಳ ನಂತರ)	217.82	223.79	410.35	570.06	611.93
ನಿವ್ವಳ ಲಾಭ /(ನಷ್ಟ) ಪ್ರಸಕ್ತ ಸಾಲಿನಲ್ಲಿ ತೆರಿಗೆಯ ನಂತರ (ಅಸಾಮಾನ್ಯ ಮತ್ತು /ಅಥವಾ ಅಸಾಧಾರಣ ಬಾಬ್ತುಗಳ ನಂತರ)	146.57	135.38	378.27	451.20	482.57
ಪಾವತಿಸಲಾದ ಈಕ್ವಿಟಿ ಷೇರು ಬಂಡವಾಳ	311.02	310.88	311.02	310.88	310.88
ಮೀಸಲುಗಳು (ಮರು ಮೌಲ್ಯಾಂಕನ ಮೀಸಲುಗಳನ್ನು ಹೊರತುಪಡಿಸಿ)					5866.14
ಸೆಕ್ಯುರಿಟೀಸ್ ಪ್ರೀಮಿಯಂ ಖಾತೆ	1255.47	1255.01	1255.47	1255.01	1255.01
ನಿವ್ವಳ ಸಂಪತ್ತು	6503.54	6144.47	6503.54	6144.47	6177.02
ಪಾವತಿಯಾದ ಸಾಲ ಬಂಡವಾಳ / ಬಾಕಿ ಇರುವ ಸಾಲ	970.00	970.00	970.00	970.00	970.00
ಕ್ಯಾಪಿಟಲ್ ರಿಡೆಂಪ್ಷನ್ ರಿಸರ್ವ್ / ಡಿಬೆಂಚರ್ ರಿಡೆಂಪ್ಷನ್ ರಿಸರ್ವ್	Nil	Nil	Nil	Nil	Nil
ಬಾಕಿ ಇರುವ ಮರುಗಳಿಕೆಯ ಆದ್ಯತೆಯ ಷೇರುಗಳು	Nil	Nil	Nil	Nil	Nil
ಸಾಲ ಬಂಡವಾಳ ಅನುಪಾತ (ಡೆಬ್ಟ್ ಈಕ್ವಿಟಿ ರೇಷಿಯೋ)	0.11	0.20	0.11	0.20	0.19
ಷೇರಿನ ತಲಾ ಆದಾಯ (ಪ್ರತಿ ರೂ. 10/- ರಂತೆ)					
ಮೂಲಭೂತ (ಬೇಸಿಕ್)	4.71*	4.35*	12.17*	14.51*	15.52
ಡೈಲ್ಯೂಟೆಡ್	4.70*	4.35*	12.12*	14.50*	15.48

*ವಾರ್ಷಿಕವಲ್ಲ.

ಮೇಲಿನ ವಿವರಗಳು SEBI (ಸೆಬಿ) (ಲಿಸ್ಟಿಂಗ್ ಮತ್ತು ಇತರ ಪ್ರಕಟಣೆ ಅಗತ್ಯತೆಗಳು) ನಿಯಮಾವಳಿ 2015 ರ ನಿಯಮ 33 ಮತ್ತು 52 ರ ಪ್ರಕಾರ ಸ್ಟಾಕ್ ಎಕ್ಸ್‌ಚೇಂಜ್‌ಗಳಲ್ಲಿ ಸಲ್ಲಿಸಲಾದ ಡಿಸೆಂಬರ್ 31, 2021 ಕ್ಕೆ ಅಂತ್ಯಗೊಂಡ ಫಲಿತಾಂಶಗಳ ವಿವರವಾದ ಸ್ವರೂಪದ ಸಾರವಾಗಿದೆ. ಡಿಸೆಂಬರ್ 31, 2021 ಕ್ಕೆ ಅಂತ್ಯಗೊಂಡ ಫಲಿತಾಂಶಗಳ ಎಲ್ಲಾ ವಿವರಗಳು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಲ್ಲಿ BSE: http://www.bseindia.com,NSE: http://www.nseindia.com, ಮತ್ತು ಬ್ಯಾಂಕಿನ ವೆಬ್‌ಸೈಟ್ https://www.karnatakabank.com/index.jsp. ನಲ್ಲಿ ಲಭ್ಯವಿದೆ.

ದಿನಾಂಕ 31ನೇ ಡಿಸೆಂಬರ್ 2021 ಕ್ಕೆ ಅಂತ್ಯಗೊಂಡ ಕ್ರೋಢೀಕರಿಸಿದ ಅಪರಿಶೋಧಿತ ತ್ರೈಮಾಸಿಕ / ನವ ಮಾಸಿಕ ಹಣಕಾಸು ಫಲಿತಾಂಶಗಳು

(₹ ಕೋಟಿಗಳಲ್ಲಿ)

ವಿವರಗಳು	31.12.2021 ಕ್ಕೆ ಅಂತ್ಯಗೊಂಡ ತ್ರೈಮಾಸಿಕ (ಅಪರಿಶೋಧಿತ)	31.12.2020 ಕ್ಕೆ ಅಂತ್ಯಗೊಂಡ ತ್ರೈಮಾಸಿಕ (ಅಪರಿಶೋಧಿತ)	31.12.2021 ಕ್ಕೆ ಅಂತ್ಯಗೊಂಡ ನವ ಮಾಸಿಕ (ಅಪರಿಶೋಧಿತ)	31.12.2020 ಕ್ಕೆ ಅಂತ್ಯಗೊಂಡ ನವ ಮಾಸಿಕ (ಅಪರಿಶೋಧಿತ)	31.03.2021 ಕ್ಕೆ ಅಂತ್ಯಗೊಂಡ ವಾರ್ಷಿಕ (ಪರಿಶೋಧಿತ)
ಒಟ್ಟು ನಿರ್ವಹಣಾ ಆದಾಯ (ನಿವ್ವಳ)	1761.53	1878.74	5339.78	5900.90	7636.61
ನಿವ್ವಳ ಲಾಭ / (ನಷ್ಟ) ಪ್ರಸಕ್ತ ಸಾಲಿನಲ್ಲಿ (ತೆರಿಗೆಗೂ ಮುನ್ನ, ಅಸಾಮಾನ್ಯ ಮತ್ತು /ಅಥವಾ ಅಸಾಧಾರಣ ಬಾಬ್ತುಗಳ ಮೊದಲು)	217.67	223.78	409.87	569.96	611.82
ನಿವ್ವಳ ಲಾಭ /(ನಷ್ಟ) ತೆರಿಗೆಗೂ ಮುನ್ನ (ಅಸಾಮಾನ್ಯ ಮತ್ತು /ಅಥವಾ ಅಸಾಧಾರಣ ಬಾಬ್ತುಗಳ ನಂತರ)	217.67	223.78	409.87	569.96	611.82
ನಿವ್ವಳ ಲಾಭ /(ನಷ್ಟ) ಪ್ರಸಕ್ತ ಸಾಲಿನಲ್ಲಿ ತೆರಿಗೆಯ ನಂತರ (ಅಸಾಮಾನ್ಯ ಮತ್ತು /ಅಥವಾ ಅಸಾಧಾರಣ ಬಾಬ್ತುಗಳ ನಂತರ)	146.42	135.37	377.79	451.10	482.46
ಪಾವತಿಸಲಾದ ಈಕ್ವಿಟಿ ಷೇರು ಬಂಡವಾಳ	311.02	310.88	311.02	310.88	310.88
ಮೀಸಲುಗಳು (ಮರು ಮೌಲ್ಯಾಂಕನ ಮೀಸಲುಗಳನ್ನು ಹೊರತುಪಡಿಸಿ)					5866.03
ಸೆಕ್ಯುರಿಟೀಸ್ ಪ್ರೀಮಿಯಂ ಖಾತೆ	1255.47	1255.01	1255.47	1255.01	1255.01
ನಿವ್ವಳ ಸಂಪತ್ತು	6502.95	6144.37	6502.95	6144.37	6176.91
ಪಾವತಿಯಾದ ಸಾಲ ಬಂಡವಾಳ / ಬಾಕಿ ಇರುವ ಸಾಲ	970.00	970.00	970.00	970.00	970.00
ಕ್ಯಾಪಿಟಲ್ ರಿಡೆಂಪ್ಷನ್ ರಿಸರ್ವ್ / ಡಿಬೆಂಚರ್ ರಿಡೆಂಪ್ಷನ್ ರಿಸರ್ವ್	Nil	Nil	Nil	Nil	Nil
ಬಾಕಿ ಇರುವ ಮರುಗಳಿಕೆಯ ಆದ್ಯತೆಯ ಷೇರುಗಳು	Nil	Nil	Nil	Nil	Nil
ಸಾಲ ಬಂಡವಾಳ ಅನುಪಾತ (ಡೆಬ್ಟ್ ಈಕ್ವಿಟಿ ರೇಷಿಯೋ)	0.11	0.20	0.11	0.20	0.19
ಷೇರಿನ ತಲಾ ಆದಾಯ (ಪ್ರತಿ ರೂ. 10/- ರಂತೆ)					
ಮೂಲಭೂತ (ಬೇಸಿಕ್)	4.71*	4.35*	12.15*	14.51*	15.52
ಡೈಲ್ಯೂಟೆಡ್	4.69*	4.35*	12.10*	14.50*	15.48

*ವಾರ್ಷಿಕವಲ್ಲ.

ಮೇಲಿನ ವಿವರಗಳು SEBI (ಸೆಬಿ) (ಲಿಸ್ಟಿಂಗ್ ಮತ್ತು ಇತರ ಪ್ರಕಟಣೆ ಅಗತ್ಯತೆಗಳು) ನಿಯಮಾವಳಿ 2015 ರ ನಿಯಮ 33 ರ ಪ್ರಕಾರ ಸ್ಟಾಕ್ ಎಕ್ಸ್‌ಚೇಂಜ್‌ಗಳಲ್ಲಿ ಸಲ್ಲಿಸಲಾದ ಡಿಸೆಂಬರ್ 31, 2021 ಕ್ಕೆ ಅಂತ್ಯಗೊಂಡ ಫಲಿತಾಂಶಗಳ ವಿವರವಾದ ಸ್ವರೂಪದ ಸಾರವಾಗಿದೆ. ಡಿಸೆಂಬರ್ 31, 2021 ಕ್ಕೆ ಅಂತ್ಯಗೊಂಡ ಫಲಿತಾಂಶಗಳ ಎಲ್ಲಾ ವಿವರಗಳು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಲ್ಲಿ BSE: http://www.bseindia.com,NSE: http://www.nseindia.com, ಮತ್ತು ಬ್ಯಾಂಕಿನ ವೆಬ್‌ಸೈಟ್ https://www.karnatakabank.com/index.jsp. ನಲ್ಲಿ ಲಭ್ಯವಿದೆ.

ಸ್ಥಳ : ಮಂಗಳೂರು
ದಿನಾಂಕ : 28.01.2022

ಆಡಳಿತ ಮಂಡಳಿಯ ನಿರ್ದೇಶಕರುಗಳ ಪರವಾಗಿ
ಸಹಿ/-
ಮಹಾಬಲೇಶ್ವರ ಎಂ.ಎಸ್.
ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಸಿಇಒ

ಶನಿವಾರ • ಜನವರಿ 29, 2022 ಪ್ರಜಾವಾಣಿ

ನಕಲಿ ಅಂಕಪಟ್ಟಿ ಜಾಲ: ಮೂವರ ಸೆರೆ

ಬೆಂಗಳೂರು: ನಕಲಿ ಅಂಕಪಟ್ಟಿಗಳನ್ನು ತಯಾರಿಸಿ ಮಾರುತ್ತಿದ್ದ ಜಾಲವನ್ನು ನಗರದ ಪೊಲೀಸರು ಭೇದಿಸಿದ್ದು, ಈ ಸಂಬಂಧ ಮೂವರನ್ನು ಬಂಧಿಸಿದ್ದಾರೆ.

'ನಗರದಲ್ಲಿ ನೆಲೆಸಿದ್ದ ಆರೋಪಿಗಳು, ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಅಂಕಪಟ್ಟಿಗಳನ್ನು ತಯಾರಿಸುತ್ತಿದ್ದರು. ಅವುಗಳನ್ನೇ ಮಾರಾಟ ಮಾಡಿ ಹಣ ಸಂಪಾದಿಸುತ್ತಿದ್ದರು. ಸರ್ಕಾರದ ಇಲಾಖೆಯೊಂದರಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದ ವ್ಯಕ್ತಿ ಹಾಗೂ ನಗರದ ಕಾಲೇಜೊಂದರ ಉಪನ್ಯಾಸಕರೊಬ್ಬರು ಜಾಲದಲ್ಲಿ ಸಿಕ್ಕಿಬಿದ್ದಿದ್ದಾರೆ. ತನಿಖೆ ಗೋಪ್ಯತೆ ದೃಷ್ಟಿಯಿಂದ ಹೆಸರು ಬಹಿರಂಗಪಡಿಸಲಾಗದು' ಎಂದೂ ಮೂಲಗಳು ತಿಳಿಸಿವೆ.

'ಸರ್ಕಾರಿ ಕೆಲಸದ ಆಮಿಷವೊಡ್ಡುತ್ತಿದ್ದ ಆರೋಪಿಗಳು, ಲಕ್ಷಾಂತರ ರೂಪಾಯಿ ಹಣ ಪಡೆಯುತ್ತಿದ್ದರು ಎಂದೂ ಗೊತ್ತಾಗಿದೆ. ಹೆಚ್ಚಿನ ಅಂಕಗಳನ್ನು ನಮೂದಿಸಿ, ಅಂಕಪಟ್ಟಿಗಳನ್ನು ತಯಾರಿಸಿ ಕೊಡುತ್ತಿದ್ದರು. ಅದೇ ಅಂಕಪಟ್ಟಿ ಬಳಸಿ ಕೆಲವರು ಉದ್ಯೋಗ ಪಡೆದಿರುವ ಮಾಹಿತಿಯೂ ಇದೆ' ಎಂದೂ ಮೂಲಗಳು ಹೇಳಿವೆ.

'ನಂದಿನಿ' ನಕಲಿ ತುಪ್ಪ: ಏಜೆನ್ಸಿ ವಿರುದ್ಧ ಎಫ್ಐಆರ್

ಬೆಂಗಳೂರು: ಕರ್ನಾಟಕ ಹಾಲು ಮಹಾಮಂಡಳಿಯ (ಕೆಎಂಎಫ್) 'ನಂದಿನಿ' ಬ್ರ್ಯಾಂಡ್ ಹೆಸರಿನಲ್ಲಿ ನಕಲಿ ತುಪ್ಪ ಮಾರುತ್ತಿದ್ದ ಆರೋಪದಡಿ ನಗರದ 'ಶ್ರುತಿ ಮಾರ್ಕೆಟಿಂಗ್ ಕಾರ್ಪೊರೇಷನ್' ಏಜೆನ್ಸಿ ವಿರುದ್ಧ ಬಸವನಗುಡಿ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ.

'ನಕಲಿ ತುಪ್ಪ ಮಾರಾಟದ ಬಗ್ಗೆ ಕೆಎಂಎಫ್ ಅಧಿಕಾರಿಗಳು ದೂರು ನೀಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮೈಸೂರಿನ ಹೊಸಹುಂಡಿ ಗ್ರಾಮದಲ್ಲಿ ನಕಲಿ ತುಪ್ಪ ತಯಾರಿಕಾ ಘಟಕ ಪತ್ತೆಯಾಗಿತ್ತು. ಇಲ್ಲಿನ ತುಪ್ಪವನ್ನೇ, ನಂದಿನಿ ತುಪ್ಪವೆಂದು ಹೇಳಿ ಏಜೆನ್ಸಿಯವರು ಮಾರುತ್ತಿದ್ದರು. ರಾಜ್ಯ,ಹೊರ ರಾಜ್ಯಗಳಿಗೂ ನಕಲಿ ತುಪ್ಪ ಕಳುಹಿಸಲಾಗುತ್ತಿತ್ತು ಎನ್ನಲಾಗಿದೆ' ಎಂದೂ ಮೂಲಗಳು ತಿಳಿಸಿವೆ.

ವಿವಿಧೆಡೆ ದಾಳಿ: ನಕಲಿ ತುಪ್ಪ ತಯಾರಿಸುತ್ತಿದ್ದ ಮಾಹಿತಿ ಮೇರೆಗೆ ನಗರದ ಹಲವು ಕಡೆಗಳಲ್ಲಿ ಕೆಎಂಎಫ್ ಅಧಿಕಾರಿಗಳು ಶುಕ್ರವಾರ ದಾಳಿ ಮಾಡಿದರು.

'ತುಪ್ಪದ ಪೊಟ್ಟಣಗಳನ್ನು ಸಂಗ್ರಹಿಸಿ, ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ' ಎಂದು ಅಧಿಕಾರಿಯೊಬ್ಬರು ಹೇಳಿದರು.

ಬೆಂಗಳೂರು ವಕೀಲರ ಸಂಘದಿಂದ ಹೈಕೋರ್ಟ್ ಎದುರು ಪ್ರತಿಭಟನೆ ನಡೆಸಲಾಯಿತು. ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಪದಾಧಿಕಾರಿಗಳಾದ ಇಸ್ಮಾಯಿಲ್, ಭಕ್ತವತ್ಸಲ, ಪ್ರವೀಣ್ ಮಿಶ್ರಾ, ರಂಗನಾಥ್, ಶ್ರೀನಿವಾಸ್ ಹಾಗೂ ಇತರರು ಇದ್ದಾರೆ (ಎಡಚಿತ್ರ), ವಕೀಲರು, ಪ್ರಗತಿಪರ ಮತ್ತು ದಲಿತ ಸಂಘಟನೆಗಳ ಒಕ್ಕೂಟದ ಸದಸ್ಯರು ವಿಧಾನಸೌಧ ಎದುರಿನ ಅಂಬೇಡ್ಕರ್ ಪ್ರತಿಮೆ ಬಳಿ ನಡೆಸಿದ ಪ್ರತಿಭಟನೆಯಲ್ಲಿ ಲೇಖಕಿ ಬಿ.ಟಿ.ಲಲಿತಾ ನಾಯಕ್ ಮಾತನಾಡಿದರು —ಪ್ರಜಾವಾಣಿ ಚಿತ್ರಗಳು

ವಕೀಲರು, ಪ್ರಗತಿಪರರು ಮತ್ತು ದಲಿತ ಸಂಘಟನೆಗಳ ಒಕ್ಕೂಟದಿಂದ ಪ್ರತಿಭಟನೆ

ಅಂಬೇಡ್ಕರ್‌ಗೆ ಅಗೌರವ: ಜಡ್ಜ್ ವಜಾಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗಣರಾಜ್ಯೋತ್ಸವ ದಿನದ ಕಾರ್ಯಕ್ರಮದಲ್ಲಿಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಅಗೌರವ ತೋರಿರುವ ನ್ಯಾಯಾಧೀಶ ಮಲ್ಲಿಕಾರ್ಜುನ ಗೌಡ ಅವರನ್ನು ಕೂಡಲೇ ವಜಾಗೊಳಿಸಬೇಕು' ಎಂದು ಆಗ್ರಹಿಸಿ ವಕೀಲರು, ಪ್ರಗತಿಪರ, ದಲಿತ ಸಂಘಟನೆಗಳ ಒಕ್ಕೂಟದ ಸದಸ್ಯರು ವಿಧಾನಸೌಧದ ಮುಂದೆ ಇರುವ ಅಂಬೇಡ್ಕರ್ ಪ್ರತಿಮೆ ಬಳಿ ಶುಕ್ರವಾರ ಪ್ರತಿಭಟನೆ ನಡೆಸಿದರು. ಮಾನವ ಸರಪಳಿ ನಿರ್ಮಿಸುವ ಮೂಲಕ, ಘಟನೆಯನ್ನು ಖಂಡಿಸಿದರು.

'ಘಟನೆಗೆ ಸಂಬಂಧಿಸಿದಂತೆ ರಾಯಚೂರು ಜಿಲ್ಲಾ ನ್ಯಾಯಾಧೀಶರ ಸಮರ್ಥನೆಯನ್ನು ಒಪ್ಪಲು ಸಾಧ್ಯವಿಲ್ಲ. ಅಂಬೇಡ್ಕರ್ ವಿರೋಧಿ ಧೋರಣೆ ತೋರಿರುವ ಅವರು, ನ್ಯಾಯಸ್ಥಾನದಲ್ಲಿ ಇರಲು ಅರ್ಹರಲ್ಲ. ಮಲ್ಲಿಕಾರ್ಜುನ ಗೌಡ ಅವರನ್ನು ವಿಚಾರಣೆಗೆ ಒಳಪಡಿಸಬೇಕು' ಎಂದು ಸಂಘಟನೆಗಳ ಮುಖಂಡರು ಆಗ್ರಹಿಸಿದರು.

ಲೇಖಕಿ ಬಿ.ಟಿ.ಲಲಿತಾ ನಾಯಕ್, ಮಾತನಾಡಿ, 'ಮಲ್ಲಿಕಾರ್ಜುನ ಗೌಡ ಅವರು ಪೂರ್ವಗ್ರಹಪೀಡಿತರಾಗಿ ಈ ರೀತಿ ವರ್ತಿಸಿದ್ದಾರೆ. ನ್ಯಾಯಾಧೀಶರಾಗಿರಲು ಅರ್ಹರಲ್ಲದ ಅವರನ್ನು ಕೂಡಲೇ ವಜಾಗೊಳಿಸಬೇಕು' ಎಂದು ಆಗ್ರಹಿಸಿದರು.

ನ್ಯಾಯವಾದಿ ಎಸ್.ಬಾಲನ್, 'ನ್ಯಾಯಾಲಯಗಳಲ್ಲಿ ಮೀಸಲಾತಿ ಸರಿಯಾಗಿ ಜಾರಿಯಾಗದ ಕಾರಣ ಮುಂದುವರಿದ ಸಮುದಾಯದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅಲ್ಲಿಯೂ ಎಲ್ಲ ಸಮುದಾಯವರಿಗೆ ಮೀಸಲಾತಿ ಸಿಗಬೇಕು' ಎಂದು ಒತ್ತಾಯಿಸಿದರು.

'ಸಂವಿಧಾನ ಶಿಲ್ಪಿಯನ್ನೇ ಅವಮಾನಿಸಿರುವುದು ದೇಶದ್ರೋಹಕ್ಕೆ ಸಮಾನ. ಸಂವಿಧಾನ ಜಾರಿಯಾದ ದಿನವೇ ಈ ಅಪಚಾರ ಮಾಡಿರುವುದು ಖಂಡನೀಯ' ಎಂದು ದಲಿತ ಸಂಘರ್ಷ ಸಮಿತಿಯ ಗುರುಪ್ರಸಾದ್ ಕೆರಗೋಡು ದೂರಿದರು.

ದಲಿತ ಸಂಘಟನೆ ಮುಖಂಡ ಮಾವಳ್ಳಿ ಶಂಕರ್, 'ಈ ಘಟನೆಯಿಂದ ಅಂಬೇಡ್ಕರ್ ಅವರಿಗಷ್ಟೇ ಅಲ್ಲ, ಕೋಟ್ಯಂತರ ಶೋಷಿತರಿಗೂ ಅವಮಾನ ಆಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ದೌರ್ಜನ್ಯ ತಡೆ ಕಾಯ್ದೆಯಡಿ ಆ ನ್ಯಾಯಾಧೀಶರ ವಿರುದ್ಧ ಪ್ರಕರಣ ದಾಖಲಿಸಬೇಕು' ಎಂದು ಆಗ್ರಹಿಸಿದರು.

ಹೋರಾಟಗಾರ ಸಿರಿಮನೆ ನಾಗರಾಜ್, 'ಎಲ್ಲ ನ್ಯಾಯಾಲಯಗಳಲ್ಲಿ ಅಂಬೇಡ್ಕರ್ ಭಾವಚಿತ್ರವನ್ನು ಕಡ್ಡಾಯವಾಗಿ ಅಳವಡಿಸಬೇಕು. ಈ ಬೇಡಿಕೆ ಈಡೇರದಿದ್ದರೆ, ವಾರದೊಳಗೆ ಸಭೆ ನಡೆಸಿ ಪ್ರತಿಭಟನೆ ಮುಂದುವರಿಸಲಾಗುವುದು' ಎಂದೂ ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ರೈತ, ಕಾರ್ಮಿಕ, ವಿದ್ಯಾರ್ಥಿ ಹಾಗೂ ವಿವಿಧ ಮಹಿಳಾ ಸಂಘಟನೆಗಳ ಸದಸ್ಯರೂ ಭಾಗವಹಿಸಿದ್ದರು.

ವಕೀಲರ ಸಂಘದಿಂದ ಪ್ರತಿಭಟನೆ

'ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ರಾಯಚೂರು ಜಿಲ್ಲಾ ನ್ಯಾಯಾಧೀಶ ಮಲ್ಲಿಕಾರ್ಜುನ ಗೌಡ ಅಗೌರವ ತೋರಿದ್ದಾರೆ' ಎಂದು ಆರೋಪಿಸಿ ಬೆಂಗಳೂರು ವಕೀಲರ ಸಂಘದ ಪದಾಧಿಕಾರಿಗಳು ಹಾಗೂ ವಕೀಲರು ಹೈಕೋರ್ಟ್‌ನ ಪ್ರವೇಶ ದ್ವಾರದ ಬಳಿ ಭಿತ್ತಿಪತ್ರಗಳನ್ನು ಪ್ರದರ್ಶಿಸಿ ಶುಕ್ರವಾರ ಮೌನ ಪ್ರತಿಭಟನೆ ನಡೆಸಿದರು.

ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, 'ಘಟನೆಯ ಬಗ್ಗೆ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು. ಈ ಸಂಬಂಧ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಅವರಿಗೂ ಮನವಿ ಸಲ್ಲಿಸಲಾಗಿದೆ' ಎಂದರು.

ಹೈಕೋರ್ಟ್ ಮತ್ತು ವಿಧಾನಸೌಧದ ಎದುರು ವಿವಿಧ ಸಂಘಟನೆಗಳು ಏಕಕಾಲಕ್ಕೆ ಪ್ರತಿಭಟನೆ ಹಮ್ಮಿಕೊಂಡಿದ್ದವು. ಅಹಿತಕರ ಘಟನೆ ನಡೆಯದಂತೆ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಸುದ್ದಿ 2 ನಿಮಿಷ

'ಅಂಬಗ್ರಿಸ್' ಅಕ್ರಮ ಸಾಗಣೆ ಇಬ್ಬರು ಆರೋಪಿಗಳ ಬಂಧನ

ಬೆಂಗಳೂರು: ತಿಮಿಂಗಿಲದ-ವಾಂತಿಯನ್ನು (ಅಂಬಗ್ರಿಸ್) ಅಕ್ರಮವಾಗಿ ಸಾಗಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಚನ್ನಮ್ಮನ-ಕೆರೆ ಅಚ್ಚುಕಟ್ಟು ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿಗಳಾದ ರಿಯಾಜ್ ಅಹ್ಮದ್ ಹಾಗೂ ಮೊಹಮ್ಮದ್ ಗೌಸ್ ಬಂಧಿತರು. ಅವರಿಂದ ಸುಮಾರು ₹ 3 ಕೋಟಿ ಮೌಲ್ಯದ ಅಂಬಗ್ರಿಸ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಹೊರ ರಾಜ್ಯದಲ್ಲಿ ಅಂಬಗ್ರಿಸ್ ಖರೀದಿಸಿ ನಗರಕ್ಕೆ ತಂದಿದ್ದ ಆರೋಪಿಗಳು, ಮಾರಾಟ ಮಾಡಲು ಯತ್ನಿಸುತ್ತಿದ್ದರು.'

'ಬನಶಂಕರಿ ಬಳಿ ಆರೋಪಿಗಳು ಅನುಮಾನಾಸ್ಪದವಾಗಿ ನಿಂತಿದ್ದರು. ಅವರ ಬಗ್ಗೆ ಸ್ಥಳೀಯರು ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋದ ಪೊಲೀಸ್ ಸಿಬ್ಬಂದಿ, ಆರೋಪಿಗಳನ್ನು ವಶಕ್ಕೆ ಪಡೆದು ಠಾಣೆಗೆ ಕರೆ ತಂದಿದ್ದರು. ವಿಚಾರಣೆ ನಡೆಸಿದಾಗ, ಆರೋಪಿಗಳ ಬಳಿ ಅಂಬಗ್ರಿಸ್ ಇರುವುದು ತಿಳಿಯಿತು' ಎಂದೂ ಪೊಲೀಸರು ತಿಳಿಸಿದರು.



ಬಮುಲ್ ಪರೀಕ್ಷೆಯಲ್ಲಿ ಅಕ್ರಮ: ತನಿಖೆಗೆ ಆದೇಶ

ಬೆಂಗಳೂರು: ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ (ಬಮುಲ್) ವಿವಿಧ ಹುದ್ದೆಗಳಿಗಾಗಿ ನಡೆದಿರುವ ನೇಮಕಾತಿಯ ಲಿಖಿತ ಪರೀಕ್ಷೆಯಲ್ಲಿನ ಅಕ್ರಮಗಳ ಬಗ್ಗೆ ತನಿಖೆ ನಡೆಸಲು ಸರ್ಕಾರ ಆದೇಶಿಸಿದೆ.

ಸಹಕಾರ ಸಂಘಗಳ ಜಂಟಿ ನಿಬಂಧಕರನ್ನು ತನಿಖಾಧಿಕಾರಿಯನ್ನಾಗಿ ನೇಮಿಸಲಾಗಿದೆ. ಲಿಖಿತ ಪರೀಕ್ಷೆಯಲ್ಲಿನ ಅಕ್ರಮಗಳು ಮತ್ತು ನ್ಯೂನತೆಗಳ ಕುರಿತು ಪರಿಶೀಲಿಸಿ ತನಿಖೆ ನಡೆಸಿ ಸರ್ಕಾರಕ್ಕೆ ವರದಿ ನೀಡುವಂತೆ ಸೂಚಿಸಲಾಗಿದೆ.

ಪರೀಕ್ಷಾ ಅಕ್ರಮಗಳ ಬಗ್ಗೆ ಸಿಐಡಿ ಅಥವಾ ವಿಶೇಷ ತನಿಖಾ ತಂಡದಿಂದ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು ಮತ್ತು ಅಭ್ಯರ್ಥಿಗಳಿಗೆ ಅನ್ಯಾಯವಾಗದಂತೆ ಹೊಸದಾಗಿ ಲಿಖಿತ ಪರೀಕ್ಷೆಯನ್ನು ಪಾರದರ್ಶಕವಾಗಿ ನಡೆಸಬೇಕು ಎಂದು ಒತ್ತಾಯಿಸಿ ಬೆಂಗಳೂರು ಗ್ರಾಮಾಂತರ ಸಂಸದ ಡಿ.ಕೆ. ಸುರೇಶ್ ಅವರು ಸಹಕಾರ ಸಚಿವರಿಗೆ ಪತ್ರ ಬರೆದಿದ್ದರು. ಸಚಿವರ ಸೂಚನೆಯಂತೆ ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅವರು ತನಿಖೆಗೆ ಆದೇಶಿಸಿದ್ದಾರೆ.

ಆತ್ಮಹತ್ಯೆಗೆ ಯತ್ನಿಸಿದ ಮೂವರು: ಮಹಿಳೆ ಸಾವು

ಬೆಂಗಳೂರು: ಬಾಗಲಗುಂಟೆ ಠಾಣೆ ವ್ಯಾಪ್ತಿಯಲ್ಲಿ ಒಂದೇ ಕುಟುಂಬದ ಮೂವರು ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದು, ಆ ಪೈಕಿ ಗೀತಾ (37) ಎಂಬುವರು ತೀರಿಕೊಂಡಿದ್ದಾರೆ.

'ಕಾರುಚಾಲಕ ಭಾನುಪ್ರಕಾಶ್ (40), ತಮ್ಮ ಪತ್ನಿ ಗೀತಾ ಹಾಗೂ ಮಗಳು ಲೇಖನಾ (14) ಜೊತೆ ಹಾಲಿನಲ್ಲಿ ವಿಷ ಬೆರೆಸಿ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದರು. ತೀವ್ರ ಅಸ್ವಸ್ಥಗೊಂಡ ಗೀತಾ, ಮನೆಯಲ್ಲೇ ಅಸುನೀಗಿದ್ದಾರೆ. ಭಾನುಪ್ರಕಾಶ್ ಹಾಗೂ ಲೇಖನಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಪೊಲೀಸ್ ಅಧಿಕಾರಿ ಯೊಬ್ಬರು ಹೇಳಿದರು.

'ಸ್ವಂತ ಕಾರು ಹೊಂದಿದ್ದ ಭಾನುಪ್ರಕಾಶ್ ಬಾಡಿಗೆ ಓಡಿಸುತ್ತಿದ್ದರು. ದುಡಿಮೆ ಜೀವನ ನಿರ್ವಹಣೆಗೆ ಸಾಕಾಗುತ್ತಿರಲಿಲ್ಲ. ಹೀಗಾಗಿ, ನಿತ್ಯವೂ ಬೆಳಿಗ್ಗೆ ಹಾಲು, ಪತ್ರಿಕೆ ಸಹ ಮಾರುತ್ತಿದ್ದರೂ ಹಣ ಸಾಲುತ್ತಿರಲಿಲ್ಲ. ಲಾಕ್‌ಡೌನ್‌ನಿಂದಲೂ ಅವರ ದುಡಿಮೆ ಕಡಿಮೆ ಆಗಿತ್ತು. ಅವರು ಹಲವರ ಬಳಿ ಸಾಲ ಮಾಡಿದ್ದರು. ಅದನ್ನು ತೀರಿಸಲು ಆಗಿರಲಿಲ್ಲ. ಇದರಿಂದ ನೊಂದ ಅವರು ಪತ್ನಿ ಹಾಗೂ ಮಗಳ ಜೊತೆ ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾಗಿದ್ದರು.'

ಕರೆ ಮಾಡಿದ್ದ ಮಗಳು: 'ಶುಕ್ರವಾರ ಬೆಳಿಗ್ಗೆ ಹಾಲು ತಂದಿದ್ದ ಭಾನುಪ್ರಕಾಶ್, ಅದರಲ್ಲಿ ವಿಷ ಬೆರೆಸಿದ್ದರು. ಅದನ್ನೇ ಪತ್ನಿಗೆ ಕುಡಿಸಿ, ತಾವು ಕುಡಿದಿದ್ದರು. ಬಳಿಕ, ಮಗಳಿಗೆ ಕುಡಿಸಿದ್ದರು'.

'ಗೀತಾ ನರಳಾಡಿ ಜೀವ ಬಿಟ್ಟಿದ್ದರು. ಭಾನುಪ್ರಕಾಶ್ ಸಹ ನರಳಾಡಲಾರಂಭಿಸಿದ್ದರು. ಹೆದರಿದ್ದ ಲೇಖನಾ, ತಂದೆಯ ಮೊಬೈಲ್‌ನಿಂದ ಸಂಬಂಧಿಕರಿಗೆ ಕರೆ ಮಾಡಿ ವಿಷಯ ತಿಳಿಸಿದ್ದಳು. ಸ್ಥಳಕ್ಕೆ ಬಂದ ಸಂಬಂಧಿಕರೇ, ಭಾನುಪ್ರಕಾಶ್ ಹಾಗೂ ಲೇಖನಾ ಅವರನ್ನು ಆಸ್ಪತ್ರೆಗೆ ಸೇರಿಸಿದ್ದಾರೆ' ಎಂದೂ ತಿಳಿಸಿದರು.

ಮದ್ಯದ ಪಾರ್ಟಿ: ನಟನ ವಿರುದ್ಧ ಪ್ರಕರಣ

ನಗರದಲ್ಲಿ ರಾತ್ರಿ ಕರ್ಫ್ಯೂ ಜಾರಿಯಲ್ಲಿದ್ದರೂ ಮದ್ಯದ ಪಾರ್ಟಿ ಆಯೋಜಿಸಿ ಗುಂಪು ಸೇರಿದ್ದ ಆರೋಪದಡಿ ಕಿರುತೆರೆ ನಟ ರಕ್ಷಿತ್ ಹಾಗೂ ಅವರ ಸ್ನೇಹಿತರ ವಿರುದ್ಧ ಕೆಂಗೇರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. 'ರಕ್ಷಿತ್ ಹಾಗೂ ಸ್ನೇಹಿತರು, ಕೆಂಗೇರಿ ಬಳಿಯ ಜಿಂಜರ್ ಲೇಕ್ ವ್ಯೂ ಹೋಟೆಲ್‌ನಲ್ಲಿ ರಾತ್ರಿ 1.30ರ ಸುಮಾರಿಗೆ ಪಾರ್ಟಿ ಮಾಡುತ್ತಿದ್ದರು. ಸ್ಥಳಕ್ಕೆ ಹೋಗಿದ್ದ ಹೊಯ್ಸಳ ವಾಹನದ ಸಿಬ್ಬಂದಿ ಎಲ್ಲರನ್ನೂ ವಶಕ್ಕೆ ಪಡೆದು ಠಾಣೆಗೆ ಕರೆತಂದು ವಿಚಾರಣೆ ನಡೆಸಿದ್ದರು' ಎಂದು ಪೊಲೀಸ್ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

ಐ.ಟಿ ಅಧಿಕಾರಿಗಳ ಸೋಗಿನಲ್ಲಿ ಸುಲಿಗೆ

ಬೆಂಗಳೂರು: ಆದಾಯ ತೆರಿಗೆ (ಐ.ಟಿ) ಇಲಾಖೆ ಅಧಿಕಾರಿಗಳ ಸೋಗಿನಲ್ಲಿ ಉದ್ಯಮಿಯೊಬ್ಬರ ಮನೆಗೆ ನುಗ್ಗಿ ಸುಲಿಗೆ ಮಾಡಿದ್ದ ಐವರು ಆರೋಪಿಗಳನ್ನು ಸಂಜಯನಗರ ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿಗಳಾದ ಮಂಜುನಾಥ್, ಪ್ರಶಾಂತ್, ಕುಮಾರ್, ದುರ್ಗೇಶ್ ಹಾಗೂ ಮೊಹಮ್ಮದ್ ಶೋಯೆಬ್ ರಬ್ಬಾನಿ ಬಂಧಿತರು. ಇವರಿಂದ ₹ 1.70 ಲಕ್ಷ ನಗದು, 2 ಪಿಸ್ತೂಲ್, ಕಾರು ಹಾಗೂ ಆದಾಯ ತೆರಿಗೆ ಇಲಾಖೆಯ ನಕಲಿ ಗುರುತಿನ ಚೀಟಿ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪತ್ರಿಕೆಯೊಂದರ ಸಂಪಾದಕನೆಂದು ಹೇಳಿಕೊಳ್ಳುತ್ತಿದ್ದ ಮಂಜುನಾಥ್, ರಿಯಲ್ ಎಸ್ಟೇಟ್ ಏಜೆಂಟರಾದ ಇತರೆ ಆರೋಪಿಗಳ ಜೊತೆ ಸೇರಿ ಸಂಜಯ ನಗರ ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬರ ಮನೆಗೆ, ಐಟಿ ಅಧಿಕಾರಿಗಳ ಸೋಗಿನಲ್ಲಿ ನುಗ್ಗಿ, ನಗದು,ಪಿಸ್ತೂಲ್ ತೆಗೆದುಕೊಂಡು ಪರಾರಿಯಾಗಿದ್ದರು' ಎಂದೂ ಮೂಲಗಳು ತಿಳಿಸಿವೆ.

ಅಶ್ಲೀಲ ಸಂದೇಶ: ಡೆಲಿವರಿ ಬಾಯ್ ವಿರುದ್ಧ ದೂರು

ಯುವತಿಯೊಬ್ಬರ ಮೊಬೈಲ್‌ಗೆ ಅಶ್ಲೀಲ ಫೋಟೊ, ಸಂದೇಶ ಕಳುಹಿಸಿ ಕಿರುಕುಳ ನೀಡುತ್ತಿರುವ ಆರೋಪದಡಿ ಡೆಲಿವರಿ ಬಾಯ್ ವಿರುದ್ಧ ದೂರು ಸಲ್ಲಿಕೆಯಾಗಿದೆ.

'ಸಂತ್ರಸ್ತ ಯುವತಿಯ ಸ್ನೇಹಿತ, ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ಟ್ವಿಟರ್ ಮೂಲಕ ದೂರು ನೀಡಿದ್ದಾರೆ. ಅದರನ್ವಯ ಕ್ರಮ ಜರುಗಿಸಲಾಗಿದೆ. ಆಹಾರ ಪೂರೈಕೆ ವೇಳೆ ಯುವತಿ ತಮ್ಮ ಮೊಬೈಲ್ ನಂಬರ್ ನೀಡಿದ್ದರು. ಆ ನಂಬರ್ ದುರ್ಬಳಕೆ ಮಾಡಿಕೊಂಡು ಡೆಲಿವರಿ ಬಾಯ್ ಕೃತ್ಯ ಎಸಗಿದ್ದು, ಸದ್ಯಕ್ಕೆ ಆತ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಬಿಎಸ್‌ಪಿ ರಾಜ್ಯ ಘಟಕದ ಕಾರ್ಯದರ್ಶಿ ಸೇರಿ ಹಲವರ ಬಂಧನ

ಹುಮನಾಬಾದ್ ತಹಶೀಲ್ದಾರ್ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಬೀದರ್: ಮನವಿ ಸ್ವೀಕರಿಸಲು ಬರಲಿಲ್ಲ ಎಂದು ಆಕ್ರೋಶಗೊಂಡ ಪ್ರತಿಭಟನಾನಿರತ ಬಹುಜನ ಸಮಾಜ ಪಕ್ಷದ ಕಾರ್ಯಕರ್ತರು, ಶುಕ್ರವಾರ ಹುಮನಾಬಾದ್ ತಹಶೀಲ್ದಾರ್ ಕಚೇರಿಗೆ ನುಗ್ಗಿ ಕುರ್ಚಿಗಳನ್ನು ಧ್ವಂಸಗೊಳಿಸಿದ್ದು, ತಹಶೀಲ್ದಾರ್ ಪ್ರದೀಪ್ ಹಿರೇಮಠ ಮೇಲೆ ಹಲ್ಲೆ ನಡೆಸಿದ್ದಾರೆ.

ಘಟನೆಗೆ ಸಂಬಂಧಿಸಿ ಬಿಎಸ್‌ಪಿ ರಾಜ್ಯ ಘಟಕದ ಕಾರ್ಯದರ್ಶಿ ಅಂಕುಶ್ ಗೋಖಲೆ ಹಾಗೂ ಅವರ ಬೆಂಬಲಿಗರನ್ನು ಹುಮನಾಬಾದ್ ಪೊಲೀಸರು ಬಂಧಿಸಿದ್ದಾರೆ.

ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಅವಮಾನ ಮಾಡಿರುವ ರಾಯಚೂರು ಜಿಲ್ಲಾ ನ್ಯಾಯಾಧೀಶರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ತಹಶೀಲ್ದಾರ್ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿದ ಬಿಎಸ್‌ಪಿ ಕಾರ್ಯಕರ್ತರು, ಮನವಿಪತ್ರ ಸ್ವೀಕರಿಸಲು ಸ್ಥಳಕ್ಕೆ ಬರುವಂತೆ ತಹಶೀಲ್ದಾರರಿಗೆ ಮನವಿ ಮಾಡಿದರು.

ತಹಶೀಲ್ದಾರ್ ಮೇಲೆ ಪ್ರತಿಭಟನಕಾರರು ಹಲ್ಲೆ ಮಾಡಿದರು

'ಆಯುಷ್ಮಾನ್ ಭಾರತ್ ಯೋಜನೆಯಡಿ ಆಹಾರ ಪೂರೈಕೆ ಮಾಡುವ ವಿತರಕರೊಂದಿಗೆ ಸಭೆ ನಡೆಸುತ್ತಿದ್ದೆ. ಅಂಕುಶ್ ಗೋಖಲೆ ಅವರು ಮನವಿಪತ್ರ ಸ್ವೀಕರಿಸುವಂತೆ ಬಂದಿದ್ದರು. ಸಭೆ ಮುಗಿದ ತಕ್ಷಣ ಮನವಿ ಸ್ವೀಕರಿಸುತ್ತೇನೆ. ಐದು ನಿಮಿಷ ಕಾಯುವಂತೆ ಹೇಳಿದೆ. ಅವರು ಈಗಲೇ ತೆಗೆದುಕೊಳ್ಳುವಂತೆ ಒತ್ತಾಯಿಸಿದಾಗ ಗ್ರೇಡ್-2 ತಹಶೀಲ್ದಾರ್ ಬಳಿ ಕೊಡುವಂತೆ ಸೂಚಿಸಿದೆ. ಅಷ್ಟಕ್ಕೇ ಅವರು ಕಿರುಚಾಡುತ್ತ ನನ್ನತ್ತ ಬಂದು ಅವಾಚ್ಯ ಶಬ್ದಗಳಿಂದ ನಿಂದಿಸಿ ಕಾಲಿನಿಂದ ಗುಪ್ತಾಂಗಕ್ಕೆ ಒದ್ದಿದ್ದಾರೆ. ಅವರ ಹಿಂಬಾಲಕರು ಅಂಗಿ ಹಿಡಿದು ಎಳೆದಾಡಿದ್ದಾರೆ' ಎಂದು ತಹಶೀಲ್ದಾರ್ ದೂರು ನೀಡಿದ್ದಾರೆ. ಹಲ್ಲೆಯ ವಿಡಿಯೊ ವೈರಲ್ ಆಗಿದೆ.

ಸಿಬ್ಬಂದಿ ಪ್ರತಿಭಟನೆ: ತಹಶೀಲ್ದಾರ್ ಪ್ರದೀಪ್ ಹಿರೇಮಠ ಅವರು ಹುಮನಾಬಾದ್ ಸಾರ್ವಜನಿಕ ಆಸ್ಪತ್ರೆಗೆ ತೆರಳಿ ಚಿಕಿತ್ಸೆ ಪಡೆದರು. ಹಲ್ಲೆ ಖಂಡಿಸಿ ತಹಶೀಲ್ದಾರ್ ಕಚೇರಿ ಸಿಬ್ಬಂದಿ ಕಚೇರಿಗೆ ಬೀಗ ಹಾಕಿ ಪ್ರತಿಭಟನೆ ನಡೆಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಿ.ಕಿಶೋರ ಬಾಬು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಬಂಧನ: ಬಿಎಸ್‌ಪಿ ರಾಜ್ಯ ಘಟಕದ ಕಾರ್ಯದರ್ಶಿ ಅಂಕುಶ್ ಗೋಖಲೆ, ಮುಜಿದ್ ಪಟೇಲ್, ರಾಜಕುಮಾರ ಶಿಂಧೆ, ದೇವೇಂದ್ರ, ದತ್ತಾತ್ರೇಯ ಅವರನ್ನು ಹುಮನಾಬಾದ್ ಪೊಲೀಸರು ಬಂಧಿಸಿದ್ದಾರೆ. ಉಳಿದ ಆರೋಪಿಗಳ ಶೋಧ ನಡೆದಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದ್ದಾರೆ.

ನಿಗದಿತ ಅಧಿವೇಶನದ ಅವಧಿ ಮೀರಿದ ಅಮಾನತು ಅನೂರ್ಜಿತ

'12 ಶಾಸಕರ ಅಮಾನತು ಅಸಾಂವಿಧಾನಿಕ'

ಪ್ರಜಾವಾಣಿ ವಾರ್ತೆ

ನವದೆಹಲಿ: '12 ಜನ ಬಿಜೆಪಿ ಶಾಸಕರನ್ನು ಒಂದು ವರ್ಷದ ಅವಧಿಗೆ ಸದನದಿಂದ ಅಮಾನತುಗೊಳಿಸಿ ಕಳೆದ ವರ್ಷ ಜುಲೈ 5ರಂದು ಮಹಾರಾಷ್ಟ್ರ ವಿಧಾನಸಭೆಯಲ್ಲಿ ಅಂಗೀಕರಿಸಿದ ನಿರ್ಣಯ ಅಸಾಂವಿಧಾನಿಕ' ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ತೀರ್ಪು ನೀಡಿದೆ.

'ಇದು ಕಾನೂನುಬಾಹಿರ ಹಾಗೂ ವಿವೇಚನಾರಹಿತ ಕ್ರಮ. ಅಧಿವೇಶನದ ಬಾಕಿ ಇದ್ದ ಅವಧಿಯನ್ನು ಮೀರಿ ಉಳಿದ ಅವಧಿಗೆ ಸದನದ ಸದಸ್ಯರೊಬ್ಬರನ್ನು ಅಮಾನತು ಮಾಡುವಂತಿಲ್ಲ' ಎಂದೂ ಸುಪ್ರೀಂಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಎ.ಎಂ.ಖಾನ್ವಿಲ್ಕರ್, ದಿನೇಶ್ ಮಾಹೇಶ್ವರಿ ಹಾಗೂ ಸಿ.ಟಿ.ರವಿಕುಮಾರ್ ಅವರಿದ್ದ ನ್ಯಾಯಪೀಠ ತೀರ್ಪು ಪ್ರಕಟಿಸಿತು.

'ಶಾಸಕರನ್ನು ಅನರ್ಹಗೊಳಿಸಿದ ಪ್ರಕರಣ ಇದಲ್ಲದಿದ್ದರೂ, ಅಧಿವೇಶನದ ಬಾಕಿ ಇರುವ ಅವಧಿ ಮೀರಿ ಆರು ದಿನಗಳಿಗೆ ಅಥವಾ ಆರು ತಿಂಗಳ ಅವಧಿಗೆ ಅಮಾನತು ಮಾಡಿದ್ದರೆ, ಶಾಸಕರು ಆಯ್ಕೆಯಾಗಿದ್ದ ಕ್ಷೇತ್ರಗಳು ಪ್ರಾತಿನಿಧ್ಯದಿಂದ ವಂಚಿತವಾಗಬೇಕಿತ್ತು' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿತು.

'ಶಾಸಕರ ವಿರುದ್ಧ ಶಿಸ್ತು ಕ್ರಮ ಅಥವಾ ತಪ್ಪನ್ನು ತಿದ್ದುವಂಥ ಕ್ರಮ ಕೈಗೊಳ್ಳುವ ಬದಲು, ಸದನವು ತಮ್ಮ ಪ್ರದತ್ತವಾದ ಅಧಿಕಾರವನ್ನು ಮೀರಿದ ಕಠಿಣ ಕ್ರಮಗಳ ಮೊರೆ ಹೋದಂತಾಗಿದೆ. ಇದು ಶಾಸಕಾಂಗದ ಕಾರ್ಯವಿಧಾನದಲ್ಲಿನ ನ್ಯೂನತೆ ಮಾತ್ರವಲ್ಲ, ಭಾರಿ ಅನ್ಯಾಯವೂ ಹೌದು' ಎಂದು ಪೀಠ ಹೇಳಿತು.

'ಸದನದ ಸದಸ್ಯರ ವಿರುದ್ಧ ಹಂತಹಂತವಾಗಿ ಕ್ರಮ ಜರುಗಿಸುವ ವಿಧಾನ ಅನುಸರಿಸುವುದು ಉತ್ತಮ' ಎಂದು ಹೇಳಿದ ನ್ಯಾಯಪೀಠ, 'ಅಧಿವೇಶನದ ಬಾಕಿ ಇರುವ ಅವಧಿಗಿಂತ ಹೆಚ್ಚಿನ ದಿನಗಳ ಕಾಲ ಅಮಾನತು ಮಾಡಿದಲ್ಲಿ, ಶಾಸಕನಿಗೆ ಮಾತ್ರ ಶಿಕ್ಷೆ ವಿಧಿಸಿದಂತಾಗದೇ, ಆತ ಪ್ರತಿನಿಧಿಸುವ ಕ್ಷೇತ್ರದ ಜನರ ಹಕ್ಕುಗಳ ಮೇಲೂ ಪ್ರಹಾರ ಮಾಡಿದಂತಾಗುತ್ತದೆ' ಎಂದು ಅಭಿಪ್ರಾಯಪಟ್ಟಿತು.

'ಇಂಥ ಕ್ರಮಗಳು ಪ್ರಜಾಪ್ರಭುತ್ವ ಮೌಲ್ಯಗಳ ಉಲ್ಲಂಘನೆಯಾಗುತ್ತದೆ. ಅಲ್ಪ ಬಹುಮತದಿಂದ ರಚನೆಯಾದ ಸರ್ಕಾರಗಳು ವಿರೋಧ ಪಕ್ಷಗಳ ಸದಸ್ಯರ ಮೇಲೆ ನಿಯಂತ್ರಣ ಸಾಧಿಸಲು ಅವಕಾಶ ಮಾಡಿ ಕೊಟ್ಟಂತಾಗುತ್ತದೆ' ಎಂದೂ ಹೇಳಿತು.

ಸ್ಪೀಕರ್ ಅವರೊಂದಿಗೆ ಅನುಚಿತವಾಗಿ ವರ್ತಿಸಿದ ಆರೋಪದ ಮೇಲೆ ಬಿಜೆಪಿಯ 12 ಶಾಸಕರನ್ನು ಅಮಾನತುಗೊಳಿಸುವ ನಿರ್ಣಯವನ್ನು ಆಡಳಿತಾರೂಢ ಎಂವಿಎ ಮೈತ್ರಿಕೂಟದಿಂದ ಕಳೆದ ವರ್ಷ ಜುಲೈನಲ್ಲಿ ನಡೆದ ಅಧಿವೇಶನದಲ್ಲಿ ಅಂಗೀಕರಿಸಲಾಗಿತ್ತು.

ಈ ಕ್ರಮವನ್ನು ಪ್ರಶ್ನಿಸಿ, ಬಿಜೆಪಿ ಶಾಸಕರು ಆಶೀಶ್ ಶೇಲಾರ್ ನೇತೃತ್ವದಲ್ಲಿ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದರು.

ಕೋವಿಡ್ ದೃಢಪಟ್ಟ ನೌಕರರಿಗೆ 7 ದಿನ ರಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರ ಅಥವಾ ಆತನ ಕುಟುಂಬದ ಸದಸ್ಯರಿಗೆ ಕೊರೊನಾ ಸೋಂಕು ತಗುಲಿದರೆ, ನೌಕರರಿಗೆ ಗರಿಷ್ಠ 7 ದಿನ ವಿಶೇಷ ಸಾಂದರ್ಭಿಕ ರಜೆ ನೀಡಬಹುದು ಎಂದು ಆದೇಶ ಹೊರಡಿಸಲಾಗಿದೆ.

ನೌಕರ ಅಥವಾ ಆತನ ಕುಟುಂಬದವರು ಸೋಂಕಿಗೆ ಒಳಗಾಗಿ, ಆ ಪ್ರದೇಶವನ್ನು ಕಂಟೇನ್‌ಮೆಂಟ್ ಪ್ರದೇಶವೆಂದು ಘೋಷಿಸಿ, ಸಾರ್ವಜನಿಕ ಸಂಚಾರಕ್ಕೆ ನಿರ್ಬಂಧ ವಿಧಿಸಿದ್ದರೆ ಮಾತ್ರ ಸಾಂದರ್ಭಿಕ ರಜೆ ಮಂಜೂರು ಮಾಡಬಹುದು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಏರ್‌ಟೆಲ್‌ನಲ್ಲಿ ಗೂಗಲ್‌ನಿಂದ ₹ 7,500 ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ಗೂಗಲ್ ಕಂಪನಿಯು ಭಾರ್ತಿ ಏರ್‌ಟೆಲ್‌ನಲ್ಲಿ ₹ 7,500 ಕೋಟಿ ಹೂಡಿಕೆ ಮಾಡಲಿದೆ. ಹೂಡಿಕೆಯ ಈ ಮೊತ್ತದಲ್ಲಿ, ಪ್ರತಿ ಷೇರಿಗೆ ₹ 734ರಂತೆ ಭಾರ್ತಿ ಏರ್‌ಟೆಲ್‌ನ ಶೇಕಡ 1.28ರಷ್ಟು ಷೇರುಗಳನ್ನು ಖರೀದಿಸುವುದು (₹ 5,224 ಕೋಟಿ) ಹಾಗೂ ವಾಣಿಜ್ಯ ಒಪ್ಪಂದಗಳನ್ನು ಜಾರಿಗೊಳಿಸಲು ₹ 2,250 ಕೋಟಿ ವಿನಿಯೋಗಿಸುವುದು ಸೇರಿರಲಿದೆ ಎಂದು ಏರ್‌ಟೆಲ್ ಪ್ರಕಟಣೆ ತಿಳಿಸಿದೆ.

'ಇಂಡಿಯಾ ಡಿಜಿಟಲೈಸೇಷನ್ ಫಂಡ್ಸ್‌ನ ಭಾಗವಾಗಿ ಏರ್‌ಟೆಲ್‌ನಲ್ಲಿ ವಾಣಿಜ್ಯ ಮತ್ತು ಈಕ್ವಿಟಿ ಹೂಡಿಕೆ ಮಾಡಲಾಗುತ್ತಿದೆ. ಎರಡೂ ಕಂಪನಿಗಳ ಡಿಜಿಟಲ್ ಸ್ಥಿತ್ಯಂತರ ಪಯಣಕ್ಕೆ ನೆರವಾಗಲು ಮತ್ತು ಹೊಸ ವಹಿವಾಟು ಮಾದರಿಗಳಿಗೆ ಬೆಂಬಲ ನೀಡಲು ಇದು ನೆರವಾಗಲಿದೆ' ಎಂದು ಗೂಗಲ್ ಸಿಇಒ ಸುಂದರ್ ಪಿಚೈ ಹೇಳಿದ್ದಾರೆ.

'ಭವಿಷ್ಯದ ಸಿದ್ಧ ನೆಟ್‌ವರ್ಕ್, ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳು ಮತ್ತು ಪಾವತಿ ವ್ಯವಸ್ಥೆಯ ಜೊತೆ ಭಾರತದ ಡಿಜಿಟಲ್ ವ್ಯವಸ್ಥೆಯ ವ್ಯಾಪ್ತಿಯನ್ನು ಹೆಚ್ಚಿಸಲು ಗೂಗಲ್‌ನೊಂದಿಗೆ ನಿಕಟವಾಗಿ ಕೆಲಸ ಮಾಡಲು ನಾವು ಎದುರು ನೋಡುತ್ತಿದ್ದೇವೆ' ಎಂದು ಭಾರ್ತಿ ಏರ್‌ಟೆಲ್‌ನ ಅಧ್ಯಕ್ಷ ಸುನಿಲ್ ಭಾರ್ತಿ ಮಿತ್ತಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಹೂಡಿಕೆಯಿಂದ ಏರ್‌ಟೆಲ್ ಕಂಪನಿಗೆ 5ಜಿ ಯೋಜನೆಯ ವಿಸ್ತರಣೆಗೆ ಅನುಕೂಲ ಆಗಲಿದೆ. ಭಾರತದಲ್ಲಿ ಗೂಗಲ್ ಕಂಪನಿ ಮಾಡುತ್ತಿರುವ ಎರಡನೇ ಹೂಡಿಕೆ ಇದಾಗಿದೆ. 5ರಿಂದ 7 ವರ್ಷಗಳ ಅವಧಿಯಲ್ಲಿ ಡಿಜಿಟಲೈಸೇಷನ್ ಫಂಡ್ ಮೂಲಕ ₹ 75 ಸಾವಿರ ಕೋಟಿ ಹೂಡಿಕೆ ಮಾಡುವುದಾಗಿ ಕಂಪನಿಯು ಎರಡು ವರ್ಷಗಳ ಹಿಂದೆ ಹೇಳಿತ್ತು. 2020ರ ಜುಲೈನಲ್ಲಿ ಜಿಯೊ ಪ್ಲಾಟ್‌ಫಾರಂನಲ್ಲಿ ಶೇ 7.73ರಷ್ಟು ಷೇರು ಖರೀದಿಗೆ ₹ 33,737 ಕೋಟಿ ಹೂಡಿಕೆ ಮಾಡಿದೆ.

ಬ್ರಹ್ಮೋಸ್ ಕ್ಷಿಪಣಿ ಪೂರೈಕೆಗೆ ಫಿಲಿಪ್ಪೀನ್ಸ್ ಒಪ್ಪಂದ

ನವದೆಹಲಿ(ಪಿಟಿಐ): ಅತ್ಯಾಧುನಿಕ 'ಬ್ರಹ್ಮೋಸ್' ಕ್ಷಿಪಣಿಗಳನ್ನು ಖರೀಸಲು ಮುಂದಾಗಿರುವ ಫಿಲಿಪ್ಪೀನ್ಸ್, ಈ ಸಂಬಂಧ ಭಾರತ ಜತೆ ಶುಕ್ರವಾರ ಒಪ್ಪಂದಕ್ಕೆ ಸಹಿ ಹಾಕಿದೆ.

ಈ ಕ್ಷಿಪಣಿಗಳ ಪೂರೈಕೆಗೆ ಸಂಬಂಧಿಸಿ ಭಾರತ ಪಡೆದ ಮೊದಲ ರಫ್ತು ಆದೇಶ ಇದಾಗಿದೆ. ₹ 2,808 ಕೋಟಿ ವೆಚ್ಚದಲ್ಲಿ ಕ್ಷಿಪಣಿಗಳ ಪೂರೈಕೆಗೆ ಸಂಬಂಧಿಸಿದ ಒಪ್ಪಂದಕ್ಕೆ ಫಿಲಿಪ್ಪೀನ್ಸ್ ರಕ್ಷಣಾ ಸಚಿವಾಲಯವು ಬ್ರಹ್ಮೋಸ್ ಏರೋಸ್ಪೇಸ್ ಪ್ರೈವೇಟ್ ಲಿಮಿಟೆಡ್ (ಬಿಎಪಿಎಲ್) ಜೊತೆ ಒಪ್ಪಂದಕ್ಕೆ ಸಹಿ ಹಾಕಿದೆ ಎಂದು ಸೇನೆಯ ಅಧಿಕಾರಿಗಳು ಹೇಳಿದ್ದಾರೆ.

ಯುದ್ಧನೌಕೆ ನಿರೋಧಕ ಬ್ರಹ್ಮೋಸ್ ಕ್ಷಿಪಣಿ ವ್ಯವಸ್ಥೆಯನ್ನು ಫಿಲಿಪ್ಪೀನ್ಸ್ ನೌಕಾಪಡೆಗೆ ಪೂರೈಕೆ ಮಾಡಲಾಗುವುದು ಎಂದು ತಿಳಿಸಿರುವ ಅಧಿಕಾರಿಗಳು, ಪೂರೈಕೆ ಮಾಡಲಾಗುವ ಕ್ಷಿಪಣಿಗಳ ಸಂಖ್ಯೆ ಬಗ್ಗೆ ಮಾಹಿತಿ ನೀಡಿಲ್ಲ.

ಬಿಎಪಿಎಲ್, ಭಾರತ ಹಾಗೂ ರಷ್ಯಾದ ಜಂಟಿ ಉದ್ಯಮವಾಗಿದ್ದು, ಸೂಪರ್‌ಸಾನಿಕ್ ಕ್ರೂಸ್ ಕ್ಷಿಪಣಿ 'ಬ್ರಹ್ಮೋಸ್' ತಯಾರಿಸುತ್ತದೆ. ಈ ಕ್ಷಿಪಣಿಗಳನ್ನು ಜಲಾಂತರ್ಗಾಮಿಗಳು, ಯುದ್ಧನೌಕೆಗಳು, ಯುದ್ಧವಿಮಾನಗಳು ಹಾಗೂ ಭೂಪ್ರದೇಶದಲ್ಲಿ ಕಾರ್ಯಾಚರಣೆ ನಡೆಸುವ ಸೇನೆಯ ನಿರ್ದಿಷ್ಟ ವಾಹನಗಳ ಮೂಲಕ ಉಡಾಯಿಸಬಹುದಾಗಿದೆ.

'ರಕ್ಷಣಾ ಕ್ಷೇತ್ರದಲ್ಲಿ ರಫ್ತಿಗೆ ಉತ್ತೇಜನ ನೀಡುವ ಕೇಂದ್ರ ಸರ್ಕಾರದ ನೀತಿಯ ಭಾಗವಾಗಿ ಡಿಆರ್‌ಡಿಒದ ಅಂಗಸಂಸ್ಥೆ ಬಿಎಪಿಎಲ್ ಇಟ್ಟಿರುವ ಮಹತ್ವ ಹೆಜ್ಜೆ ಇದಾಗಿದೆ' ಎಂದು ರಕ್ಷಣಾ ಸಚಿವಾಲಯ ಪ್ರಕಟಣೆಯಲ್ಲಿ ತಿಳಿಸಿದೆ.

ಬ್ರಹ್ಮೋಸ್ ಕ್ಷಿಪಣಿಗಳ ರಫ್ತು ಆದೇಶ ಕುರಿತು ಪ್ರತಿಕ್ರಿಯಿಸಿರುವ ಡಿಆರ್‌ಡಿಒ ಅಧ್ಯಕ್ಷ ಜಿ.ಸತೀಶ್ ರೆಡ್ಡಿ, 'ಆಕಾಶ್, ಅಸ್ತ್ರ, ಟ್ಯಾಂಕ್ ನಿರೋಧಕ ಕ್ಷಿಪಣಿಗಳು, ರಾಡಾರ್‌ಗಳು, ಟಾರ್ಪಿಡೊ ಸೇರಿದಂತೆ ಭಾರತ ತಯಾರಿಸುವ ಯುದ್ಧಸಾಮಗ್ರಿಗಳ ಖರೀದಿಗೆ ಹಲವು ದೇಶಗಳು ಆಸಕ್ತಿ ವ್ಯಕ್ತಪಡಿಸಿವೆ' ಎಂದರು.'

ಫಿಲಿಪ್ಪೀನ್ಸ್‌ನಲ್ಲಿನ ಭಾರತದ ರಾಯಭಾರಿ ಶಂಭು ಕುಮಾರನ್, 'ಈ ಐತಿಹಾಸಿಕ ಒಪ್ಪಂದಕ್ಕೆ ಸಾಕ್ಷಿಯಾಗಿರುವುದು ನನಗೆ ವಿಶೇಷ ಗೌರವ ಸಿಕ್ಕಂತಾಗಿದೆ' ಎಂದು ಹೇಳಿದ್ದಾರೆ.

ದೇಶದಲ್ಲಿ ಕರ್ನಾಟಕಕ್ಕೆ ಮೂರನೇ ಸ್ಥಾನ: ರಾಜ್ಯದಲ್ಲಿ ಉತ್ತರ ಕನ್ನಡದಲ್ಲೇ ಅಧಿಕ

ರಾಜ್ಯದಲ್ಲಿ ವೃದ್ಧಿಸಿದ ಕಾಂಡ್ಲಾ ಕಾಡು

• ಸದಾಶಿವ ಎಂ.ಎಸ್.

ಕಾರವಾರ: ರಾಜ್ಯದ ಕಾಂಡ್ಲಾ ಕಾಡಿನ ಪ್ರದೇಶವು 2019ರ ನಂತರ 2.57 ಚದರ ಕಿಲೋಮೀಟರ್ (ಸುಮಾರು 257 ಹೆಕ್ಟೇರ್) ಹೆಚ್ಚಳವಾಗಿದೆ. ಎರಡು ವರ್ಷಗಳಲ್ಲಿ ಅತಿಹೆಚ್ಚು ಕಾಂಡ್ಲಾವನ ವಿಸ್ತರಿಸಿದ ರಾಜ್ಯಗಳ ಪೈಕಿ ಕರ್ನಾಟಕವು ಮೂರನೇ ಸ್ಥಾನದಲ್ಲಿದೆ. 1.97 ಚದರ ಕಿಲೋಮೀಟರ್‌ನೊಂದಿಗೆ (197 ಹೆಕ್ಟೇರ್) ಉತ್ತರ ಕನ್ನಡ ಜಿಲ್ಲೆಯು ರಾಜ್ಯದಲ್ಲಿ ಮುಂದಿದೆ.

ಕೇಂದ್ರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ಈಚೆಗೆ ಬಿಡುಗಡೆ ಮಾಡಿರುವ 'ಅರಣ್ಯ ಸ್ಥಿತಿಗತಿ ವರದಿ 2021'ರಲ್ಲಿ ಈ ಬಗ್ಗೆ ಉಲ್ಲೇಖವಿದೆ. ದಕ್ಷಿಣ ಕನ್ನಡದಲ್ಲಿ 0.45 ಚದರ ಕಿಲೋಮೀಟರ್ ಮತ್ತು ಉಡುಪಿ ಜಿಲ್ಲೆಯಲ್ಲಿ 0.15 ಚದರ ಕಿಲೋಮೀಟರ್ ಕಾಂಡ್ಲಾ ವನ ವೃದ್ಧಿಯಾಗಿದೆ.

ರಾಜ್ಯದ ಕಾಂಡ್ಲಾ ಅರಣ್ಯವು ಒಟ್ಟು 12.61 ಚದರ ಕಿಲೋಮೀಟರ್ (1,260 ಹೆಕ್ಟೇರ್) ಇದೆ. ಈ ಪೈಕಿ ಉತ್ತರ ಕನ್ನಡದಲ್ಲೇ 10.47 ಚದರ ಕಿಲೋಮೀಟರ್ (1,047 ಹೆಕ್ಟೇರ್) ಒಳಗೊಂಡಿದೆ. ಉಳಿದಂತೆ, ಉಡುಪಿ ಜಿಲ್ಲೆಯಲ್ಲಿ 1.69 ಚದರ ಕಿಲೋಮೀಟರ್ (169 ಹೆಕ್ಟೇರ್) ಹಾಗೂ ದಕ್ಷಿಣ ಕನ್ನಡದಲ್ಲಿ 0.45 (45 ಹೆಕ್ಟೇರ್) ಕಾಂಡ್ಲಾ ವನವಿದೆ.

ದೇಶದಲ್ಲಿ ಎರಡು ವರ್ಷಗಳಲ್ಲಿ 1,710 ಹೆಕ್ಟೇರ್‌ಗಳಷ್ಟು ಏರಿಕೆ ಕಾಣುವ ಮೂಲಕ ಪ್ರಸ್ತುತ ಒಟ್ಟು 4.99 ಲಕ್ಷ ಹೆಕ್ಟೇರ್ ಕಾಂಡ್ಲಾ ಸಂಪತ್ತಿದೆ ಎಂದು ವರದಿಯಲ್ಲಿ ವಿವರ ನೀಡಲಾಗಿದೆ.

ಈ ಅಂಕಿ ಅಂಶಗಳಲ್ಲಿ ನೈಸರ್ಗಿಕವಾಗಿ ಬೆಳೆದು ವ್ಯಾಪಿಸಿದ, ಅರಣ್ಯ ಇಲಾಖೆ ಹಾಗೂ ವಿವಿಧ ಸಂಘ ಸಂಸ್ಥೆಗಳು ನಾಟಿ ಮಾಡಿ ಸಂರಕ್ಷಣೆ ಮಾಡಿದ ಕಾಂಡ್ಲಾ ವನದ ಮಾಹಿತಿಗಳೂ ಒಳಗೊಂಡಿವೆ. ಉತ್ತರ ಕನ್ನಡದ ಕಾರವಾರ, ಕುಮಟಾ ಮತ್ತು ಹೊನ್ನಾವರ ತಾಲ್ಲೂಕುಗಳ ಕೆಲವೆಡೆ ಆಸಕ್ತರು, ಸರ್ಕಾರೇತರ ಸಂಘ ಸಂಸ್ಥೆಗಳು ಕೆಲವು ವರ್ಷಗಳಿಂದ ಪಾಳು ಬಿದ್ದಿರುವ ಗಜನಿ ಭೂಮಿಯಲ್ಲಿ (ಉಪ್ಪು ನೀರಿನ ಪ್ರದೇಶ) ಕಾಂಡ್ಲಾ ಸಂರಕ್ಷಣೆ ಮಾಡುತ್ತಿದ್ದಾರೆ.

ಕರಾವಳಿಯ ವಿವಿಧೆಡೆ ಉಪ್ಪು ನೀರು ಮತ್ತು ಸಿಹಿನೀರು ಮಿಶ್ರಣವಾಗುವ ಹಿನ್ನೀರು ಪ್ರದೇಶಗಳಲ್ಲಿ ಸೀಗಡಿ, ಏಡಿ ಕೃಷಿ ಮಾಡಲಾಗುತ್ತದೆ. ಬಳಿಕ ಆ ಪ್ರದೇಶವನ್ನು ಹಾಗೇ ಬಿಟ್ಟರೆ ಅಲ್ಲಿ ಕಾಂಡ್ಲಾ ಅಭಿವೃದ್ಧಿಯಾಗುತ್ತದೆ. ಇದು ಕೂಡ ಈ ವನ್ಯ ಸಂಪತ್ತಿನ ವಿಸ್ತರಣೆಗೆ ತಕ್ಕಮಟ್ಟಿಗೆ ಸಹಕಾರಿಯಾಗಿದೆ ಎಂದು ಅರಣ್ಯಾಧಿಕಾರಿಗಳು ಅಭಿಪ್ರಾಯ ಪಡುತ್ತಾರೆ.

ಕಾರವಾರದ ಕಾಳಿ ನದಿಯಲ್ಲಿ ಕಾಂಡ್ಲಾ ವನದ ಬಳಿ ಮೀನುಗಾರರು ಮೀನುಗಾರಿಕೆ ಮಾಡುತ್ತಿರುವುದು

ಕಾಂಡ್ಲಾ ಹೆಚ್ಚು ವಿಸ್ತರಣೆಯಾದ ರಾಜ್ಯಗಳು

ರಾಜ್ಯ	ಚದರ ಕಿ.ಮೀ
ಒಡಿಶಾ	8.34
ಮಹಾರಾಷ್ಟ್ರ	4.02
ಕರ್ನಾಟಕ	2.57
ಪಶ್ಚಿಮ ಬಂಗಾಳ	1.66
ಗೋವಾ	1.34

ಕೇಂದ್ರ ಸರ್ಕಾರದ ಸಿ.ಎಸ್.ಎಸ್ ಮ್ಯಾನ್‌ಗ್ರೋವ್ ಯೋಜನೆಯ ಅನುದಾನ ಬಳಸಿಕೊಂಡು ಹೊನ್ನಾವರ ಮತ್ತು ಕಾರವಾರದಲ್ಲಿ ಕಾಂಡ್ಲಾ ಬೋರ್ಡ್ ವಾಕ್ ನಿರ್ಮಿಸಲಾಗಿದೆ

ಗಣಪತಿ
ಉಪ ಅರಣ್ಯ ಸಂರಕ್ಷಣಾಧಿಕಾರಿ

'ರೈಸೋಫೋರಾಕ್ಕೆ ಹೆಚ್ಚು ಯಶಸ್ಸು'

'ಉತ್ತರ ಕನ್ನಡದಲ್ಲಿ ಅರಣ್ಯ ಇಲಾಖೆಯಿಂದ ರೈಸೊಫೋರಾ ಕಾಂಡ್ಲಾ ತಳಿಯನ್ನು ಹೆಚ್ಚು ನಾಟಿ ಮಾಡಲಾಗುತ್ತಿದೆ. ಸಮುದ್ರದ ಉಬ್ಬರ, ಇಳಿತದ ಪ್ರಭಾವದಲ್ಲೂ ಹಿನ್ನೀರಿನಲ್ಲಿ ಅವು ಚಿಗುರೊಡೆಯುತ್ತವೆ. ಶರಾವತಿ ನದಿಯ ಹಿನ್ನೀರಿನಲ್ಲಿ ಹೆಚ್ಚು ಯಶಸ್ಸು ಕಂಡಿರುವ ತಳಿಯಿದು' ಎನ್ನುತ್ತಾರೆ ಹೊನ್ನಾವರ ವಲಯದ ಉಪ ಅರಣ್ಯ ಸಂರಕ್ಷಣಾಧಿಕಾರಿ ಗಣಪತಿ.

'ದಪ್ಪ ಎಲೆಯಿರುವ ಈ ಪ್ರಭೇದದ ಕೋಡುಗಳು ಹೆಚ್ಚು ಉದ್ದ ಇರುತ್ತವೆ. ಅವು ಮರದಿಂದ ನೀರಿಗೆ ಬಿದ್ದಾಗ ತಳಕ್ಕೆ ತಲುಪಿ ಗಟ್ಟಿಯಾಗಿ ನಿಲ್ಲುತ್ತವೆ. ಅವಿಸೀನಿಯಾ, ಸೊನರೇಷಿಯಾ, ಬ್ರುಗೇರಾ ತಳಿಗಳು ನಮ್ಮ ರಾಜ್ಯದಲ್ಲಿ ಕಡಿಮೆ ಪ್ರಮಾಣದಲ್ಲಿವೆ. ಇಲಾಖೆಯಿಂದ ವರ್ಷಕ್ಕೆ ಅಂದಾಜು 50 ಹೆಕ್ಟೇರ್‌ಗಳಷ್ಟು ಕಾಂಡ್ಲಾ ಸಂಪತ್ತಿನ ವಿಸ್ತರಣೆ ಮಾಡಲಾಗುತ್ತದೆ' ಎಂದು 'ಪ್ರಜಾವಾಣಿ'ಗೆ ತಿಳಿಸಿದರು.

ರಾಜೀವ್ ಗಾಂಧಿ ವಸತಿ ಯೋಜನೆ ಅಡಿಯಲ್ಲಿ ನಿರ್ಮಾಣವಾದ ಮನೆಗಳಿಗಿಲ್ಲ ಮೂಲಸೌಕರ್ಯ

ವಸತಿ ಸಮುಚ್ಚಯ: ಕತ್ತಲಲ್ಲಿ 900 ಕುಟುಂಬಗಳು

• ಶಿವರಾಜ್ ಮೌರ್ಯ

ಕೆ.ಆರ್.ಪುರ: ಸಾವಿರಾರು ರೂಪಾಯಿ ಹಣ ಪಾವತಿಸಿದರೂ ಶುದ್ಧ ಕುಡಿಯುವ ನೀರು ಬರುತ್ತಿಲ್ಲ. ಕಟ್ಟಡ ನಿರ್ಮಾಣವಾಗಿ ಐದು ವರ್ಷಗಳಾದರೂ ವಿದ್ಯುತ್ ಸಂಪರ್ಕ ಸಾಕಾರವಾಗಿಲ್ಲ. ಕೊಳವೆ ಬಾವಿ ಇದ್ದರೂ ನೀರು ತೆಗೆಯಲು ಯಂತ್ರ ಅಳವಡಿಸುವ ಹಾಗಿಲ್ಲ.

ಇವು ಮಹದೇವಪುರ ವಿಧಾನಸಭೆ ಕ್ಷೇತ್ರದ ಕೊಡತಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಸೂಲಿಕುಂಟೆ ಸಮೀಪದಲ್ಲಿ ನೆಲೆಸಿರುವ 900 ಕುಟುಂಬಗಳ ಅಳಲು. ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯು ರಾಜೀವ್ ಗಾಂಧಿ ವಸತಿ ಯೋಜನೆ ಅಡಿ 2017ರಲ್ಲಿ 900 ಮನೆಗಳನ್ನು ಇಲ್ಲಿ ನಿರ್ಮಿಸಿ, ಹಂಚಿಕೆ ಮಾಡಿದೆ. ಆದರೆ, ಈವರೆಗೂ ಅಗತ್ಯ ಮೂಲಸೌಕರ್ಯವನ್ನು ಅಲ್ಲಿ ಒದಗಿಸಿಲ್ಲ. ಇದರಿಂದ ಅಲ್ಲಿನ ನಿವಾಸಿಗಳು ಸಮಸ್ಯೆಗಳ ನಡುವೆಯೇ ದೈನಂದಿನ ಜೀವನ ನಡೆಸಬೇಕಾಗಿದೆ.

ಈ ವಸತಿ ಸಮುಚ್ಚಯದ ಸುತ್ತಮುತ್ತಲಿನ ವಾತಾವರಣವೂ ಹದಗೆಟ್ಟಿದೆ. ಇಲ್ಲಿ ಕಸ ವಿಲೇವಾರಿಗೆ ಸೂಕ್ತ ವ್ಯವಸ್ಥೆ ಕಲ್ಪಿಸಿಲ್ಲ. ಎಲ್ಲೆಂದರಲ್ಲಿ ಕಸಗಳನ್ನು ಎಸೆಯಲಾಗಿದೆ. ಕೊಳಚೆ ನೀರು ಹೋಗಲು ಸೂಕ್ತ ಒಳಚರಂಡಿ ವ್ಯವಸ್ಥೆಯೂ ಇಲ್ಲದಿರುವುದು ಸಮಸ್ಯೆ ಇನ್ನಷ್ಟು ಬಿಗಡಾಯಿಸಲು ಕಾರಣವಾಗಿದೆ. ಸಾಂಕ್ರಾಮಿಕ ರೋಗದ ಭಯವೂ ಇಲ್ಲಿನವರಿಗೆ ಕಾಡಲಾರಂಭಿಸಿದೆ. ವಾಸವಿರುವ ಬಹುತೇಕ ಕುಟುಂಬಗಳು ದಿನಗೂಲಿ ಕೆಲಸವನ್ನೇ ನೆಚ್ಚಿಕೊಂಡಿವೆ. ಕಟ್ಟಡ ನಿರ್ಮಾಣವಾಗಿ ಐದು ವರ್ಷಗಳಾದರೂ ಸೂಕ್ತ ವ್ಯವಸ್ಥೆ ಕಲ್ಪಿಸದಿರುವುದು ಸ್ಥಳೀಯರ ಆಕ್ರೋಶಕ್ಕೆ ಕಾರಣವಾಗಿದೆ.

ಕುಟುಂಬಗಳು ಸ್ಥಳಾಂತರ: ಆರ್ಥಿಕ ದುರ್ಬಲ ವರ್ಗದವರಿಗೆ ಕೋರಮಂಗಲ ಸಮೀಪ ನಿರ್ಮಿಸಿದ್ದ ಇ.ಡಬ್ಲ್ಯು.ಎಸ್ ವಸತಿ ಸಮುಚ್ಚಯ ಕೆಲ ವರ್ಷಗಳ ಹಿಂದೆ ಶಿಥಿಲಗೊಂಡಿತ್ತು. ಹೀಗಾಗಿ, ಅಲ್ಲಿ ಎರಡು ದಶಕಗಳ ಕಾಲ ವಾಸವಿದ್ದ 900 ಕುಟುಂಬಗಳನ್ನು ರಾಜೀವ್ ಗಾಂಧಿ ವಸತಿ ಯೋಜನೆ ಅಡಿಯಲ್ಲಿ ನಿರ್ಮಿಸಿರುವ ವಸತಿ ಸಮುಚ್ಚಯಕ್ಕೆ ಸ್ಥಳಾಂತರ ಮಾಡಲಾಗಿತ್ತು. ಸುಸಜ್ಜಿತ ಸೂರು ಸಿಕ್ಕ ಸಂಭ್ರಮ ಅಲ್ಲಿನ ಕುಟುಂಬಗಳಿಗೆ ಈಗ ಇಲ್ಲವಾಗಿದೆ.

'ಸರ್ಕಾರದ ಅಸಡ್ಡೆಯಿಂದಾಗಿ ಮೂಲ ಸೌಕರ್ಯಗಳು ಇಲ್ಲವಾಗಿವೆ. ವಿದ್ಯುತ್ ಸಂಪರ್ಕ ಇಲ್ಲದಿರುವುದರಿಂದ ಕತ್ತಲಲ್ಲಿ ಜೀವನ ಕಳೆಯಬೇಕಾಗಿದೆ. ಕೋವಿಡ್‌ನಿಂದಾಗಿ ಶಾಲೆಗಳು ಸ್ಥಗಿತವಾಗಿದ್ದು, ಆನ್‌ಲೈನ್ ತರಗತಿಗಳು ನಡೆಯುತ್ತಿವೆ. ಇಲ್ಲಿನ ಮಕ್ಕಳಿಗೆ ಆನ್‌ಲೈನ್ ತರಗತಿಗಳಿಗೆ ಹಾಜರಾಗಲು ಸಾಧ್ಯವಾಗುತ್ತಿಲ್ಲ. ಸ್ಮಾರ್ಟ್‌ಫೋನ್ ಖರೀದಿಸಿದರೂ ಅದನ್ನು ಚಾರ್ಜ್ ಮಾಡಲು ವಿದ್ಯುತ್ ಇಲ್ಲ. ಇದರಿಂದ ಮಕ್ಕಳ ಕಲಿಕೆಗೂ ತೊಡಕಾಗಿದ್ದು, ಅಧ್ಯಯನದಲ್ಲಿ ಹಿಂದೆ ಬೀಳುತ್ತಿದ್ದಾರೆ' ಎಂದು ಸ್ಥಳೀಯ ನಿವಾಸಿಗಳು ಬೇಸರ ವ್ಯಕ್ತಪಡಿಸಿದರು.

ರಾಜೀವ್ ಗಾಂಧಿ ವಸತಿ ಯೋಜನೆ ಅಡಿಯಲ್ಲಿ ನಿರ್ಮಾಣವಾಗಿರುವ ವಸತಿ ಸಮುಚ್ಚಯ

ವಿದ್ಯುತ್ ಸಂಪರ್ಕ ಇಲ್ಲದಿರುವುದರಿಂದ ವಿದ್ಯಾರ್ಥಿಗಳು ಮೇಣದ ದೀಪದ ಬೆಳಕಿನಲ್ಲಿ ಓದುತ್ತಿರುವುದು

'ಬದಲಾಗದ ಗುರುತಿನ ಚೀಟಿ'

'ಈ ಮೊದಲು ವಾಸವಿದ್ದ ಇ.ಡಬ್ಲ್ಯು.ಎಸ್ ವಸತಿ ಸಮುಚ್ಚಯ ಶಾಂತಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುತ್ತಿತ್ತು. ಸೂಲಿಕುಂಟೆಗೆ ಸ್ಥಳಾಂತರಗೊಂಡ ಬಳಿಕ ನಮ್ಮ ಮತದಾನದ ಗುರುತಿನ ಚೀಟಿ ಹಾಗೂ ಆಧಾರ್ ಕಾರ್ಡ್‌ನಲ್ಲಿ ವಿಳಾಸ ಬದಲಾವಣೆಯಾಗಿಲ್ಲ. ಅಧಿಕಾರಿಗಳ ಬಳಿ ಈ ಸಮಸ್ಯೆ ಬಗೆಹರಿಸುವಂತೆ ಮನವಿ ಮಾಡಿಕೊಂಡರೂ ಸ್ಪಂದನೆ ದೊರೆತಿಲ್ಲ. ಹೊಸದಾಗಿ ಮತದಾನದ ಗುರುತಿನ ಚೀಟಿಗಾಗಿ ಎರಡು ವರ್ಷಗಳ ಹಿಂದೆ ಅರ್ಜಿ ಸಲ್ಲಿಸಲಾಗಿತ್ತು. ಈವರೆಗೂ ಗುರುತಿನ ಚೀಟಿಯನ್ನು ನೀಡಿಲ್ಲ. ಇದರ ಹಿಂದೆ ರಾಜಕೀಯ ಹುನ್ನಾರ ಇರಬಹುದು' ಎಂದು ವಸತಿ ಸಮುಚ್ಚಯದ ನಿವಾಸಿ ಲೂಯಿಸ್ ಪ್ಯಾಟ್ರಿ ದೂರಿದರು.

'ವಿದ್ಯುತ್ ಸಂಪರ್ಕಕ್ಕೆ ಕ್ರಮ'

'ರಾಜೀವ್ ಗಾಂಧಿ ವಸತಿ ಸಮುಚ್ಚಯದಲ್ಲಿ ವಿದ್ಯುತ್ ಸಮಸ್ಯೆ ಇರುವುದು ಗಮನಕ್ಕೆ ಬಂದಿದೆ. ಈ ಮೊದಲು ಕೋರಮಂಗಲದ ಇ.ಡಬ್ಲ್ಯು.ಎಸ್ ವಸತಿ ಸಮುಚ್ಚಯದಲ್ಲಿ ವಾಸವಿದ್ದ ಕುಟುಂಬಗಳನ್ನು ಸೂಲಿಕುಂಟೆಯ ರಾಜೀವ್ ಗಾಂಧಿ ಸಮುಚ್ಚಯಕ್ಕೆ ಸ್ಥಳಾಂತರ ಮಾಡಲಾಗಿದೆ. ಅಲ್ಲಿನ ನಿವಾಸಿಗಳಿಗೆ ಬಿಬಿಎಂಪಿ ನಿರಾಕ್ಷೇಪಣಾ ಪತ್ರವನ್ನು (ಎನ್‌ಒಸಿ) ನೀಡಿದ ಬಳಿಕ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು' ಎಂದು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ (ಎಇಇ) ಚರಣ್ ರಾಜ್ ತಿಳಿಸಿದರು.

ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ದೂರವಾಣಿ ಸಂಪರ್ಕಕ್ಕೆ ಲಭ್ಯವಾಗಲಿಲ್ಲ.

'ದುಡಿದ ಹಣ ನೀರಿಗೆ ವೆಚ್ಚ'

'ವಸತಿ ಸಮುಚ್ಚಯದಲ್ಲಿ ವಾಸಿಸುವ ಬಹುತೇಕ ಕುಟುಂಬಗಳು ದೈನಂದಿನ ದುಡಿಮೆಯನ್ನೇ ಅವಲಂಬಿಸಿವೆ. ನೀರಿನ ಸಂಪರ್ಕ ಇಲ್ಲದಿರುವುದರಿಂದ ದುಡಿದ ಹಣವೆಲ್ಲ ಕುಡಿಯುವ ನೀರಿಗಾಗಿ ವ್ಯಯ ಮಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಒಂದು ಟ್ಯಾಂಕರ್ ನೀರಿಗೆ ₹ 600 ರಿಂದ ₹ 700 ಖರ್ಚು ಮಾಡುತ್ತಿದ್ದೇವೆ. ವಸತಿ ಸಮುಚ್ಚಯದಲ್ಲಿ 5 ಕೊಳವೆ ಬಾವಿ ಕೊರೆಯಲಾಗಿದೆ. ವಿದ್ಯುತ್ ಪೂರೈಕೆ ಇಲ್ಲದಿರುವುದರಿಂದ ಅವನ್ನು ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ' ಎಂದು ಸ್ಥಳೀಯ ನಿವಾಸಿ ಇರ್ಫಾನ್ ಆಕ್ರೋಶ ವ್ಯಕ್ತಪಡಿಸಿದರು.

'ಶೇ 67ರಷ್ಟು ಮಹಿಳೆಯರಲ್ಲಿ ರಕ್ತಹೀನತೆ ಸಮಸ್ಯೆ'

ಬೆಂಗಳೂರು: 'ರಾಜ್ಯದಲ್ಲಿನ ಶೇಕಡ 67 ಮಹಿಳೆಯರು ರಕ್ತಹೀನತೆಯಿಂದ ಬಳಲುತ್ತಿದ್ದಾರೆ' ಎಂದು ಲೇಖಕಿ ವಸುಂಧರಾ ಭೂಪತಿ ತಿಳಿಸಿದರು.

'ದುಡಿಯುವ ಮಹಿಳೆಯರ ದೈಹಿಕ ಮತ್ತು ಮಾನಸಿಕ ಒತ್ತಡಗಳ ನಿವಾರಣೆ' ಕುರಿತು ಶುಕ್ರವಾರ ಆಯೋಜಿಸಿದ್ದ ಸಂವಾದದಲ್ಲಿ ಮಾತನಾಡಿದ ಅವರು, 'ಎಲ್ಲ ವರ್ಗದ ಮಹಿಳೆಯರಲ್ಲೂ ರಕ್ತಹೀನತೆ ಕಂಡು ಬಂದಿದೆ' ಎಂದು ವಿವರಿಸಿದರು.

'ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ ದೇಹಕ್ಕೆ ಅಗತ್ಯ ಇರುವ ಆಹಾರ ಸೇವಿಸಲು ಸಾಧ್ಯವಾಗುವುದಿಲ್ಲ. ಶ್ರೀಮಂತ ಮಹಿಳೆಯರು ಬೇರೆ ಬೇರೆ ಕಾರಣಗಳಿಗೆ ಪೌಷ್ಟಿಕಾಂಶಗಳನ್ನು ಸೇವಿಸುವುದಿಲ್ಲ. ಇದರಿಂದ, ರಕ್ತಹೀನತೆ ಕಂಡು ಬರುತ್ತಿದೆ' ಎಂದು ವಿವರಿಸಿದರು.

'ದೈಹಿಕ ಆರೋಗ್ಯದ ಜತೆ ಮಾನಸಿಕ ಸಂತೋಷ, ನೆಮ್ಮದಿ ಬಹಳ ಮುಖ್ಯ. ಕೆಲವರಿಗೆ ಎಲ್ಲ ಸೌಕರ್ಯಗಳಿದ್ದರೂ ಮಾನಸಿಕ ನೆಮ್ಮದಿ ಇರುವುದಿಲ್ಲ. ಇಂತಹ ಸನ್ನಿವೇಶದಲ್ಲಿ ಖಿನ್ನತೆಗೆ ಒಳಗಾಗಬಹುದು. ಆದ್ದರಿಂದ, ಮನಸ್ಸಿನ ಬಗ್ಗೆ ಕಾಳಜಿ ವಹಿಸಬೇಕು. ಖಿನ್ನತೆಗೆ ಒಳಗಾದರೆ ಸಂಬಂಧಪಟ್ಟ ವೈದ್ಯರ ಜತೆ ಸಮಾಲೋಚನೆ ನಡೆಸಬೇಕು. ಖಿನ್ನತೆಯಿಂದಾಗಿ ಆತ್ಮಹತ್ಯೆಯ ಬಗ್ಗೆಯೂ ಯೋಚಿಸುವ ಸಾಧ್ಯತೆಗಳಿರುತ್ತವೆ' ಎಂದು ವಿವರಿಸಿದರು.

'ಇಂದಿನ ಜೀವನ ಪದ್ಧತಿಯಲ್ಲಿ ಕೆಲಸದ ಒತ್ತಡದಿಂದಾಗಿ ಹಲವರು ವ್ಯಾಯಾಮವನ್ನು ಕಡೆಗಣಿಸುತ್ತಿದ್ದಾರೆ. ಕನಿಷ್ಠ ಒಂದು ಗಂಟೆ ಕಾಲ ವ್ಯಾಯಾಮ ಅಥವಾ ಯೋಗ ಮಾಡಬೇಕು' ಎಂದು ಸಲಹೆ ನೀಡಿದರು.

'ಬಹಳಷ್ಟು ಮಹಿಳೆಯರು ನೀರು ಕುಡಿಯುವುದಿಲ್ಲ. ಇದರಿಂದ, ಆಹಾರ ಜೀರ್ಣವಾಗುವುದಿಲ್ಲ ಮತ್ತು ಮೂತ್ರಪಿಂಡಕ್ಕೆ ಸಂಬಂಧಿಸಿದ ಕಾಯಿಲೆಗಳಿಗೆ ಕಾರಣವಾಗುತ್ತದೆ. ಪ್ರತಿಯೊಬ್ಬರು ದಿನಕ್ಕೆ ಕನಿಷ್ಠ ಮೂರು ಲೀಟರ್ ನೀರು ಕುಡಿಯಬೇಕು' ಎಂದು ಸಲಹೆ ನೀಡಿದರು.

'ಚನ್ನಬಸವಾನಂದ ಶ್ರೀ ಉಚ್ಚಾಟನೆ'

ಪ್ರಜಾವಾಣಿ ವಾರ್ತೆ

ಕೂಡಲಸಂಗಮ: ಕೂಡಲಸಂಗಮ ಬಸವ ಧರ್ಮ ಪೀಠದ ಟ್ರಸ್ಟಿ ಚನ್ನಬಸವಾನಂದ ಸ್ವಾಮೀಜಿ ಅವರನ್ನು ಬಸವ ಧರ್ಮ ಪೀಠ ಹಾಗೂ ಅದರ ಅಧೀನದ ಟ್ರಸ್ಟ್, ಸಂಘಟನೆಗಳಿಂದ ಉಚ್ಚಾಟಿಸಲಾಗಿದೆ ಎಂದು ಕೂಡಲಸಂಗಮ ಬಸವ ಧರ್ಮ ಪೀಠದ ಪೀಠಾಧ್ಯಕ್ಷೆ ಮಾತೆ ಗಂಗಾದೇವಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಸುಪ್ರೀಂ ಕೋರ್ಟ್ ಆದೇಶದಂತೆ ಬಸವಣ್ಣನವರ ವಚನಗಳಿಗೆ ಅಂಕಿತವಾಗಿ ಕೂಡಲಸಂಗಮದೇವ ಎಂದು ಬಳಸಲು ಬಸವ ಧರ್ಮಪೀಠ ಭಕ್ತರಿಗೆ ಕರೆಕೊಟ್ಟಿದೆ. ಇದನ್ನು ವಿರೋಧಿಸುವುದರ ಜೊತೆಗೆ ಟ್ರಸ್ಟಿನ ವಿರುದ್ಧ ಹಲವು ಸಭೆಗಳನ್ನು ಮಾಡಿರುವರು. ಟ್ರಸ್ಟಿಗಳ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಹೇಳಿಕೆ ಹಾಕಿದ್ದಾರೆ. ವಚನಾಂಕಿತ ಕುರಿತು ಭಕ್ತರಲ್ಲಿ ಗೊಂದಲ ಸೃಷ್ಟಿಸುತ್ತಿರುವುದರಿಂದ ಈ ಕ್ರಮ ಕೈಗೊಳ್ಳಲಾಗಿದೆ' ಎಂದಿದ್ದಾರೆ.

ದಿನದ ಸೋಂಕಿತರ ಸಂಖ್ಯೆ 31 ಸಾವಿರಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಈ ತಿಂಗಳು 50 ಸಾವಿರದ ಗಡಿ ದಾಟಿದ್ದ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ, ಶುಕ್ರವಾರ 31,198ಕ್ಕೆ ಇಳಿಕೆಯಾಗಿದೆ.

ಕೋವಿಡ್‌ನಿಂದ ಚೇತರಿಸಿಕೊಳ್ಳುವವರ ಸಂಖ್ಯೆ ಮತ್ತಷ್ಟು ಹೆಚ್ಚಳವಾಗಿದೆ. ಸೋಂಕಿತರಲ್ಲಿ 71,092 ಮಂದಿ ಗುಣಮುಖರಾಗಿದ್ದಾರೆ. ಕೋವಿಡ್ ಕಾಣಿಸಿಕೊಂಡಾಗಿನಿಂದ ಈವರೆಗೆ 24 ಗಂಟೆಗಳ ಅವಧಿಯಲ್ಲಿ ಚೇತರಿಕೆ ಹೊಂದಿದವರ ಗರಿಷ್ಠ ಸಂಖ್ಯೆ ಇವಾಗಿವೆ. ಒಂದು ದಿನದ ಅವಧಿಯಲ್ಲಿ 1.49 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 20.91 ರಷ್ಟಿದೆ. ನಾಲ್ಕು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ನಾಲ್ಕು ಅಂಕಿ, 25 ಜಿಲ್ಲೆಗಳಲ್ಲಿ ಮೂರು ಅಂಕಿಯಲ್ಲಿದೆ.

ಬೆಂಗಳೂರಿನಲ್ಲಿ ಪ್ರಕರಣಗಳ ಸಂಖ್ಯೆ ಇಳಿಕೆಯಾಗಿದ್ದು, 15,199 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಮೈಸೂರಿನಲ್ಲಿ 1,877, ಧಾರವಾಡದಲ್ಲಿ 1,500, ತುಮಕೂರಿನಲ್ಲಿ 1,315 ಹಾಗೂ ಹಾಸನದಲ್ಲಿ 1,037 ಮಂದಿ ಹೊಸದಾಗಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ಸಾವಿರಕ್ಕಿಂತ ಕಡಿಮೆ ಇವೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 37.23 ಲಕ್ಷಕ್ಕೆ ಏರಿಕೆಯಾಗಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 2.88 ಲಕ್ಷಕ್ಕೆ ಇಳಿಕೆಯಾಗಿದೆ. ಬೆಂಗಳೂರಿನಲ್ಲಿಯೇ 1.60 ಲಕ್ಷ ಸೋಂಕಿತರು ಇದ್ದಾರೆ. ಕೋವಿಡ್‌ನಿಂದ ಶುಕ್ರವಾರ ಚೇತರಿಸಿಕೊಂಡವರಲ್ಲಿ 44,866 ಮಂದಿ ಬೆಂಗಳೂರಿನವರೆ ಆಗಿದ್ದಾರೆ. ರಾಜ್ಯದಲ್ಲಿ ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 33.96 ಲಕ್ಷಕ್ಕೆ ತಲುಪಿದೆ. ಕೋವಿಡ್ ಪೀಡಿತರಲ್ಲಿ 50 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಬೆಂಗಳೂರು ಹಾಗೂ ಮೈಸೂರಿನಲ್ಲಿ ತಲಾ ಎಂಟು ಮಂದಿ, ಹಾಸನದಲ್ಲಿ ಐವರು, ತುಮಕೂರು ಹಾಗೂ ದಕ್ಷಿಣ ಕನ್ನಡದಲ್ಲಿ ತಲಾ ನಾಲ್ವರು, ಶಿವಮೊಗ್ಗ ಹಾಗೂ ಬೆಳಗಾವಿಯಲ್ಲಿ ತಲಾ ಮೂವರು, ರಾಮನಗರ ಹಾಗೂ ಹಾವೇರಿಯಲ್ಲಿ ತಲಾ ಇಬ್ಬರು ಮೃತಪಟ್ಟಿದ್ದಾರೆ.

ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,804ಕ್ಕೆ ಏರಿಕೆಯಾಗಿದೆ.





ಅಕ್ರಮ 'ಟೋಯಿಂಗ್': ವಾಹನದ ಹಿಂದೆ ಓಡಿದ ಸವಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂದಿರಾನಗರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಅಕ್ರಮವಾಗಿ ವಾಹನಗಳ ಟೋಯಿಂಗ್ ಮಾಡುತ್ತಿರುವ ಆರೋಪ ಕೇಳಿಬಂದಿದ್ದು, ಈ ಕುರಿತ ವಿಡಿಯೊವೊಂದನ್ನು ಸಾರ್ವಜನಿಕರೊಬ್ಬರು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಟ್ಟಿದ್ದಾರೆ.

'ಇಂದಿರಾನಗರದಲ್ಲಿ ಟೋಯಿಂಗ್ ಹಾವಳಿ ಮಿತಿಮೀರಿದೆ. ಧ್ವನಿವರ್ಧಕದಲ್ಲಿ ಸೂಚನೆ ನೀಡದೇ ವಾಹನಗಳನ್ನು ಟೋಯಿಂಗ್ ಮಾಡಲಾಗುತ್ತಿದೆ. ಬಿಜೆಪಿ ಸರ್ಕಾರದಲ್ಲಿ ಅಮಾಯಕರ ಬದುಕು ಮೂರಾಬಟ್ಟೆ ಆಗುತ್ತಿದೆ' ಎಂದು ವಿಡಿಯೊಗೆ ಶೀರ್ಷಿಕೆ ಬರೆಯಲಾಗಿದೆ.

ವಿಡಿಯೊ ಹಂಚಿಕೊಂಡಿರುವ ಹಲವರು, 'ತಪ್ಪಿತಸ್ಥ ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳಿ' ಎಂದು ಒತ್ತಾಯಿಸಿದ್ದಾರೆ.

'ಟೋಯಿಂಗ್ ಮಾಡುವ ಮುನ್ನ ಧ್ವನಿವರ್ಧಕದಲ್ಲಿ ಕೂಗಬೇಕು. ಸ್ಥಳದಲ್ಲಿ ಮಾಲೀಕರು ಇದ್ದರೂ ವಾಹನ ಬಿಡಬೇಕೆಂದು ಗೃಹ ಸಚಿವರು ಹಾಗೂ ಪೊಲೀಸ್ ಹಿರಿಯ ಅಧಿಕಾರಿಗಳು ಹೇಳುತ್ತಾರೆ. ಅವರ ಮಾತಿಗೂ ಪೊಲೀಸರು ಕಿಮ್ಮತ್ತು ನೀಡುತ್ತಿಲ್ಲ. ತಮ್ಮಿಷ್ಟದಂತೆ ಟೋಯಿಂಗ್ ಮಾಡಿ, ಜನರಿಂದ ದಂಡ ವಸೂಲಿ ಮಾಡುತ್ತಿದ್ದಾರೆ' ಎಂದೂ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವಿಡಿಯೊದಲ್ಲಿ ಏನಿದೆ: ಕೋರಿಯರ್ ನೀಡುವ ವ್ಯಕ್ತಿಯೊಬ್ಬರು, ತಮ್ಮ ಬೈಕ್‌ನ್ನು ರಸ್ತೆ ಬದಿಯಲ್ಲಿ ನಿಲ್ಲಿಸಿದ್ದರು. ಅದರ ಸಮೀಪದಲ್ಲೇ ಅವರು ಕೋರಿಯರ್ ಪೊಟ್ಟಣ ವಿತರಿಸುತ್ತಿದ್ದರು. 'ಟೈಗರ್' ವಾಹನದಲ್ಲಿ ಸ್ಥಳಕ್ಕೆ ಬಂದಿದ್ದ ಸಂಚಾರ ಪೊಲೀಸರು, ಧ್ವನಿವರ್ಧಕದಲ್ಲಿ ಯಾವುದೇ ಸೂಚನೆ ನೀಡದೇ ಬೈಕ್ ಟೋಯಿಂಗ್ ಮಾಡಿದ್ದರು. ಈ ದೃಶ್ಯ ವಿಡಿಯೊದಲ್ಲಿದೆ.

ಟೋಯಿಂಗ್ ಮಾಡುವುದನ್ನು ನೋಡಿದ್ದ ವ್ಯಕ್ತಿ, ಓಡೋಡಿ ಸ್ಥಳಕ್ಕೆ ಬಂದಿದ್ದರು. ಬೈಕ್ ಬಿಡುವಂತೆ ವಿನಂತಿಸಿದ್ದರು. ಸಿಬ್ಬಂದಿ, ಬೈಕ್ ಕೆಳಗೆ ಇಳಿಸದೇ ಸ್ಥಳದಿಂದ ಹೊರಟಿದ್ದರು. ಟೈಗರ್ ವಾಹನದಲ್ಲಿದ್ದ ತಮ್ಮ ಬೈಕ್ ಹಿಡಿದುಕೊಂಡಿದ್ದ ವ್ಯಕ್ತಿ, ಹಿಂದೆಯೇ ಓಡಿದ್ದರು. ಈ ದೃಶ್ಯವೂ ವಿಡಿಯೊದಲ್ಲಿ ಸೆರೆಯಾಗಿದೆ.

ಸಂಚಾರ ಪೊಲೀಸರು ಟೋಯಿಂಗ್ ಮಾಡಿದ್ದ ತಮ್ಮ ಬೈಕ್ ಬಿಡಿಸಿಕೊಳ್ಳಲು, ಅದರ ಹಿಂದೆಯೇ ರಸ್ತೆಯಲ್ಲಿ ಓಡಿದ ಸವಾರ

₹ 46.48 ಲಕ್ಷ ಮೌಲ್ಯದ ಚಿನ್ನ ಅಕ್ರಮ ಸಾಗಾಟ: ಒಬ್ಬನ ಬಂಧನ

ದೇವನಹಳ್ಳಿ: ಚಿನ್ನದ ತಂತಿಗೆ ರೇಡಿಯಂ ಲೇಪಿಸಿ ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿದ್ದ ಪ್ರಯಾಣಿಕನೊಬ್ಬನನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ಬಂಧಿಸಿದ್ದಾರೆ.

ಬಂಧಿತನಿಂದ ₹ 46.48 ಲಕ್ಷ ಮೌಲ್ಯದ 927.77 ಗ್ರಾಂ ಚಿನ್ನ ಜಪ್ತಿ ಮಾಡಿಕೊಳ್ಳಲಾಗಿದೆ.

ಜ. 27ರಂದು ಡಿಆರ್‌ಐ ಮಾಹಿತಿ ಮೇರೆಗೆ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಅಧಿಕಾರಿಗಳು ಪ್ರಯಾಣಿಕರನ್ನು ತಪಾಸಣೆ ನಡೆಸಿದಾಗ ಚಿನ್ನ ಕಳ್ಳ ಸಾಗಾಟ ಮಾಡುತ್ತಿದ್ದ ಪ್ರಕರಣ ಬೆಳಕಿಗೆ ಬಂದಿದೆ.

ಶಾಸಕ– ಪೊಲೀಸರ ನಡುವೆ ಜಟಾಪಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧದ ಶಾಸಕರ ಭವನದ ಬಳಿ ಗುರುವಾರ ರಾತ್ರಿ ಮೂಡಿಗೆರೆ ಕ್ಷೇತ್ರದ ಬಿಜೆಪಿ ಶಾಸಕ ಎಂ.ಪಿ.ಕುಮಾರಸ್ವಾಮಿ ಮತ್ತು ಪೊಲೀಸರ ಮಧ್ಯೆ ಮಾತಿನ ಜಟಾಪಟಿ ನಡೆದಿದೆ.

ಶಾಸಕ ಕುಮಾರಸ್ವಾಮಿ ಪಾರ್ಕಿಂಗ್ ಸ್ಥಳದ ಬಳಿ ಕಾರು ನಿಲ್ಲಿಸುವ ಸಂದರ್ಭದಲ್ಲಿ ಹೊಯ್ಸಳ ಪೊಲೀಸರು ಮತ್ತು ಶಾಸಕ ಮಧ್ಯೆ ಮಾತಿನ ಚಕಮಕಿ ನಡೆದಿದೆ.

ಶಾಸಕರ ಜತೆಗಿನ ಗಲಾಟೆ ವಿಚಾರವನ್ನು ಪೊಲೀಸ್ ಕಂಟ್ರೋಲ್ ರೂಂಗೆ ಮಾಹಿತಿ ನೀಡುತ್ತಿದ್ದಂತೆ ಎಸಿಪಿ ಸ್ಥಳಕ್ಕೆ ಆಗಮಿಸಿ, ಕುಮಾರಸ್ವಾಮಿ ಮತ್ತು ಬೀಟ್ ಪೊಲೀಸರನ್ನು ಸಮಾಧಾನಪಡಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿದರು. ಈ ಘಟನೆಯ ಬಗ್ಗೆ ದೂರು ದಾಖಲಾಗಿಲ್ಲ.

ಈ ಬಗ್ಗೆ ಶುಕ್ರವಾರ ಮಾತನಾಡಿದ ಕುಮಾರಸ್ವಾಮಿ, 'ನಿನ್ನೆ ರಾತ್ರಿ ನಡೆದ ಘಟನೆಯ ಬಗ್ಗೆ ಮತ್ತು ನನ್ನ ವರ್ತನೆಯ ಬಗ್ಗೆ ಬೇಸರವಿದೆ. ಪೊಲೀಸರಿಗೆ ನಾನು ಶಾಸಕನೆಂಬುದು ಗೊತ್ತೇ ಇಲ್ಲ. ನನ್ನ ಕಾರು ತೆಗೆಯಲು ಬಿಡಲಿಲ್ಲ. ನಾನು ಶಾಸಕ ಎಂಬ ಬಗ್ಗೆಯೇ ಸಂಶಯ ವ್ಯಕ್ತಪಡಿಸಿದರು. ಸಿಟ್ಟಿನಿಂದ ನಾನೂ ಕೆಲವು ಮಾತುಗಳನ್ನು ಆಡಿದ್ದೆ. ಎಲ್ಲ ಮುಗಿದಿದೆ. ಇನ್ನು ಮುಂದುವರೆಸುವ ಅಗತ್ಯವಿಲ್ಲ' ಎಂದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ

'ಲೂಟಿಯೇ ಬಿಜೆಪಿ ಸಾಧನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾವೇರಿ ನೀರು, 110 ಹಳ್ಳಿಗಳ ಅಭಿವೃದ್ಧಿ, ಎತ್ತಿನಹೊಳೆ ಯೋಜನೆ, ಉದ್ಯಾನಗಳ ಅಭಿವೃದ್ಧಿ, ಒಳಚರಂಡಿ, ಮೇಲ್ಸೇತುವೆಗಳು ಸೇರಿದಂತೆ ಅಭಿವೃದ್ಧಿ ಕೆಲಸಗಳು ಕಾಂಗ್ರೆಸ್ ಆಡಳಿತದಲ್ಲಿ ಮಾತ್ರ ಸಾಧ್ಯವಾಗಿವೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಹೇಳಿದರು.

ಬೆಂಗಳೂರು ದಕ್ಷಿಣ ವ್ಯಾಪ್ತಿಯಲ್ಲಿ ಶುಕ್ರವಾರ ನಡೆದ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಬಿಜೆಪಿಯಿಂದ ಯಾವುದೇ ಅಭಿವೃದ್ಧಿ ಕೆಲಸ ನಡೆಯುತ್ತಿಲ್ಲ. ಭ್ರಷ್ಟಾಚಾರ, ದಬ್ಬಾಳಿಕೆ, ಅಕ್ರಮ, ಅನ್ಯಾಯ, ಅಭಿವೃದ್ಧಿ ಹೆಸರಿನಲ್ಲಿ ಸಾವಿರಾರು ಕೋಟಿ ಲೂಟಿ ಮಾಡಿರುವುದೇ ಇವರ ಸಾಧನೆ' ಎಂದರು.

ಸಂಸದ ಡಿ.ಕೆ.ಸುರೇಶ್, 'ಕಾಂಗ್ರೆಸ್‌ನಲ್ಲಿ ಹೊಸಬರು ಮತ್ತು ಹಳಬರು ಎಂಬ ಪ್ರಶ್ನೆಯಿಲ್ಲ. ಕಾಂಗ್ರೆಸ್ ಪಕ್ಷ ದೇವಸ್ಥಾನವಿದ್ದಂತೆ. ಇಲ್ಲಿ ಎಲ್ಲರೂ ಒಂದೇ, ಪ್ರಾಮಾಣಿಕತೆಯಿಂದ ಪಕ್ಷ ಸಂಘಟನೆ ಮಾಡಬೇಕು. ಕಾರ್ಯಕರ್ತರೇ ಪಕ್ಷದ ಆಸ್ತಿ' ಎಂದರು. ಕಾಂಗ್ರೆಸ್ ಮುಖಂಡ ಆರ್.ಕೆ.ರಮೇಶ್ ಮಾತನಾಡಿದರು.

ಬಿಜೆಪಿ ನಾಯಕ ಬಿ.ಬೈರಪ್ಪ, ಬಿ.ದೇವರಾಜ್, ಈಶ್ವರ್, ಭಾಗ್ಯಮ್ಮ, ಬಾಲಕೃಷ್ಣ ಸೇರಿದಂತೆ ಹಲವು ಬಿಜೆಪಿ ನಾಯಕರು ಕಾಂಗ್ರೆಸ್‌ಗೆ ಸೇರ್ಪಡೆಯಾದರು.

ಬೆಂಗಳೂರು ದಕ್ಷಿಣ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಜಿ.ಕೃಷ್ಣಪ್ಪ, ಮುಖಂಡರಾದ ಎಂ.ಸದಾನಂದ, ಎಸ್.ಗಂಗಾಧರ್, ಮಂಜುನಾಥ್, ಕುಮಾರ್, ಶ್ರೀಧರ್, ಗುಂಡುಮಣಿ ಶ್ರೀನಿವಾಸ್ ಭಾಗವಹಿಸಿದ್ದರು.

ಕಾಂಗ್ರೆಸ್‌ಗೆ ಸೇರ್ಪಡೆಯಾದ ನಾಯಕರಿಗೆ ಪಕ್ಷದ ಬಾವುಟ ನೀಡಿ ಬರಮಾಡಿಕೊಳ್ಳಲಾಯಿತು. ರಾಮಲಿಂಗಾರೆಡ್ಡಿ, ಡಿ.ಕೆ.ಸುರೇಶ್, ಆರ್.ಕೆ.ರಮೇಶ್ ಇದ್ದಾರೆ.

ಹೈಕೋರ್ಟ್ ರಿಜಿಸ್ಟ್ರಾರ್ ವಿರುದ್ಧ ದಾವೆ: ₹ 11 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಟಿ.ಜಿ. ಶಿವಶಂಕರೇಗೌಡ ಅವರ ವಿರುದ್ಧ ಸಿವಿಲ್ ನ್ಯಾಯಾಂಗ ನಿಂದನೆ ಮೊಕದ್ದಮೆ ದಾಖಲಿಸಿದ್ದ ಕಾರ್ಕಳದ ಜಿತೇಂದ್ರ ಕುಮಾರ್ ರಾಜನ್ ಎಂಬುವರಿಗೆ ಹೈಕೋರ್ಟ್ ₹ 11 ಲಕ್ಷ ದಂಡ ವಿಧಿಸಿದೆ.

ಈ ಕುರಿತ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ. ವೀರಪ್ಪ ನೇತೃತ್ವದ ವಿಭಾಗೀಯ ನ್ಯಾಯಪೀಠ, 'ದಂಡದ ಮೊತ್ತವನ್ನು 8 ವಾರಗಳಲ್ಲಿ ವಕೀಲರ ಪರಿಷತ್ತಿಗೆ ಪಾವತಿಸಬೇಕು. ನಿಗದಿತ ಅವಧಿಯಲ್ಲಿ ದಂಡದ ಮೊತ್ತ ಪಾವತಿಸದೇ ಹೋದಲ್ಲಿ ಜಿಲ್ಲಾಧಿಕಾರಿಗಳು ದಂಡ ವಸೂಲಿಗೆ ಕ್ರಮ ಕೈಗೊಳ್ಳಬೇಕು. ದಂಡದ ಮೊತ್ತ ಪಾವತಿಯಾಗದಿದ್ದರೆ ವಕೀಲರ ಪರಿಷತ್ತು ಅರ್ಜಿದಾರರ ವಿರುದ್ಧ ನ್ಯಾಯಾಂಗ ನಿಂದನೆ ದಾವೆ ಹೂಡಬಹುದು' ಎಂದು ಆದೇಶಿಸಿದೆ.

ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಅರ್ಜಿದಾರರು ಸಲ್ಲಿಸಿದ್ದ ರಿಟ್ ಅರ್ಜಿಗಳನ್ನು 2021ರ ಮೇ 19ರಂದು ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿ ₹ 1 ಲಕ್ಷ ದಂಡ ವಿಧಿಸಿತ್ತು. ದಂಡದ ಮೊತ್ತ ವಸೂಲಿ ಮಾಡುವಂತೆ ರಿಜಿಸ್ಟ್ರಾರ್ ಜನರಲ್ ಅವರಿಗೆ ನಿರ್ದೇಶಿಸಿತ್ತು.

ದಂಡದ ಮೊತ್ತ ಪಾವತಿಸದ ಅರ್ಜಿದಾರರರು ರಿಜಿಸ್ಟ್ರಾರ್ ಜನರಲ್ ವಿರುದ್ಧ 11 ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿದ್ದರು. ಇದೀಗ ನ್ಯಾಯಪೀಠ ಒಂದೊಂದು ಅರ್ಜಿಗೆ ತಲಾ ₹ 1 ಲಕ್ಷದಂತೆ ಒಟ್ಟು ₹ 11 ಲಕ್ಷ ದಂಡ ವಿಧಿಸಿ ಆದೇಶಿಸಿದೆ.

'ಇತ್ತೀಚಿನ ದಿನಗಳಲ್ಲಿ ನ್ಯಾಯಾಂಗದ ಮೇಲೆ ಸವಾರಿ ಮಾಡುವ ಹಾಗೂ ಸುಳ್ಳು ನ್ಯಾಯಾಂಗ ನಿಂದನೆ ಅರ್ಜಿಗಳನ್ನು ಸಲ್ಲಿಸುವ ಪ್ರವೃತ್ತಿ ಹೆಚ್ಚಾಗುತ್ತಿದೆ. ಇದನ್ನು ಸಹಿಸುವುದಿಲ್ಲ' ಎಂದು ಹೇಳಿರುವ ನ್ಯಾಯಪೀಠ, 'ಈ ರೀತಿ ದಾವೆ ಹೂಡುವುದು ನ್ಯಾಯಾಂಗದ ಜೊತೆ ಅಣಕವಾಡಿದಂತೆ. ಹಾಗಾಗಿ, ಅರ್ಜಿದಾರರ ವಿರುದ್ಧ ಸ್ವಯಂಪ್ರೇರಿತ ಕ್ರಿಮಿನಲ್ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಿ' ಎಂದು ರಿಜಿಸ್ಟ್ರಾರ್ ಜನರಲ್ ಅವರಿಗೆ ನಿರ್ದೇಶಿಸಿದೆ.

'ಒಕ್ಕೂಟ ತತ್ವದ ಹರಣ ಆತಂಕಕಾರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದಲ್ಲಿ ಒಕ್ಕೂಟ ತತ್ವದ ಹರಣ ನಡೆಯುತ್ತಿದೆ. ಕೇಂದ್ರ ಸರ್ಕಾರವು ರಾಜ್ಯಗಳ ಅಧಿಕಾರ ಮೊಟಕುಗೊಳಿಸಿ ಎಲ್ಲವನ್ನೂ ತನ್ನ ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಪ್ರಯತ್ನಿಸುತ್ತಿದೆ. ಇದು ಸಂವಿಧಾನಕ್ಕೆ ಎದುರಾಗಿರುವ ಅಪಾಯ' ಎಂದು ಅರ್ಥಶಾಸ್ತ್ರಜ್ಞ ಪ್ರೊ.ಟಿ.ಆರ್. ಚಂದ್ರಶೇಖರ್ ಕಳವಳ ವ್ಯಕ್ತಪಡಿಸಿದರು.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಗಣರಾಜ್ಯೋತ್ಸವದ ಅಂಗವಾಗಿ ಹಮ್ಮಿಕೊಂಡಿರುವ ಆನ್‌ಲೈನ್ ಉಪನ್ಯಾಸ ಸರಣಿಯಲ್ಲಿ ಶುಕ್ರವಾರ 'ಸಂವಿಧಾನ ಮತ್ತು ಒಕ್ಕೂಟ ತತ್ವ'ದ ಕುರಿತು ಮಾತನಾಡಿದರು.

'ಕೇಂದ್ರ ಸರ್ಕಾರದ ಬದಲು ನಾವು ಒಕ್ಕೂಟ ಸರ್ಕಾರವೆಂಬ ಪದ ಬಳಸುವುದು ಸೂಕ್ತ. ಒಕ್ಕೂಟ ಹಾಗೂ ರಾಜ್ಯ ಸರ್ಕಾರಕ್ಕೆ ಸಂವಿಧಾನದ ಅಡಿಯಲ್ಲಿ ಸಮಾನ ಹಕ್ಕು ಹಾಗೂ ಅಧಿಕಾರ ನೀಡಲಾಗಿದೆ. ಇದಕ್ಕೆ ಅನುಗುಣವಾಗಿ ಆಡಳಿತ ನಡೆಸುವುದೇ ಒಕ್ಕೂಟ ತತ್ವ. ಒಕ್ಕೂಟ ವ್ಯವಸ್ಥೆಗೆ ಧಕ್ಕೆ ತರುವ ಯಾವ ನಿರ್ಧಾರಗಳನ್ನೂ ಸರ್ಕಾರಗಳು ತೆಗೆದುಕೊಳ್ಳಬಾರದು' ಎಂದರು.

'ಬಹುತ್ವ ಭಾಷೆಗೆ ಮನ್ನಣೆ ನೀಡಿರುವುದು ಒಕ್ಕೂಟ ತತ್ವದ ಗರಿಮೆ. ಇದಕ್ಕೆ ಅಪಾಯ ತರುವ ಹಾಗೆ ಕೇಂದ್ರ ಸರ್ಕಾರ ನಡೆದುಕೊಳ್ಳುತ್ತಿದೆ. ದಕ್ಷಿಣದ ರಾಜ್ಯಗಳಲ್ಲಿ ಹಿಂದಿ ಹಾಗೂ ಸಂಸ್ಕೃತ ಭಾಷೆ ಹೇರುವ ಕೆಲಸ ಮಾಡುತ್ತಿದೆ. 'ಒಂದು ದೇಶ ಒಂದು ಭಾಷೆ'ಯಿಂದ ದೇಶದ ಸಮಗ್ರತೆ ಸಾಧ್ಯವಿಲ್ಲ. ಇದರಿಂದ ಒಕ್ಕೂಟ ತತ್ವಕ್ಕೆ ಅಪಾಯ' ಎಂದು ತಿಳಿಸಿದರು.

'ಕೃಷಿ ಸಂಬಂಧಿತ ಕಾಯ್ದೆಗಳನ್ನು ರಚಿಸುವ ಅಧಿಕಾರವನ್ನು ಸಂವಿಧಾನವು ರಾಜ್ಯಗಳಿಗೆ ನೀಡಿದೆ. ಸಂವಿಧಾನದ ಕೆಲ ಸೂಕ್ಷ್ಮ ತೊಡಕುಗಳನ್ನೇ ಅಸ್ತ್ರವಾಗಿಟ್ಟುಕೊಂಡು ಕೇಂದ್ರ ಸರ್ಕಾರವು ಕೃಷಿ ತಿದ್ದುಪಡಿ ಕಾಯ್ದೆಗಳನ್ನು ಜಾರಿಗೊಳಿಸಿದ್ದು ಸಂವಿಧಾನಕ್ಕೆ ಮಾಡಿದ ಅಪಮಾನ' ಎಂದು ಹೇಳಿದರು.

'ರಾಜ್ಯಗಳು ಸ್ವತಂತ್ರವಾಗಿ ತೆರಿಗೆ ಸಂಗ್ರಹಿಸದ ಸ್ಥಿತಿಗೆ ತಲುಪಿವೆ. ಪ್ರತಿಯೊಂದಕ್ಕೂ ಕೇಂದ್ರದ ಎದುರು ಅಂಗಲಾಚಬೇಕಿದೆ. ಜಿಎಸ್‌ಟಿ ಪರಿಹಾರ ನೀಡುವಿಕೆಯಲ್ಲೂ ಕೇಂದ್ರ ಸರ್ಕಾರ ರಾಜ್ಯಗಳಿಗೆ ಅನ್ಯಾಯ ಮಾಡಿದೆ. ಕೇಂದ್ರ ಸರ್ಕಾರಕ್ಕೆ ಒಕ್ಕೂಟ ತತ್ವದ ಮೇಲೆ ನಂಬಿಕೆ ಇದ್ದರೆ ಜಿಎಸ್‌ಟಿ ಪರಿಹಾರವನ್ನು ಮತ್ತೆ ಐದು ವರ್ಷ ವಿಸ್ತರಿಸಬೇಕು' ಎಂದು ತಿಳಿಸಿದರು.

ಮಗಳನ್ನು ದಾನಮಾಡಿದ್ದ ತಂದೆಯನ್ನು ತರಾಟೆಗೆ ತೆಗೆದುಕೊಂಡ ಕೋರ್ಟ್

'ದಾನ ಮಾಡಲು ಹೆಣ್ಣು ಆಸ್ತಿ ಅಲ್ಲ'

ಮುಂಬೈ(ಪಿಟಿಐ): ತಂದೆಯೊಬ್ಬ ತನ್ನ 17 ವರ್ಷದ ಮಗಳನ್ನು ಸ್ವಘೋಷಿತ ದೇವಮಾನವನೊಬ್ಬನಿಗೆ ದಾನ ನೀಡಿದ ಪ್ರಕರಣಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ಬಾಂಬೆ ಹೈಕೋರ್ಟ್‌ನ ಔರಂಗಬಾದ್ ನ್ಯಾಯಪೀಠವು, 'ದಾನವಾಗಿ ನೀಡಲು ಮಗಳು ಆಸ್ತಿಯಲ್ಲ' ಎಂದು ಕಟುವಾಗಿ ನುಡಿದಿದೆ.

ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಆರೋಪದಲ್ಲಿ ಬಂಧಿತರಾಗಿರುವ ಸ್ವಘೋಷಿತ ದೇವಮಾನವ ಶಂಕೇಶ್ವರ ಧಾಕ್ನೆ ಮತ್ತು ಆತನ ಶಿಷ್ಯ ಸೋಪನ್ ಧಾಕ್ನೆ ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯ ವೇಳೆ, ನ್ಯಾಯಮೂರ್ತಿ ವಿಭಾ ಕಂಕನವಾಡಿ ನೇತೃತ್ವದ ಏಕಸದಸ್ಯ ಪೀಠವು ಈ ಅಂಶವನ್ನು ಗಮನಿಸಿ, ಮಗಳನ್ನು ದಾನ ನೀಡಿದ್ದ ತಂದೆಯ ವಿರುದ್ಧ ಕಿಡಿಕಾರಿದೆ.



ಆರೋಪಿಗಳಿಬ್ಬರು ಬಾಲಕಿ ಮತ್ತು ಆತನ ತಂದೆಯೊಂದಿಗೆ ಜಲ್ನಾ ಜಿಲ್ಲೆಯ ಬದ್ನಾಪುರ ಗ್ರಾಮದ ದೇವಸ್ಥಾನದಲ್ಲಿ ವಾಸವಾಗಿದ್ದರು. 2021ರ ಆಗಸ್ಟ್‌ನಲ್ಲಿ ತನ್ನ ಮೇಲೆ ಆರೋಪಿಗಳು ಅತ್ಯಾಚಾರ ಎಸಗಿರುವ ಕುರಿತು ಬಾಲಕಿಯು ಠಾಣೆಯಲ್ಲಿ ದೂರು ದಾಖಲಿಸಿದ್ದಳು. ನಂತರ ಆರೋಪಿಗಳನ್ನು ಬಂಧಿಸಲಾಗಿತ್ತು.

'2018ರಲ್ಲಿ 100 ರೂಪಾಯಿಯ ಸ್ಟ್ಯಾಂಪ್ ಪೇಪರ್ ಮೇಲೆ 'ದಾನಪತ್ರ' ಎಂದು ವಿನ್ಯಾಸ ಮಾಡಲಾಗಿದ್ದ ದಾಖಲೆಯಲ್ಲಿ ಬಾಲಕಿಯ ತಂದೆಯು ದೇವರ ಸನ್ನಿಧಿಯಲ್ಲಿ ಮಗಳನ್ನು ಶಂಕೇಶ್ವರ ಧಾಕ್ನೆಗೆ ಕನ್ಯಾದಾನ ಮಾಡಿರುವುದಾಗಿ ನಮೂದಿಸಲಾಗಿತ್ತು. ಇದನ್ನು ಗಮನಿಸಿದ ನ್ಯಾಯಮೂರ್ತಿ ವಿಭಾ ಕಂಕನವಾಡಿ ಅವರು, 'ಹುಡುಗಿಯ ಸ್ವಯಂಹೇಳಿಕೆಯಂತೆ ಆಕೆ ಇನ್ನೂ ಅಪ್ರಾಪ್ತಳು. ಎಲ್ಲ ರೀತಿಯಲ್ಲೂ ರಕ್ಷಕನಾಗಿರುವ ತಂದೆಯು, ಮಗಳನ್ನು ಹೇಗೆ ದಾನವಾಗಿ ನೀಡಲು ಸಾಧ್ಯ? ದಾನವಾಗಿ ನೀಡಲು ಮಗಳೇನು ಆಸ್ತಿಯಲ್ಲ' ಎಂದು ತಂದೆಯನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದ್ದಾರೆ.

'ದಾನವಾಗಿ ನೀಡಲು ಹೆಣ್ಣು ಒಂದು ಆಸ್ತಿಯಲ್ಲ' ಎಂದು ಹೇಳಿದ ನ್ಯಾಯಮೂರ್ತಿ ಅವರು, ಆರೋಪಿಗಳಿಗೆ ಜಾಮೀನು ಮಂಜೂರು ಮಾಡಿ, ಪ್ರಕರಣದ ವಿಚಾರಣೆಯನ್ನು ಫೆ. 4ಕ್ಕೆ ಮುಂದೂಡಿದರು.

ಕಳಪೆ ಊಟ ಪ್ರಶ್ನಿಸಿದಕ್ಕೆ ಜೀವಬೆದರಿಕೆ:ಎಸ್‌ಎಫ್‌ಐ ಆರೋಪ

ಬೆಂಗಳೂರು: 'ಹುಬ್ಬಳ್ಳಿಯ ಗೋಕುಲದಲ್ಲಿರುವ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯದಲ್ಲಿ ಕಳಪೆ ಆಹಾರ ನೀಡಲಾಗುತ್ತಿದೆ. ಈ ಬಗ್ಗೆ ಪ್ರಶ್ನೆ ಮಾಡಿದ ವಿದ್ಯಾರ್ಥಿಗೆ ಜೀವ ಬೆದರಿಕೆ ಹಾಕಲಾಗಿದೆ' ಎಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ರಾಜ್ಯ ಘಟಕದ ಅಧ್ಯಕ್ಷ ಅಮರೇಶ ಕಡಗದ ಆರೋಪಿಸಿದ್ದಾರೆ.

'ಪಂಪಾಪತಿ ಎಂಬ ವಿದ್ಯಾರ್ಥಿ ವಿದ್ಯಾರ್ಥಿನಿಲಯದ ಸಮಸ್ಯೆ ಕುರಿತು ತಾಲ್ಲೂಕು ಅಧಿಕಾರಿಗಳ ಗಮನಕ್ಕೆ ತಂದಿದ್ದರು. ಈ ಕಾರಣದಿಂದ ಅಲ್ಲಿನ ಸಿಬ್ಬಂದಿ ಪಂಪಾಪತಿ ಅವರನ್ನು ಹಾಸ್ಟೆಲ್‌ನಿಂದ ಹೊರಹಾಕಲು ಸಂಚು ರೂಪಿಸಿ, ಜೀವಬೆದರಿಕೆ ಹಾಕಿದ್ದಾರೆ' ಎಂದು ದೂರಿದರು. 'ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿಗಳು ವಿದ್ಯಾರ್ಥಿಗೆ ನ್ಯಾಯ ಒದಗಿಸಬೇಕು' ಎಂದೂ ಆಗ್ರಹಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್– ಬೆಂಗಳೂರು ಗ್ರಾಮಾಂತರ ಜಿಲ್ಲೆ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ
ಕೊಠಡಿ ಸಂಖ್ಯೆ: 207, 2ನೇ ಮಹಡಿ, ಬೀರಸಂದ್ರ ಗ್ರಾಮ, ವಿಶ್ವನಾಥಪುರ ಅಂಚೆ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562110.
ದೂರವಾಣಿ: 080–29787452, ಇ–ಮೇಲ್: dhobengalururural-hfws@karnataka.gov.in
ಸಂಖ್ಯೆ: DSO (BR)/HWC/PROC/01/2021-22 ದಿನಾಂಕ: 28–01–2022

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ) (ದ್ವಿ ಲಕೋಟೆ ಪದ್ಧತಿ)

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಧೀನದಡಿ ಬರುವ **ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಿಗೆ ಪ್ರಯೋಗಶಾಲಾ ಉಪಕರಣಗಳನ್ನು ಖರೀದಿಸಿ ಸರಬರಾಜು ಮಾಡುವ** ಕುರಿತಂತೆ **ರೂ. 67.51 ಲಕ್ಷಗಳನ್ನು** ರಾಷ್ಟ್ರೀಯ ಆರೋಗ್ಯ ಅಭಿಯಾನದ ಆರೋಗ್ಯ ಮತ್ತು ಕ್ಷೇಮ ಕೇಂದ್ರ ಕಾರ್ಯಕ್ರಮದ ಲೆಕ್ಕ ಶೀರ್ಷಿಕೆಯಡಿ ಅನುಮೋದನೆಯಾಗಿದ್ದು, ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು ಆಸಕ್ತರು **http://www.eproc.karnataka.gov.in** ವೆಬ್‌ಸೈಟ್‌ನ ಮೂಲಕ ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸಬಹುದು.
1) ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ: **27–02–2022 ರಂದು ಸಂಜೆ 5.00 ಗಂಟೆವರೆಗೆ.** 2) ಟೆಂಡರ್‌ನ ಅಂದಾಜು ಮೊತ್ತ: **ರೂ. 67.51 ಲಕ್ಷಗಳು.** 3) ಇ.ಎಂ.ಡಿ. ಹಣ: **ಟೆಂಡರ್ ಮೊತ್ತಕ್ಕೆ ಶೇ. 2 ರಷ್ಟು (ರೂ. 1,35,028/–).** 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **28–02–2022ರಂದು ಬೆಳಗ್ಗೆ 11.00 ಗಂಟೆಗೆ.** 5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **ಯಶಸ್ವಿ ತಾಂತ್ರಿಕ ಟೆಂಡರ್‌ದಾರರಿಗೆ ತಿಳಿಸಲಾಗುವುದು.** 6) ಟೆಂಡರ್ ತೆರೆಯುವ ಸ್ಥಳ (Online Bid Opening): **ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, #207, 2ನೇ ಮಹಡಿ, ಜಿಲ್ಲಾಡಳಿತ ಭವನ, ಬೀರಸಂದ್ರ ಗ್ರಾಮ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು.**
ಹೆಚ್ಚಿನ ವಿವರಗಳಿಗೆ **www.eproc.karnataka.gov.in** ಮೂಲಕ ಮಾಹಿತಿ ಪಡೆಯಬಹುದು.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ವಾಸಾಸಂಇ/ಉನಿಕ/ಬೆಂಗ್ರಾಜಿ/399/2021–22
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಓ.. ಗುಲಾಬಿಯೇ..

ಡಾ. ವಸುಂಧರಾ ಭೂಪತಿ

ಸೌಂದರ್ಯ

ಗುಲಾಬಿ ಹೂವುಗಳ ರಾಣಿ. ಈ ಹೂವಿನ ಅಂದಕ್ಕೆ ಮರುಳಾಗದವರಿಲ್ಲ. ಡಮಾಸ್ಕ್ ಗುಲಾಬಿ ತಳಿಯ ಸುಗಂಧ ಇತರೆಲ್ಲ ಗುಲಾಬಿ ತಳಿಗಳನ್ನು ಮೀರಿಸುತ್ತದೆ. ಇಂಥ ಚಂದದ ಹೂವನ್ನು ಕೇಶಾಲಂಕಾರಕ್ಕಾಗಿ, ಹಾರ, ತುರಾಯಿ, ಬೊಕ್ಕೆ ಮನೆಯ ಅಲಂಕಾರಕ್ಕಾಗಿ ಬಳಸುತ್ತಾರೆ.

ಅಲಂಕಾರದಿಂದಲೇ 'ರಾಣಿ' ಸ್ಥಾನ ಪಡೆದಿರುವ ಈ ಹೂವಿನ ಪಕಳೆಗಳಲ್ಲಿ ಔಷಧದ ಜೊತೆಗೆ ಸೌಂದರ್ಯ ವರ್ಧಿಸುವ ಗುಣಗಳೂ ಇವೆ. ಈ ಹೂವಿನ 'ನೀರು' ಅಂದರೆ ರೋಸ್ ವಾಟರ್ ಪ್ರಸಾದನ ಕ್ಷೇತ್ರದಲ್ಲಿ ಬಲು ಜನಪ್ರಿಯ. ಅದೇ ರೀತಿ ಗುಲಾಬಿ ಎಣ್ಣೆ, ಪಾಂಕುರಿ (ಗುಲಾಬಿ ಪಕಳೆಗಳನ್ನು ಒಣಗಿಸಿ, ಪುಡಿ ಮಾಡಿ, ಅದಕ್ಕೆ ಕೇಸರಿ, ಜೇನುತುಪ್ಪ ಬೆರೆಸಿ ತಯಾರಿಸುವ ಪೇಸ್ಟ್) ಮತ್ತು ಗುಲ್ಕಂದ್ ಕೂಡ ಔಷಧ ಹಾಗೂ ಸೌಂದರ್ಯವರ್ಧಕವಾಗಿ ಬಳಸಬಹುದು. ಈ ಉತ್ಪನ್ನಗಳನ್ನು ಔಷಧ–ಸೌಂದರ್ಯವರ್ಧಕವಾಗಿ ಬಳಸುವ ಬಗೆ ಹೇಗೆ? ಇಲ್ಲಿದೆ ಮಾಹಿತಿ.

- ಗುಲಾಬಿ ಎಣ್ಣೆಗೆ ಎಳ್ಳೆಣ್ಣೆಯನ್ನು ಸಮ ಪ್ರಮಾಣದಲ್ಲಿ ಬೆರೆಸಿಕೊಂಡು, ವಾರಕ್ಕೊಮ್ಮೆ ಅಥವಾ ಎರಡು ಬಾರಿ ಮೈಗೆ ಹಚ್ಚಿ ಮಸಾಜ್ ಮಾಡಿಕೊಂಡರೆ ಚರ್ಮದ ಕಾಂತಿ ಹೆಚ್ಚುತ್ತದೆ, ಚರ್ಮ ಮೃದುವಾಗುತ್ತದೆ.
- ಗುಲಾಬಿ ಎಣ್ಣೆಯ ಕೆಲ ಹನಿಗಳನ್ನು ನೀರಿನಲ್ಲಿ ಹಾಕಿ ಸ್ನಾನ ಮಾಡಬೇಕು. ಇಲ್ಲವೇ ಗುಲಾಬಿ ದಳಗಳನ್ನು ನೀರಿನಲ್ಲಿ ಹಾಕಿಯೂ ಸ್ನಾನ ಮಾಡುವುದರಿಂದ ಆಯಾಸ ಪರಿಹಾರವಾಗುತ್ತದೆ.
- ರಾತ್ರಿ ಮಲಗುವ ಮುನ್ನ ಕಣ್ಣಿನ ಸುತ್ತಲೂ ಗುಲಾಬಿ ಜಲ(ರೋಸ್ ವಾಟರ್) ಅಥವಾ ಗುಲಾಬಿ ಎಣ್ಣೆಯನ್ನು ಲೇಪಿಸಿಕೊಂಡರೆ ಕಣ್ಣಿನ ಸುತ್ತಲೂ ಉಂಟಾಗುವ ಕಪ್ಪನ್ನು ನಿವಾರಿಸಬಹುದು.
- ಗುಲಾಬಿ ದಳಗಳನ್ನು ನುಣ್ಣಗೆ ರುಬ್ಬಿ ಪೇಸ್ಟ್ ತಯಾರಿಸಿಕೊಂಡು ಮುಖಕ್ಕೆ ಲೇಪಿಸಿಕೊಂಡು ಒಂದು ಗಂಟೆಯ ನಂತರ ಮುಖ ತೊಳೆಯಬೇಕು. ಇದರಿಂದ ಮುಖದ ಕಾಂತಿ ಹೆಚ್ಚುತ್ತದೆ. ವಾರಕ್ಕೊಮ್ಮೆ ಅಥವಾ ಹತ್ತು ದಿನಗಳಿಗೊಮ್ಮೆ ಈ ರೀತಿ ಮಾಡಿದರೆ ಮುಖದ ಕಾಂತಿ ಹೆಚ್ಚುತ್ತದೆ.
- ಕಣ್ಣಿನ ಸುತ್ತಲೂ ಗುಲಾಬಿ ನೀರನ್ನು ಲೇಪಿಸುವುದರಿಂದ ಕಣ್ಣುಉರಿ ಕಡಿಮೆಯಾಗುತ್ತದೆ.
- ತಲೆನೋವಿನಿಂದ ಬಳಲುತ್ತಿರುವಾಗ ಗುಲಾಬಿ ಎಣ್ಣೆಯನ್ನು ಹಣೆಯ ಮೇಲೆ ಲೇಪಿಸಿಕೊಳ್ಳಬೇಕು.
- ಗುಲಾಬಿಯಿಂದ ತಯಾರಿಸುವ ಗುಲ್ಕಂದ್, ಆಹಾರ ಮಾತ್ರವಲ್ಲ– ಔಷಧವಾಗಿಯೂ ಉಪಯುಕ್ತ. ಒಂದು ಚಮಚ ಗುಲ್ಕಂದ್ ಅನ್ನು ಹಾಲಿನೊಡನೆ ಬೆರೆಸಿ, ದಿನಕ್ಕೆರಡು ಬಾರಿ ಸೇವಿಸುವುದರಿಂದ ರಕ್ತ ಮೂಲವ್ಯಾಧಿ, ದಾಹ, ಗಂಟಲು ನೋವು, ಮಹಿಳೆಯರಲ್ಲಿ ಉಂಟಾಗುವ ತೀವ್ರ ರಕ್ತಸ್ರಾವ ಗುಣವಾಗುತ್ತದೆ.
- ಡಮಾಸ್ಕ್ ಮತ್ತು ಬಾರ್ಬೇರಿಯನ್ ಜಾತಿಯ ಗುಲಾಬಿ ಪಕಳೆಗಳನ್ನು ಬಳಸಿ, ಸಕ್ಕರೆ, ಜೇನು ಸೇರಿಸಿ ತಯಾರಿಸಿದ ಗುಲ್ಕಂದ್ ಶಕ್ತಿವರ್ಧಕ, ಲಘು ವಿರೇಚಕ ಮತ್ತು ಬಾಯಿಹುಣ್ಣಿಗೆ ಉತ್ತಮ ಔಷಧ.
- ಮಲಗುವ ಮುನ್ನ ಗುಲಾಬಿ ಜಲದ(ರೋಸ್ ವಾಟರ್) ಕೆಲ ಹನಿಗಳನ್ನು ದಿಂಬಿನ ಮೇಲೆ ಚಿಮುಕಿಸುವುದರಿಂದ ಮನಸ್ಸು ಉಲ್ಲಸಿತವಾಗಿ, ತುಂಬಾ ಚೆನ್ನಾಗಿ ನಿದ್ದೆ ಬರುತ್ತದೆ.
- ಗುಲಾಬಿ ಹೂವಿನ ಕಷಾಯಕ್ಕೆ ಸ್ವಲ್ಪ ತುಪ್ಪ ಬೆರೆಸಿ ರಾತ್ರಿ ಮಲಗುವ ಮುನ್ನ ಕುಡಿಯಬೇಕು. ಇದರಿಂದ ಮಲಬದ್ಧತೆ ತೊಂದರೆ ನಿವಾರಣೆಯಾಗುತ್ತದೆ. ಕಷಾಯ ತಯಾರಿಕೆ: ಒಂದು ಲೋಟ ನೀರಿಗೆ, 25 ಗ್ರಾಂಗಳಷ್ಟು ಗುಲಾಬಿ ದಳಗಳನ್ನು ಹಾಕಿ. ಆ ನೀರನ್ನು ಕುದಿಸಿ, ಅದು ಅರ್ಧಕ್ಕೆ ಇಳಿದ ನಂತರ, ಆರಿಸಿದರೆ. ಕಷಾಯ ಸಿದ್ಧ.
- ಮಲವಿಸರ್ಜನೆ ವೇಳೆ ರಕ್ತ ಬೀಳುತ್ತಿದ್ದರೆ, ಅಂಥವರು ರಾತ್ರಿ ಮಲಗುವ ಮುನ್ನ 25 ಗುಲಾಬಿ ಹೂವಿನ ಪಕಳೆಗಳು ನೆನೆಯಿಟ್ಟು ಬೆಳಿಗ್ಗೆ ಅವುಗಳನ್ನು ಚೆನ್ನಾಗಿ ಅರೆದು, ಶೋಧಿಸಿಕೊಂಡು ಕಲ್ಲುಸಕ್ಕರೆ ಪುಡಿ ಬೆರೆಸಿ ಕುಡಿಯಬೇಕು.
- 100 ಗ್ರಾಂ ನಷ್ಟು ಗುಲಾಬಿ ಹೂವಿನ ದಳಗಳು, ಕಲ್ಲುಸಕ್ಕರೆ 10 ಗ್ರಾಂ, ಪಚ್ಚೆಕರ್ಪೂರ 5 ಗ್ರಾಂ ಎಲ್ಲವನ್ನೂ ಬೆರೆಸಿ, ನುಣ್ಣಗೆ ಅರೆದು ಮಾತ್ರೆ ರೀತಿ ತಯಾರಿಸಿಟ್ಟುಕೊಳ್ಳಬೇಕು. ಆಗಾಗ ಈ ಮಾತ್ರೆಯನ್ನು ಬಾಯಿಗೆ ಹಾಕಿ ಚಪ್ಪರಿಸುತ್ತಿದ್ದರೆ ಬಾಯಿಯ ದುರ್ವಾಸನೆ ದೂರವಾಗುತ್ತದೆ. ಇದೇ ಮಾತ್ರೆಗಳು ಕೆಮ್ಮು ನಿವಾರಣೆಗೂ ಔಷಧವಾಗುತ್ತದೆ.
- ಎಲ್ಲ ಗುಲಾಬಿಗಳೂ ಔಷಧ ಮತ್ತು ಸೌಂದರ್ಯವರ್ಧಕವಾಗಿ ಬಳಕೆಯಾಗುವುದಿಲ್ಲ. ಗುಲಾಬಿ ಎಣ್ಣೆ ಗುಲಾಬಿ ಜಲ, ಪಾಂಕುರಿ, ಗುಲ್ಕಂದ್, ಕಷಾಯದ ಪುಡಿಗಳು ಆಯುರ್ವೇದ ಔಷಧದ ಅಂಗಡಿಗಳು, ಆರೊಮಾ ಥೆರಪಿ ಕೇಂದ್ರಗಳಲ್ಲಿ ಲಭ್ಯವಿವೆ.

ಇತ್ತೀಚೆಗೆ ಸಿಸೇರಿಯನ್ ಹೆರಿಗೆ ಪ್ರಮಾಣ ಮೂರು ಪಟ್ಟು ಹೆಚ್ಚಾಗಿದೆ. ಅನಿವಾರ್ಯ, ಅಗತ್ಯ, ಆಯ್ಕೆ... ಹೀಗೆ ಹಲವು ಆಯಾಮಗಳನ್ನು ಹೊಂದಿರುವ 'ಸಿಸೇರಿಯನ್' ಹೆರಿಗೆಯ ಹಿಂದೆ ಸಾಕಷ್ಟು ವೈಯಕ್ತಿಕ, ಮಾನಸಿಕ, ಶಾರೀರಿಕ ಕಾರಣಗಳೂ ಅಡಕವಾಗಿವೆ ಎನ್ನುವುದನ್ನೂ ಒಪ್ಪಿಕೊಳ್ಳಬೇಕಿದೆ.

ಸಿಸೇರಿಯನ್ ಹೆರಿಗೆಗೆ ಹಲವು ಆಯಾಮಗಳು

ಸುಶೀಲಾ ಡೋಣೂರ

ಹೆರಿಗೆ– ಇಡೀ ಮನುಕುಲದ ಅಂತರಾಳವನ್ನು ಕಲಕುವ ಪದವಿದು. ಹೆಣ್ಣಿನ ಜೀವಮಾನದ ಮಹತ್ವದ ಘಟ್ಟವಾದರೂ, ಅವಳೊಬ್ಬಳನ್ನೇ ಅಲ್ಲದೆ, ಆ ಇಡೀ ಕುಟುಂಬಕ್ಕೆ ಸಂತಸವನ್ನೂ ಆತಂಕವನ್ನೂ ಒಟ್ಟೊಟ್ಟಿಗೆ ತರುವ ಗಳಿಗೆ. ಹೆರಿಗೆಯ ದಿನ ಹತ್ತಿರ ಬರುತ್ತಿದ್ದಂತೆ ಅವಳನ್ನೂ, ಅವಳ ಕುಟುಂಬವನ್ನೂ ಕಾಡುವ ಪ್ರಶ್ನೆಯೆಂದರೆ ಹೆರಿಗೆ 'ಸಿಸೇರಿಯನ್' ಅಥವಾ 'ನಾರ್ಮಲ್' ಎನ್ನುವುದು. ಇದೇ ಒಂದೆರಡು ದಶಕಗಳ ಹಿಂದೆ 'ಸಿಸೇರಿಯನ್' ಎಂದರೆ ಜನ ಬೆಚ್ಚುವುದಿತ್ತು. ಏನೊ ತೊಡಕು ಸಂಭವಿಸಿದಾಗ ಮಾತ್ರ 'ಸಿಸೇರಿಯನ್' ಅನಿವಾರ್ಯವಾಗುತ್ತಿತ್ತು. ಆದರೆ ಈಗ ಹೆರಿಗೆ ಎಂದರೆ 'ಸಿಸೇರಿಯನ್' ಎನ್ನುವಷ್ಟು ಸಾಮಾನ್ಯವಾಗಿದೆ.

'ಒಂಬತ್ತು ತಿಂಗಳು ತುಂಬಿದರೂ ಹೆರಿಗೆ ನೋವು ಕಾಣಿಸಿಕೊಳ್ಳಲಿಲ್ಲ. ನಾನೂ ಹೆರಿಗೆ ನೋವು ಸಹಿಸಲು ಮಾನಸಿಕವಾಗಿ ಸಿದ್ಧಳಿರಲಿಲ್ಲ. ವೈದ್ಯರಿಗೆ ಇಷ್ಟು ಹೇಳುವುದೇ ಸಾಕಿತ್ತು. ತಕ್ಷಣವೇ ಸಿಸೇರಿಯನ್‌ಗೆ ತಯಾರಿ ನಡೆಸಿದರು. ಹೆರಿಗೆ ನೋವು ಅನುಭವಕ್ಕೆ ಬರುವ ಮುನ್ನವೆ ನನ್ನ ಹೆರಿಗೆ ಮುಗಿದು ಹೋಗಿತ್ತು' – ಭದ್ರಾವತಿಯ ಕಲ್ಯಾಣಿಯವರ ಅನುಭವದ ನುಡಿಗಳಿವು.

'ನಾನು ಮತ್ತು ನಮ್ಮನೆಯವರು ನಾರ್ಮಲ್ ಡೆಲಿವರಿಯೇ ಆಗಬೇಕೆಂದು ಹಟ ಹಿಡಿದಿದ್ದೆವು. ಹೆರಿಗೆ ನೋವು ಶುರುವಾದಾಗ ಅಮ್ಮ (ವೈದ್ಯರ ಅನುಮತಿ ಪಡೆದು) ಲೇಬರ್ ವಾರ್ಡ್‌ಗೆ ಬಂದು, ನನ್ನಲ್ಲಿ ಮಾನಸಿಕ ಸ್ಥೈರ್ಯ ತುಂಬಿದರು. ಮೈಯಲ್ಲಿನ ಅಷ್ಟೂ ಮೂಳೆಗಳು ಒಟ್ಟಿಗೇ ಮುರಿದು ಹೋಗುತ್ತಿರುವ ಅನುಭವ. ಸಹಿಸುವುದು ನಿಜಕ್ಕೂ ಕಷ್ಟ. ಆದರೆ ಹೆರಿಗೆಯಾದ ಮೇಲೆ ಆ ನೋವಿನ ನೆನಪೂ ಇರಲಿಲ್ಲ' ಎಂದು ಹೇಳುತ್ತಾರೆ ಬೆಂಗಳೂರಿನ ದೀಪ್ತಿ.

ನಿಜ, ತುರ್ತು ಸಂದರ್ಭಗಳಲ್ಲಿ ತಾಯಿ ಮತ್ತು ಶಿಶುವಿನ ಮರಣ ಪ್ರಮಾಣ ತಗ್ಗಿಸುವುದಕ್ಕಾಗಿ ಸಿಸೇರಿಯನ್ ಅನಿವಾರ್ಯ. ಇದಕ್ಕಾಗಿ ನಡೆಸುವ ಶೇ 10 ರಿಂದ 15ರಷ್ಟು ಸಿಸೇರಿಯನ್ ಅಗತ್ಯ ಮತ್ತು ಅನಿವಾರ್ಯ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ. ಆದರೆ ಇತ್ತೀಚೆಗೆ ಸಿಸೇರಿಯನ್ ವೈದ್ಯರ, ಗರ್ಭಿಣಿಯರ ಆಯ್ಕೆಯೂ ಆಗುತ್ತಿದೆ. ಈ ಕಾರಣಕ್ಕೆ ಇದರ ಪ್ರಮಾಣದಲ್ಲಿ ಮೂರು ಪಟ್ಟು ಹೆಚ್ಚಳವಾಗಿದೆ. ವರ್ಷ ವರ್ಷ ಈ ಪ್ರಮಾಣ ಏಕೆ ಹೆಚ್ಚುತ್ತಿದೆ ಎನ್ನುವುದಕ್ಕೆ ಒಂದೇ ಉತ್ತರವಿಲ್ಲ. ಸಿಸೇರಿಯನ್ ಹೆರಿಗೆಯ ಹಿಂದೆ ಸಾಕಷ್ಟು ವೈಯಕ್ತಿಕ, ಮಾನಸಿಕ, ಶಾರೀರಿಕ ಕಾರಣಗಳೂ ಅಡಕವಾಗಿವೆ.

ಭಾವನಾತ್ಮಕ ಅನಿವಾರ್ಯ

ಇತ್ತೀಚೆಗೆ ಮಹಿಳೆಯರಲ್ಲಿ ಸಹನಾಶಕ್ತಿ ಕಡಿಮೆಯಾಗುತ್ತಾ, ಸಣ್ಣ ನೋವನ್ನೂ ಸಹಿಸದಷ್ಟು ಸೂಕ್ಷ್ಮವಾಗುತ್ತಿದ್ದಾರೆ. ಕಲ್ಯಾಣಿ ಹೇಳಿದಂತೆ, ಹೆರಿಗೆ ನೋವು ತಡೆಯಲು ಮಾನಸಿಕವಾಗಿ ಸಿದ್ಧರಾಗಿರುವುದಿಲ್ಲ. ಹೀಗಾಗಿ ಗಂಟೆಗಳ ಹೆರಿಗೆಯ ನೋವಿಗಿಂತ ಕೆಲ ಕ್ಷಣಗಳಲ್ಲಿ ಮುಗಿದು ಹೋಗುವ ಸಿಸೇರಿಯನ್ ಆದ್ಯತೆಯಾಗುತ್ತಿದೆ. ಶಿಶುವಿಗೆ ಏನಾದರೂ ತೊಂದರೆಯಾದರೆ ಎಂಬ ಆತಂಕ, ಇಂಥ 'ಮುಹೂರ್ತ'ದಲ್ಲೇ ಮಗು ಜನಿಸಿದರೆ ಒಳ್ಳೆಯದೆಂಬ ನಂಬಿಕೆ... ಹೀಗೆ ಅನೇಕ ಕಾರಣಗಳು ಸಿಸೇರಿಯನ್‌ಗೆ ಅವಸರಿಸುವಂತೆ ಮಾಡುತ್ತಿವೆ. ಬದಲಾದ ಜೀವನಶೈಲಿ, ದೈಹಿಕ ಚಟುವಟಿಕೆಯ ಕೊರತೆ, ದೇಹದ ಕಾರ್ಯಕ್ಷಮತೆಯಲ್ಲಿನ ಬದಲಾವಣೆ... ಇವೂ ಸಾಮಾನ್ಯ ಹೆರಿಗೆಗೆ ಸವಾಲಾಗುತ್ತಿದೆ.



ಡಾ. ಚಂದ್ರಿಕಾ ಆನಂದ್

ಯಾವಾಗ ಅಗತ್ಯ...

'ಇತ್ತೀಚಿನ ದಿನಗಳಲ್ಲಿ ಸಿಸೇರಿಯನ್ ಪ್ರಮಾಣ ಹೆಚ್ಚಿದೆ ಎನ್ನುವುದು ನಿಜ. ಇದರಲ್ಲಿ ವೈದ್ಯರ ಹಾಗೂ ಆಸ್ಪತ್ರೆಗಳ ಪಾತ್ರವೇನು, ತಾಯಿ ಹಾಗೂ ಅವಳ ಕುಟುಂಬದವರ ಆಸಕ್ತಿ ಎಷ್ಟು ಎನ್ನುವುದನ್ನು ಪ್ರತ್ಯೇಕವಾಗಿ ನೋಡಬೇಕಾಗುತ್ತದೆ. ಅಪಾಯದ ಗರ್ಭಧಾರಣೆ, ಗರ್ಭಿಣಿಯ ವಯೋಮಾನ, ಗರ್ಭಾವಸ್ಥೆಯಲ್ಲಿ ಮಧುಮೇಹ, ಅಧಿಕ ರಕ್ತದೊತ್ತಡ, ಅತಿ ಬೊಜ್ಜು, ಪ್ರೀ-ಎಕ್ಲಾಂಪ್ಸಿಯಾ(ಪಿಇ)ದಂತಹ ಸಂದರ್ಭಗಳಲ್ಲಿ ಸಿಸೇರಿಯನ್ ಅನಿವಾರ್ಯ' ಎನ್ನುತ್ತಾರೆ ಫೋರ್ಟಿಸ್ ಆಸ್ಪತ್ರೆಯ ಸ್ತ್ರೀರೋಗ ತಜ್ಞೆ ಡಾ. ಚಂದ್ರಿಕಾ ಆನಂದ್.

ಸಾಮಾನ್ಯ ಹೆರಿಗೆಯ ಭಯ

ಸಾಮಾನ್ಯ ಹೆರಿಗೆ ಅಸಾಧ್ಯ ನೋವು ತರುತ್ತದೆ, ಶ್ರೋಣಿಯ ಹಾನಿಗೆ ಕಾರಣವಾಗುತ್ತದೆ, ಸಾಮಾನ್ಯ ಹೆರಿಗೆಯ ನಂತರ ಲೈಂಗಿಕ ಜೀವನ ಮೊದಲಿನಂತಿರದು ಎನ್ನುವ ನಂಬಿಕೆಗಳು ಗರ್ಭಿಣಿಯರ ಭಯಕ್ಕೆ ಕಾರಣ. ಅನೇಕ ಮಹಿಳೆಯರಲ್ಲಿ ಸಿಸೇರಿಯನ್ ಹೆಚ್ಚು ಸುರಕ್ಷಿತವೆನ್ನುವ ನಂಬಿಕೆ ಇದೆ. ಏಕಕಾಲಕ್ಕೆ ಕುಟುಂಬ ಯೋಜನೆ ಅಥವಾ ಟ್ಯೂಬೆಕ್ಟಮಿ (ಸಂತಾನ ನಿರೋಧ) ಶಸ್ತ್ರಚಿಕಿತ್ಸೆಯಂತಹ ಆಯ್ಕೆಗೆ ಹೋಗಬಹುದು ಎನ್ನುವ ಕಾರಣಕ್ಕೆ ಸಿಸೇರಿಯನ್ ಅನ್ನು ಆಯ್ಕೆ ಮಾಡಿಕೊಳ್ಳುವವರಿದ್ದಾರೆ. ಅನುಭವವಿಲ್ಲದ ಕೆಲ ವೈದ್ಯರಲ್ಲಿಯೂ ಸಾಮಾನ್ಯ ಹೆರಿಗೆ ಮಾಡಿಸುವಾಗ ಉಂಟಾಗಬಹುದಾದ ತೊಡಕುಗಳ ಭಯವಿರುತ್ತದೆ. ಅಂಥವರು ಸಿಸೇರಿಯನ್‌ಗೆ ಹೆಚ್ಚು ಒತ್ತು ಕೊಡುತ್ತಾರೆ. ಆರ್ಥಿಕ ಪ್ರೋತ್ಸಾಹದ ಆಸೆ, ಹೆರಿಗೆ ಮಾಡಿಸುವುದರಲ್ಲಿ ಅನುಭವದ ಕೊರತೆ ಮುಂತಾದ ಕಾರಣಗಳಿಂದಾಗಿ ವೈದ್ಯರು ಸಿಸೇರಿಯನ್ ಹೆರಿಗೆ ಮಾಡಿಸುವುದರತ್ತ ಹೆಚ್ಚು ಒಲವು ತೋರುವುದುಂಟು ಎನ್ನುತ್ತಾರೆ ಡಾ. ಚಂದ್ರಿಕಾ.

ತಡೆಯುವ ಬಗೆ ಹೇಗೆ?

- ಹೆರಿಗೆ ಕೇವಲ ವೈದ್ಯಕೀಯ ಪ್ರಕ್ರಿಯೆಯಲ್ಲ, ಅದೊಂದು ಭಾವನಾತ್ಮಕ ಅನುಭವ ಎನ್ನುವುದನ್ನು ವೈದ್ಯರೂ ಅರ್ಥಮಾಡಿಕೊಳ್ಳಬೇಕು, ಗರ್ಭಿಣಿಯರಿಗೂ ಅರ್ಥಮಾಡಿಸಬೇಕು.
- ಸಿಸೇರಿಯನ್ ತೊಡಕುಗಳ ಬಗ್ಗೆ ಗರ್ಭಿಣಿ ಮತ್ತು ಅವರ ಕುಟುಂಬಕ್ಕೆ ಮಾಹಿತಿ ಹಾಗೂ ಜ್ಞಾನವನ್ನು ನೀಡಬೇಕು.
- ಆರೋಗ್ಯಪೂರ್ಣ ಹೆರಿಗೆಗೆ ಗರ್ಭಿಣಿ ಮತ್ತು ಅವಳ ಸಂಗಾತಿಯನ್ನು ಪ್ರೋತ್ಸಾಹಿಸಬೇಕು.
- ಎರಡೂ ಪ್ರಕಾರದ ಹೆರಿಗೆಗಳಿಗೆ ಏಕರೂಪದ ಶುಲ್ಕಗಳನ್ನು ನಿರ್ಧರಿಸಬೇಕು.
- ಸಿಸೇರಿಯನ್ ಮೂಲಕ ಹೆರಿಗೆ ಮಾಡಿಸುವ ವೈದ್ಯರಿಗೆ ಹಣಕಾಸಿನ ಪ್ರೋತ್ಸಾಹ ನೀಡಲಾಗುತ್ತದೆ. ಇದನ್ನು ನಿಲ್ಲಿಸಬೇಕು.
- ಇನ್‌ಸ್ಟ್ರುಮೆಂಟಲ್ ಹೆರಿಗೆಗಳನ್ನು ನಿರ್ವಹಿಸಲು ಯುವ ವೈದ್ಯರಿಗೆ ಸೂಕ್ತ ತರಬೇತಿ ನೀಡಬೇಕು
- ಹೆರಿಗೆಯ ತೊಡಕುಗಳಿಗೆ ಸಂಬಂಧಿಸಿದ ಕಾನೂನುಗಳನ್ನು ಸರಳೀಕೃತಗೊಳಿಸಬೇಕು.

ಪ್ರತಿಕೂಲ ಪರಿಣಾಮ ಹೆಚ್ಚು

ಸಿಸೇರಿಯನ್ ಪ್ರಕ್ರಿಯೆಯಲ್ಲಿಯೂ ತೊಡಕುಗಳು ಕಾಣಿಸಿಕೊಳ್ಳುತ್ತವೆ. ಸಾಮಾನ್ಯ ಹೆರಿಗೆಗೆ ಹೋಲಿಸಿದರೆ ಈ ಪ್ರಕ್ರಿಯೆಯಿಂದ ದೀರ್ಘಾವಧಿಯ ಪ್ರತಿಕೂಲ ಪರಿಣಾಮಗಳು ಹೆಚ್ಚು. ಇದರಲ್ಲಿ ತಾಯಿಯ ಮರಣ ಮತ್ತು ತೀವ್ರತರವಾದ ಕಾಯಿಲೆಯ ಅಪಾಯವನ್ನು ಅಲ್ಲಗಳೆಯುವಂತಿಲ್ಲ. ರಕ್ತಸ್ರಾವ, ನೋವು, ಅರಿವಳಿಕೆ ಸಮಸ್ಯೆಗಳು, ಗಾಯದ ಸೋಂಕು, ಚೇತರಿಕೆಯಲ್ಲಿ ವಿಳಂಬ, ಬೆನ್ನು ನೋವು ಸೇರಿದಂತೆ ಅನೇಕ ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ಅಷ್ಟಕ್ಕೂ, ಯಾರಿಗೆ ಯಾವ ಹೆರಿಗೆ ಸೂಕ್ತ ಎನ್ನುವುದನ್ನು ಅಂತಿಮವಾಗಿ ತೀರ್ಮಾನಿಸಬೇಕಾಗುವುದು ವೈದ್ಯರೆ. ಅವರು ಪೂರ್ವಗ್ರಹಗಳಿಗೆ ಬಲಿಯಾಗದೆ, ಒತ್ತಡಗಳಿಗೆ ಮಣಿಯದೆ ತಾಯಿ–ಮಗುವಿನ ಒಟ್ಟಾರೆ ಆರೋಗ್ಯ ಮತ್ತು ಸೌಖ್ಯವನ್ನು ಗಮನದಲ್ಲಿಟ್ಟುಕೊಂಡು ತೀರ್ಮಾನ ತೆಗೆದುಕೊಂಡರೆ ಮಾತ್ರ ಈ ವಲಯದಲ್ಲಿ ಬದಲಾವಣೆ ತರಲು ಸಾಧ್ಯ.

ಆರೋಗ್ಯವರ್ಧಕ ಕಷಾಯಗಳು

ನಳಪಾಕ

ಜಾನಕಿ ಎಸ್.

ಈ ಕಾಲದಲ್ಲಿ ಜ್ವರ, ಶೀತ, ಒಣ ಕೆಮ್ಮು.. ಹೀಗೆ ಹಲವು ಆರೋಗ್ಯ ಸಮಸ್ಯೆಗಳು ಬಾಧಿಸುವುದು ಸಾಮಾನ್ಯ. ಇಂಥ ಆರೋಗ್ಯ ಸಮಸ್ಯೆಗಳನ್ನು ಅಲಕ್ಷಿಸಿದರೆ ವಿಪರೀತ ತೊಂದರೆಗೆ ಎಡೆಮಾಡಿಕೊಡುತ್ತದೆ. ಒಮ್ಮೊಮ್ಮೆ ಆಸ್ಪತ್ರೆಗೆ ದಾಖಲಾಗಬೇಕಾದ ಪರಿಸ್ಥಿತಿಯೂ ಬರಬಹುದು.

ಇಂಥ ಕಾಯಿಲೆಗಳ ನಿಯಂತ್ರಣಕ್ಕಾಗಿ ನಿತ್ಯದ ಆಹಾರದ ಜೊತೆ ಜೊತೆಗೆ, ರುಚಿ ರುಚಿಯಾದ ಕಷಾಯಗಳನ್ನು ಮಾಡಿಕೊಂಡು ಆಗಾಗ ಕುಡಿಯುತ್ತಿರಬೇಕು.

ಇದರಿಂದ ಆರೋಗ್ಯಕ್ಕೂ ಒಳ್ಳೆಯದು. ದೇಹದಲ್ಲಿ ರೋಗನಿರೋಧಕ ಶಕ್ತಿಯೂ ಹೆಚ್ಚಾಗುತ್ತದೆ. ಕಾಡುವ ಕಾಯಿಲೆಗಳು ಶಮನವಾಗಿ, ಹೊಸ ಕಾಯಿಲೆಗಳು ದೇಹ ಪ್ರವೇಶಿಸಿದಂತೆ ತಡೆಯುತ್ತವೆ. ನಿತ್ಯದ ಆಹಾರದೊಂದಿಗೆ ಸೇವಿಸಬಹುದಾದ ಕೆಲವು ಕಷಾಯಗಳ ರೆಸಿಪಿ ಇಲ್ಲಿದೆ.

ಕೆಂಪು ಚಂದನ ಕಷಾಯ

ಬೇಕಾಗುವ ಸಾಮಗ್ರಿಗಳು: ಕೆಂಪು ಚಂದನ– ಒಂದು ತುಂಡು, ಹಾಲು – ಒಂದು ಲೋಟ, ಸಕ್ಕರೆ – ಒಂದು ಚಮಚ, ಸಾಣೆಕಲ್ಲು.

ತಯಾರಿಸುವ ವಿಧಾನ: ಒಂದು ಚಮಚ ಹಾಲನ್ನು ಸಾಣೆಕಲ್ಲಿನ ಮೇಲೆ ಹಾಕಿ ಚಂದನದಿಂದ ತೇಯ್ದು ದಪ್ಪಗಿನ ಗಂಧ ತಯಾರಿಸಬೇಕು. ತೇಯ್ದ ಗಂಧವನ್ನು ಉಳಿದ ಹಾಲಿನಲ್ಲಿ ಹಾಕಿ ಸರಿಯಾಗಿ ಕಲಸಿ. ಸಕ್ಕರೆ ಸೇರಿಸಿ ಬಿಸಿ ಮಾಡಿ. ಈ ಸುಗಂಧವಿರುವ ಹಾಲು ಕುಡಿಯಲು ಹಿತವಾಗಿರುತ್ತದೆ. ಬಾಯಿ ಹುಣ್ಣಿನಿಂದ ಬಳಲುವವರಿಗೆ ಈ ಕಷಾಯ ಉತ್ತಮ.

ಮಜ್ಜಿಗೆ ಹುಲ್ಲಿನ ಕಷಾಯ

ಬೇಕಾಗುವ ಸಾಮಗ್ರಿಗಳು: ಮಜ್ಜಿಗೆ ಹುಲ್ಲು – 3 ರಿಂದ 4 ಎಲೆ, ಕಾಳುಮೆಣಸು – 7 ರಿಂದ 8, ಹಸಿ ಶುಂಠಿ – ಅರ್ಧ ತುಂಡು, ಜೀರಿಗೆ – ಕಾಲು ಚಮಚ, ಬೆಲ್ಲದ ಪುಡಿ – ನಾಲ್ಕು ಚಮಚ.

ತಯಾರಿಸುವ ವಿಧಾನ: ಜೀರಿಗೆ, ಕಾಳುಮೆಣಸು, ಶುಂಠಿ ಜಜ್ಜಿ 3 ಲೋಟ ನೀರಿಗೆ ಸೇರಿಸಿ. ಅದಕ್ಕೆ ಎಲೆ ಕತ್ತರಿಸಿ ಹಾಕಿ. ಕುದಿಯಲು ಒಲೆ ಮೇಲೆ ಇಡಿ. ಒಂದು ಕುದಿ ಬಂದ ಮೇಲೆ ಬೆಲ್ಲದ ಪುಡಿ ಸೇರಿಸಿ ಕುದಿಸಬೇಕು.10 ನಿಮಿಷ ಕುದಿಸಿದರೆ ಚೆನ್ನಾಗಿ ಮಜ್ಜಿಗೆ ಹುಲ್ಲಿನ ರಸ ಬಿಟ್ಟುಕೊಂಡು ಕಷಾಯ ತಯಾರಾಗುತ್ತದೆ. ಹಾಲು ಬಿಸಿ ಮಾಡಿ ಕಷಾಯಕ್ಕೆ ಸೇರಿಸಿಕೊಂಡು ಕುಡಿಯಲು ಬಹಳ ರುಚಿ . ಚಳಿಗಾಲದ ದಿನಗಳಲ್ಲಿ ವಾರಕ್ಕೊಮ್ಮೆ ಕುಡಿದರೆ ಒಳ್ಳೆಯದು.

ಒಣದ್ರಾಕ್ಷಿ ಉತ್ತುತ್ತೆ ಕಷಾಯ

ಬೇಕಾಗುವ ಸಾಮಗ್ರಿಗಳು: ಒಣದ್ರಾಕ್ಷಿ – 15, ಉತ್ತುತ್ತೆ – 2, ಕೆಂಪು ಕಲ್ಲುಸಕ್ಕರೆ – 1ರಿಂದ 2 ಹರಳು, ನೀರು – 2 ರಿಂದ 3 ಲೋಟ

ತಯಾರಿಸುವ ವಿಧಾನ: ದ್ರಾಕ್ಷಿ, ಉತ್ತುತ್ತೆಯನ್ನು ಚೆನ್ನಾಗಿ ತೊಳೆದು ನೀರಿನಲ್ಲಿ ನೆನೆಸಿ. ಅದಕ್ಕೆ ಕಲ್ಲುಸಕ್ಕರೆ ಹಾಕಿ 15 ನಿಮಿಷ ಕುದಿಸಿದರೆ ಕಷಾಯ ರೆಡಿ. ದಿನದಲ್ಲಿ ಎರಡು ಮೂರು ಬಾರಿ ಇದನ್ನು ಕುಡಿಯುವುದರಿಂದ ಒಣ ಕೆಮ್ಮು ಕಡಿಮೆ ಆಗುತ್ತದೆ.

ತಿಂಗಳಲ್ಲಿ ಎರಡು ಬಾರಿ ಋತುಚಕ್ರ: ಅಪಾಯವೇ?

ಸ್ಪಂದನ

ಡಾ. ವೀಣಾ ಎಸ್. ಭಟ್

- **ಮೇಡಂ 2018ರಲ್ಲಿ ಮಗು ಆಯ್ತು. ಋತುಚಕ್ರದಲ್ಲಿ ಯಾವುದೇ ರೀತಿಯ ಬದಲಾವಣೆ ಇಲ್ಲ. ಆದರೆ ಹೋದ ತಿಂಗಳು ಮಾತ್ರ ಒಂದೇ ತಿಂಗಳಲ್ಲಿ ಎರಡು ಸಲ ಋತುಚಕ್ರವಾಗಿದೆ. ಮತ್ತೆ ಮಕ್ಕಳು ಆಗಲಿಲ್ಲ ದಯವಿಟ್ಟು ಸಲಹೆಕೊಡಿ?**

ಅನುಶ್ರೀ, ಧಾರವಾಡ

ಸಾಮಾನ್ಯವಾಗಿ ತಿಂಗಳಲ್ಲಿ ಎರಡು ಬಾರಿ ಋತುಚಕ್ರವಾಗುವುದು ಅಂಡಾಶಯದಲ್ಲೇನಾದರೂ ನೀರುಗುಳ್ಳೆಗಳಾದಲ್ಲಿ(ಸಿಸ್ಟ್) ಅಥವಾ ಗರ್ಭಕೋಶಕ್ಕೆ ಸೋಂಕುಂಟಾದ ಸಂದರ್ಭಗಳಲ್ಲಿ ನೀವು ಯಾವುದಕ್ಕೂ ತಜ್ಞ ವೈದ್ಯರ ಹತ್ತಿರ ಕೂಲಂಕಶವಾಗಿ ಪರೀಕ್ಷಿಸಿಕೊಳ್ಳಿ. ಹೆಚ್ಚಿನ ಸಂದರ್ಭಗಳಲ್ಲಿ ವೈದ್ಯರು ಪರೀಕ್ಷಿಸಿ ಅವಶ್ಯವಿದ್ದಲ್ಲಿ ಸೂಕ್ತ ಆ್ಯಂಟಿಬಯೋಟಿಕ್ ಬರೆದುಕೊಡುತ್ತಾರೆ. ನೀವು ಇನ್ನೊಂದು ಮಗು ಪಡೆಯಲು ಪ್ರಯತ್ನಿಸುತ್ತಿದ್ದರೆ ಗರ್ಭಧಾರಣೆಗೆ ಆರುವಾರ ಮೊದಲೇ ಫೋಲಿಕ್ ಆ್ಯಸಿಡ್‌ನ ಐದು ಮಿಲಿ ಗ್ರಾಂ ಮಾತ್ರೆಗಳನ್ನು ಪ್ರತಿದಿನವೂ ಸೇವಿಸಿ. ನಿಮಗೆ ಖಂಡಿತ ಇನ್ನೊಂದು ಮಗು ಬೇಗನೆ ಆಗಲಿ.

- **ನನಗೆ ಈಗ 32ವರ್ಷ. 20ವರ್ಷದ ಹುಡುಗಿಯನ್ನು ಮದುವೆ ಆದರೆ ಹುಡುಗಿಗೆ ಮಕ್ಕಳಾಗುವ ಸಂಭವ ಕಡಿಮೆ ಆಗುತ್ತದೆಯೇ ಅಥವಾ ಅವಳಿಗೆ ಏನಾದರು ತೊಂದರೆ ಆಗಬಹುದಾ ಮುಂದೆ.**

ಹೆಸರು, ಊರುಬೇಡ

ನಿಮಗಿಬ್ಬರಿಗೂ ಹನ್ನೆರಡು ವರ್ಷ ವಯಸ್ಸಿನ ಅಂತರವಿದ್ದರೂ ಮಕ್ಕಳಾಗುವುದಕ್ಕೆ ಯಾವುದೇ ತೊಂದರೆ ಇಲ್ಲ. ಸಹಜವಾಗಿ ಆರೋಗ್ಯವಂತ ಪುರುಷರಲ್ಲಿ (ವಯಸ್ಸಿಗೆ ತಕ್ಕ ಸಮತೂಕ ಹೊಂದಿದ್ದು ಯಾವುದೇ ದುಶ್ಚಟ ಹೊಂದಿಲ್ಲದಿದ್ದಲ್ಲಿ) ಸಂತಾನೋತ್ಪತ್ತಿ ಸಾಮರ್ಥ್ಯ 40ರಿಂದ50 ವರ್ಷಗಳವರೆಗೂ ಉತ್ತಮವಾಗಿರುತ್ತದೆ. ನೀವು ಆ ಬಗ್ಗೆ ಯೋಚಿಸದೇ ಒಂದು ವರ್ಷದವರೆಗೂ ನೀವಿಬ್ಬರೂ ಮಕ್ಕಳನ್ನು ಪಡೆಯಲು ಸಹಜವಾಗಿ ಪ್ರಯತ್ನಿಸಿದಾಗಲೂ ಮಕ್ಕಳಾಗದಿದ್ದಲ್ಲಿ ಖಂಡಿತವಾಗಿಯೂ ತಜ್ಞವೈದ್ಯರ ಹತ್ತಿರ ತಪಾಸಣೆ ಮಾಡಿಸಿಕೊಳ್ಳಿ ನಿಮ್ಮಿಬ್ಬರಲ್ಲಿ ಏನೂ ತೊಂದರೆ ಇಲ್ಲದಿದ್ದರೆ ಒಂದು ವರ್ಷದೊಳಗೆ ನಿಮಗೆ ಮಗು ಪಡೆಯಲು ಸಾಧ್ಯವಾಗುತ್ತದೆ. ನಿಮ್ಮ ಪತ್ನಿಗೂ ಕೂಡಾ ಮುಂದೆ ತೊಂದರೆಯಾಗುವ ಸಂಭವ ಕಡಿಮೆ.

- **ಮೇಡಂ ನನಗೆ 25ವರ್ಷ. ಮದುವೆಯಾಗಿ ಒಂದು ವರ್ಷ, ಇನ್ನೂ ಮಕ್ಕಳಿಲ್ಲ. ನನಗೆ ಪ್ರತಿಬಾರಿ ಜನನಾಂಗದ ಭಾಗದಲ್ಲಿ ಹೇರ್‌ರಿಮೂವಿಂಗ್‌ಕ್ರೀಮ್ ಉಪಯೋಗಿಸಿದಾಗ ಒಂದೆರಡು ದಿನ ಉರಿ, ಕಡಿತ ಎಲ್ಲಾ ಆಗುತ್ತದೆ. ಆಗ ನಾನು ಬೆಟ್ನೋವೇಟ್ ಕ್ರೀಮ್ ಹಚ್ಚಿದಾಗ ಸರಿಹೋಗುತ್ತದೆ. ಡಾಕ್ಟರ್ ಹತ್ತಿರ ಹೋಗಲು ಸಂಕೋಚ. ಏನು ಮಾಡಲಿ?**

ಹೆಸರುಬೇಡ, ಊರುಬೇಡ

ನಿಮಗೆ ನೀವು ಹಚ್ಚಿರುವ ಕ್ರೀಮ್‌ನಿಂದ ಅಲರ್ಜಿ ಆಗಿರಬಹುದು ಅನಿಸುತ್ತದೆ. ನೀವು ಅಷ್ಟೇನೂ ನಿಯಮಿತವಾಗಿ ಯೋನಿಭಾಗದ ಕೂದಲು ತೆಗೆಯುವ ಅಗತ್ಯವಿಲ್ಲ. ದೇಹದ ಬೇರೆ ಬೇರೆ ಭಾಗದ ಕೂದಲಿನ ಹಾಗೆ ಯೋನಿಯ ಕೂದಲು ಕೂಡಾ ಧೂಳು, ಬೆವರುಗಳನ್ನೆಲ್ಲ ಹಿಡಿದಿಟ್ಟು, ಲೈಂಗಿಕ ಸೋಂಕನ್ನೂ ಮೂತ್ರದ ಸೋಂಕನ್ನೂ ತಡೆಗಟ್ಟಲು ಸಹಾಯ ಮಾಡುತ್ತದೆ. ಆದರೆ ಈ ಭಾಗದ ಕೂದಲು ಶರೀರದ ಬೇರೆ ಭಾಗಕ್ಕಿಂತ ಹೆಚ್ಚು ವಾಸನೆ ಹೊಂದಿರಬಹುದು. ಅದಕ್ಕಾಗಿ ನೀವು ಆ ಜಾಗವನ್ನು ಸ್ವಚ್ಛವಾಗಿ ನೀರಿನಿಂದ ನಿಯಮಿತವಾಗಿ ತೊಳೆಯುತ್ತಿದ್ದರೆ ಸಾಕು. ಅಷ್ಟೇ ಹೊರತು ವೈದ್ಯಕೀಯ ಕಾರಣಕ್ಕಾಗಿ, ಸ್ವಚ್ಛತೆಯ ಕಾರಣಕ್ಕಾಗಿ ಕೂದಲನ್ನು ತೆಗೆಯಬೇಕೆಂದೇನಿಲ್ಲ. ಜನಸಾಮಾನ್ಯರಲ್ಲಿ ಅವರದ್ದೇ ಆದ ಕಾರಣಕ್ಕಾಗಿ, ಲೈಂಗಿಕವಾಗಿ ಆತ್ಮವಿಶ್ವಾಸ ಹೆಚ್ಚಿಸುತ್ತದೆ ಎಂಬ ಭಾವನೆಯಿಂದ ಅಥವಾ ಹಾಗೆ ಮಾಡಿದರೆ ನೈರ್ಮಲ್ಯತೆಯ ಭಾವನೆ ಉಂಟಾಗಬಹುದು ಎನ್ನುವುದಕ್ಕಾಗಿ ಕೂದಲು ತೆಗೆಯಬೇಕೆ ಹೊರತು ವೈದ್ಯಕೀಯ ಕಾರಣಕ್ಕಲ್ಲ. ಅದಕ್ಕಾಗಿಯೇ ಮೀಸಲಾದ ಒಳ್ಳೆಯ ಕತ್ತರಿ ಅಥವಾ ಟ್ರಿಮ್ಮರ್‌ನಿಂದ ಸ್ವಚ್ಛಗೊಳಿಸುವುದು ಉತ್ತಮ ವಿಧಾನ. ಶೇವಿಂಗ್ ಕ್ರೀಮ್, ರೇಜರ್ ಇತ್ಯಾದಿ ಬಳಸುವ ಅವಶ್ಯಕತೆ ಇಲ್ಲ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಸ್ಪಂದನ...

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿದ್ದರೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.in ಗೆ ಕಳಿಸಬಹುದು.

ಪರಸ್ಪರ ಅಂತರ ಕಾಯ್ದುಕೊಳ್ಳಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಇಬ್ರಾಹಿಂಗೆ ರಾಜ್ಯಸಭಾ ಸದಸ್ಯತ್ವ ತಪ್ಪಿಸಿದ್ದೇ ದೇವೇಗೌಡರು: ಸಿದ್ದರಾಮಯ್ಯ

‘ಯಾರಿಂದ ಯಾರೂ ತಬ್ಬಲಿಯಾಗುವುದಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜನರ ಪ್ರೀತಿ ಇರುವವರೆಗೆ ಯಾರಿಂದ ಯಾರೂ ತಬ್ಬಲಿಯಾಗುವುದಿಲ್ಲ. ನಾನಾದರೂ ಅಷ್ಟೇ, ಸಿ.ಎಂ.ಇಬ್ರಾಹಿಂ ಆದರೂ ಅಷ್ಟೇ. ಜನರ ಪ್ರೀತಿಯೇ ಮುಖ್ಯ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಸಿದ್ದರಾಮಯ್ಯ

ಪರಿಷತ್ ವಿರೋಧ ಪಕ್ಷದ ನಾಯಕನ ಹುದ್ದೆ ಕೈತಪ್ಪಿದ್ದರಿಂದ ಕಾಂಗ್ರೆಸ್ ತ್ಯಜಿಸುವುದಾಗಿ ಸಿ.ಎಂ.ಇಬ್ರಾಹಿಂ ನೀಡಿರುವ ಹೇಳಿಕೆ ಕುರಿತು ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ‘ಇಬ್ರಾಹಿಂ ಪಕ್ಷ ತೊರೆಯುವುದಿಲ್ಲ, ಜೆಡಿಎಸ್‌ಗೂ ಹೋಗುವುದಿಲ್ಲ. ಹಿಂದೆ ಅವರಿಗೆ ರಾಜ್ಯಸಭಾ ಸದಸ್ಯ ಸ್ಥಾನ ತಪ್ಪಿಸಿದ್ದೇ ಎಚ್‌.ಡಿ. ದೇವೇಗೌಡರು’ ಎಂದರು.

‘ಇಬ್ರಾಹಿಂ ಕೋಪದಲ್ಲಿ ಮಾತನಾಡಿರಬಹುದು. ಅವರೊಂದಿಗೆ ಮಾತನಾಡುತ್ತೇನೆ. ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತದೆ ಎಂಬುದು ಅವರಿಗೂ ಗೊತ್ತಿದೆ’ ಎಂದು ಹೇಳಿದರು.

‘ಬಾದಾಮಿ ಕ್ಷೇತ್ರದಿಂದ ಚುನಾವಣೆಯಲ್ಲಿ ಸ್ಪರ್ಧಿಸಲು ನನಗೆ ಹೇಳಿದವರಲ್ಲಿ ಇಬ್ರಾಹಿಂ ಕೂಡಾ ಒಬ್ಬರು. ಅವರು ನನಗೆ ಒಳ್ಳೆಯ ಸ್ನೇಹಿತ. ನನ್ನ ಬಗ್ಗೆ ಏನೇ ಹೇಳಿದರೂ ನನಗೆ ಶುಭ ಹಾರೈಸಿದಂತೆ ಎಂದುಕೊಳ್ಳುವೆ’ ಎಂದರು.

ನಾರಾಯಣ ಗುರುಗಳ ಸ್ತಬ್ಧಚಿತ್ರಕ್ಕೆ ಸಂಬಂಧಿಸಿ ಸಚಿವ ವಿ.ಸುನಿಲ್ ಕುಮಾರ್ ಟೀಕೆಗಳಿಗೆ ಪ್ರತಿಕ್ರಿಯಿಸಿ, ‘ಅವರು ಹಿಂದುತ್ವದ ಹೆಸರಿನಲ್ಲಿ ಸಮಾಜ ಒಡೆಯುವವರು. ನಾವು ಹಿಂದೂಗಳು ಒಟ್ಟಿಗೆ ಬಾಳಲು ಕರೆ ಕೊಡುವವರು’ ಎಂದರು.

ಹಿಂದೂ ಬೇರೆ, ಹಿಂದುತ್ವ ಬೇರೆ. ಕರಾವಳಿ ಯಾರ ಭದ್ರಕೋಟೆಯೂ ಅಲ್ಲ. 2013ರ ಚುನಾವಣೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಂಗ್ರೆಸ್ ಏಳು ಸ್ಥಾನ ಗೆದ್ದಿತ್ತು. ಬಿಜೆಪಿ ಗೆದ್ದಿದ್ದು ಒಂದೇ ಕ್ಷೇತ್ರದಲ್ಲಿ ಎಂದು ಹೇಳಿದರು.

ಕ್ರಮಕ್ಕೆ ಆಗ್ರಹ: ಗಣರಾಜ್ಯೋತ್ಸವದ ದಿನದಂದು ಡಾ.ಅಂಬೇಡ್ಕರ್ ಅವರ ಭಾವಚಿತ್ರ ತೆಗೆಸಿದ ರಾಯಚೂರು ಜಿಲ್ಲಾ ನ್ಯಾಯಾಧೀಶರ ಕ್ರಮ ಅಕ್ಷಮ್ಯ ಅಪರಾಧ. ಅವರ ವಿರುದ್ಧ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯವರು ಕ್ರಮ ಜರುಗಿಸಬೇಕು ಎಂದು ಸಿದ್ದರಾಮಯ್ಯ ಆಗ್ರಹಿಸಿದರು.

ಯಾರು ಪಕ್ಷ ಬಿಟ್ಟರೂ ಚಿಂತೆ ಇಲ್ಲ: ಕುಮಾರಸ್ವಾಮಿ

ರಾಮನಗರ: ‘ಯಾರು ಜೆಡಿಎಸ್ ಬಿಟ್ಟರೂ ಚಿಂತೆ ಇಲ್ಲ. ಪಕ್ಷದ ಕಾರ್ಯಕರ್ತರಿಗೆ ನಾಯಕರನ್ನು ಬೆಳೆಸುವ ಶಕ್ತಿ ಇದೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

ಚನ್ನಪಟ್ಟಣದಲ್ಲಿ ಶುಕ್ರವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು, ‘ನನಗೆ ನನ್ನ ಪಕ್ಷ, ಕಾರ್ಯಕರ್ತರು ಮುಖ್ಯ’ ಎಂದರು.

ಸಿ.ಎಸ್.ಪುಟ್ಟರಾಜು ಹಾಗೂ ಇತರರು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿರುವ ಕುರಿತು ಪ್ರತಿಕ್ರಿಯಿಸಿ, ‘ಈ ಬಗ್ಗೆ ನನಗೆ ಗೊತ್ತಿಲ್ಲ. ಸಿದ್ದರಾಮಯ್ಯ ಯಾರನ್ನು ಭೇಟಿ ಮಾಡಿದರೆ ಅದನ್ನು ಕಟ್ಟಿಕೊಂಡು ನನಗೇನು ಆಗಬೇಕಿಲ್ಲ’ ಎಂದರು. ಸಿ.ಎಂ.ಇಬ್ರಾಹಿಂ ಜೆಡಿಎಸ್ ಸೇರ್ಪಡೆ ಕುರಿತು, ‘ದೇವೇಗೌಡರ ಆಸೆಯಂತೆ ಜೆಡಿಎಸ್ ಅಧಿಕಾರಕ್ಕೆ ಬರಬೇಕು. ಹೀಗಾಗಿ, ಪಕ್ಷಕ್ಕೆ ಬರುತ್ತೇನೆ ಎಂದಿದ್ದಾರೆ. ಅವರನ್ನು ಸ್ವಾಗತಿಸುತ್ತೇನೆ’ ಎಂದರು.

‘ಬಿ.ಎಸ್‌.ಯಡಿಯೂರಪ್ಪ ಅವರ ಮೊಮ್ಮಗಳ ಆತ್ಮಹತ್ಯೆ ಆಘಾತಕಾರಿ ಸಂಗತಿ. ದೇವರು ಈ ನೋವು ಭರಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ಕೊಡಲಿ’ ಎಂದರು.

‘ಜೆಡಿಎಸ್‌ನಲ್ಲೇ ರಾಜಕೀಯ ಜೀವನ ಅಂತ್ಯ’

ಮಂಡ್ಯ: ‘ನನ್ನ ರಾಜಕೀಯ ಜೀವನ ಜೆಡಿಎಸ್‌ನಲ್ಲೇ ಆರಂಭವಾಗಿದ್ದು, ಅಲ್ಲಿಯೇ ಕೊನೆಯಾಗಲಿದೆ. ಕಾಂಗ್ರೆಸ್ ಸೇರುವ ಪ್ರಶ್ನೆಯೇ ಇಲ್ಲ’ ಎಂದು ಮೇಲುಕೋಟೆ ಕ್ಷೇತ್ರದ ಜೆಡಿಎಸ್ ಶಾಸಕ ಸಿ.ಎಸ್.ಪುಟ್ಟರಾಜು ಹೇಳಿದ್ದಾರೆ.

ಸಿ.ಎಸ್. ಪುಟ್ಟರಾಜು

ಸುದ್ದಿಗಾರರೊಡನೆ ಶುಕ್ರವಾರ ಮಾತನಾಡಿದ ಅವರು, ‘ಸಿದ್ದರಾಮಯ್ಯ ಅವರನ್ನು ಭೇಟಿಯಾಗುವ ವಿಷಯವನ್ನು ಎಚ್.ಡಿ.ದೇವೇಗೌಡ ಅವರಿಗೆ ತಿಳಿಸಿದ್ದೆ. ನನ್ನ ಕ್ಷೇತ್ರದ ಡಿಂಕಾ ಮಲ್ಲಿಗೆರೆ ಗ್ರಾಮದಲ್ಲಿ ಕುರುಬ ಸಮುದಾಯ ಪ್ರಬಲವಾಗಿದೆ. ಅಲ್ಲಿ ಸಿದ್ದರಾಮೇಶ್ವರ ದೇವಾಲಯದ ಉದ್ಘಾಟನೆಗೆ ಆಹ್ವಾನಿಸಲು ತೆರಳಿದ್ದೆ’ ಎಂದರು. ‘ಅಷ್ಟಕ್ಕೇ ಕಾಂಗ್ರೆಸ್ ಸೇರುತ್ತಿದ್ದೇನೆ ಎಂದು ಸುದ್ದಿ ಹರಡಿದ್ದಾರೆ. 1978ರಲ್ಲಿ ಜನತಾ ಪಕ್ಷದಿಂದ ರಾಜಕಾರಣಕ್ಕೆ ಬಂದೆ. ಇಂದಿನವರೆಗೂ ಪಕ್ಷ ಬಿಡುವ ಬಗ್ಗೆ ಯೋಚಿಸಿಲ್ಲ’ ಎಂದರು.

ಕೋವಿಡ್ ಹತೋಟಿಗೆ ಬಂದ ನಂತರ ಫೆ.15 ಅಥವಾ ಮಾರ್ಚ್ ಮೊದಲ ವಾರ ಕಳಸದ ಹದಿನೈದು ಕಡೆ ನೀರು ಸಂಗ್ರಹಿಸುವ ಜಲಧಾರೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು

ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ನಾಯಕ

ನಂಬಿದವರ ಬೆಳೆಸದ ಸಿದ್ದರಾಮಯ್ಯ: ಎಚ್‌ಡಿಕೆ

ಬೆಂಗಳೂರು: ‘ಸಿದ್ದರಾಮಯ್ಯ ಅವರು ಇಬ್ರಾಹಿಂ ಅವರಿಗೆ ಪರಿಷತ್ತಿನ ವಿರೋಧಪಕ್ಷದ ನಾಯಕ ಸ್ಥಾನ ಕೊಡಿಸಬಹುದಿತ್ತು. ಅವರು ತಾವು ಬೆಳೆದರೆ ಹೊರತು ನಂಬಿಸಿ ಕಾಂಗ್ರೆಸ್‌ಗೆ ಕರೆದೊಯ್ದವರ ಬೆಳೆಸಲಿಲ್ಲ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಟೀಕಿಸಿದರು.

ಕಾಂಗ್ರೆಸ್ ತೊರೆಯುವುದಾಗಿ ಹೇಳಿರುವ ಸಿ.ಎಂ.ಇಬ್ರಾಹಿಂ ಅವರ ಮನೆಗೆ ಶುಕ್ರವಾರ ಭೇಟಿ ನೀಡಿ ಚರ್ಚಿಸಿದ ಕುಮಾರಸ್ವಾಮಿ, ಬಳಿಕ ಸುದ್ದಿಗಾರರ ಜತೆ ಮಾತನಾಡಿದರು.

‘ಇಬ್ರಾಹಿಂ ಅವರು ಇನ್ನೂ ತೀರ್ಮಾನ ತೆಗೆದುಕೊಳ್ಳಬೇಕಿದೆ. ಒತ್ತಡ ಹಾಕಲಾಗದು. ಹಿಂದಿನ ಕೆಲವು ಘಟನೆಗಳನ್ನು ಮೆಲುಕು ಹಾಕಿ, ತಮ್ಮ ನೋವು ಹೇಳಿಕೊಂಡರು’ ಎಂದರು.

ನ್ಯಾ. ಶಿವರಾಜ್ ಪಾಟೀಲ್‌ಗೆ ಕಸಾಪ ದತ್ತಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ ‘ಕೆಂಗಲ್ ಹನುಮಂತಯ್ಯ ದತ್ತಿ ಪ್ರಶಸ್ತಿ’ಗೆ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ್ ಆಯ್ಕೆಯಾಗಿದ್ದಾರೆ.



ಶಿವರಾಜ್ ಪಾಟೀಲ್

ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದಲ್ಲಿ ಆಯ್ಕೆ ನಡೆದಿದೆ. ಪ್ರಶಸ್ತಿ ₹ 25 ಸಾವಿರ ನಗದು ಒಳಗೊಂಡಿದೆ. ಎಂದು ಪ್ರಕಟಣೆ ತಿಳಿಸಿದೆ.

ನ್ಯಾ. ಮಲ್ಲಿಕಾರ್ಜುನಗೌಡ ವಿರುದ್ಧ ಎಫ್‌ಐಆರ್ ದಾಖಲಿಸಲು ಒತ್ತಾಯ

ರಾಯಚೂರಿನಲ್ಲಿ ಧರಣಿ, ಮಾನ್ವಿ, ಸಿರವಾರ ಬಂದ್

ಪ್ರಜಾವಾಣಿ ವಾರ್ತೆ

ರಾಯಚೂರು: ಗಣರಾಜ್ಯೋತ್ಸವ ಸಮಾರಂಭದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರ ತೆರವು ಮಾಡಿದ ಘಟನೆಗೆ ಸಂಬಂಧಿಸಿದಂತೆ ನ್ಯಾಯಾಧೀಶ ಮಲ್ಲಿಕಾರ್ಜುನಗೌಡ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಒತ್ತಾಯಿಸಿ ರಾಯಚೂರಿನಲ್ಲಿ ದಲಿತಪರ ಸಂಘಟನೆಗಳ ಒಕ್ಕೂಟದವರು ಶುಕ್ರವಾರ ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದ್ದಾರೆ.

‘ಎಫ್‌ಐಆರ್ ದಾಖಲಿಸದಿದ್ದರೆ ರಾಜ್ಯವ್ಯಾಪಿ ಹೋರಾಟ ನಡೆಸುತ್ತೇವೆ’ ಎಂದೂ ಎಚ್ಚರಿಕೆ ನೀಡಿದ್ದಾರೆ.

‘ನ್ಯಾಯಾಧೀಶರ ವಿರುದ್ಧ ಸಲ್ಲಿಸಿರುವ ದೂರು ಸ್ವೀಕರಿಸಿ, ಮುಂದಿನ ಕ್ರಮಕ್ಕೆ ಕೋರಿ ಹೈಕೋರ್ಟ್ ರಿಜಿಸ್ಟ್ರಾರ್ ಅವರಿಗೆ ಕಳುಹಿಸಲಾಗಿದೆ. ಪ್ರತಿಕ್ರಿಯೆ ಬಂದ ಬಳಿಕ ಮುಂದುವರಿಯಲಾಗುವುದು’ ಎಂದು ಸದರ್ ಬಜಾರ್ ಠಾಣೆ ಪೊಲೀಸರು ತಿಳಿಸಿದ್ದಾರೆ.

ಜಿಲ್ಲೆಯ ವಿವಿಧೆಡೆ ಪ್ರತಿಭಟನೆಗಳು ಮುಂದುವರಿದಿವೆ. ಮಾನ್ವಿ, ಸಿರವಾರಗಳಲ್ಲಿ ಬಂದ್ ನಡೆಸಲಾಯಿತು. ಮಧ್ಯಾಹ್ನದ ವರೆಗೆ ವಹಿವಾಟು ಹಾಗೂ ವಾಹನ ಸಂಚಾರ ಸ್ಥಗಿತಗೊಳಿಸಲಾಗಿತ್ತು.

ಕಲಬುರಗಿ, ಯಾದಗಿರಿ, ಬೀದರ್, ಕೊಪ್ಪಳ ಜಿಲ್ಲೆಗಳ ವಿವಿಧೆಡೆಯೂ ಪ್ರತಿಭಟನೆ ನಡೆದವು.

ರಾಯಚೂರು ಜಿಲ್ಲೆ ಸಿಂಧನೂರಿನ ಮಿನಿವಿಧಾನಸೌಧ ಆವರಣದಲ್ಲಿ ದಲಿತ ವಿದ್ಯಾರ್ಥಿ ಪರಿಷತ್ ಹಾಗೂ ಅಂಬೇಡ್ಕರ್ ವಸತಿ ನಿಲಯದ ವಿದ್ಯಾರ್ಥಿಗಳು ನ್ಯಾಯಾಧೀಶ ಮಲ್ಲಿಕಾರ್ಜುನಗೌಡ ವಜಾಕ್ಕೆ ಆಗ್ರಹಿಸಿ ಪ್ರತಿಭಟನೆ ನಡೆಸಿದರು

ಬಿಎಸ್‌ವೈ ಮೊಮ್ಮಗಳ ನಿಗೂಢ ಸಾವು

ಒಂದನೇ ಪುಟದಿಂದ

‘ನೀರಜ್ ಅವರು ಶುಕ್ರವಾರ ಬೆಳಿಗ್ಗೆ ಆಸ್ಪತ್ರೆಗೆ ಹೋಗಿದ್ದರು. ಇಬ್ಬರು ಕೆಲಸದವರು ಮಾತ್ರ ಮನೆಯಲ್ಲಿದ್ದರು. ಒಬ್ಬರು, ಮಗುವನ್ನು ಆಡಿಸುತ್ತಿದ್ದರು. ಸೌಂದರ್ಯ ಅವರು ಕೊಠಡಿಯೊಳಗೆ ತೆರಳಿದ್ದರು.’

‘ತಿಂಡಿ ಸಿದ್ಧಪಡಿಸಿದ್ದ ಕೆಲಸದ ಮಹಿಳೆ, ಸೌಂದರ್ಯ ಅವರಿಗೆ ಕೊಡಲು ಹೋಗಿದ್ದರು. ಆದರೆ, ಅವರು ಕೊಠಡಿ ಬಾಗಿಲು ತೆರೆದಿರಲಿಲ್ಲ. ಗಾಬರಿಗೊಂಡ ಮಹಿಳೆ, ನೀರಜ್ ಅವರಿಗೆ ಕರೆ ಮಾಡಿ ಮನೆಗೆ ಕರೆಸಿಕೊಂಡಿದ್ದರು. ನಂತರ, ಅಪಾರ್ಟ್‌ಮೆಂಟ್ ಕೆಲಸಗಾರರೊಬ್ಬರು ಬಾಲ್ಕನಿ ಮೂಲಕ ಕೊಠಡಿಯೊಳಗೆ ಹೋಗಿದ್ದರು. ಫ್ಯಾನ್‌ಗೆ ನೇಣು ಬಿಗಿದ ಸ್ಥಿತಿಯಲ್ಲಿ ಸೌಂದರ್ಯ ಇರುವುದು ಕಂಡಿತ್ತು. ಆ ಕೆಲಸಗಾರನೇ, ಕೊಠಡಿ ಬಾಗಿಲು ತೆರೆದಿದ್ದರು. ಪೊಲೀಸ್ ಠಾಣೆಗೂ ವಿಷಯ ತಿಳಿಸಿದ್ದರು’ ಎಂದೂ ಪೊಲೀಸ್ ಅಧಿಕಾರಿ ವಿವರಿಸಿದರು.

‘ಪತಿ ಹಾಗೂ ಇತರರು, ನೇಣಿನಿಂದ ಇಳಿಸಿ ಸೌಂದರ್ಯ ಅವರನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ದಿದ್ದರು. ಅವರು ಮೃತಪಟ್ಟಿರುವುದಾಗಿ ವೈದ್ಯರು ಹೇಳಿದ್ದರು. ನಂತರವೇ ಮೃತದೇಹವನ್ನು ಬೌರಿಂಗ್ ಆಸ್ಪತ್ರೆಗೆ ಸಾಗಿಸಲಾಗಿತ್ತು. ಅಲ್ಲಿಯೇ ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಸಂಬಂಧಿಕರಿಗೆ ಹಸ್ತಾಂತರಿಸಲಾಯಿತು’ ಎಂದೂ ಹೇಳಿದರು. ‘ಸೌಂದರ್ಯ ಅವರದ್ದು ಆತ್ಮಹತ್ಯೆಯೋ ಅಥವಾ ಬೇರೆ ಏನಾದರೂ ಕಾರಣ ಇದೆಯೋ ಎಂಬುದು ತನಿಖೆಯಿಂದ ತಿಳಿಯಬೇಕಿದೆ. ಮರಣೋತ್ತರ ಪರೀಕ್ಷೆ ವರದಿ ಬಂದ ನಂತರ, ನಿಖರ ಮಾಹಿತಿ ಲಭ್ಯವಾಗಲಿದೆ’ ಎಂದೂ ತಿಳಿಸಿದರು.

ಅಂತ್ಯಕ್ರಿಯೆ: ಬೆಂಗಳೂರು ಉತ್ತರ ತಾಲ್ಲೂಕಿನ ಅಬ್ಬಿಗೆರೆಯಲ್ಲಿರುವ ಪತಿ ನೀರಜ್ ಮಾಲೀಕತ್ವದ ‘ಕಲ್ಪವೃಕ್ಷ’ ಫಾರ್ಮ್ ಹೌಸ್ ಜಾಗದಲ್ಲಿ ಅಂತ್ಯಕ್ರಿಯೆಯನ್ನು ಶುಕ್ರವಾರ ರಾತ್ರಿಯೇ ಕುಟುಂಬಸ್ಥರು ನೆರವೇರಿಸಿದರು.

‘ತಡವಾಗಿ ಹೋದ ಪೊಲೀಸರು’

‘ಮನೆಯಿಂದ ಮೃತದೇಹ ಸಾಗಿಸಿ ಮೂರು ಗಂಟೆ ಬಳಿಕ ಪೊಲೀಸರು, ಮನೆಗೆ ಬಂದಿದ್ದರು. ಅಷ್ಟರಲ್ಲಿ ಹಲವರು ಮನೆ, ಘಟನೆ ನಡೆದ ಕೊಠಡಿಯಲ್ಲೆಲ್ಲ ಓಡಾಡಿದ್ದರು’ ಎಂದು ಸ್ಥಳೀಯರೊಬ್ಬರು ಹೇಳಿದರು.

‘ವಿಷಯ ತಿಳಿದ ಕೂಡಲೇ ಮನೆ ಪ್ರವೇಶವನ್ನು ನಿರ್ಬಂಧಿಸಬೇಕಿತ್ತು. ಪುರಾವೆಗಳನ್ನು ಸಂರಕ್ಷಿಸಬೇಕಿತ್ತು. ಈ ಕೆಲಸವನ್ನು ಪೊಲೀಸರು ಮಾಡಿಲ್ಲ. ಎಲ್ಲ ಮುಗಿದ ಮೇಲೆ ಬಂದು, ಕೊಠಡಿಗೆ ಬೀಗ ಹಾಕಿಕೊಂಡು ಹೋಗಿದ್ದಾರೆ’ ಎಂದೂ ದೂರಿದರು. ಈ ಬಗ್ಗೆ ಪ್ರತಿಕ್ರಿಯಿಸಿದ ಪೊಲೀಸ್ ಅಧಿಕಾರಿ, ‘ಜೀವ ಇರಬಹುದೆಂದು ತಿಳಿದು ಮನೆಯವರೇ ಸೌಂದರ್ಯ ಅವರನ್ನು ಆಸ್ಪತ್ರೆಗೆ ಕರೆದೊಯ್ದಿದ್ದರು. ವಿಷಯ ಗೊತ್ತಾಗುತ್ತಿದ್ದಂತೆ ಸಿಬ್ಬಂದಿ ಸ್ಥಳಕ್ಕೆ ಹೋಗಿ, ತನಿಖಾ ಪ್ರಕ್ರಿಯೆ ನೆರವೇರಿಸಿದ್ದಾರೆ’ ಎಂದರು.

ಬಿಎಸ್‌ವೈಗೆ ಮೋದಿ ಸಾಂತ್ವನ

ಬೆಂಗಳೂರು: ಬಿಜೆಪಿ ಶಾಸಕ ಬಿ.ಎಸ್‌.ಯಡಿಯೂರಪ್ಪ ಅವರ ಮೊಮ್ಮಗಳು ಡಾ.ಸೌಂದರ್ಯ ಅವರ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಯಡಿಯೂರಪ್ಪ ಅವರಿಗೆ ದೂರವಾಣಿ ಕರೆ ಮಾಡಿ ಸಾಂತ್ವನ ಹೇಳಿದ್ದಾರೆ.

ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ.ದೇವೇಗೌಡ, ರಾಜ್ಯಪಾಲ ಥಾವರ ಚಂದ್ ಗೆಹಲೋತ್, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಶಿವಕುಮಾರ್ ಅವರು ಯಡಿಯೂರಪ್ಪ ಅವರಿಗೆ ಸಾಂತ್ವನ ಹೇಳಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಕುಂಚಗಾರನ ಸಂಚಿಯಿಂದ... ಬಿ.ಕೆ.ಎಸ್. ವರ್ಮಾ ಮುಖಾಮುಖಿ

ಸೆಲೆಬ್ರಿಟಿ LIVE ಬೆಳಿಗ್ಗೆ 11ರಿಂದ 12

ಪಾಡ್‌ಕಾಸ್ಟ್: ಬೆಳಿಗ್ಗೆ 9 ಪ್ರಚಲಿತ, ಬೆಳಿಗ್ಗೆ 9.30 ಸಂಪಾದಕೀಯ, ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 ಪ್ರಜಾವಾಣಿ ವಾರ್ತೆ ಬುಲೆಟಿನ್. ಪ್ರಜಾಮತ: ರಾತ್ರಿ 9 ಚುನಾವಣೆ ವಾರ್ತೆ

ಪ್ರಜಾವಾಣಿ ಕನ್ನಡ ಧ್ವನಿ

ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಪೂರ್ಣ ‘ಕ್ಯಾರಿ ಓವರ್’

ಬೆಂಗಳೂರು: ಕೋವಿಡ್ ಕಾರಣಕ್ಕೆ 2021-22ನೇ ಸಾಲಿಗೆ ಅನ್ವಯವಾಗುವಂತೆ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಪೂರ್ಣ ‘ಕ್ಯಾರಿ ಓವರ್’ಗೆ ಅನುಮತಿ ನೀಡಲಾಗಿದೆ.

‘ಈ ಸಂಬಂಧ ಇಲಾಖೆಯಿಂದ ಆದೇಶ ಹೊರಡಿಸಲಾಗಿದೆ’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಶುಕ್ರವಾರ ತಿಳಿಸಿದ್ದಾರೆ.

‘ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಗರಿಷ್ಠ ನಾಲ್ಕು ವಿಷಯಗಳಿಗೆ ಮಾತ್ರ ಕ್ಯಾರಿ ಓವರ್ ನೀಡುವ ಪದ್ಧತಿ ಇದೆ. ಕೊರೊನಾ ಸೋಂಕು ವ್ಯಾಪಕವಾಗಿದ್ದರಿಂದ ಈಗ ವಿದ್ಯಾರ್ಥಿಗಳಿಗೆ ಅನಾನುಕೂಲವಾಗಿದೆ.’ ಎಂದು ತಿಳಿಸಿದ್ದಾರೆ.

ಸರ್ಕಾರಕ್ಕೆ ಆರು ತಿಂಗಳು, ಆರು ಪ್ರಶ್ನೆ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಆರು ತಿಂಗಳು ಪೂರೈಸಿರುವ ಸಂದರ್ಭದಲ್ಲಿ ಅವರಿಗೆ ಆರು ಪ್ರಶ್ನೆಗಳನ್ನು ಕೇಳಿರುವ ರಾಜ್ಯ ಕಾಂಗ್ರೆಸ್, ನಿರುದ್ಯೋಗ, ಆರ್ಥಿಕ ಕುಸಿತ, ಆಂತರಿಕ ಭಿನ್ನಮತ ನಿವಾರಣೆಗೆ ಕೈಗೊಂಡ ಕ್ರಮಗಳ ಕುರಿತು ಉತ್ತರಿಸುವಂತೆ ಸವಾಲು ಹಾಕಿದೆ.

ಈ ಕುರಿತು ಕೆಪಿಸಿಸಿ ಟ್ವಿಟರ್ ಖಾತೆಯಿಂದ ಶುಕ್ರವಾರ ಸರಣಿ ಟ್ವೀಟ್ ಮಾಡಿದ್ದು, ‘ಬೊಮ್ಮಾಯಿ ಅವರೇ ಆರು ತಿಂಗಳ ಅವಧಿಯಲ್ಲಿ ಉದ್ಯೋಗ ಸೃಷ್ಟಿಗೆ ಕೈಗೊಂಡ ಕ್ರಮಗಳೇನು? ರೂಪಿಸಿದ ಯೋಜನೆಗಳೇನು? ಎಷ್ಟು ಉದ್ಯೋಗ ಸೃಷ್ಟಿಸಲಾಗಿದೆ? ಯಾವ ಯೋಜನೆಗಳಿಗೆ ಕೇಂದ್ರದಿಂದ ಎಷ್ಟು ಅನುದಾನ ತರಲಾಗಿದೆ? ಜಿಎಸ್‌ಟಿ ಪರಿಹಾರ, ನೆರೆ ಪರಿಹಾರಕ್ಕೆ ಎಷ್ಟು ನೆರವು ತಂದಿದ್ದೀರಿ?’ ಎಂದು ಪ್ರಶ್ನಿಸಲಾಗಿದೆ.

‘ಬಿಬಿಎಂಪಿ, ಬಿಡಿಎಯಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ನೀರಾವರಿ ಇಲಾಖೆ, ನೇಮಕಾತಿಯಲ್ಲೂ ಭ್ರಷ್ಟಾಚಾರ, ಗುತ್ತಿಗೆಯಲ್ಲಿ ಶೇ 40ರಷ್ಟು ಕಮಿಷನ್ ಆರೋಪವಿದೆ. ಭ್ರಷ್ಟಾಚಾರ ನಿಯಂತ್ರಣಕ್ಕೆ ಆರು ತಿಂಗಳಲ್ಲಿ ಕೈಗೊಂಡ ಕ್ರಮಗಳೇನು? ಜನತಾ ದರ್ಶನ ಕಾರ್ಯಕ್ರಮ ಏಕೆ ಮಾಡಿಲ್ಲ? ಉಪಯೋಗವಿಲ್ಲದ ದೆಹಲಿ ದರ್ಶನಕ್ಕೆ ಹೋಗುವ ನಿಮಗೆ ಜನತಾ ದರ್ಶನಕ್ಕೆ ಸಮಯವಿಲ್ಲವೆ?’ ಎಂದು ಕಾಂಗ್ರೆಸ್ ಕೇಳಿದೆ.

‘ಹಣಕಾಸು ಖಾತೆ ನಿಮ್ಮ ಬಳಿಯೇ ಇದೆ. ರಾಜ್ಯದ ಆರ್ಥಿಕ ಸ್ಥಿತಿ ಸುಧಾರಿಸಲು ಯಾವ ಕ್ರಮ ಕೈಗೊಂಡಿದ್ದೀರಿ? ಆರ್ಥಿಕ ಶಿಸ್ತು ಕಾಪಾಡಲು ರೂಪಿಸಿದ ಯೋಜನೆಗಳೇನು?’ ಎಂದು ಸವಾಲು ಹಾಕಿದೆ.

‘ನಿಮ್ಮ ಸಚಿವರ ಬಗ್ಗೆ ನಿಮಗೆ ತೃಪ್ತಿ ಇದೆಯೆ? ಅಸಮಾಧಾನದಿಂದ ಒಲ್ಲದ ಖಾತೆ ನಿಭಾಯಿಸುತ್ತಿರುವವರು, ಉಸ್ತುವಾರಿಗಾಗಿ ಕಿತ್ತಾಡುವವರು, ತಮ್ಮದೇ ಶಾಸಕರ ಜತೆ ಮುನಿಸು ಮಾಡಿಕೊಂಡ ಸಚಿವರು ನಿಮ್ಮಲ್ಲಿದ್ದಾರೆ. ಅವರ ಕೆಲಸಗಳ ಬಗ್ಗೆ ಸಮಾಧಾನ ಇದೆಯೆ?’ ಎಂದು ಕೆಪಿಸಿಸಿ ಮುಖ್ಯಮಂತ್ರಿಯವರನ್ನು ಪ್ರಶ್ನಿಸಿದೆ.

ಕಂದಾಯ ಇಲಾಖೆ (ಮುಜರಾಯಿ)

ಕರ್ನಾಟಕ ಸರ್ಕಾರ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು

ಸಂಖ್ಯೆ: ಕಂಇ 114 ಮುದಾಪ್ರ 2021 ದಿನಾಂಕ: 28.01.2022

ಸಾರ್ವಜನಿಕ ಪ್ರಕಟಣೆ

ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ತಾಲ್ಲೂಕು, ಇನಾಂ ದತ್ತಾತ್ರೇಯ ಪೀಠ ಗ್ರಾಮದಲ್ಲಿರುವ ಶ್ರೀ ಗುರುದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾ ಈ ಅಧಿಸೂಚಿತ ಸಂಸ್ಥೆಗೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 18752/2018ರಲ್ಲಿ ದಿನಾಂಕ:28.09.2021ರಂದು ನೀಡಿರುವ ಆದೇಶದಲ್ಲಿ ಸರ್ಕಾರದ ದಿನಾಂಕ:19.03.2018ರ ಆದೇಶವನ್ನು ರದ್ದುಪಡಿಸಿ, ಈ ವಿಚಾರವನ್ನು ಹೊಸದಾಗಿ ಪರಿಗಣಿಸಿ, ಕಾನೂನು ರೀತಿಯ ಆದೇಶ ಹೊರಡಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿರುತ್ತದೆ. ಈ ಆದೇಶದ ಹಿನ್ನೆಲೆಯಲ್ಲಿ, ರಾಜ್ಯ ಸರ್ಕಾರವು ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು ಇವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪ ಸಮಿತಿಯನ್ನು ರಚಿಸಿರುತ್ತದೆ.

ಪ್ರಕರಣದಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಸಚಿವ ಸಂಪುಟ ಉಪ ಸಮಿತಿಯು ದಿನಾಂಕ **07.02.2022 ರಂದು ಬೆಳಗ್ಗೆ 10.30 ಗಂಟೆಗೆ** ಜಿಲ್ಲಾಧಿಕಾರಿ, ಚಿಕ್ಕಮಗಳೂರು ಜಿಲ್ಲೆ, ಇವರ ಕಛೇರಿಯ ಸಭಾಂಗಣದಲ್ಲಿ ಸಾರ್ವಜನಿಕ ವಿಚಾರಣೆಯನ್ನು ನಿಗದಿಪಡಿಸಿರುತ್ತದೆ. ಆಸಕ್ತ ಸಾರ್ವಜನಿಕರು ಕಡ್ಡಾಯವಾಗಿ ಮಾಸ್ಕ್ ಧರಿಸಿ, ಸಾಮಾಜಿಕ ಅಂತರವನ್ನು ಕಾಪಾಡಿಕೊಂಡು ಹಾಗೂ ಕೋವಿಡ್–19ರ ನಿಯಮಗಳನ್ನು ಪಾಲಿಸಿ ಸದರಿ ವಿಚಾರಣೆಯಲ್ಲಿ ಹಾಜರಾಗಿ, ಸಾಕ್ಷಿ ಮತ್ತು ಆಧಾರಗಳೊಂದಿಗೆ ತಮ್ಮ ಸಲಹೆ/ಆಕ್ಷೇಪಣೆ/ಹೇಳಿಕೆಗಳನ್ನು ಸಲ್ಲಿಸುವುದಿದ್ದಲ್ಲಿ, ಲಿಖಿತವಾಗಿ / ಮೌಖಿಕವಾಗಿ ಪೂರಕ ದಾಖಲೆಗಳೊಂದಿಗೆ ಸಲ್ಲಿಸಲು ಸೂಚಿಸಿದೆ.

ಸಹಿ/– (ಎಂ.ಎಲ್. ವರಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಮುಜರಾಯಿ)

ವಾಸಾಸಂಇ/ಬೆಂನ/ಜಿಎ/3093/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ– 571 401
(Autonomous Medical Institution, Government of Karnataka)
(Fax & Phone: 08232-231001, 222086)
E-Mail : mimsmandya@gmail.com , Website : www.mimsmandya.org

ಸಂಖ್ಯೆ:ಮಿಮ್ಸ್/ಸರಬ–2/ಇ.ಟೆಂ/ಬ್ರೆಡ್/45ಅ/2021–22 ದಿನಾಂಕ:25.01.2022

ಇ–ಟೆಂಡರ್ ಪ್ರಕಟಣೆ – (ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಮಿಮ್ಸ್ ಸಂಸ್ಥೆಯ ಬೋಧಕ ಆಸ್ಪತ್ರೆಯ ಒಳರೋಗಿಗಳಿಗೆ ಅಗತ್ಯವಿರುವ ಪ್ರಥಮ ದರ್ಜೆ ಬ್ರೆಡ್‌ಅನ್ನು ಸರಬರಾಜಿಗಾಗಿ ನೊಂದಾಯಿಸಲ್ಪಟ್ಟ ಅರ್ಹ ತಯಾರಕರು/ಅಧಿಕೃತ ಮಾರಾಟಗಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಆಹ್ವಾನಿಸಲಾಗಿದೆ.

ಕ್ರಸಂ	ಟೆಂಡರ್ ವಿವರ	ಸರಬರಾಜು ಅಂದಾಜು ಮೊತ್ತ ರೂ.	ಇ.ಎಂ.ಡಿ ಮೊತ್ತ
01	ಪ್ರಥಮ ದರ್ಜೆ ಬ್ರೆಡ್	ರೂ.9,75,000/– (ಒಂಭತ್ತು ಲಕ್ಷದ ಎಪ್ಪತ್ತೈದು ಸಾವಿರ ರೂ.ಗಳು ಮಾತ್ರ)	ರೂ.25,000/– (ಇಪ್ಪತ್ತೈದು ಸಾವಿರ ರೂ. ಮಾತ್ರ)

ಇ–ಪೋರ್ಟಲ್ ಮುಖಾಂತರ ನಿಗದಿತ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ) ದೊಂದಿಗೆ ಟೆಂಡರ್ ಅರ್ಜಿ ಸಲ್ಲಿಸುವ ದಿನಾಂಕ : **25.01.2022** ರಿಂದ ಪ್ರಾರಂಭವಾಗುವುದು ಭರ್ತಿ ಮಾಡಿದ ಟೆಂಡರ್ ಅರ್ಜಿಗಳನ್ನು ಸಲ್ಲಿಸುವ ಅಂತಿಮ ದಿನಾಂಕ : **10.02.2022 ಸಂಜೆ 5.30 ಗಂಟೆವರೆಗೆ.** ಟೆಂಡರ್ ಪ್ರಕ್ರಿಯೆ ದಿನಾಂಕಗಳನ್ನು ಹಾಗೂ ಇತರೆ ವಿವರಗಳನ್ನು ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ **www.eproc.karnataka.gov.in** ವೆಬ್‌ಸೈಟ್ ನೋಡಬಹುದು. ಹೆಚ್ಚಿನ ಮಾಹಿತಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ (ರಜಾ ದಿನಗಳನ್ನು ಹೊರತುಪಡಿಸಿ) ಪಡೆಯಬಹುದಾಗಿದೆ.

ಸಹಿ/–ಮುಖ್ಯ ಆಡಳಿತಾಧಿಕಾರಿಗಳು, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ

ವಾಸಾಸಂಇ/ಸನಿ–ಮಂಡ್ಯ/ಎಂಸಿಎ/561/2021–22

ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ.,
ಹಾಲು ಉತ್ಪನ್ನ ಘಟಕ, ಗೆಜ್ಜಲಗೆರೆ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ – 571428

ಸಂಖ್ಯೆ; ಮಂಹಾಒ/ಆಡಳಿತ/ಬ್ಯಾಕ್‌ಲಾಗ್ ನೇಮಕಾತಿ/550ಡಿ/2021–22 ದಿನಾಂಕ: 25–01–2022

ಬ್ಯಾಕ್‌ಲಾಗ್ ನೇಮಕಾತಿ ಪ್ರಕಟಣೆ

ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಹಾಲು ಉತ್ಪನ್ನ ಘಟಕ, ಗೆಜ್ಜಲಗೆರೆ ಇದರ ಈ ಕೆಳಕಂಡ ಬ್ಯಾಕ್‌ಲಾಗ್ ಹುದ್ದೆಗಳಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಹುದ್ದೆಗಳ ವಿವರ	ವೇತನ ಶ್ರೇಣಿ ರೂ.	ಹುದ್ದೆಗಳ ಸಂಖ್ಯೆ	ಮೀಸಲಾತಿ		ವಿದ್ಯಾರ್ಹತೆ
				ಪ.ಜಾ	ಪ.ಪಂ	
01	ಸಹಾಯಕ ವ್ಯವಸ್ಥಾಪಕರು (ಪ.ವೈ.ಸೇ/ಕೃ.ಗ)	52650–97100	02	ಇ–01	ಮ–01	ಕಾನೂನು ರೀತ್ಯಾ ಮಾನ್ಯತೆ ಪಡೆದ ಪಶು ವೈದ್ಯಕೀಯ ವಿಶ್ವವಿದ್ಯಾಲಯದಿಂದ ಬಿ.ವಿ.ಎಸ್ಸಿ ಮತ್ತು ಎ.ಹೆಚ್ ಪದವಿಯನ್ನು ಹೊಂದಿರತಕ್ಕದ್ದು.
02	ತಾಂತ್ರಿಕ ಅಧಿಕಾರಿ(ಡಿ.ಟಿ)	43100–83900	02	ಗ್ರಾ–01	ಇ–01	ಕಾನೂನು ರೀತ್ಯಾ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಬಿ.ಎಸ್ಸಿ(ಡಿ.ಟಿ)/ ಬಿ.ಟೆಕ್(ಡಿ.ಟೆಕ್) ಪದವಿ ಹೊಂದಿರತಕ್ಕದ್ದು. ಕಂಪ್ಯೂಟರ್ ನಿರ್ವಹಣೆ ಜ್ಞಾನ ಕಡ್ಡಾಯವಾಗಿ ಹೊಂದಿರಬೇಕು.

ಇ–ಇತರೆ ಅಭ್ಯರ್ಥಿ, ಮ–ಮಹಿಳಾ ಅಭ್ಯರ್ಥಿ, ಗ್ರಾ–ಗ್ರಾಮೀಣ ಅಭ್ಯರ್ಥಿ

1) ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ 18 ವರ್ಷ ತುಂಬಿರಬೇಕು ಮತ್ತು 40 ವರ್ಷಗಳನ್ನು ಮೀರಿರಬಾರದು.
2) ಕನ್ನಡ ಭಾಷಾಜ್ಞಾನ(ಓದುವುದು ಮತ್ತು ಬರೆಯುವುದು) ಕಡ್ಡಾಯವಾಗಿರುತ್ತದೆ.
3) ಅರ್ಹ ಮಹಿಳಾ, ಗ್ರಾಮೀಣ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಅದೇ ವರ್ಗದ ಇತರೆ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

ಅರ್ಜಿ ಸಲ್ಲಿಸುವ ವಿಧಾನ: ಅರ್ಜಿಯನ್ನು ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಸ್ವಂತ ವಿವರದೊಂದಿಗೆ ಅಂದವಾಗಿ ಬೆರಳಚ್ಚು ಮಾಡಿ ಇತ್ತೀಚಿನ ಭಾವಚಿತ್ರ 02(ಎರಡು), ವಿದ್ಯಾರ್ಹತೆ, ವಯಸ್ಸು, ಜಾತಿ ಬಗ್ಗೆ ಪ್ರಮಾಣಪತ್ರಗಳ ಸ್ವಯಂ ದೃಢೀಕೃತ ಜೆರಾಕ್ಸ್ ಪ್ರತಿಯೊಂದಿಗೆ ರೂ. 600/– ಮೌಲ್ಯದ ಡಿ.ಡಿ ಯನ್ನು **“ವ್ಯವಸ್ಥಾಪಕ ನಿರ್ದೇಶಕರು,** ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಹಾಲು ಉತ್ಪನ್ನ ಘಟಕ ಗೆಜ್ಜಲಗೆರೆ” ಇವರಿಗೆ ಸಂದಾಯವಾಗುವಂತೆ ಪಡೆದು ದಿನಾಂಕ: 02–03–2022 ರ ರೊಳಗೆ ವ್ಯವಸ್ಥಾಪಕ ನಿರ್ದೇಶಕರು, ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಹಾಲು ಉತ್ಪನ್ನ ಘಟಕ ಗೆಜ್ಜಲಗೆರೆ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ–571428 ಈ ವಿಳಾಸಕ್ಕೆ ತಲುಪುವಂತೆ ಕಳುಹಿಸತಕ್ಕದ್ದು ಅರ್ಜಿ ಸಲ್ಲಿಸುವ ಲಕೋಟೆ ಮೇಲೆ ಹುದ್ದೆಯ ವಿವರ ಸ್ಪಷ್ಟವಾಗಿ ನಮೂದಿಸಿರಬೇಕು. ದಿನಾಂಕ: 02–03–2022 ರ ನಂತರ ಬಂದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.

ಆಯ್ಕೆ ವಿಧಾನ: ಈ ಹುದ್ದೆಗಳಿಗೆ ಆಯ್ಕೆಯನ್ನು ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್:13:ಎಸ್‌ಬಿಸಿ:2001, ದಿನಾಂಕ:21–11–2001ರ ಬ್ಯಾಕ್‌ಲಾಗ್ ನೇಮಕಾತಿ ನಿಯಮಾವಳಿಯಂತೆ ಮಾಡಲಾಗುವುದು.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ಮಂಡ್ಯ ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿ.,

ಪೊಲೀಸ್ ಇಲಾಖೆ
ಡೈರೆಕ್ಟರ್ ಜನರಲ್ ಮತ್ತು
ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್‌ರವರ ಕಛೇರಿ
ನಂ. 2, ನೃಪತುಂಗ ರಸ್ತೆ, ಬೆಂಗಳೂರು–560001.

ಸಂಖ್ಯೆ: ಸಂಗ್ರಹ–2(3)/35/2021–22 ದಿನಾಂಕ: 27–01–2022

ಇ–ಖರೀದಿ ಟೆಂಡರ್ ನೋಟೀಸ್ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಟೆಂಡರ್ ಸಂಕ್ಷಿಪ್ತ ವಿವರ: ಕರ್ನಾಟಕದ ವಿವಿಧ ಪೊಲೀಸ್ ಠಾಣೆಗಳಲ್ಲಿ ಹಾಗೂ ವೀಕ್ಷಣಾ ಠಾಣೆಗಳಲ್ಲಿ ಅಳವಡಿಸಲಾದ ಸಿಸಿಟಿವಿ ಸೆರೆಹಿಡಿಯುವ (ಸರ್‌ವೈಲೆನ್ಸ್) ವ್ಯವಸ್ಥೆಗಳ ಸಮಗ್ರ ವಾರ್ಷಿಕ ನಿರ್ವಹಣೆ ಸೇವೆ ಒದಗಿಸುವುದು. **ಗುತ್ತಿಗೆ ಅವಧಿ – 03 ವರ್ಷಗಳು** ಟೆಂಡರ್ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ ಮತ್ತು ಸಮಯ : 25–02–2022 ಸಮಯ : 18.00 ಗಂಟೆ.

ಮೇಲ್ಕಂಡ ಸೇವೆಯನ್ನು ಒದಗಿಸಲು ಇಚ್ಛಿಸುವವರು ಇ–ಖರೀದಿ ಪೋರ್ಟಲ್‌ನಲ್ಲಿ ಕಡ್ಡಾಯವಾಗಿ ನೋಂದಾಯಿಸಿಕೊಳ್ಳಬೇಕು. ಇ–ಖರೀದಿಯ ಬಗ್ಗೆ ತರಬೇತಿ ಕಾರ್ಯಕ್ರಮವನ್ನು ಇ–ಖರೀದಿ ಪ್ರೊಕ್ಯೂರ್‌ಮೆಂಟ್ ಸೆಲ್‌ನಲ್ಲಿ ವ್ಯವಸ್ಥೆಗೊಳಿಸುತ್ತಿದ್ದು, ಹೆಚ್ಚಿನ ವಿವರಗಳಿಗೆ www.eproc.karnataka.gov.in ಅಥವಾ ಹೆಲ್ಪ್‌ಲೈನ್ 080–25501227, 25501216 ಗಳಿಗೆ ಸಂಪರ್ಕಿಸತಕ್ಕದ್ದು.

ಸಹಿ/–
ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್
ಜನರಲ್ ಆಫ್ ಪೊಲೀಸ್ ರವರ ಪರವಾಗಿ

ವಾ.ಸಾ.ಸಂ.ಇ/ಬೆಂ.ನಗರ/3083/ಆಕಾರ್/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in

ನಂ. ಐಎಡಿಬಿ/ಇಎನ್‌ಜಿಜೆ/ಇಟಿಎನ್‌ಡಿ–ಇಪಿ–38/14230/2021–22 ದಿನಾಂಕ: 28.01.2022

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
(ಜಿ.ಓ.ಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆ.ಐ.ಎ.ಡಿ.ಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ತಾಂತ್ರಿಕ ಕೌಶಲ್ಯತೆಗಳು, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವ ಸಂಪನ್ಮೂಲ ಹೊಂದಿರುವ ಹಾಗೂ ಇದೇ ರೀತಿಯ ಕಾಮಗಾರಿಯಲ್ಲಿ ಸಾಕಷ್ಟು ಅನುಭವ ಹೊಂದಿರುವ ಕರ್ನಾಟಕ ಸರ್ಕಾರದ ಕೆ.ಪಿ.ಡಬ್ಲ್ಯೂ.ಡಿ ದರ್ಜೆ–1 (ಸಿವಿಲ್) ಪರವಾನಗಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ದ್ವಿ–ಲಕೋಟೆ ಪದ್ಧತಿಯಡಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕಾಮಗಾರಿ ಹೆಸರು: ಉತ್ತರ ಕನ್ನಡ ಜಿಲ್ಲೆ, ಕಾರವಾರ ತಾಲ್ಲೂಕು, ಮುಡಗೇರಿ ಗ್ರಾಮದಲ್ಲಿ ನೌಕಾ ಅಲೈಡ್ ಕೈಗಾರಿಕಾ ಪಾರ್ಕ್‌ಗಾಗಿ 18ಮೀ ಮತ್ತು 15ಮೀ ಅಗಲದ ಡಾಂಬರೀಕರಣ ರಸ್ತೆ, ಆರ್.ಸಿ.ಸಿ ಚರಂಡಿ, ಕಲ್ವರ್ಟ್ಸ್ ಮತ್ತು ನೀರು ಸರಬರಾಜು ನಿರ್ಮಾಣದ ಕಾಮಗಾರಿ (3ನೇ ಕರೆ)

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 22.02.2022, ಸಂಜೆ 4.00 ಗಂಟೆವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ದಿನಾಂಕ : 01.02.2022 ರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

DIPR/DDU/Zen/R.O:3103/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 001. website: www.kiadb.in

ನಂ. ಐಎಡಿಬಿ/ಇಎನ್‌ಜಿಜೆ/ಪಿ.ಎಂ.ಸಿ/ಇಪಿಟಿಎನ್‌ಡಿ–ಇಪಿ–08/14171/2021–22 ದಿನಾಂಕ: 27.01.2022

ಯೋಜನಾ ನಿರ್ವಹಣಾ ಸೇವೆಗಳಿಗಾಗಿ (ಪಿಎಂಸಿ)
ಟೆಂಡರ್ ಆಹ್ವಾನ ಪ್ರಕಟಣೆ
(ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆ.ಐ.ಎ.ಡಿ.ಬಿ ಯು ಈ ಕೆಳಕಂಡ ಕಾಮಗಾರಿಗಳಿಗೆ ಯೋಜನಾ ನಿರ್ವಹಣಾ ಸೇವೆಗಳಿಗಾಗಿ (ಪಿಎಂಸಿ) ಅರ್ಹ ಸಲಹಾ ಸಂಸ್ಥೆಗಳಿಂದ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿ ಹೆಸರು: (1) ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ, ದಾಬಸಪೇಟೆ 5ನೇ ಹಂತದ ಕೈಗಾರಿಕಾ ಪ್ರದೇಶದಲ್ಲಿನ ಬ್ಲಾಕ್ ನಂ. 2ಬಿ, 3&5ರ ಉಪ ಬಡಾವಣೆಯಲ್ಲಿ ಆರ್‌ಸಿಸಿ ರಸ್ತೆ ಬದಿ ಚರಂಡಿ, ಆರ್‌ಸಿಸಿ ಸ್ಪರ್ ಕಲ್ವರ್ಟ್ಸ್, ಆರ್‌ಸಿಸಿ ಬಾಕ್ಸ್ ಕಲ್ವರ್ಟ್ಸ್ ಹಾಗೂ ಹೆಚ್‌ಡಿಪಿಇ ನೀರು ಸರಬರಾಜು ಕೊಳವೆ ಮಾರ್ಗದೊಂದಿಗೆ 30ಮೀ ಅಗಲ (ರಸ್ತೆ ಸಂಖ್ಯೆ: 41) 24ಮೀ ಅಗಲ (ರಸ್ತೆ ಸಂಖ್ಯೆ: 10ಎ & 10ಬಿ), 18ಮೀ ಅಗಲ (ರಸ್ತೆ ಸಂಖ್ಯೆ: 42, 13ಎ, 13ಬಿ, 13 & 11ಎ & 11ಬಿ) ಮತ್ತು 15 ಮೀ ಅಗಲ (ರಸ್ತೆ ಸಂಖ್ಯೆ: 43, 44, 45) ಡಾಂಬರೀಕರಣ ರಸ್ತೆಯ ನಿರ್ಮಾಣ ಕಾಮಗಾರಿಗೆ ಪಿಎಂಸಿ ಸೇವೆಗಳನ್ನು ಒದಗಿಸುವುದು. (2) ಕೋಲಾರ ಜಿಲ್ಲೆ, ಮಾಲೂರು ತಾಲ್ಲೂಕು, ಜಕ್ಕಸಂದ್ರ 2ನೇ ಹಂತದ ಕೈಗಾರಿಕಾ ಪ್ರದೇಶದಲ್ಲಿ ಆರ್‌ಸಿಸಿ ರಸ್ತೆ ಬದಿ ಚರಂಡಿ, ಆರ್‌ಸಿಸಿ ಅಡ್ಡ ಚರಂಡಿ, ಮಳೆ ನೀರು ಚರಂಡಿ, ಹೆಚ್‌ಡಿಪಿಇ ಕೊಳವೆ ಮಾರ್ಗದೊಂದಿಗೆ 24 ಮೀ 18 ಮೀ & 15 ಮೀ ಅಗಲದ ಡಾಂಬರೀಕರಣ ರಸ್ತೆ ನಿರ್ಮಾಣದೊಂದಿಗೆ ಕೈಗಾರಿಕಾ ಉಪ ಬಡಾವಣೆ ರಚಿಸುವ ಕಾಮಗಾರಿಗೆ ಪಿಎಂಸಿ ಸೇವೆಗಳನ್ನು ಒದಗಿಸುವುದು. (3) ವಿಜಯಪುರ ಜಿಲ್ಲೆ, ಕೊಲ್ಹಾರ್ ತಾಲ್ಲೂಕು, ಮುಳವಾಡ 2ನೇ ಹಂತ ಕೈಗಾರಿಕಾ ಪ್ರದೇಶದಲ್ಲಿ ಆರ್.ಸಿ.ಸಿ ರಸ್ತೆ ಬದಿ ಚರಂಡಿ, ಆರ್.ಸಿ.ಸಿ ಅಡ್ಡ ಚರಂಡಿ, ಜಿ.ಎಲ್.ಎಸ್.ಆರ್, ರೈಸಿಂಗ್ ಮೈನ್, ಮಳೆ ನೀರು ಕೊಯ್ಲು ನಿರ್ಮಾಣ ಮತ್ತು ಹೆಚ್.ಡಿ.ಪಿ.ಇ ನೀರು ಸರಬರಾಜು ಕೊಳವೆ ಮಾರ್ಗದೊಂದಿಗೆ 18 ಮೀ ಅಗಲದ ಡಾಂಬರೀಕರಣ ರಸ್ತೆ ನಿರ್ಮಾಣದೊಂದಿಗೆ ಕೈಗಾರಿಕಾ ಬಡಾವಣೆಯನ್ನು ರಚನೆ ಮಾಡುವ ಕಾಮಗಾರಿಗೆ ಪಿಎಂಸಿ ಸೇವೆಗಳನ್ನು ಒದಗಿಸುವುದು (ಪ್ಯಾಕೇಜ್–2). (4) ವಿಜಯಪುರ ಜಿಲ್ಲೆ, ಕೊಲ್ಹಾರ್ ತಾಲ್ಲೂಕು, ಮುಳವಾಡ 2ನೇ ಹಂತ ಕೈಗಾರಿಕಾ ಪ್ರದೇಶದಲ್ಲಿ ಆರ್.ಸಿ.ಸಿ ರಸ್ತೆ ಬದಿ ಚರಂಡಿ, ಆರ್.ಸಿ.ಸಿ ಅಡ್ಡ ಚರಂಡಿ, ಸೇತುವೆ ನಿರ್ಮಾಣ ಮತ್ತು ಹೆಚ್.ಡಿ.ಪಿ.ಇ ನೀರು ಸರಬರಾಜು ಕೊಳವೆ ಮಾರ್ಗದೊಂದಿಗೆ 30 ಮೀ ಅಗಲದ ಡಾಂಬರೀಕರಣ ರಸ್ತೆ ನಿರ್ಮಾಣದೊಂದಿಗೆ ಕೈಗಾರಿಕಾ ಬಡಾವಣೆ ರಚನೆ ಮಾಡುವ ಕಾಮಗಾರಿಗೆ ಪಿಎಂಸಿ ಸೇವೆಗಳನ್ನು ಒದಗಿಸುವುದು (ಪ್ಯಾಕೇಜ್–1).

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 23.02.2022, ಸಂಜೆ 4.00 ಗಂಟೆವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

DIPR/DDU/Zen/R.O:3073/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦
ನಿದ್ರೆಯಲ್ಲಿ ನೀವು ಕಾಣುವ ಸಂಗತಿಗಳು ಕನಸುಗಳಲ್ಲ. ನಿಮಗೆ ನಿದ್ರೆ ಮಾಡಲು ಬಿಡದಿರುವ ಸಂಗತಿಗಳೇ ನಿಜವಾದ ಕನಸುಗಳು.
-ಕ್ರಿಸ್ಟಿಯಾನೊ ರೊನಾಲ್ಡೊ

ಲೋಕಾಯುಕ್ತಕ್ಕೆ ಶಕ್ತಿ ತುಂಬಲು ಸರ್ಕಾರ ಬದ್ಧತೆ ಪ್ರದರ್ಶಿಸಲಿ

ದುರಾಡಳಿತ ಮತ್ತು ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಿ, ಜನರಿಗೆ ಉತ್ತಮ ಆಡಳಿತದ ಭರವಸೆಯನ್ನು ಖಾತರಿಪಡಿಸುವುದಕ್ಕಾಗಿಯೇ ಮೂರೂವರೆ ದಶಕಗಳ ಹಿಂದೆ ಅಸ್ತಿತ್ವಕ್ಕೆ ಬಂದ ಕರ್ನಾಟಕ ಲೋಕಾಯುಕ್ತ ಸಂಸ್ಥೆ ಈಗ ಹಲ್ಲಿಲ್ಲದ ಹಾವಿನಂತಾಗಿದೆ. 2015ರಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಸ್ಥಾಪಿಸಿ, ಸರ್ಕಾರಿ ಅಧಿಕಾರಿಗಳು, ನೌಕರರು ಮತ್ತು ಚುನಾಯಿತ ಪ್ರತಿನಿಧಿಗಳ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ತನಿಖೆ ನಡೆಸುವ ಅಧಿಕಾರವನ್ನು ಎಸಿಬಿಗೆ ನೀಡಿತು. ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ತನಿಖೆ ನಡೆಸುವ ಅಧಿಕಾರವನ್ನು ಲೋಕಾಯುಕ್ತದಿಂದ ತೆಗೆದುಹಾಕಲಾಯಿತು. ಈಗ ಲೋಕಾಯುಕ್ತವು ದುರಾಡಳಿತ ಮತ್ತು ಸಾರ್ವಜನಿಕ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯಡಿ ವಿಚಾರಣೆ ನಡೆಸಿ, ವರದಿ ಸಲ್ಲಿಸುವುದಕ್ಕೆ ಸೀಮಿತವಾದ ಅಧಿಕಾರವನ್ನು ಹೊಂದಿದೆ. 2015ರಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆಗೆ ತಿದ್ದುಪಡಿ ತರುವವರೆಗೂ ರಾಜ್ಯದಲ್ಲಿ ಲೋಕಾಯುಕ್ತ ಸಂಸ್ಥೆ ಮನೆಮಾತಾಗಿತ್ತು. ಭ್ರಷ್ಟಾಚಾರ ಅಥವಾ ದುರಾಡಳಿತಕ್ಕೆ ಸಂಬಂಧಿಸಿದ ದೂರು ಹೊತ್ತು ಲೋಕಾಯುಕ್ತ ಕಚೇರಿ ಪ್ರವೇಶಿಸಿದರೆ ನ್ಯಾಯ ದೊರಕಬಹುದು ಎಂಬ ವಿಶ್ವಾಸ ಮೂಡಿತ್ತು. ಆದರೆ, ಕಾಯ್ದೆ ಬದಲಾದ ಬಳಿಕ ಲೋಕಾಯುಕ್ತ ಸಂಸ್ಥೆಯ ಕಾರ್ಯನಿರ್ವಹಣಾ ಸ್ವರೂಪವೇ ಬದಲಾಯಿತು. ಈಗ ಇರುವ ಸೀಮಿತ ಅಧಿಕಾರದ ವ್ಯಾಪ್ತಿಯಲ್ಲಿ ವಿಚಾರಣೆ ನಡೆಸಿ ಕಳುಹಿಸುವ ವರದಿಗಳನ್ನೂ ರಾಜ್ಯ ಸರ್ಕಾರ ಗೌರವಿಸುತ್ತಿಲ್ಲ ಎಂದು ಲೋಕಾಯುಕ್ತ ಹುದ್ದೆಯಿಂದ ನಿವೃತ್ತರಾದ ನ್ಯಾಯಮೂರ್ತಿ ಪಿ. ವಿಶ್ವನಾಥ ಶೆಟ್ಟಿ ಬಹಿರಂಗವಾಗಿಯೇ ಹೇಳಿದ್ದಾರೆ. ಎಸಿಬಿಯನ್ನು ಲೋಕಾಯುಕ್ತದ ಅಧೀನಕ್ಕೆ ತಂದು, ಹಿಂದಿನಂತೆಯೇ ಈ ತನಿಖಾ ಸಂಸ್ಥೆಗೆ ಬಲ ನೀಡಬೇಕು ಎಂದು ಲೋಕಾಯುಕ್ತ ಹುದ್ದೆಯಿಂದ ನಿರ್ಗಮಿಸುವ ಮುನ್ನ ಅವರು ಸರ್ಕಾರವನ್ನು ಆಗ್ರಹಿಸಿದ್ದಾರೆ.

ಭ್ರಷ್ಟಾಚಾರ ಮತ್ತು ದುರಾಡಳಿತದ ವಿರುದ್ಧ ಹೋರಾಟವನ್ನು ಗಟ್ಟಿಗೊಳಿಸುವುದಕ್ಕೆ ಪೂರಕವಾಗಿ ಲೋಕಾಯುಕ್ತದ ಬಲವರ್ಧನೆ ಆಗಬೇಕಾಗಿದೆ

ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ತನಿಖೆ ನಡೆಸುವ ಅಧಿಕಾರವನ್ನು ಮತ್ತೆ ಲೋಕಾಯುಕ್ತಕ್ಕೆ ನೀಡಿ, ಶಕ್ತಿ ತುಂಬಬೇಕು ಎಂಬ ಬೇಡಿಕೆ ಸಾರ್ವಜನಿಕ ವಲಯದಲ್ಲಿ ದೀರ್ಘ ಕಾಲದಿಂದಲೂ ಇದೆ. ಈಗ ಲೋಕಾಯುಕ್ತರಾಗಿದ್ದವರೇ ಸ್ವತಃ ಈ ರೀತಿ ಒತ್ತಾಯ ಮಾಡಿರುವುದು ಭ್ರಷ್ಟಾಚಾರ ಮತ್ತು ದುರಾಡಳಿತದ ವಿರುದ್ಧ ಸಮರ ನಡೆಸಲು ಲೋಕಾಯುಕ್ತ ಸಶಕ್ತವಾಗಿ ಉಳಿದಿಲ್ಲ ಎಂಬ ಅಭಿಪ್ರಾಯವನ್ನು ಪುಷ್ಟೀಕರಿಸುವಂತಿದೆ. 1986ರಲ್ಲಿ ಅಸ್ತಿತ್ವಕ್ಕೆ ಬಂದ ಲೋಕಾಯುಕ್ತ ಸಂಸ್ಥೆಯು ರಾಜ್ಯದಲ್ಲಿ ಭ್ರಷ್ಟಾಚಾರ ಮತ್ತು ದುರಾಡಳಿತದ ವಿರುದ್ಧದ ಹೋರಾಟದಲ್ಲಿ ಮಹತ್ತರ ಪಾತ್ರವನ್ನು ನಿಭಾಯಿಸಿದೆ. ಇತ್ತೀಚಿನ ವರ್ಷಗಳಲ್ಲಿ ಭ್ರಷ್ಟಾಚಾರದಲ್ಲಿ ನಿರತರಾಗಿದ್ದ ಹಾಲಿ ಸಚಿವರನ್ನೂ ಬಂಧಿಸಿ, ಜೈಲಿಗೆ ಕಳುಹಿಸಿದ ಕೀರ್ತಿ ರಾಜ್ಯದ ಲೋಕಾಯುಕ್ತಕ್ಕೆ ಇತ್ತು. ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಹಿಂದಿನ ಲೋಕಾಯುಕ್ತ ಎನ್. ಸಂತೋಷ್ ಹೆಗ್ಡೆ ನೇತೃತ್ವದ ತಂಡ ನಡೆಸಿದ್ದ ತನಿಖೆಯು ನೈಸರ್ಗಿಕ ಸಂಪತ್ತಿನ ಲೂಟಿಗೆ ಕಡಿವಾಣ ಹಾಕಲು ಕಾರಣವಾಗಿದ್ದು ಕೂಡ ಇತಿಹಾಸ. ಆದರೆ, 2015ರ ನಂತರ ಲೋಕಾಯುಕ್ತವು ಕೇವಲ ದೂರುಗಳ ವಿಚಾರಣೆಗೆ ಸೀಮಿತವಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಕರ್ನಾಟಕ ಲೋಕಾಯುಕ್ತವು ದೂರುಗಳ ವಿಚಾರಣೆಗೆ ಸೀಮಿತವಾದ ಒಂದು ಸಾಮಾನ್ಯ ಪ್ರಾಧಿಕಾರದಂತೆ ಭಾಸವಾಗುತ್ತಿದೆ. ಅತ್ತ ಲೋಕಾಯುಕ್ತದ ಪೊಲೀಸ್ ವಿಭಾಗದ ಅಧಿಕಾರವನ್ನು ಪ್ರತ್ಯೇಕಿಸಿ ಸೃಜಿಸಲಾದ ಭ್ರಷ್ಟಾಚಾರ ನಿಗ್ರಹ ದಳದಿಂದಲೂ ಗಣನೀಯ ಕೆಲಸ ಆಗುತ್ತಿಲ್ಲ. ಪ್ರಾಥಮಿಕ ತನಿಖೆಗೆ ಸೀಮಿತವಾಗಿ ಎಸಿಬಿಗೆ ಮುಕ್ತ ಅಧಿಕಾರವಿದೆ. ಸರ್ಕಾರಿ ಅಧಿಕಾರಿಗಳು, ನೌಕರರು ಮತ್ತು ಚುನಾಯಿತ ಪ್ರತಿನಿಧಿಗಳ ವಿರುದ್ಧದ ಭ್ರಷ್ಟಾಚಾರ ಆರೋಪಕ್ಕೆ ಮೇಲ್ನೋಟಕ್ಕೆ ಸಾಕ್ಷ್ಯಗಳು ಲಭ್ಯವಿದ್ದರೂ ನೇರವಾಗಿ ಎಫ್‌ಐಆರ್ ದಾಖಲಿಸಿ, ತನಿಖೆ ಆರಂಭಿಸಲು ಎಸಿಬಿಗೂ ಅಧಿಕಾರವಿಲ್ಲ. ಪ್ರತಿಬಾರಿಯೂ ಎಫ್‌ಐಆರ್ ದಾಖಲಿಸಲು ಸರ್ಕಾರದಿಂದ ಅನುಮತಿ ಪಡೆಯಬೇಕಿದೆ. ಇನ್ನೊಂದೆಡೆ, ತನಿಖೆ ಮುಗಿಸಿ ಆರೋಪಪಟ್ಟಿ ಸಲ್ಲಿಕೆಗೂ ಅನುಮತಿ ಬೇಕು. ಎಫ್‌ಐಆರ್ ದಾಖಲಿಸಲು ಹಾಗೂ ಆರೋಪಪಟ್ಟಿ ಸಲ್ಲಿಸಲು ಅನುಮತಿ ಕೋರಿರುವ ನೂರಾರು ಪ್ರಸ್ತಾವಗಳನ್ನು ತನ್ನ ಬಳಿಯೇ ಇರಿಸಿಕೊಂಡು ಸರ್ಕಾರ ವಿಳಂಬ ಧೋರಣೆ ಅನುಸರಿಸುತ್ತಿದೆ. ಇದರಿಂದಾಗಿ ಎಸಿಬಿ ನಡೆಸುತ್ತಿರುವ ಭ್ರಷ್ಟಾಚಾರ ನಿಗ್ರಹದ ಕೆಲಸವೂ ನಿರೀಕ್ಷಿತ ಮಟ್ಟದಲ್ಲಿ ಫಲ ನೀಡುತ್ತಿಲ್ಲ. ತನಿಖಾ ಸಂಸ್ಥೆ ಇತ್ತೀಚೆಗೆ ಬಹಿರಂಗಪಡಿಸಿರುವ ಅಂಕಿಅಂಶಗಳೇ ಇದನ್ನು ಹೇಳುತ್ತಿವೆ.

ಲೋಕಾಯುಕ್ತಕ್ಕೆ ಬಲ ತುಂಬುವುದು ಮತ್ತು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ತನಿಖೆಯ ಅಧಿಕಾರವನ್ನು ಮರಳಿ ನೀಡುವುದು 2018ರ ವಿಧಾನಸಭಾ ಚುನಾವಣೆಯಲ್ಲಿ ಚರ್ಚೆಯ ವಿಷಯವೂ ಆಗಿತ್ತು. 'ಅಧಿಕಾರಕ್ಕೆ ಬಂದರೆ ಎಸಿಬಿಯನ್ನು ರದ್ದು ಮಾಡಿ, ಲೋಕಾಯುಕ್ತಕ್ಕೆ ಮರಳಿ ಅಧಿಕಾರ ನೀಡಲಾಗುವುದು' ಎಂದು ಬಿಜೆಪಿ ತನ್ನ ಪ್ರಣಾಳಿಕೆಯಲ್ಲೇ ಭರವಸೆ ನೀಡಿತ್ತು. ಜೆಡಿಎಸ್ ಕೂಡ ಚುನಾವಣಾ ಪ್ರಚಾರದಲ್ಲಿ ಇದೇ ಭರವಸೆ ನೀಡಿತ್ತು. 2018ರ ಚುನಾವಣೆ ಬಳಿಕ ಜೆಡಿಎಸ್-ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಯಾವುದೇ ಬದಲಾವಣೆ ಆಗಲಿಲ್ಲ. ನಂತರ ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದು ಎರಡೂವರೆ ವರ್ಷಗಳಾಗಿವೆ. ಬಿ.ಎಸ್. ಯಡಿಯೂರಪ್ಪ ಅವರು ಎರಡು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿದ್ದರೆ, ಬಸವರಾಜ ಬೊಮ್ಮಾಯಿ ಈ ಹುದ್ದೆಗೇರಿ ಆರು ತಿಂಗಳು ಪೂರೈಸಿದ್ದಾರೆ. ಈ ಅವಧಿಯಲ್ಲಿ ಲೋಕಾಯುಕ್ತದ ಬಲವರ್ಧನೆ ವಿಚಾರದಲ್ಲಿ ಕಿಂಚಿತ್ತೂ ಯೋಚಿಸಿಲ್ಲ ಎಂಬುದು ಗೋಡೆಯ ಮೇಲಿನ ಬರಹದಷ್ಟೇ ಸ್ಪಷ್ಟ. ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ನಡೆಯುವ ತನಿಖೆಯನ್ನೂ ಸ್ವತಂತ್ರ ತನಿಖಾ ಸಂಸ್ಥೆಯಾದ ಲೋಕಾಯುಕ್ತದ ಅಧೀನಕ್ಕೆ ತರಬೇಕಾದ ಅಗತ್ಯವಿದೆ ಎಂಬ ಬೇಡಿಕೆ ನ್ಯಾಯಯುತವಾದುದು ಎಂಬುದನ್ನು ಅಂಕಿಅಂಶಗಳೇ ರುಜುವಾತುಪಡಿಸುತ್ತಿವೆ. ಈ ವಿಚಾರದಲ್ಲಿ ಇನ್ನೂ ವಿಳಂಬ ಧೋರಣೆ ಅನುಸರಿಸುವುದು ಸಾರ್ವಜನಿಕರಿಗೆ ಉತ್ತಮ ಆಡಳಿತವನ್ನು ಖಾತರಿಪಡಿಸುವ ನಾಗರಿಕ ಸರ್ಕಾರದ ಲಕ್ಷಣ ಆಗಲಾರದು. ಭ್ರಷ್ಟಾಚಾರ ಮತ್ತು ದುರಾಡಳಿತದ ವಿರುದ್ಧದ ಹೋರಾಟವನ್ನು ಗಟ್ಟಿಗೊಳಿಸುವುದಕ್ಕೆ ಪೂರಕವಾಗಿ ಲೋಕಾಯುಕ್ತವನ್ನು ಬಲವರ್ಧನೆ ಮಾಡಿ, ಸಂಸ್ಥೆಯ ಕುರಿತು ಮತ್ತೆ ಜನರಲ್ಲಿ ವಿಶ್ವಾಸ ಮೂಡಿಸುವ ಬದ್ಧತೆಯನ್ನು ಸರ್ಕಾರ ತಡಮಾಡದೇ ಪ್ರದರ್ಶಿಸಬೇಕಿದೆ.

ದಿನದ ಟ್ವೀಟ್

ಎಲ್ಲಾ ಭಾಷೆ ಗೌರವಿಸಿ

ಭಾರತೀಯರಾಗಿ ಹಿಂದಿ ಕಲಿಯಬೇಕು, ಭಾರತೀಯರಾಗಿ ಸಂಸ್ಕೃತ ಕಲಿಯಬೇಕು ಅಂತ ವಾದ ಮಾಡುವವರಿಗೆ, ಭಾರತೀಯರಾಗಿ ಎಲ್ಲಾ ಭಾಷೆಗಳನ್ನು ಗೌರವಿಸುವುದನ್ನು ಕಲಿಯಿರಿ ಎಂದು ಹೇಳಬೇಕಿದೆ.

ಅರುಣ್ ಜಾವಗಲ್, ಕನ್ನಡಪರ ಕಾರ್ಯಕರ್ತ

ಕಿಡಿನುಡಿ



ಸೂರ್ಯೋದಯಕ್ಕೆ ಮುನ್ನವೇ ಪ್ರಸಾರ ಆರಂಭಿಸಿ ರಾತ್ರಿ 11ರ ತನಕ ಸತತ 18 ಗಂಟೆ ಕಾಲ ನಿರಂತರವಾಗಿ ಕನ್ನಡ ಕಾರ್ಯಕ್ರಮಗಳನ್ನು ನೀಡುತ್ತಿರುವ '101.3 ಎಫ್‌ಎಂ ರೇನ್‌ಬೋ ಕನ್ನಡ ಕಾಮನಬಿಲ್ಲು' ರೇಡಿಯೊ ವಾಹಿನಿಯ ಕತ್ತು ಕುಯ್ಯುವ ಕೆಲಸಕ್ಕೆ ಕೇಂದ್ರ ಸರ್ಕಾರ ಹೊರಟಿರುವುದು ಅಕ್ಷಮ್ಯ. ಕನ್ನಡಕ್ಕೆ ಕೊಡಲಿ ಪೆಟ್ಟು.

ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಬುಧವಾರ, 29-1-1997

• **ಕಾವೇರಿ: ಮಾಹಿತಿ ವಿನಿಮಯ ಒಪ್ಪಂದ**

ನವದೆಹಲಿ, ಜ. 28– ಕಾವೇರಿ ನದಿ ಪಾತ್ರದ ಮಳೆ ಪ್ರಮಾಣ ಹಾಗೂ ಜಲಾಶಯಗಳ ನೀರಿನ ಹರಿವಿಗೆ ಸಂಬಂಧಿಸಿದಂತೆ ಪರಸ್ಪರ ಮಾಹಿತಿ ವಿನಿಮಯ ಮಾಡಿಕೊಳ್ಳುವ ಒಪ್ಪಂದಕ್ಕೆ ಕರ್ನಾಟಕವೂ ಸೇರಿ ನಾಲ್ಕು ರಾಜ್ಯಗಳು ಇಂದು ಸಹಿ ಹಾಕಿದವು.

ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಪುದುಚೇರಿಯ ವಕೀಲರು, ಇಂದು ಈ ಒಪ್ಪಂದಕ್ಕೆ ಸಹಿ ಹಾಕಿದ ಮನವಿ ಪತ್ರವನ್ನು ಕಾವೇರಿ ಜಲ ವಿವಾದಗಳ ನ್ಯಾಯಮಂಡಳಿಯ ಅಧ್ಯಕ್ಷ, ನ್ಯಾಯಮೂರ್ತಿ ಎನ್.ಪಿ.ಸಿಂಗ್ ಅವರಿಗೆ ನೀಡಿದರು.

50 ವರ್ಷಗಳ ಹಿಂದೆ

ಶನಿವಾರ, 29-1-1972

• **ಪುಟಾಣಿಗಳ ನಾಟಕಶಾಲೆ 'ವಿಜಯರಂಗ' ಉದ್ಘಾಟನೆ**

ಬೆಂಗಳೂರು, ಜ. 28– ರಾಜ್ಯ ಶಿಶುಕಲ್ಯಾಣ ಸಮಿತಿಯ ಮುಂದಿರುವ ಹಲವು ಆಶಾದಾಯಕ ಯೋಜನೆಗಳು ಕಾರ್ಯಗತವಾದಾಗ, ನಗರದ ಕಬ್ಬನ್ ಪಾರ್ಕಿನ ಒಂದು ಭಾಗ ಪುಟಾಣಿಗಳ ನಂದನವನವಾಗಲಿದೆ.

ಸ್ವಚ್ಛಂದ ಪ್ರವೃತ್ತಿಯ ಪುಟ್ಟ ಮಕ್ಕಳು ತಮಗೆ ಬೇಕೆನ್ನುವ ಆಟಗಳನ್ನು ಆಡಿಕೊಂಡು ಅತ್ತಿಂದಿತ್ತ ಓಡಾಡುತ್ತ, ತಿನಿಸುಗಳ ಸವಿಯನ್ನುಂಡು, 'ಪುಟಾಣಿ ಎಕ್ಸ್‌ಪ್ರೆಸ್' ರೈಲಿನಲ್ಲಿ ಪ್ರಯಾಣಿಸಿ ಪುಟಾಣಿಗಳ ರಂಗಮಂದಿರದಲ್ಲಿ ಚಲನಚಿತ್ರವನ್ನೋ ನಾಟಕವನ್ನೋ ನೋಡಿ ಆನಂದಿಸಿ ಸಂತೃಪ್ತರಾಗಿ ಮನೆಗೆ ಹಿಂದಿರುಗಬಹುದು.

ವಿಜಯರಂಗ: ಹಂತ, ಹಂತವಾಗಿ ಕಾರ್ಯಗತವಾಗಲಿರುವ ಈ ಯೋಜನೆಯಲ್ಲಿ 'ಪುಟಾಣಿ ಎಕ್ಸ್‌ಪ್ರೆಸ್' ಈಗಾಗಲೇ ಓಡಾಡುತ್ತಲಿದ್ದು, ಪುಟಾಣಿ ರಂಗಮಂದಿರವನ್ನು ರಾಜ್ಯಪಾಲ ಶ್ರೀ ಧರ್ಮವೀರ ಇಂದು ಉದ್ಘಾಟಿಸಿದರು.

'ಇದು ಮಕ್ಕಳಿಗೆ ಸಮಾಜ ಮಾಡಬಹುದಾದ ಬಹುದೊಡ್ಡ ಸೇವೆ' ಎಂದು ಅವರು ಹೇಳಿದರು.

ಮತದಾರರು ಎಚ್ಚೆತ್ತುಕೊಳ್ಳದಿದ್ದರೆ ಆಯಾರಾಂ ಭಕ್ತರೇ ನಮ್ಮನ್ನು ಆಳುತ್ತಾರೆ

ಅಯ್ಯೋ ರಾಮ ಮತ್ತೆ ಆಯಾರಾಮ!

ಅನುಸಂಧಾನ

ರವೀಂದ್ರ ಭಟ್ಟ

ಇತ್ತೀಚೆಗೆ ನಮ್ಮನ್ನು ಅಗಲಿದ ಬಂಡಾಯ ಸಾಹಿತಿ ಚಂದ್ರಶೇಖರ ಪಾಟೀಲರು ಯಾವಾಗಲೂ 'ಕನ್ನಡ, ಕನ್ನಡ ಬನ್ರಿ ನಮ್ ಸಂಗಡ' ಎನ್ನುತ್ತಿದ್ದರು. ಎಲ್ಲ ಕನ್ನಡಿಗರನ್ನೂ ಒಟ್ಟಿಗೆ ಸೇರಿಸಿಕೊಂಡು ಹೋಗುವ ಹಂಬಲ ಅವರದ್ದು. ಇದನ್ನು ತಪ್ಪಾಗಿ ಕೇಳಿಸಿಕೊಂಡ ನಮ್ಮ ರಾಜಕಾರಣಿಗಳು ಬೇರೆ ಬೇರೆ ಪಕ್ಷಗಳ ಮುಖಂಡರನ್ನು 'ಬನ್ರಿ ನಮ್ ಸಂಗಡ' ಎಂದು ಕರೆಯುತ್ತಿದ್ದಾರೆ. ಇದು ಒಟ್ಟಿಗೆ ತೆಗೆದುಕೊಂಡು ಹೋಗುವ ನಡೆಯಂತೆ ಕಾಣುತ್ತಿಲ್ಲ.

ವಿಧಾನಸಭೆ ಚುನಾವಣೆಗೆ ಇನ್ನೂ ಒಂದೂವರೆ ವರ್ಷ ಬಾಕಿ ಇರುವಾಗಲೇ ರಾಜ್ಯದಲ್ಲಿ ಪಕ್ಷಾಂತರದ ಗುಲ್ಲು ಆರಂಭವಾಗಿದೆ. ಇವರು 'ಬನ್ರಿ ಬನ್ರಿ' ಅನ್ನುವುದು, ಅವರು 'ಇಲ್ಲ, ಬರಲ್ಲ ಬರಲ್ಲ' ಅನ್ನುವುದು ನಡೆಯುತ್ತಿದೆ. ಅವರು ಇವರಿಗೆ ಬುದ್ಧಿ ನೆಟ್ಟಗಿಲ್ಲ ಅನ್ನುವುದು, ಇವರು ಅವರಿಗೆ ನಿಮ್ಹಾನ್ಸ್‌ನಿಂದ ಹೊರಬಂದವರು ಎಂದು ಟೀಕಿಸುವುದು ಆರಂಭವಾಗಿದೆ. ರಾಜಕೀಯ ಹವಾಮಾನ ವೈಪರೀತ್ಯ ಹೆಚ್ಚಾಗಿದ್ದು ಅಕಾಲದಲ್ಲಿ ಗಾಳಿ ಬಿರುಗಾಳಿ ಶುರುವಾಗಿಬಿಟ್ಟಿದೆ. ಗುಡುಗು ಸಿಡಿಲು ಇದೆ. ಮಳೆ ಜೋರು ಬರುವ ಲಕ್ಷಣಗಳೂ ಕಾಣುತ್ತಿವೆ. ಈ ಅಕಾಲ ರಾಜಕೀಯ ಮಳೆಯಿಂದ ಮತದಾರರಿಗೆ ಅನುಕೂಲವಾಗುವ ಲಕ್ಷಣವಂತೂ ಇಲ್ಲ. ಅಕಾಲ ಮಳೆ ಯಾವಾಗಲೂ ನಷ್ಟವನ್ನೇ ತರುವುದು.

ಸಾಮಾನ್ಯವಾಗಿ ಆಯಾರಾಂ ಗಯಾರಾಂ ಶುರುವಾಗುವುದು ಚುನಾವಣೆ ಇನ್ನೇನು ಬಂದೇಬಿಟ್ಟಿತು ಎಂಬ ಕಾಲಘಟ್ಟದಲ್ಲಿ. ಅಂದರೆ ವಿಧಾನಸಭೆ ಚುನಾವಣೆಗೆ ಮೂರು ಅಥವಾ ಆರು ತಿಂಗಳು ಇರುವಾಗ ಇಂತಹ ನೆಗೆದಾಟಗಳು ನಡೆಯುತ್ತವೆ. ಈಗ ಉತ್ತರಪ್ರದೇಶ, ಪಂಜಾಬ್, ಗೋವಾಗಳಲ್ಲಿ ಅಂತಹ ವಿದ್ಯಮಾನಗಳು ನಡೆಯುತ್ತಿವೆ. ಅದೊಂದು ಮಾಮೂಲು ಎಂದು ಮತದಾರರೂ ಅಂದುಕೊಂಡಿದ್ದಾರೆ. ಆದರೆ ಕರ್ನಾಟಕದಲ್ಲಿ ಈಗಲೇ ಅಂತಹ ಚರ್ಚೆಯೊಂದು ಆರಂಭವಾಗಿರುವುದು ಆಡಳಿತ ಮತ್ತು ವಿರೋಧ ಪಕ್ಷಗಳು ತಮ್ಮ ನೆಲೆಯನ್ನು ಗಟ್ಟಿ ಮಾಡಿಕೊಳ್ಳುವುದಕ್ಕೆ ಹಾಗೂ ಮತ್ತೊಂದು ಪಕ್ಷದಲ್ಲಿ ಬಿರುಕು ಹುಟ್ಟಿಸುವುದಕ್ಕೆ ನಡೆಸಿದ ಯತ್ನದಂತೆ ಕಾಣುತ್ತಿದೆ. ಇದರಲ್ಲಿ ಸಾರ್ವಜನಿಕ ಹಿತವಂತೂ ಕಾಣುತ್ತಿಲ್ಲ. ಸ್ವಾರ್ಥ ಕಣ್ಣಿಗೆ ರಾಚುತ್ತಿದೆ.

'ಬಿಜೆಪಿಯ ಹಲವಾರು ಸಚಿವರು ಮತ್ತು ಶಾಸಕರು ನಮ್ಮ ಸಂಪರ್ಕದಲ್ಲಿದ್ದಾರೆ' ಎಂದು ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳುತ್ತಿದ್ದಾರೆ. ಸಮ್ಮಿಶ್ರ ಸರ್ಕಾರವನ್ನು ಪತನಗೊಳಿಸಿ ಬಿಜೆಪಿಗೆ ಹೋಗಿ ಸಚಿವರಾಗಿರುವವರ ಭವಿಷ್ಯವನ್ನು ಮಂಕು ಮಾಡುವುದೇ ಈ ಹೇಳಿಕೆಯ ಉದ್ದೇಶ ಇರುವಂತಿದೆ. ಜೊತೆಗೆ ಆಡಳಿತ ಪಕ್ಷದಲ್ಲಿ ಒಂದಿಷ್ಟು ತಲ್ಲಣ ಉಂಟು ಮಾಡಲು ಅವರ ಬಾಣ ಪ್ರಯೋಗ. ಅದು ಯಶಸ್ವಿಯಾದಂತೆಯೂ ಕಾಣುತ್ತಿದೆ. ಸರ್ಕಾರವನ್ನು ಕೆಡವಿ ಬಿಜೆಪಿಗೆ ಹೋದವರನ್ನು ಮತ್ತೆ ಪಕ್ಷಕ್ಕೆ ಸೇರಿಸಿಕೊಳ್ಳುವ ಮಾತೇ ಇಲ್ಲ ಎಂದೂ ಕಾಂಗ್ರೆಸ್ ಮುಖಂಡರು ಹೇಳುತ್ತಿದ್ದಾರೆ. ಬಿಜೆಪಿ ನಾಯಕರಿಗೂ ಬಿಜೆಪಿ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬರಲು ಕಾರಣರಾದ ಶಾಸಕರ ಬಗ್ಗೆಯೇ ಅನುಮಾನ. ಮತ್ತೆ ಅವರು ಕಾಂಗ್ರೆಸ್‌ಗೆ ಹೋಗಬಹುದು ಎಂಬ ಶಂಕೆ ಇದ್ದೇ ಇದೆ. ಆದರೂ ಬಹಿರಂಗವಾಗಿ 'ಯಾರೂ ಪಕ್ಷ ಬಿಡಲ್ಲ' ಎಂದು ತಮಗೇ ತಾವು ಹೇಳಿಕೊಳ್ಳುತ್ತಿದ್ದಾರೆ. ಪಕ್ಷ ಬಿಟ್ಟುಬಂದು ಇಲ್ಲಿ ಮಂತ್ರಿಯಾದವರಂತೂ ತಾವು ಅತ್ಯಂತ ಪವಿತ್ರರು ಎಂಬಂತೆ ಮಾತನಾಡುತ್ತಿದ್ದಾರೆ. ಅವರ ಮಾತುಗಳಲ್ಲಿ ಅವರಿಗೂ ನಂಬಿಕೆ ಇಲ್ಲ, ಅವರ ಪಕ್ಷದ ಮುಖಂಡರಿಗೂ ಇಲ್ಲ, ಮತದಾರರಿಗಂತೂ ಮೊದಲೇ ಇಲ್ಲ. ಇದೊಂದು ನಾಟಕದಂತೆಯೇ ಕಾಣುತ್ತಿದೆ.

ಚುನಾವಣೆ ಸಂದರ್ಭದಲ್ಲಿ ಪಕ್ಷಾಂತರವು ಲಾಗಾಯ್ತಿನಿಂದಲೂ ಇತ್ತು. ಆದರೆ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಸ್ಥಿರತೆ ಕಾಪಾಡಿಕೊಳ್ಳಲು ವಿರೋಧ ಪಕ್ಷಗಳ ಶಾಸಕರ ರಾಜೀನಾಮೆ ಕೊಡಿಸಿ ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳುವ ಮೂಲಕ 'ಆಪರೇಷನ್ ಕಮಲ'ದ ಹೆಸರಿನಲ್ಲಿ ಹೊಸ ಪಕ್ಷಾಂತರ ಪರ್ವವನ್ನು ಆರಂಭಿಸಿದ್ದು ಬಿಜೆಪಿ. ಆ ಮಟ್ಟಿಗೆ ರಾಜಕೀಯ ರಂಗದಲ್ಲಿ ಬಿಜೆಪಿಯದ್ದು ನವ ಶೋಧ. ಬಹಳ ಕಾಲದವರೆಗೆ ಚುನಾವಣೆ ಹೊಸ್ತಿಲಲ್ಲಿ ರಾಮ ಜಪ ಮಾಡುತ್ತಿದ್ದ ಬಿಜೆಪಿಗೆ ಅಧಿಕಾರಕ್ಕೆ ಬರಲು ಮತ್ತು ಅಧಿಕಾರದಲ್ಲಿ ಉಳಿಯಲು ರಾಮ ಜಪ ಸಾಕಾಗದು, ಆಯಾರಾಮ ಜಪ ಬೇಕು ಎಂಬ ಜ್ಞಾನೋದಯ ಆಗಿದೆ. ಅದು ಉತ್ತರಪ್ರದೇಶವಾಗಲಿ, ಗೋವಾ ಆಗಲಿ, ಕರ್ನಾಟಕ ಆಗಲಿ ಎಲ್ಲ ಕಡೆ ರಾಮನಿಗಿಂತ ಆಯಾರಾಮಗಳೇ ಅವರಿಗೆ ಹೆಚ್ಚು ಪ್ರಿಯವಾದಂತೆ ಕಾಣುತ್ತಿದೆ.

ದೇಶದ ರಾಜಕೀಯದಲ್ಲಿ ಕೊಂಚ ಭರವಸೆ ಮೂಡಿಸಿದ್ದ ಎಎಪಿಯವರು ಕೂಡಾ ಆಯಾರಾಂ ಭಕ್ತರಾದಂತಿದೆ. ಗೋವಾದಲ್ಲಿ ಮಾಜಿ ಮುಖ್ಯಮಂತ್ರಿ ಮನೋಹರ ಪರಿಕ್ಕರ್ ಅವರ ಪುತ್ರ ಉತ್ಪಲ್ ಪರಿಕ್ಕರ್ ಅವರಿಗೆ ಬಿಜೆಪಿ ಟಿಕೆಟ್ ನಿರಾಕರಿಸಿದ ತಕ್ಷಣ ಎಎಪಿ ನಾಯಕರು ತಮ್ಮ ಪಕ್ಷಕ್ಕೆ ಬರುವಂತೆ ಕರೆದಿದ್ದಾರೆ. ಅಂದರೆ ಚುನಾವಣೆ ಹೊತ್ತಿನಲ್ಲಿ ಎಲ್ಲರೂ ಆಯಾರಾಂ ಭಕ್ತರೇ ಆಗಿರುತ್ತಾರೆ. ಈ ರೋಗ ಯಾವ ಪಕ್ಷವನ್ನೂ ಬಿಡುವಂತೆ ಕಾಣುತ್ತಿಲ್ಲ. ಕೊರೊನಾಕ್ಕಿಂತ ಕೆಟ್ಟ ವೈರಸ್ ಇದು. ಸಾಂಕ್ರಾಮಿಕವೂ ಹೌದು. ಮತದಾರರು ಬೇಗ ವ್ಯಾಕ್ಸಿನ್ ಕಂಡುಕೊಂಡರೆ ಸಮಾಜಕ್ಕೆ ಒಳ್ಳೆಯದು.

ದೇವನೂರ ಮಹಾದೇವ ಅವರು 'ಎದೆಗೆ ಬಿದ್ದ ಅಕ್ಷರ' ಪುಸ್ತಕದಲ್ಲಿ ಒಂದು ಘಟನೆಯನ್ನು ಪ್ರಸ್ತಾಪಿಸುತ್ತಾರೆ. ಈ ಘಟನೆ ಮೈಸೂರಿನ ಸ್ಥಳೀಯ ಪತ್ರಿಕೆಗಳಲ್ಲಿ ವರದಿಯಾಗಿತ್ತು ಎಂದೂ ಅವರು ಬರೆಯುತ್ತಾರೆ. ಘಟನೆ ಹೀಗಿದೆ: ವೃದ್ಧರೊಬ್ಬರು ಪೇಪರ್ ಓದುತ್ತಾ ಸಾಗುತ್ತಿದ್ದರು. ಬಿಜೆಪಿ ಶಾಸಕ ಎ.ರಾಮದಾಸ್ ಆ ವೃದ್ಧರಲ್ಲಿ ಬಿಜೆಪಿಗೆ ಮತ ನೀಡುವಂತೆ ಮನವಿ ಮಾಡಿಕೊಂಡರು. ಒಡನೆಯೇ ಕಿಡಿಕಿಡಿಯಾದ, ನಿವೃತ್ತ ಸರ್ಕಾರಿ ನೌಕರರೂ ಆಗಿರುವ ಆ ವೃದ್ಧರು 'ಯಾವ ಬಿಜೆಪಿ? ನಾನೂ ಬಿಜೆಪಿಯವನೆ, ತುಂಬಾ ನೋವಾಗುತ್ತಿದೆ. ಮೊದಲು ಆಪರೇಷನ್ ಕಮಲ ನಿಲ್ಲಿ. ಇಲ್ಲದಿದ್ದರೆ ಬಿಜೆಪಿ ಸರ್ವನಾಶವಾಗುತ್ತದೆ' ಎಂದು ಕೋಪದಿಂದ ನುಡಿದಾಗ, ಅವರನ್ನು ಮುಟ್ಟಿ ಸಮಾಧಾನ ಪಡಿಸಲು ರಾಮದಾಸ್ ಮುಂದಾದರು. ಆಗ ಆ ವೃದ್ಧರು 'ದೂರ ಸರಿಯಿರಿ, ನನ್ನ ಮುಟ್ಟಬೇಡಿ ಮೈಲಿಗೆಯಾಗುತ್ತದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಮದಾಸ್ ಅವರ ಜೊತೆಗೆ ಇದ್ದ ಆರ್‌ಎಸ್‌ಎಸ್ ಕಾರ್ಯಕರ್ತ ದಾಮೋದರ ಬಾಳಿಗ ಅವರು 'ಕೋಪ ಮಾಡ್ಕೊಬೇಡಿ' ಎಂದು ಸಮಾಧಾನಿಸಲು ಮುಂದಾದಾಗ ಆ ವೃದ್ಧರು 'ನೀನೂ ಹೊಲಸಾಗಿದ್ದೀಯ, ದೂರ ಸರಿ. ಆಪರೇಷನ್ ಕಮಲ ಬೇಡ ಎಂದು ಬಿಜೆಪಿಯವರಿಗೆ ಬುದ್ಧಿ ಕಲಿಸಲಾಗುವುದಿಲ್ಲವೇ? ನನ್ನ ಮುಟ್ಟಬೇಡ' ಎಂದು ಬಿರಬಿರನೆ ಹೊರಟುಹೋದರು.

ರಾಜ್ಯ ರಾಜಕಾರಣವನ್ನು ಆಪರೇಷನ್ ಕಮಲದಿಂದ ಕೊಳಕು ಮಾಡಿದ ಬಿಜೆಪಿಗೆ ಶಾಪ ಕೊಡುವ ಋಷಿಮುನಿಯಂತೆ ಆ ವೃದ್ಧರು ಕಂಡರು ಎಂದು ದೇವನೂರ ಹೇಳುತ್ತಾರೆ. ಈ ಶಾಪ ಕೇವಲ ಬಿಜೆಪಿಗೆ ತಟ್ಟುವುದಿಲ್ಲ, ಇಂತಹ ಕೃತ್ಯ ಮಾಡುವ ಎಲ್ಲ ಪಕ್ಷಗಳಿಗೂ ತಟ್ಟುತ್ತದೆ. ಆಪರೇಷನ್ ಕಮಲ ಕಮಲವ್ಯಾಧಿಯಾಗಿ ಆ ವೃದ್ಧರಿಗೆ ಕಂಡಿರಬೇಕು. ಇಂತಹ ಪಕ್ಷವು ಸಂಸಾರಸ್ಥರ ಮನೆಯಂತೆ ಕಂಡಿರಲಾರದು. ಯಾರೋ ಬರ್ತಾನೆ, ರಾತ್ರಿ ಮಲಗಿರ್ತಾನೆ, ಬೆಳಿಗ್ಗೆ ಎದ್ದು ಇನ್ನೊಂದು ಮನೆಗೆ ಹೋಗ್ತಾನೆ, ನಾಳೆ ಇನ್ನೊಬ್ಬ ಬರ್ತಾನೆ, ಮನೆಯ ಯಜಮಾನ ಹಲ್ಲುಗಿಂಜುತ್ತಾ ಕೈಹೊಸಕುತ್ತಾ ಬರುವವರನ್ನೆಲ್ಲಾ ಸಂಭ್ರಮದಿಂದ ಸ್ವಾಗತಿಸುತ್ತಾ ಇರುತ್ತಾನೆ. ಹೀಗೆ ಕಂಡಿದ್ದರಿಂದಲೇ ಆ ವೃದ್ಧರಿಗೆ ಅಸಹ್ಯ ಹುಟ್ಟಿದೆ.

ಇನ್ನೇನು ಹುಟ್ಟಲು ಸಾಧ್ಯ? ಇಂತಹ ಸಾತ್ವಿಕರು ಎಲ್ಲ ಪಕ್ಷಗಳಲ್ಲೂ ಇದ್ದಾರೆ. ಅವರು ಈಗಲಾದರೂ ತಮ್ಮ ಸಿಟ್ಟನ್ನು ತೋರಿಸಬೇಕು ಎಂದು ದೇವನೂರ ಮಹಾದೇವ ಹೇಳುತ್ತಾರೆ. ಇದು ಅವರೊಬ್ಬರ ಅನಿಸಿಕೆ ಅಲ್ಲ. ಎಲ್ಲ ಪ್ರಜ್ಞಾವಂತ ಮತದಾರರ ಅಭಿಪ್ರಾಯವೂ ಹೌದು.

ಈಗಲೂ ನಾವು ಎಚ್ಚೆತ್ತುಕೊಳ್ಳದಿದ್ದರೆ ಮುಂದಿನ ಚುನಾವಣೆಯಲ್ಲಿ ರಾಮಭಕ್ತರು, ದೇಶಭಕ್ತರು, ಸಂವಿಧಾನ ಭಕ್ತರು ನಮ್ಮನ್ನು ಆಳುವುದಿಲ್ಲ, ಆಯಾರಾಂ ಭಕ್ತರೇ ಆಳುತ್ತಾರೆ.

ಚುರುಮುರಿ



ಭವಿಷ್ಯವಾಣಿ!

• ಎಸ್.ಬಿ.ರಂಗನಾಥ್

'ಈ ಪಂಚರಾಜ್ಯಗಳ ಮಿನಿ ಮಹಾಚುನಾವಣೆಯಲ್ಲಿ ಬೀಳೋರ‍್ಯಾರು, ಏಳೋರ‍್ಯಾರಯ್ಯಾ?', ಕನ್ನಡದ ಕೋಟ್ಯಧಿಪತಿ ಕ್ವಿಜ್ ಕಾರ್ಯಕ್ರಮದಲ್ಲಿ ರಮೇಶ್ ಅರವಿಂದ್ ಶೈಲಿಯಲ್ಲಿ ಪ್ರಶ್ನೆ ಎಸೆದ ಗೆಳೆಯ.

'ಭವಿಷ್ಯ ಹೇಳೋಕೆ ನಾನು ಬ್ರಹ್ಮಾಂಡ ಜ್ಯೋತಿಷಿಯೂ ಅಲ್ಲ, ನೋಸ್ಟರ್ ಡಾಮಸ್ಸೂ ಅಲ್ಲ. ಈಗಲೇ ಏನೂ ಹೇಳೋಕಾಗಲ್ಲ. ಎಲ್ಲ ಪಕ್ಷಗಳೂ ಗದ್ದುಗೆ ಏರಲು ಮಾಡುತ್ತಿರುವ ಕಸರತ್ತು ಒಂದೇ ಎರಡೇ? ಮತದಾರರಿಗೆ ಎಂತೆಂಥಾ ಆಕರ್ಷಕ ಯೋಜನೆಗಳು, ಉಚಿತ ಕೊಡುಗೆ ಆಶ್ವಾಸನೆಗಳ ಮಹಾಪೂರ. ಈ ಗ್ರ್ಯಾಂಡ್ ತಮಾಷಾದಿಂದ ನಮಗೆಲ್ಲಾ ಉಚಿತ ಮನರಂಜನೆ. ಕುದುರೆ ವ್ಯಾಪಾರದಲ್ಲಿ, ಬೇಲಿ ಹಾರೋದರಲ್ಲಿ ಗೋವಾದ ನಾಯಕರು ವಿಶ್ವದಾಖಲೆ ಮಾಡಿದಾರಂತೆ!' ಎಂದೆ.

'ಈ ಸಮರದಲ್ಲಿ ಅಣ್ತಮ್ಮ, ಮಾವ- ಸೊಸೆ ಜಿದ್ದಾಜಿದ್ದಿಗೆ ಬಿದ್ದಿದಾರೆ, ಸಿನಿಮಾ ತಾರೆಯರು, ಕ್ರೀಡಾಪಟುಗಳು, ಎಂಟಡಿ ಎತ್ತರದ ಲಂಬೂಜಿ ಕ್ಯಾನ್ವಾಸಿಗೆ ಇಳಿದಿದಾರೆ!'

'ಮೈ ಲಡಕೀ ಹೂ, ಮೈ ಲಡ್ ಸಕ್ತೀ ಹೂ ಅಂತ ಪ್ರಿಯಾಂಕಾ ವಾದ್ರಾ ಸಮರ ಸಾರಿದಾರೆ!'

'ಈ ಸಂದರ್ಭದಲ್ಲಿ ರಾಷ್ಟ್ರೀಯ ಹೆಣ್ಣು ಮಗುವಿನ ದಿನಾಚರಣೆ ಬಂದಿದ್ದು ಕಾಕತಾಳೀಯ'.

'ಮಹಿಳಾ ದಿನಾಚರಣೆ ಇರೋದು ಮಾರ್ಚ್‌ನಲ್ಲಿ ಅಲ್ವೇನಯ್ಯಾ?'

'ಮಾರ್ಚ್ ಎಂಟರಂದು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ. ಜನವರಿ 24ರಂದು ಹೆಣ್ಣು ಮಗುವಿನ ರಾಷ್ಟ್ರೀಯ ದಿನಾಚರಣೆ. ನಮ್ಮ ದೇಶಕ್ಕೆ ಇಂದಿರಾ ಗಾಂಧಿ ಭಾರತದ ಪ್ರಧಾನಿ ಆದ ಈ ದಿನವನ್ನು 2009ರಿಂದ ಆ ಹೆಸರಿನಲ್ಲಿ ಆಚರಿಸಲಾಗುತ್ತದೆ'.

'ಇದು ಇನ್ನೆಷ್ಟು ಕಾಲ ಮುಂದುವರಿಯುತ್ತೋ ಹೇಳಲು ಬರುವುದಿಲ್ಲ'.

'ಯಾಕೋ?'

'ನಮ್ಮ ದೇಶದಲ್ಲೀಗ ರಾಜ್ಯಗಳ, ನಗರಗಳ ಹೆಸರು ಬದಲಾವಣೆ ಪರ್ವ ನಡೆಯುತ್ತಿದೆಯಲ್ಲ... ಕಮಲಪತಿಗಳಿಂದ 'ಹಸ್ತ'ಕ್ಷೇಪ ಗ್ಯಾರಂಟಿ'.

ನನ್ನ ಭವಿಷ್ಯವನ್ನು ಕೇಳಿ ಮಿತ್ರ ದಂಗಾದ.

ಸಂಗತ

ಕಸಾಪ: ನಿರೀಕ್ಷೆಗಳ ಭಾರಕ್ಕೆ ಕುಸಿದೀತು!

ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಈಗ ಪ್ರತಿನಿಧಿಸುತ್ತಿರುವುದೇನು?

• ರಾ.ನಂ.ಚಂದ್ರಶೇಖರ

'ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ' ಎನ್ನುವ ಹಿರಿಮೆಯನ್ನು ಹೊಂದಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಬಗ್ಗೆ ನಮಗೆಲ್ಲ ಸಹಜವಾದ ಹೆಮ್ಮೆ ಇದೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ಈ ಸಂಸ್ಥೆಯು ಇಡುತ್ತಿರುವ ಹೆಜ್ಜೆಗಳು ನಿಜಕ್ಕೂ ಕನ್ನಡಿಗರನ್ನು ಕಳವಳಕ್ಕೆ ಈಡು ಮಾಡಿವೆ. ಅದರಲ್ಲೂ ಪರಿಷತ್ತಿನ ರಾಜ್ಯ ಘಟಕದ ಅಧ್ಯಕ್ಷ ಮಹೇಶ್ ಜೋಶಿ ಅವರು ವ್ಯಕ್ತಪಡಿಸುತ್ತಿರುವ ವಿಚಾರಗಳನ್ನು ಕೇಳಿದರೆ, ಪರಿಷತ್ತಿನ ಭವಿಷ್ಯದ ಸ್ಥಿತಿಗತಿಯ ಬಗ್ಗೆ ಆತಂಕವಾಗುತ್ತದೆ.

ಜೋಶಿಯವರು ಅಧ್ಯಕ್ಷರಾಗಿ ಬಂದಮೇಲೆ ಚಿತ್ರ ವಿಚಿತ್ರ ಘೋಷಣೆಗಳನ್ನು ಮಾಡುತ್ತಿದ್ದಾರೆ. ಕಸಾಪ ಸದಸ್ಯರ ಸಂಖ್ಯೆಯನ್ನು 1 ಕೋಟಿಗೆ ಏರಿಸುವುದು, ಸದಸ್ಯತ್ವ ಶುಲ್ಕವನ್ನು ₹ 500ರಿಂದ ₹ 250ಕ್ಕೆ ಇಳಿಸುವುದು, ಸದಸ್ಯತ್ವ ಪಡೆಯುವವರು ಪರೀಕ್ಷೆ ಬರೆಯಬೇಕೆಂಬ ಪ್ರಸ್ತಾಪ, ನಿವೃತ್ತ ಸೈನಿಕರಿಗೆ ಗೌರವ ಸದಸ್ಯತ್ವ ಕೊಡುವುದು, ಜಿಲ್ಲಾ, ತಾಲ್ಲೂಕು ಘಟಕಗಳ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವವರಿಗೆ ಒಂದು ಮಟ್ಟದ ಶಿಕ್ಷಣವನ್ನು ಕಡ್ಡಾಯಗೊಳಿಸುವುದು, ಚುನಾವಣೆಗೆ ಸ್ಪರ್ಧಿಸಿ ಠೇವಣಿ ಕಳೆದುಕೊಂಡಿರುವವರು ಪುನಃ ಚುನಾವಣೆಗೆ ಸ್ಪರ್ಧಿಸದಂತೆ ಬೈಲಾ ತಿದ್ದುವ ಚಿಂತನೆ, ಮಹಿಳೆಯರು, ಅಂಗವಿಕಲರಿಗೆ ಉಚಿತವಾಗಿ ಕಸಾಪ ಸದಸ್ಯತ್ವ... ಇದರ ಜತೆಗೆ, ತಾವೇ ಸಂಪುಟ ದರ್ಜೆಯ ಸ್ಥಾನಮಾನ ಬಯಸಿ ಇದಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ಸಚಿವರ ಮೂಲಕ ಪತ್ರ ಬರೆಯಿಸಿದ್ದೂ ಆಗಿದೆ!

ಕನ್ನಡ ಸಾಹಿತ್ಯ ಪರಿಷತ್ತೆಂದರೆ, ಅದು ಕನ್ನಡ ನಾಡು-ನುಡಿಗಳ ಪರ ಒಂದು ಸರ್ಕಾರವು ಮಾಡಬೇಕಾದ ಕೆಲಸಕ್ಕೆ ಬೇಕಾದ ಬೌದ್ಧಿಕ ಚಿಂತನೆಯನ್ನು ಕಟ್ಟಿಕೊಟ್ಟು, ಆ ಕೆಲಸ ಆಗುವಂತೆ ಆಗ್ರಹಿಸಬೇಕಾದ ಮತ್ತು ಅನುಸರಣ ಕಾರ್ಯ (ಫಾಲೋಅಪ್) ಮಾಡಬೇಕಾದ ಸಂಸ್ಥೆ. ಅಂದರೆ, ಇದಕ್ಕೊಂದು ಸಾಂಸ್ಕೃತಿಕ ಚೌಕಟ್ಟು ಮತ್ತು ಗಾಂಭೀರ್ಯದ ವಾತಾವರಣ ಇರಬೇಕಾಗುತ್ತದೆ. ಕಸಾಪ ತನ್ನಲ್ಲಿ ದುಡ್ಡಿಲ್ಲದ ಕಾಲದಲ್ಲಿ ಇಂತಹ ಕೆಲಸಗಳನ್ನು ಮಾಡುತ್ತಿತ್ತು. ಮಹಾನ್ ಸಾಹಿತ್ಯ ಸಾಧಕರು, ಕನ್ನಡ ಪರಿಚಾರಕರು ಅಧ್ಯಕ್ಷರಾಗಿದ್ದಾಗ ಪರಿಷತ್ತಿಗೆ ಆರ್ಥಿಕ ಚೈತನ್ಯವೇ ಇರಲಿಲ್ಲ. ಆಗೆಲ್ಲ ಇದ್ದ ಸದಸ್ಯರ ಸಂಖ್ಯೆ ಕೆಲವು ಸಾವಿರ ಮಾತ್ರ. ಸರ್ಕಾರ ಕೊಡುತ್ತಿದ್ದ ನೆರವೂ ಅತ್ಯಲ್ಪ. ಆದರೂ ಅದು ತನ್ನ ಕನ್ನಡಪರ ಕೆಲಸ, ಚಿಂತನೆಗಳಿಂದ ನಾಡಿನ ಗಮನ ಸೆಳೆಯುತ್ತಿತ್ತು. ಸರ್ಕಾರ ಕಸಾಪವನ್ನು ಕನ್ನಡಿಗರ ದನಿ ಎಂದು ಗುರುತಿಸಿತ್ತು. ಆ ಕಾಲದಲ್ಲಿ ಕಸಾಪ ನಡೆಸುತ್ತಿದ್ದ ಸಂಶೋಧನಾ ಚಟುವಟಿಕೆಗಳು, ಕಾರ್ಯಕ್ರಮಗಳು, ಪ್ರಕಟಿಸುತ್ತಿದ್ದ ಪುಸ್ತಕಗಳು ಗೌರವದ ಭಾವನೆಯನ್ನು ಹುಟ್ಟಿಸುತ್ತಿದ್ದವು.

ಆದರೆ ಈಗ ಕಸಾಪ ಬಳಿ ಬೇಕಾದಷ್ಟು ಹಣವಿದೆ, ಕಾಲಕಾಲಕ್ಕೆ ಸಭಾಂಗಣಗಳ ನವೀಕರಣ ಇತ್ಯಾದಿಗಳನ್ನು ಸರ್ಕಾರವೇ ಮಾಡಿಸುತ್ತಿದೆ, ಸಮ್ಮೇಳನಗಳಿಗೆಂದು ಕೋಟ್ಯಂತರ ರೂಪಾಯಿ ಕೊಡುತ್ತದೆ. ಅಲ್ಲಿನ ಸಿಬ್ಬಂದಿ ವರ್ಗದ ವೇತನಕ್ಕೇನೂ ತೊಂದರೆಯಿಲ್ಲ. ದುರಂತವೆಂದರೆ, ಈಗ ಕೋಟಿ ಸದಸ್ಯರನ್ನು ಮಾಡುವಂತಹ ಬಾಲಿಶ ಮಾತು ಕೇಳಿಬರುತ್ತಿದೆ. ಪರಿಷತ್ತು ಈಗಾಗಲೇ 3 ಲಕ್ಷಕ್ಕೂ ಹೆಚ್ಚು ಸದಸ್ಯರನ್ನು ಹೊಂದಿದ್ದು, ಇದೇ ಹೊರೆಯಾಗಿದೆ. ಈಗ ಕೋಟಿ ಸದಸ್ಯರಾದರೆ ಇಂತಹ ಒಂದು ಚಾರಿತ್ರಿಕವಾದ ಸಂಸ್ಥೆ ತನ್ನ ಭಾರಕ್ಕೆ ತಾನೇ ಕುಸಿಯುವುದು ನಿಚ್ಚಳ! ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಎನ್ನುವ ಮನ್ನಣೆ ಪಡೆದಿದ್ದು ಸದಸ್ಯರ ಸಂಖ್ಯೆಯಿಂದಲ್ಲ, ಬದಲಿಗೆ ತನ್ನ ಮೌಲಿಕವಾದ ಕೆಲಸಗಳಿಂದ ಎಂಬುದನ್ನು ಮರೆಯಬಾರದು.

ಕಸಾಪ ಸದಸ್ಯರಾಗಲು ಬಯಸುವವರು ಪರೀಕ್ಷೆ ಬರೆಯುವಂತಾಗಬೇಕು ಎನ್ನುವುದಂತೂ ಪ್ರಜ್ಞಾವಂತರು ಕಲ್ಪಿಸಿಕೊಳ್ಳಲೂ ಆಗದಂತಹ ವಿಚಾರವಾಗಿದೆ. ದೇಶದ ರಾಷ್ಟ್ರಪತಿ ಆಗಲು, ಪ್ರಧಾನಿಯಾಗಲು, ಮುಖ್ಯಮಂತ್ರಿ, ಶಾಸಕ, ಎಂಎಲ್‌ಸಿ, ಕಾರ್ಪೊರೇಟರ್, ಸ್ವತಃ ಕಸಾಪ ಅಧ್ಯಕ್ಷರಾಗಲು ಯಾವುದಾದರೂ ಪರೀಕ್ಷೆ ಇದೆಯೇ? ಒಂದು ವೇಳೆ, ಜೋಶಿಯವರು ಕಸಾಪ ಚುನಾವಣೆಯನ್ನು ಎದುರಿಸಲು ಪರೀಕ್ಷೆ ಬರೆಯುವುದನ್ನು ಕಡ್ಡಾಯ ಮಾಡಿದ್ದರೆ ಹೇಗಿರುತ್ತಿತ್ತು? ಕನ್ನಡ- ಕನ್ನಡಿಗ- ಕರ್ನಾಟಕದ ಬಗ್ಗೆ ಸ್ವೋಪಜ್ಞ ಚಿಂತನೆಗಳು ಇಲ್ಲದಿದ್ದರೆ ಮತ್ತು ಒಂದು ಸಂಸ್ಥೆಯಲ್ಲಿ ಬೌದ್ಧಿಕ ಪರಿಶ್ರಮ ಕಾಣೆಯಾಗಿ ಅದು 'ಕಂಫರ್ಟ್ ಝೋನ್'ಗೆ ಬಂದರೆ ಏನಾಗುತ್ತದೆ ಎನ್ನುವುದಕ್ಕೆ ಇದೊಂದು ನಿದರ್ಶನವಾಗಿದೆ.

ಇನ್ನು ನಿವೃತ್ತ ಸೈನಿಕರಿಗೆ ಗೌರವ ಸದಸ್ಯತ್ವದ ವಿಚಾರಕ್ಕೆ ಬಂದರೆ, ಈ ಯೋಧರ ಬಗ್ಗೆ ಎಲ್ಲರಿಗೂ ಗೌರವವಿದೆ. ಅಧ್ಯಕ್ಷರು ಇದನ್ನು ವ್ಯಕ್ತಪಡಿಸಲು ಬೇಕಾದರೆ, ವರ್ಷಕ್ಕೆ ಐದೋ ಹತ್ತೋ ನಿವೃತ್ತ ಸೈನಿಕರಿಗೆ ಸಾಂಕೇತಿಕವಾಗಿ ಈ ಗೌರವ ಸದಸ್ಯತ್ವ ನೀಡಲಿ. ಅದನ್ನು ಬಿಟ್ಟು ಸಾಮೂಹಿಕವಾಗಿ ಉಚಿತ ಸದಸ್ಯತ್ವ ಕೊಡುವುದರಿಂದ ಪರಿಷತ್ತಿಗೆ ಆಗುವ ಪ್ರಯೋಜನವೇನು?

ಒಟ್ಟಿನಲ್ಲಿ, ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್, ದಿವಾನರುಗಳಾದ ಸರ್ ಎಂ. ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್ ಮುಂತಾದವರ ಯೋಗದಾನದಿಂದ ಬೆಳೆದ ಕನ್ನಡ ಸಾಹಿತ್ಯ ಪರಿಷತ್ತನ್ನು ಈಗ ಅದರ ಮೂಲ ಆಶಯಗಳೊಂದಿಗೆ ಮತ್ತೆ ಪ್ರತಿಷ್ಠಾಪಿಸಬೇಕಾಗಿದೆ. ಇಲ್ಲದಿದ್ದರೆ, ಈಗಾಗಲೇ ನಿಜವಾದ ಸಾಹಿತ್ಯಾಸಕ್ತರಿಂದ ದೂರವಾಗಿರುವ ಕಸಾಪ, ಅದೇ ಹಾದಿಯಲ್ಲಿ ಮುಂದುವರಿಯುತ್ತದೆ. ಸಾಹಿತ್ಯ ಪರಿಷತ್ತಿನ ನೆಲೆ-ಬೆಲೆಗಳಿಗೆ ಈಗಾಗಲೇ ಮುಕ್ಕು ಬಂದಿದೆ. ಹೀಗೆ ಕಳೆದುಹೋಗಿರುವ ಮನ್ನಣೆಯನ್ನು ಮತ್ತೆ ಗಳಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನಗಳು ಆಗಬೇಕು. ಇಲ್ಲದಿದ್ದರೆ, ಪರಿಷತ್ತಿನ ಕೆಲಸಗಳಿಗೂ ಚುರುಪು ಹಂಚುವ ಕೆಲಸಕ್ಕೂ ಯಾವ ವ್ಯತ್ಯಾಸವೂ ಇರುವುದಿಲ್ಲ.

ವಾಚಕರ ವಾಣಿ

ಚಲನಚಿತ್ರ ಪ್ರಶಸ್ತಿ: ಮುಹೂರ್ತ ಕೂಡಿಬರಲಿ

13ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಲಾಂಛನವನ್ನು ಮುಖ್ಯಮಂತ್ರಿ ಬಿಡುಗಡೆ ಮಾಡಿದ್ದಾರೆ. ಆದರೆ ಕಳೆದ ಮೂರು ವರ್ಷಗಳ ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಿಲ್ಲ. ಜೊತೆಗೆ ಸಹಾಯಧನದ ಪ್ರಕ್ರಿಯೆ ಕೂಡಾ. ವಿಚಿತ್ರವೆಂದರೆ, ಕಳೆದ ಎರಡು ವರ್ಷಗಳ ಪ್ರಶಸ್ತಿ ಮತ್ತು ಸಹಾಯಧನ ಸಮಿತಿಗಳನ್ನೂ ರಚಿಸುವ ಗೋಜಿಗೆ ಸರ್ಕಾರ ಹೋಗಿಲ್ಲ!

ಕೇಂದ್ರ ಸರ್ಕಾರ ಮಾತ್ರ ಆಯಾ ವರ್ಷದ ಚಲನಚಿತ್ರ ಪ್ರಶಸ್ತಿಗಳನ್ನು ಆಯಾ ವರ್ಷವೇ ನೀಡಿ ತನ್ನ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವುದು ಗಮನಾರ್ಹ. ಪ್ರತೀ ಸಿನಿಮಾ ಚಿತ್ರೀಕರಣದ ಸಲುವಾಗಿ ಮುಹೂರ್ತ ನಿಗದಿ ಮಾಡುವ ಸಿನಿಮಾ ಕ್ಷೇತ್ರದಲ್ಲಿ, ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಮಾತ್ರ ಇನ್ನೂ ಮುಹೂರ್ತ ಕೂಡಿ ಬರದೇ ಇರುವುದು ವಿಪರ್ಯಾಸ.

ಸಿರಿಗೇರಿ ಯರಿಸ್ವಾಮಿ, ಬಳ್ಳಾರಿ

ಇಷ್ಟೊಂದು ಧೈರ್ಯ ಬಂದದ್ದು ಹೇಗೆ?

ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿ, ಬೀದಿಗಳಲ್ಲಿ ಮೆರವಣಿಗೆ ಮಾಡಿದ ಸುದ್ದಿ (ಪ್ರ.ವಾ., ಜ. 27) ಓದಿ ನಿಬ್ಬೆರಗಾದೆ. ಯಾಕೆಂದರೆ ಮಹಿಳೆಯ ಮೇಲೆ ಸಾಮೂಹಿಕ ಅತ್ಯಾಚಾರ ಎಂಬುದೇ ಒಂದು ದೊಡ್ಡ ಪಾತಕ ಕೃತ್ಯವಾಗಿರುವಾಗ ಇಲ್ಲಿ ಅತ್ಯಾಚಾರವನ್ನು ಎಸಗಿರುವುದಲ್ಲದೆ ಸಂತ್ರಸ್ತೆಯ ಕೂದಲನ್ನು ಕತ್ತರಿಸಿ, ಮುಖಕ್ಕೆ ಕಪ್ಪು ಬಣ್ಣ ಬಳಿದು, ಶೂಗಳ ಹಾರ ಹಾಕಿ ಮೆರವಣಿಗೆ ಮಾಡುವಷ್ಟು ನಮ್ಮ ಸಮಾಜ ಹಾಳಾಯಿತೇ? ಅತ್ಯಾಚಾರಿಗಳಿಗೆ ಇಷ್ಟೊಂದು ಧೈರ್ಯ ಬಂದದ್ದಾದರೂ ಹೇಗೆ?

ಇಂದಿನ ಸಾಮಾಜಿಕ ಜಾಲತಾಣಗಳ ಯುಗದಲ್ಲಿ ಒಂದು ಚಿಕ್ಕ ಹಳ್ಳಿಯಲ್ಲಿ ನಡೆಯುವ ಸಣ್ಣ ಘಟನೆಯೂ ದೇಶದ ರಾಜಧಾನಿಯವರೆಗೆ ತಲುಪಿ ದೊಡ್ಡ ಚರ್ಚೆಗೆ ಕಾರಣವಾಗಿ, ಪ್ರಧಾನಿ, ರಾಷ್ಟ್ರಪತಿ ಸಹ ಪ್ರತಿಕ್ರಿಯಿಸುವಂತಹ ಸಂದರ್ಭ ಇದೆ. ಹೀಗಿರುವಾಗ, ರಾಷ್ಟ್ರ ರಾಜಧಾನಿಯಲ್ಲೇ ನಡೆದ ಇಂತಹ ಘೋರ ಪ್ರಕರಣ ಆಶ್ಚರ್ಯಕರ. ನ್ಯಾಯಾಲಯಗಳು ಇಂತಹ ವಿಷಯಗಳಲ್ಲಾದರೂ ಆದಷ್ಟು ಬೇಗ ತೀರ್ಪು ನೀಡಬೇಕು. ವರ್ಷಗಳ ನಂತರ ತೀರ್ಪು ಹೊರಬರುವುದರಿಂದ ಅಪರಾಧಿಗಳಿಗೆ ಭಯವಿಲ್ಲದಂತೆ ಆಗುತ್ತದೆ.

ಮೋನಿಕ ಆರ್., ಚಿಕ್ಕಗೊಂಡನಹಳ್ಳಿ, ಚಿತ್ರದುರ್ಗ

ಶಿಕ್ಷಕರ ಜಾತಿ ನಮೂದಿಸುವ ಸಲ್ಲದ ನಡೆ

ರಾಜ್ಯದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮುಖ್ಯಗುರುಗಳ ಕೊಠಡಿಗಳಲ್ಲಿ ಶಾಲೆಯ ಒಟ್ಟು ಶಿಕ್ಷಕ ವೃಂದದ ಸಂಪೂರ್ಣ ಮಾಹಿತಿಯ ಫಲಕ ಇರುತ್ತದೆ. ಇದು ಸೂಕ್ತವಾದ ಕ್ರಮವಾದರೂ ಅದರಲ್ಲಿ ಒಂದು ದೋಷ ಎದ್ದು ಕಾಣುತ್ತದೆ. ಅದೆಂದರೆ, ಫಲಕದಲ್ಲಿ ಶಿಕ್ಷಕರು ಇಲಾಖೆಯ ಸೇವೆಗೆ ನೇಮಕಗೊಂಡ ದಿನಾಂಕ, ಸದ್ಯ ಕರ್ತವ್ಯ ನಿರ್ವಹಿಸುವ ಶಾಲೆಗೆ ಹಾಜರಾದ ದಿನಾಂಕ, ಜನ್ಮದಿನಾಂಕದ ಮಾಹಿತಿಯೊಂದಿಗೆ, ಶಿಕ್ಷಕರ ಜಾತಿಯನ್ನು ನಮೂದಿಸುವ ವಿಚಾರ ಸೂಕ್ಷ್ಮ ಮತ್ತು ಗಂಭೀರವಾದ ಸಂಗತಿಯಾಗಿದೆ. ಹೀಗೆ ಜಾತಿಯನ್ನು ನಮೂದಿಸುವುದು ಶಾಲಾ ಮಕ್ಕಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ.

ಪೋಷಕರು ಅಥವಾ ಸಾರ್ವಜನಿಕರು ಶಾಲೆಯ ಕೆಲಸಕ್ಕೆ ಮುಖ್ಯಗುರುಗಳ ಕೊಠಡಿಗೆ ಬರುವುದು ಸಾಮಾನ್ಯ. ಕೊಠಡಿಯಲ್ಲಿ ಎದ್ದು ಕಾಣುವಂತಿರುವ ಈ ಫಲಕದ ಮೇಲೆ ಅವರು ಸಹಜವಾಗಿಯೇ ಕಣ್ಣು ಹಾಯಿಸುತ್ತಾರೆ. ಆಗ 'ಈ ಶಿಕ್ಷಕರು ನಮ್ಮ ಜಾತಿಯವರು, ಆ ಶಿಕ್ಷಕರು ಬೇರೆ ಜಾತಿಯವರು' ಎಂಬಂತಹ ಮಾತುಗಳಿಗೆ ಇದು ಆಸ್ಪದ ನೀಡುತ್ತದೆ. ಹೀಗಾಗಿ, ಎಲ್ಲರೂ ಇಲ್ಲಿ ಸಮಾನರು, ಜಾತಿ- ಧರ್ಮ- ಪಕ್ಷ- ಬಣ್ಣ ಎಣಿಸದೆ ಎಲ್ಲ ಶಿಕ್ಷಕರನ್ನೂ 'ಗುರುದೇವರು' ಎಂಬ ಮನೋಭಾವದಲ್ಲಿ ನೋಡುವ ಪರಿಸ್ಥಿತಿ ನಿರ್ಮಿಸುವ ದಿಸೆಯಲ್ಲಿ ಈ ಮಾಹಿತಿಯನ್ನು ಪಟ್ಟಿಯಿಂದ ತೆಗೆದುಹಾಕುವುದು ಸೂಕ್ತ. ಜೊತೆಗೆ ಶಿಕ್ಷಕರ ಜನ್ಮದಿನಾಂಕವನ್ನು ನಮೂದಿಸುವುದೂ ಅನಗತ್ಯ. ಕೆಲವು ಶಿಕ್ಷಕರಿಗೆ ಇದು ಕಿರಿಕಿರಿ ಉಂಟುಮಾಡುವ ಸಾಧ್ಯತೆ ಇರುತ್ತದೆ. ಸಾರ್ವಜನಿಕ ಶಿಕ್ಷಣ ಇಲಾಖೆ ಈ ವಿಷಯದಲ್ಲಿ ದಿಟ್ಟ ನಿರ್ಧಾರ ತೆಗೆದುಕೊಳ್ಳಬೇಕು.

ಆರ್.ಬಿ.ಜಿ.ಘಂಟಿ, ಅಮೀನಗಡ, ಬಾಗಲಕೋಟೆ

ಅಸಮಂಜಸ ವಾದ ಮಂಡನೆ

ರಾಜ್ಯ ಉನ್ನತ ಶಿಕ್ಷಣ ಸಚಿವರು ಮಂಡಿಸಿರುವ 'ತ್ರಿಭಾಷಾ' ಸಮನ್ವಯ ಸೂತ್ರವು (ಸಂಗತ, ಜ. 27) ಸಂಸ್ಕೃತ ಪರವಾದ ಹಾಗೂ ಪ್ರಸ್ತುತ ಚರ್ಚೆಯ ವಿಷಯಕ್ಕೆ ಸಮಂಜಸವಲ್ಲದ ವಾದ ಮಂಡನೆಯಾಗಿದೆಯೇ ಪರಂತು ಸಮನ್ವಯ ಸೂತ್ರವಲ್ಲ ಎನ್ನಬೇಕಾಗಿದೆ. ಕನ್ನಡಿಗರು ಯಾರೂ ಸಂಸ್ಕೃತ ವಿರೋಧಿಗಳಲ್ಲವೇ ಅಲ್ಲ ಎಂಬುದನ್ನು ಇವರು ಮತ್ತು ಸಂಸ್ಕೃತ ವಿಶ್ವವಿದ್ಯಾಲಯದ ಪರವಾದಿಗಳು ಯಾಕೆ ಅರ್ಥಮಾಡಿಕೊಳ್ಳುತ್ತಿಲ್ಲ ಎಂಬುದೇ ಒಂದು ಯಕ್ಷಪ್ರಶ್ನೆಯಾಗಿದೆ. ನಿಜವಾದ ಪ್ರಶ್ನೆ ಏನೆಂದರೆ, ಆರು ಕೋಟಿ ಕನ್ನಡಿಗರ ಜೀವಭಾಷೆಯಾದ ಕನ್ನಡದ ಸಮಾಧಿಯ ಮೇಲೆ ಸಂಸ್ಕೃತದ ಭವ್ಯ ಸೌಧವನ್ನು ನಿರ್ಮಿಸಲು ಹೊರಟಿದ್ದೀರಲ್ಲ, ಯಾಕೆ ಎನ್ನುವುದು. ಇದು ನ್ಯಾಯವೇ?

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕೊಡಬೇಕಾದ ಎರಡು ಕೋಟಿ ಅನುದಾನವನ್ನು ಕೊಡದೆ ಸಂಸ್ಕೃತ ವಿಶ್ವವಿದ್ಯಾಲಯಕ್ಕೆಂದು ನೂರು ಎಕರೆ ಜಮೀನು ಮತ್ತು ₹ 359 ಕೋಟಿ ಕೊಡುತ್ತಿದ್ದೀರಲ್ಲ, ಇದು ಯಾವ ಸಮನ್ವಯ? ಪ್ರಸ್ತುತ ಸಂದರ್ಭದಲ್ಲಿ ಇದರ ಅಗತ್ಯವಾದರೂ ಏನು ಎಂಬುದಕ್ಕೆ ಯಾರೂ ವಿವರಣೆ ನೀಡುತ್ತಿಲ್ಲ. ದೇಶದಲ್ಲಿ ಈಗಾಗಲೇ 18 ಸಂಸ್ಕೃತ ವಿಶ್ವವಿದ್ಯಾಲಯಗಳು ಇವೆ ಎನ್ನುತ್ತಾರೆ. ಅವುಗಳಲ್ಲಿ ಮತ್ತು ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಸಂಸ್ಕೃತ ಅಧ್ಯಯನಕ್ಕೆ ಅನೇಕ ಅವಕಾಶಗಳಿವೆ. ಆದರೆ ವಿದ್ಯಾರ್ಥಿಗಳೇ ಇಲ್ಲವೆಂದು ಕೇಳಲ್ಪಟ್ಟಿದ್ದೇವೆ. ಹೀಗಿರುವಾಗ, ಅದು ಆತ್ಮದ ಭಾಷೆ, ಎಲ್ಲ ಭಾಷೆಗಳಿಗೂ ಮಾತೃಸ್ಥಾನದಲ್ಲಿ ಇದೆ ಎಂಬಂತಹ ಭಾವನಾತ್ಮಕ ಅಂಶಗಳನ್ನೇ ಪ್ರಸ್ತುತಪಡಿಸುತ್ತಿರುವುದರ ಹಿಂದಿನ ಉದ್ದೇಶವಾದರೂ ಏನು?

ವಾಸ್ತವದಲ್ಲಿ ಇಂದು ಗ್ರಾಮೀಣ ಪ್ರದೇಶಗಳನ್ನೂ ಒಳಗೊಂಡಂತೆ ಬಹುಮಂದಿ ಇಂಗ್ಲಿಷ್ ಭಾಷೆಯ ಮೊರೆ ಹೊಕ್ಕಿದ್ದಾರೆ. ಅದು ಇಂದು ನಮ್ಮ ದೇಶವಾಸಿಗಳನ್ನು ಬೆಸೆದಿರುವ ಭಾಷೆಯಾಗಿದೆ. ಅದೇ ಮುಂದುವರಿಯಲಿ ಬಿಡಿ. ಅದರ ಸ್ಥಾನದಲ್ಲಿ ನೀವು, ಯಾರೂ ಮಾತನಾಡದ (ಮತ್ತೂರು ಒಂದು ಅರ್ಥಹೀನ ಉದಾಹರಣೆ) ಸಂಸ್ಕೃತವನ್ನು ಸ್ಥಾಪಿಸ ಹೊರಟಿರುವುದು ನಿರರ್ಥಕವಾದುದು. ಜೊತೆಗೆ ಜನಪರವಾದುದಲ್ಲ.

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಐಎಎಸ್ ಅಧಿಕಾರಿಗಳ ನಿಯೋಜನೆ ನಿಯಮಕ್ಕೆ ತಿದ್ದುಪಡಿ ತರುವ ಕೇಂದ್ರದ ಪ್ರಸ್ತಾವ ಸರಿಯೇ?

ಕತ್ತರಿಸಿ ಹೋಗಲಿದೆ ಒಕ್ಕೂಟದ ಎಳೆ

ಈಗಿನ ಕೇಂದ್ರ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಪ್ರತಿಶತ 40ರ ಮೀಸಲು ಪಟ್ಟಿಯಿಂದ ಐಎಎಸ್ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುತ್ತಿರುವ ಪ್ರಮಾಣ ಪ್ರತಿಶತ 18ಕ್ಕೆ ಇಳಿದಿದೆ. ಹಾಗಾದರೆ ಐಎಎಸ್ ಅಧಿಕಾರಿಗಳ ಕೊರತೆ ಎಲ್ಲಿ ಉಂಟಾಗಿದೆ? ಅದಕ್ಕೆ ಯಾರು ಕಾರಣ? ಐಎಎಸ್ ಅಧಿಕಾರಿಗಳು ಕೇಂದ್ರ ಸರ್ಕಾರಕ್ಕೆ ಹೋಗಲು ಏಕೆ ಇಚ್ಛೆಪಡುವುದಿಲ್ಲ? – ಈ ಪ್ರಶ್ನೆಗಳಿಗೆ ಕೇಂದ್ರ ಸರ್ಕಾರ ಉತ್ತರ ಕಂಡುಕೊಳ್ಳಬೇಕು

ಪ್ರಜಾವಾಣಿ ಚರ್ಚೆ

● ಎಸ್.ಎಂ. ಜಾಮದಾರ

ಕೇಂದ್ರ ಸರ್ಕಾರದ ಪ್ರಸ್ತಾವಿತ ಐಎಎಸ್ ಕೇಡರ್ ನಿಯಮಗಳ ತಿದ್ದುಪಡಿಯು ಮೇಲ್ನೋಟಕ್ಕೆ ವಿವಾದಿತವಲ್ಲದಂತೆ ಕಂಡರೂ ಅದರ ಹಿನ್ನೆಲೆ, ಉದ್ದೇಶ ಮತ್ತು ಅದರ ದೀರ್ಘಕಾಲೀನ ಪರಿಣಾಮಗಳನ್ನು ಗಮನಿಸಿದರೆ ಅದೊಂದು ಅನವಶ್ಯಕ ಪ್ರಯತ್ನವೆಂಬುದು ಸ್ಪಷ್ಟವಾಗುತ್ತದೆ.

ಐಎಎಸ್ ಮತ್ತು ಐಪಿಎಸ್ ಇವೆರಡೂ ನಮ್ಮ ಸಂವಿಧಾನದ ವಿಧಿ 312(2)ರಲ್ಲಿ ಸೃಷ್ಟಿಸಿದ ಸೇವೆಗಳಾಗಿವೆ. ನಂತರ 1951ರ ಎಐಎಸ್ ಕಾಯ್ದೆಯ ಮೂಲಕ ಭಾರತೀಯ ಅರಣ್ಯ ಸೇವೆಯನ್ನೂ (ಐಎಫ್‌ಎಸ್) ಅವೆರಡರ ಜೊತೆ ಅಖಿಲ ಭಾರತ ಸೇವೆಯಾಗಿ ಸೇರಿಸಲಾಗಿದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಉನ್ನತ ಹುದ್ದೆಗಳಲ್ಲಿ ಈ ಮೂರೂ ಸೇವೆಯ ಅಧಿಕಾರಿಗಳು ಕೆಲಸ ಮಾಡಬೇಕು ಎಂಬ ಉದ್ದೇಶದಿಂದ ಈ ವ್ಯವಸ್ಥೆ ಮಾಡಲಾಗಿದೆ. ಇದು ಬ್ರಿಟಿಷರ ಕಾಲದಿಂದಲೂ ನಡೆದು ಬಂದ ವ್ಯವಸ್ಥೆಯಾಗಿದೆ. ಕೇಂದ್ರ ಸರ್ಕಾರವು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಈ ಅಧಿಕಾರಿಗಳನ್ನು ಆಯ್ಕೆಮಾಡಿ, ಪ್ರತಿಯೊಂದು ರಾಜ್ಯಕ್ಕೆ ಅದರ ಗಾತ್ರ ಮತ್ತು ಅಗತ್ಯಕ್ಕೆ ತಕ್ಕಂತೆ ನೇಮಕ ಮಾಡುತ್ತದೆ. ಆದ್ದರಿಂದ ಮೂಲತಃ ಇವರು ಕೇಂದ್ರ ಸರ್ಕಾರದ ಅಧಿಕಾರಿಗಳು. ಆಯಾ ರಾಜ್ಯಕ್ಕೆ ನೀಡಿದ ಒಟ್ಟು ಅಧಿಕಾರಿಗಳಲ್ಲಿ ಪ್ರತಿಶತ 40ರಷ್ಟು ಅಧಿಕಾರಿಗಳನ್ನು ಕೇಂದ್ರ ಸರ್ಕಾರದ ಉನ್ನತ ಸೇವೆಗೆ ಪ್ರತಿಯೊಂದು ರಾಜ್ಯ ಸರ್ಕಾರವು ಮೀಸಲಿಡಬೇಕು.

ಶೇ 40ರ ಮೀಸಲು ಪಟ್ಟಿಯನ್ನು ತಯಾರಿಸುವಾಗ ಆಯಾ ಅಧಿಕಾರಿಗಳ ಇಚ್ಛೆ, ರಾಜ್ಯ ಸರ್ಕಾರದಲ್ಲಿ ಆಯಾ ಅಧಿಕಾರಿಯ ಸೇವೆಯ ಅವಶ್ಯಕತೆಯನ್ನು ಪರಿಗಣಿಸಿ ಆ ಪಟ್ಟಿಯನ್ನು ತಯಾರಿಸಿ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರಗಳು ಪ್ರತಿ ವರ್ಷ ನೀಡಬೇಕು. ಇದು 1951ರಿಂದ ಈವರೆಗೆ ಸರಳವಾಗಿ, ಸುಲಭವಾಗಿ ನಮ್ಮ ದೇಶದಲ್ಲಿ ನಡೆದುಕೊಂಡು ಬಂದಿದೆ. ಇದು ಒಕ್ಕೂಟ ಸಹಕಾರಿ ತತ್ವಕ್ಕೆ ಒಂದು ಶ್ರೇಷ್ಠ ಉದಾಹರಣೆಯಾಗಿದೆ. ದೇಶದ ಐಕ್ಯತೆ, ಭದ್ರತೆ ಮತ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಮತೋಲಿತ ನಿರ್ವಹಣೆಗಾಗಿ ನಮ್ಮ ಹಿರಿಯರು ಸಂವಿಧಾನದಲ್ಲಿ ಮಾಡಿದ ವ್ಯವಸ್ಥೆ ಇದಾಗಿದೆ. ಇದರ ಅವಶ್ಯಕತೆಯನ್ನು ಕುರಿತು ಸರ್ದಾರ್ ವಲ್ಲಭಭಾಯಿ ಪಟೇಲರು ಸಂವಿಧಾನ ರಚನಾ ಪರಿಷತ್ತಿನ ಚರ್ಚೆಯಲ್ಲಿ ಹೀಗೆ ಹೇಳಿದ್ದಾರ: 'ಈ ವ್ಯವಸ್ಥೆಗೆ ಬೇರೆ ಪರ್ಯಾಯವಿಲ್ಲ. ಇದು ನಿಮಗೆ ಬೇಡವಾದರೆ ಈ ಸಂವಿಧಾನವನ್ನು ಬಿಟ್ಟು ಬಿಡಿ.

ಇದನ್ನು ರದ್ದುಪಡಿಸಿದರೆ ನನಗೆ ದೇಶದಾದ್ಯಂತ ಅರಾಜಕತೆಯೇ ಎದ್ದು ಕಾಣುತ್ತದೆ.'

ಭಾರತದ ಪ್ರಥಮ ಉಪ ಪ್ರಧಾನ ಮಂತ್ರಿಯಾಗಿದ್ದ ಅಂದಿನ ಗೃಹ ಸಚಿವ ಸರ್ದಾರ್ ಪಟೇಲರು ಅಖಿಲ ಭಾರತ ಸೇವೆಗಳಿಗೆ ಭದ್ರಬುನಾದಿ ಹಾಕಿ ಅದನ್ನು ನಿಜ ಅರ್ಥದಲ್ಲಿ ದೇಶದ ಆಡಳಿತದ 'ಸ್ಟೀಲ್ ಫ್ರೇಮ್' (ಆಡಳಿತ ವ್ಯವಸ್ಥೆಯ ಬೆನ್ನೆಲುಬು) ಆಗಿ ಬೆಳೆಸಿದರು. ಅವರಲ್ಲಿ ಪಕ್ಷಾತೀತ, ಕಾನೂನುಬದ್ಧ, ನಿಸ್ವಾರ್ಥ, ಪ್ರಾಮಾಣಿಕ ಸೇವಾಪರತೆಯೊಂದಿಗೆ ವ್ಯಕ್ತಿಯ ಶ್ರೇಷ್ಠತೆಯನ್ನೂ ಶ್ರೇಣಿಯನ್ನೂ ತುಂಬಿದರು. ಅವರೊಂದಿಗೆ ಕೆಲಸ ಮಾಡಿದ ಧರ್ಮವೀರರ ಆತ್ಮಚರಿತ್ರೆಯಲ್ಲಿ ಈ ವಿವರಗಳನ್ನು ನಾವು ಕಾಣಬಹುದು.

ಅಂದಿನ ಪ್ರಧಾನಿಯಾಗಿದ್ದ ಜವಾಹರಲಾಲ್ ನೆಹರೂ ಅವರಂಥ ಬಹುತೇಕ ಕಾಂಗ್ರೆಸ್ ನಾಯಕರು ಐಸಿಎಸ್ ಅಧಿಕಾರಿಗಳ ಬಗ್ಗೆ ನಕಾರಾತ್ಮಕ ಅಭಿಪ್ರಾಯ ಹೊಂದಿದ್ದರು. 'ಇಂಡಿಯನ್ ಸಿವಿಲ್ ಸರ್ವಿಸ್ ಅಂದರೆ 'ಇಂಡಿಯನ್ ಅಲ್ಲ, ಸಿವಿಲ್ ಅಲ್ಲ, ಸರ್ವಿಸೂ ಅಲ್ಲ' ಎಂದು ನೆಹರೂ ಅವರೇ ಹೇಳಿದ್ದರು. ಆದರೆ ಅದೇ ಸೇವೆಯಿಂದ ಬಂದಿದ್ದ ಸಿ.ಡಿ. ದೇಶಮುಖರನ್ನು ಅವರೇ ಅರ್ಥ ಸಚಿವರನ್ನಾಗಿ ಮಾಡಬೇಕಾಯಿತು. ಎಚ್.ಎಂ.ಪಟೇಲ್, ಕೆಪಿಎಸ್ ಮೆನನ್ ಅವರು ದೇಶದ ಆಡಳಿತ ವ್ಯವಸ್ಥೆಯನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದರು. 'ಇದನ್ನು ಚೆನ್ನಾಗಿ ಅರಿತ ಸರ್ದಾರ್ ಅವರು ಈ ಸೇವೆಗಳು ಸ್ವತಂತ್ರ ಭಾರತದಲ್ಲಿ ಮುಂದುವರಿಯಲು ಕಾರಣರಾದರು. ಅವರು ಕಟ್ಟಿದ ಈ ಸ್ಟೀಲ್ ಫ್ರೇಮ್‌ನ್ನು ಈಗ ಅಶಕ್ತಗೊಳಿಸಲಾಗುತ್ತಿದೆ ಎನ್ನುವುದು ದುರ್ದೈವದ ಸಂಗತಿ.

ಒಕ್ಕೂಟ ಧರ್ಮ ಪರಿಪಾಲನೆಗೆ ಹೇಳಿಮಾಡಿಸಿದಂತಿದ್ದ ಇಂತಹ ವ್ಯವಸ್ಥೆಯನ್ನು ತಿದ್ದಿ 'ಇದರಲ್ಲಿ ಭಿನ್ನಾಭಿಪ್ರಾಯ ಬಂದರೆ ಕೇಂದ್ರ ಸರ್ಕಾರದ ನಿರ್ಣಯವೇ ಅಂತಿಮ ಮತ್ತು ರಾಜ್ಯ ಸರ್ಕಾರಗಳು ಅದನ್ನು ಪಾಲಿಸಲೇಬೇಕು' ಎಂಬುದು ಎಷ್ಟು ಸರಿ? 'ಇದರಿಂದಾಗಿ ರಾಜ್ಯಗಳ ಆದ್ಯತೆಗಳನ್ನು, ಅಭಿಪ್ರಾಯವನ್ನು ಹಾಗೂ ಸ್ವಾತಂತ್ರ್ಯವನ್ನು ಕೇಂದ್ರ ತಿರಸ್ಕರಿಸಿದಂತಾಗುವುದಿಲ್ಲವೇ? ಇದು ಒಕ್ಕೂಟ ತತ್ವದ ಉಲ್ಲಂಘನೆಯಲ್ಲವೇ? ಕೇಂದ್ರ ಸರ್ಕಾರವನ್ನು ನಡೆಸುವವರ ಸರ್ವಾಧಿಕಾರಿ ಧೋರಣೆಯ ಇದಲ್ಲವೇ?

ಪಶ್ಚಿಮ ಬಂಗಾಳದ ಮುಖ್ಯ ಕಾರ್ಯದರ್ಶಿಯಾಗಿದ್ದ ಐಎಎಸ್ ಅಧಿಕಾರಿಯನ್ನು ಮಮತಾ ಬ್ಯಾನರ್ಜಿಯವರು ಕೇಂದ್ರ ಸೇವೆಗೆ ಬಿಟ್ಟು ಕೊಡಲಿಲ್ಲ ಎಂಬುದಕ್ಕೆ ಅಥವಾ ಜಯಲಲಿತಾ ಅವರು ಒಬ್ಬ ಹಿರಿಯ ಮಹಿಳಾ ಐಪಿಎಸ್ ಅಧಿಕಾರಿಯನ್ನು ಕೇಂದ್ರ ಸೇವೆಗೆ ಸೇರಿದಾಗ ನಿಲಂಬನೆಯಲ್ಲಿ ಇಟ್ಟರೆಂದು ಸೇಡು ತೀರಿಸಿಕೊಳ್ಳುವ ಕಾರಣಕ್ಕಾಗಿ ಈ ತರಹದ ಸಣ್ಣತನವೇ? ವಲ್ಲಭಭಾಯಿ ಪಟೇಲರ ಲೋಹದ ನಿರ್ಜೀವ ಬೃಹತ್ ಪ್ರತಿಮೆ ನಿರ್ಮಿಸಿ ವಿಜೃಂಭಿಸುತ್ತ ಅವರೇ ನಿರ್ಮಿಸಿದ ಅಖಿಲ ಭಾರತ ಸೇವೆಗಳನ್ನು ಈ ರೀತಿ ಭಗ್ನಗೊಳಿಸುವುದು ಎಷ್ಟು ಸರಿ?

ಅಷ್ಟಾಗಿಯೂ ಈಗಿನ ಕೇಂದ್ರ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಪ್ರತಿಶತ 40ರ ಮೀಸಲು ಪಟ್ಟಿಯಿಂದ ಐಎಎಸ್ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುತ್ತಿರುವ ಪ್ರಮಾಣ ಪ್ರತಿಶತ 18ಕ್ಕೆ ಇಳಿದಿದೆ. ಹಾಗಾದರೆ ಐಎಎಸ್ ಅಧಿಕಾರಿಗಳ ಕೊರತೆ ಎಲ್ಲಿ ಉಂಟಾಗಿದೆ? ಅದಕ್ಕೆ ಯಾರು ಕಾರಣ? ಐಎಎಸ್ ಅಧಿಕಾರಿಗಳು ಕೇಂದ್ರ ಸರ್ಕಾರಕ್ಕೆ ಹೋಗಲು ಏಕೆ ಇಚ್ಛೆಪಡುವುದಿಲ್ಲ? – ಈ ಪ್ರಶ್ನೆಗಳಿಗೆ ಕೇಂದ್ರ ಸರ್ಕಾರ ಉತ್ತರ ಕಂಡುಕೊಳ್ಳಬೇಕು. ಕಳೆದ ಕೆಲವು ವರ್ಷಗಳಲ್ಲಿ ನಡೆದಿರುವ ಬೆಳವಣಿಗೆಗಳ ಕುರಿತು ಆತ್ಮಾವಲೋಕನ ಮಾಡಿಕೊಂಡರೆ ಅಲ್ಲಿಯೇ ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ಸಿಗುತ್ತದೆ. ಕೆಲವೇ ಕೆಲವು ಬಾಲಬಡುಕ ಅಧಿಕಾರಿಗಳಿಗೆ ಮಾತ್ರ ಅಲ್ಲಿ ಅವಕಾಶವಿದೆ. ಕಾನೂನು, ಸೂಕ್ತ ಪರಿಕ್ರಮ, ಬದ್ಧತೆ, ನಿಷ್ಪಕ್ಷಪಾತ, ನೇರ ಅಭಿಪ್ರಾಯ ಗಳಿಗೆ ಅವಕಾಶವಿಲ್ಲದ ಕಡೆ ಯಾವ ಒಳ್ಳೆಯ ಅಧಿಕಾರಿ ಕೆಲಸ ಮಾಡಲು ಇಚ್ಛಿಸುತ್ತಾನೆ?

ಕೇಂದ್ರ ಸೇವೆಗೆ ಹೋಗಲು ಅಧಿಕಾರಿಗಳಲ್ಲಿ ನಿರಾಸಕ್ತಿ ಇರುವುದು ನಿಜವಾದರೂ ಕೇಂದ್ರ ಸೇವೆಗೆ ಆಯ್ಕೆಯಾಗಲು ಐಎಎಸ್ ಅಧಿಕಾರಿಗಳು ಬಿಜೆಪಿ/ಸಂಘ ಪರಿವಾರ/ಆ ಪಕ್ಷದ ಶಾಸಕ/ ಸಂಸದ/ಮಂತ್ರಿಗಳ ಮೂಲಕ ಒತ್ತಡ ತರಬೇಕು. 'ಇಲ್ಲವೆ ಅವರ ಕೃಪಾಕಟಾಕ್ಷಕ್ಕೆ ಒಳಗಾಗಬೇಕು, ಗಾಡ್ ಫಾದರ್‌ಗಳನ್ನು ಹೊಂದಿರಬೇಕು ಎನ್ನುವುದು ಕೂಡ ಅಷ್ಟೇ ನಿಜ. ಇದು ಪ್ರಾಮಾಣಿಕ ಅಧಿಕಾರಿಗಳಿಂದ ಸಾಧ್ಯವಿಲ್ಲ. ಒಂದು ವೇಳೆ ಆಯ್ಕೆಯಾದರೂ ಯಾವಾಗ, ಯಾವ ಕಾರಣಕ್ಕಾಗಿ ಅವರನ್ನು ಮೂಲ ಕೇಡರ್ ರಾಜ್ಯಕ್ಕೆ ಹಿಂದಿರುಗಿಸಲಾಗುವುದು ಎಂಬ ಭಯ ಅವರನ್ನು ಕಾಡುತ್ತಿರುತ್ತದೆ. ಅದಲ್ಲದೆ ಮದ್ರಾಸ್ ಅಯ್ಯಂಗಾರ್ ಲಾಬಿ, ಉತ್ತರ ಪ್ರದೇಶ ಅಧಿಕಾರಿಗಳ ಲಾಬಿಗಳು ಇಂಥ ಕೆಲಸಗಳಲ್ಲಿ ನಿಷ್ಣಾತ ಎಂಬುದು ಎಲ್ಲರಿಗೂ ತಿಳಿದ ವಿಷಯ. ಈ ಎಲ್ಲ ಕಾರಣಗಳಿಂದ ಬಹುತೇಕ ಐಎಎಸ್ ಅಧಿಕಾರಿಗಳು ಕೇಂದ್ರ ಸೇವೆಗೆ ಹೋಗಲು ಒಪ್ಪುವುದಿಲ್ಲ.

ಅಲ್ಲದೆ, ಪ್ರಧಾನ ಮಂತ್ರಿಯವರೇ ಅನೇಕ ಸಂದರ್ಭಗಳಲ್ಲಿ ಐಎಎಸ್‌ಗೆ ಅಪಹಾಸ್ಯಕರವಾಗಿ ಮಾತನಾಡಿದ್ದು ಗುಟ್ಟಾಗೇನಿಲ್ಲ. ಪ್ರಧಾನಿಯವರಿಗೆ ಐಎಎಸ್ ಬಗ್ಗೆ ಅಸಂತೋಷಗೊಂಡಿದ್ದರೆ, ಅವರು ಬಹಳ ಇಷ್ಟಪಡುವ ಗುಜರಾತ್ ಕೇಡರ್‌ನ ಐಎಎಸ್ ಅಧಿಕಾರಿಗಳೂ ಅದೇ ಸೇವೆಯಿಂದ ಬಂದವರಲ್ಲವೇ? ಅವರಲ್ಲಿ ಯಾವ ವಿಶೇಷ ಇದೆ? ಅದನ್ನು ಬಲ್ಲವರು ಗ್ರಹಿಸಬಹುದು. ಹಾಗೂ ಐಎಎಸ್ ಜಂಟಿ ಕಾರ್ಯದರ್ಶಿಗಳ ಹುದ್ದೆಗಳಿಗೆ 'ಲ್ಯಾಟರಲ್ ಎಂಟ್ರಿ' ಮೂಲಕ ನೂರಾರು ಸಹಮತಿಗಳನ್ನು ತಂದು ಕೂರಿಸಲಾಗಿದೆ. ಅವರ ಮೂಲಕವೇ ಸರ್ಕಾರವನ್ನು ನಡೆಸಿಕೊಂಡು ಹೋಗಬಹುದು. ಮತ್ತೇಕೆ ಬೇಕು ಹೆಚ್ಚಿನ ಐಎಎಸ್ ಅಧಿಕಾರಿಗಳು? ಅದಕ್ಕೇಕೆ ಅಗತ್ಯವಿದೆ ಈ ನಿಯಮಗಳ ತಿದ್ದುಪಡಿ?

ಲೇಖಕ: ನಿವೃತ್ತ ಐಎಎಸ್ ಅಧಿಕಾರಿ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 31

ಲಿಂಗಪ್ರತಿಷ್ಠಾಪನೆ ಶ್ರೇಷ್ಠ

ತಾವೇ ಶ್ರೇಷ್ಠರು, ಜಗತ್ತಿನ ಒಡೆಯರೆಂದು ಕಾದಾಡಿ ಜಗತ್ತನ್ನು ವಿನಾಶದ ಅಂಚಿಗೆ ತಳ್ಳುತ್ತಿದ್ದ ಬ್ರಹ್ಮ ಮತ್ತು ವಿಷ್ಣುವಿಗೆ ಮಹಾಶಿವ ಮತ್ತಷ್ಟು ತಿಳಿವಳಿಕೆ ನೀಡುತ್ತಾನೆ. 'ಸಾಕಾರ ಮತ್ತು ನಿರಾಕಾರಗಳೆಂಬ ಎರಡು ಸ್ವರೂಪಗಳು ನನಗೊಬ್ಬನಿಗೆ ಮಾತ್ರ, ಇನ್ನಾರಿಗೂ ಇಲ್ಲ. ಆದಕಾರಣ ಈಶ್ವರತ್ವವು ನಿಮಗಾಗಲಿ, ಇತರ ದೇವತೆಗಳಿಗಾಗಲಿ ಇರುವುದಿಲ್ಲ. ಇದನ್ನು ತಿಳಿಯದೆ ನೀವು ನಾನೇ ಈಶ್ವರ – ಎಂಬ ದುರಹಂಕಾರದಿಂದ ವಿಜೃಂಭಿಸಿದಿರಿ. ಈ ನಿಮ್ಮ ಅಹಂಕಾರವನ್ನು ಹೋಗಲಾಡಿಸಲು ನಾನು ಈ ರಣಭೂಮಿಯಲ್ಲಿ ನಿರಾಕಾರವಾದ ಸ್ತಂಭರೂಪದಿಂದ ಆವಿರ್ಭವಿಸಿ ಬರಬೇಕಾಯಿತು. ಆದುದರಿಂದ ಅಹಂಕಾರವನ್ನು ತ್ಯಜಿಸಿ, ಶಿವನಾದ ನಾನೇ ಈಶ್ವರನೆಂದು ತಿಳಿಯಿರಿ. ಈಶ್ವರನಾದ ನನ್ನ ಅನುಗ್ರಹದಿಂದಲೇ ಲೋಕದಲ್ಲಿ ಸಕಲ ವಸ್ತುಗಳು ಪ್ರಕಾಶಿಸುತ್ತಿವೆ. ನನ್ನ ಅನುಗ್ರಹವಿಲ್ಲದೆ ಯಾವ ವಸ್ತುಗಳೂ ಇರಲಾರವು' ಎಂದು ಪರಮೇಶ್ವರ ಸ್ಪಷ್ಟಪಡಿಸುತ್ತಾನೆ.

'ಗುರು ಉಪದೇಶವು ನನ್ನ ಬ್ರಹ್ಮಸ್ವರೂಪವನ್ನು ವಿಶದಪಡಿ ಸುವುದು. ಗುರು ಉಪದೇಶವೇ ಪ್ರಮಾಣ. ಗುರುಮುಖದಿಂದಲೇ ಬ್ರಹ್ಮತತ್ವವನ್ನು ತಿಳಿಯಬೇಕು. ಬ್ರಹ್ಮತತ್ವವು ತುಂಬಾ ರಹಸ್ಯವಾದುದು. ಪ್ರೀತಿಯಿಂದ ನಿಮಗೆ ಹೇಳುವೆನು ಕೇಳಿ' ಎಂದು ಪರಬ್ರಹ್ಮದ ಬಗ್ಗೆ ಶಿವ ವಿವರವಾಗಿ ತಿಳಿಸುತ್ತಾನೆ. 'ನಾನೇ ಪರಬ್ರಹ್ಮ. ನಿರಾಕಾರವಾದ ಬ್ರಹ್ಮಸ್ವರೂಪ ಮತ್ತು ಸಾಕಾರವಾದ ಈಶ್ವರಸ್ವರೂಪ ಎರಡೂ ನಾನೇ ಆಗಿರುವೆ. ನಿರಾಕಾರವಾದ ದೊಡ್ಡ ಸ್ವರೂಪವುಳ್ಳವನಾದುದರಿಂದ ಮತ್ತು ಮನುಷ್ಯಾದಿ ಶರೀರಗಳಲ್ಲಿ ಜೀವರೂಪದಿಂದ ಆವಿರ್ಭವಿಸುವುದರಿಂದ ನಾನೇ ಬ್ರಹ್ಮ. ಮತ್ತು ಸರ್ವಮಯನಾಗಿ, ವ್ಯಾಪಕ ನಾಗಿರುವುದರಿಂದ ನಾನೇ ಆತ್ಮ. ಮಿಕ್ಕವರೆಲ್ಲರೂ ಅನಾತ್ಮರು, ಪರಮಾತ್ಮರಲ್ಲ. ಕೇವಲ ಜೀವರು ಅಷ್ಟೇ. ಇದರಲ್ಲಿ ಸಂಶಯ-ಸಂದೇಹ ತಳೆಯಬೇಡಿ. ಅನುಗ್ರಹ ಮೊದಲುಗೊಂಡು, ಸೃಷ್ಟಿಯ ಪರ್ಯಂತವಾದ ಐದು ಜಗತ್ ಕೆಲಸಗಳು ಈಶ್ವರನಾದ ನನ್ನಲ್ಲಿಯೇ ಇರುವುದು, ಇನ್ನಾರಿಗೂ ಇರುವುದಿಲ್ಲ' ಎನ್ನುತ್ತಾನೆ ಮಹಾಶಿವ.

ತಾನೇ ಸೃಷ್ಟಿಯ ಒಡೆಯ ಎಂಬುದನ್ನು ಬ್ರಹ್ಮ-ವಿಷ್ಣು ಮತ್ತಿತರ ದೇವತೆಗಳಿಗೆ ಮನದಟ್ಟು ಮಾಡಿಸಲು ಮತ್ತಷ್ಟು ವಿವರ ನೀಡುತ್ತಾನೆ ಶಿವ. 'ಮೊದಲು ನಾನೇ ಬ್ರಹ್ಮನೆಂಬುದನ್ನು ತಿಳಿಸಲು ನಿರಾಕಾರವಾದ ಲಿಂಗರೂಪದಿಂದ ಆವಿರ್ಭವಿಸಿದೆ. ಆಮೇಲೆ ಯಾರಿಗೂ ತಿಳಿಯದ ನನ್ನ ಈಶ್ವರಭಾವವನ್ನು ನಿಮಗೆ ತೋರಿಸಲು ಸಾಕಾರವಾದ ಈ ಈಶ್ವರಸ್ವರೂಪದಿಂದ ನಿಮ್ಮೆದುರಿಗೆ ಕಾಣಿಸುತ್ತಿರುವೆ. ಆದುದರಿಂದ ಸಾಕಾರವಾದ ಈಶ್ವರಸ್ವರೂಪವು ನನ್ನಲ್ಲಿಯೇ ಇರುವುದೆಂದು ಎಲ್ಲರೂ ತಿಳಿಯ ಬೇಕು. ನನ್ನ ಬ್ರಹ್ಮತ್ವವನ್ನು ಸೂಚಿಸುವ ಈ ನಿರಾಕಾರವಾದ ಸ್ತಂಭವು ಲಿಂಗಲಕ್ಷಣಗಳುಳ್ಳದ್ದಾಗಿರುತ್ತೆ. ಲಿಂಗವು ಸದಾ ನನ್ನ ಸ್ವರೂಪವಾಗಿರುತ್ತೆ. ಲಿಂಗಾಭಿಮಾನಿ ದೇವತೆಯಾದ ಈಶ್ವರನು ಎಂಬ ಅಭೇದ ದೃಷ್ಟಿಯಿಂದ ಈ ಮಹಾಲಿಂಗವನ್ನು ಪೂಜಿಸಬೇಕು' ಎಂದು ತಿಳಿಸುತ್ತಾನೆ.

ಮತ್ತೆ ಮುಂದುವರೆದು, 'ಲಿಂಗವನ್ನು ಎಲ್ಲಿ ಪ್ರತಿಷ್ಠಾಪಿಸಿದರೂ ಅಲ್ಲೆಲ್ಲಾ ನಾನೂ ಪ್ರತಿಷ್ಠಾಪಿತನಾಗಿರುವೆ. ಪಾರಮಾರ್ಥಿಕವಾಗಿ ವ್ಯಾಪಕ ನಾದ ನಾನು ಒಂದೆಡೆ ಇರುವವನಲ್ಲ. ಮಾಯಕವಾದ ಅಂತರ್ಯಾಮಿ ರೂಪದಿಂದಿರುವೆ. ಈಶ್ವರನು ವ್ಯಾಪಕನು, ಆಕಾಶದಂತೆ ಎಲ್ಲೆಡೆಯೂ ಇರುವವನು ಎಂದರ್ಥ. ಇಂಥವನು ಕೆಲವೆಡೆ ಮಾತ್ರ ಲಿಂಗಗಳಲ್ಲಿ ಇರುವುದು ಅಸಂಭವ. ಆದುದರಿಂದ ಮಾಯಿಕವಾದ ಅಂತರ್ಯಾಮಿ ರೂಪದಿಂದ ಶಿವನಿರುವನು ಎಂದು ತಿಳಿದುಕೊಳ್ಳ ಬೇಕು. ಒಂದು ಲಿಂಗವನ್ನು ಪ್ರತಿಷ್ಠಾಪನೆ ಮಾಡುವವರಿಗೆ ನನ್ನ ಶಿವಸಮಾನತೆ ಲಭಿಸು ವುದು. ಎರಡು ಲಿಂಗವನ್ನು ಪ್ರತಿಷ್ಠಾಪಿಸಿದವರು ನನ್ನೊಡನೆ ಐಕ್ಯವನ್ನೇ ಹೊಂದುವರು. ನಿರಾಕಾವಾದ ಬ್ರಹ್ಮಸ್ವರೂಪವಾದ ಲಿಂಗವನ್ನೇ ಪ್ರಧಾನವಾಗಿ ಪ್ರತಿಷ್ಠಾಪನೆ ಮಾಡಬೇಕು. ಲಿಂಗಪ್ರತಿಷ್ಠಾಪನೆಯೇ ಅತಿ ಶ್ರೇಯಸ್ಕರ, ಅದೇ ಪ್ರಧಾನವಾಗಿದೆ. ಆಕಾರಸ್ವರೂಪವಾದ ವಿಗ್ರಹಪ್ರತಿಷ್ಠೆ ಗೌಣವೆಂದೇನೂ ಅಲ್ಲಾ, ಆದರೆ ಅದು ಪ್ರಧಾನವಲ್ಲ. ಅಷ್ಟು ಉತ್ತಮವಾದುದೂ ಅಲ್ಲ. ವಿಗ್ರಹವನ್ನು ಪ್ರತಿಷ್ಠಾಪನೆ ಮಾಡಿದ ಕ್ಷೇತ್ರವು ಲಿಂಗವಿಲ್ಲದುದರಿಂದ ಅಷ್ಟೊಂದು ಶ್ರೇಷ್ಠವಾದ ಕ್ಷೇತ್ರವಾ ಗುವುದಿಲ್ಲ. ಲಿಂಗಪ್ರತಿಷ್ಠೆಯುಳ್ಳ ಕ್ಷೇತ್ರವೇ ಅತ್ಯಂತ ಶ್ರೇಷ್ಠವಾದುದು' ಅಂತ ಶಿವ ತನ್ನನ್ನು ಆರಾಧಿಸಿದ ವಿಷ್ಣು-ಬ್ರಹ್ಮರಿಗೆ ತಿಳಿಸಿದ ಎಂಬಲ್ಲಿಗೆ ಶ್ರೀ ಶಿವಮಹಾಪುರಾಣದಲ್ಲಿ ಮೊದಲನೆಯ ಸಂಹಿತೆಯಾದ ವಿದ್ಯೇಶ್ವರಸಂಹಿತೆಯಲ್ಲಿ ಬರುವ ಒಂಬತ್ತನೆಯ ಅಧ್ಯಾಯ ಮುಗಿಯುತ್ತದೆ. ●

ರಾಷ್ಟ್ರದ ಹಿತಾಸಕ್ತಿಯೇ ತಿದ್ದುಪಡಿಗೆ ಕಾರಣ



ಕೇಂದ್ರ ಆಡಳಿತ ಸುಧಾರಣೆ ಆಯೋಗ, ಸುಪ್ರೀಂ ಕೋರ್ಟ್ ಹಾಗೂ ಆಡಳಿತ ನ್ಯಾಯಮಂಡಳಿಗಳು ಈ ಸೇವೆಯ ನಿಯಮಗಳಲ್ಲಿ ಬದಲಾವಣೆ ತರುವಂತೆ ಶಿಫಾರಸು ಮಾಡಿವೆ. ಹಾಗಾಗಿ ತಿದ್ದುಪಡಿಯ ಅಗತ್ಯವೇ ಇಲ್ಲ ಎನ್ನುವುದು ತಪ್ಪು. ಕೇಂದ್ರ ಸರ್ಕಾರ ಯಾವುದೇ ತಿದ್ದುಪಡಿಗೆ ಮುಂದಾದರೂ ಅದರ ಮಹತ್ವವನ್ನು ಅರ್ಥ ಮಾಡಿಕೊಳ್ಳದೆಯೇ ವಿರೋಧಿಸುವುದು ಇತ್ತೀಚೆಗೆ ಚಾಳಿಯಾಗಿಬಿಟ್ಟದೆ. ಸರಿ–ತಪ್ಪುಗಳ ಕುರಿತು ಚರ್ಚಿಸಿ ನಿರ್ಣಯಕ್ಕೆ ಬರಬಹುದಲ್ಲವೇ?

● ಮದನ್ ಗೋಪಾಲ್

ಭಾರತದಲ್ಲಿ ಕೌಟಿಲ್ಯ, ಚಂದ್ರಗುಪ್ತ ಮೌರ್ಯ, ಮೊಘಲರು ಹಾಗೂ ಬ್ರಿಟಿಷರ ಕಾಲದಿಂದಲೇ ನಾಗರಿಕ ಸೇವೆ ಬೇರೆ ಬೇರೆ ಸ್ವರೂಪದಲ್ಲಿ ಜಾರಿಯಲ್ಲಿದೆ. 'ಭಾರತ ಆಡಳಿತ ಸೇವೆ (ವೃಂದ) ನಿಯಮಗಳು 1954'ರ ನಿಯಮಗಳ ತಿದ್ದುಪಡಿ ಪ್ರಸ್ತಾವದ ಬಗ್ಗೆ ಚರ್ಚಿಸುವ ಮುನ್ನ ಅಖಿಲ ಭಾರತ ನಾಗರಿಕ ಸೇವೆಯನ್ನು ಜಾರಿಗೊಳಿಸಿದ ಉದ್ದೇಶವನ್ನು ತಿಳಿಯುವುದು ಬಲುಮುಖ್ಯ.

ಸಂವಿಧಾನದ ಕರಡು ಸಮಿತಿಯಲ್ಲಿಯೂ ಅಖಿಲ ಭಾರತ ನಾಗರಿಕ ಸೇವೆಗಳ ಬಗ್ಗೆ ಚರ್ಚೆಗಳಾಗಿವೆ. 'ಬ್ರಿಟಿಷರಿಗೆ ಗುಲಾಮರಾಗಿದ್ದ ಅಧಿಕಾರಿಗಳು ಸ್ವಾತಂತ್ರ್ಯ ಹೋರಾಟಕ್ಕೆ ವಿರುದ್ಧವಾಗಿದ್ದರು' ಎಂಬ ಭಾವನೆ ಜವಾಹರಲಾಲ್ ನೆಹರೂ ಸೇರಿದಂತೆ ಅನೇಕ ನಾಯಕರಲ್ಲಿತ್ತು. 1948ರ ಏಪ್ರಿಲ್ 27ರಂದು ನೆಹರೂ ಅವರಿಗೆ ಪತ್ರ ಬರೆದ ಸರ್ದಾರ್ ವಲ್ಲಭಭಾಯಿ ಪಟೇಲ್, 'ದೇಶಭಕ್ತಿ, ನಿಷ್ಠೆ, ಪ್ರಾಮಾಣಿಕತೆ ಹಾಗೂ ಸಾಮರ್ಥ್ಯದ ವಿಚಾರದಲ್ಲಿ ಅವರನ್ನು ಬಿಟ್ಟು ನಮಗೆ ಬೇರೆ ಪರ್ಯಾಯಗಳೇ ಇಲ್ಲ. ಈ ವಿಚಾರಗಳಲ್ಲಿ ಅವರು ನಮ್ಮಷ್ಟೇ ಶ್ರೇಷ್ಠರು' ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಅಷ್ಟೇ ಅಲ್ಲ, 'ನಾನು ಅವರ ಜೊತೆಗೆ ನಿಲ್ಲಬೇಕಾಗುತ್ತದೆ' ಎಂದು ಎಚ್ಚರಿಕೆಯನ್ನೂ ನೀಡಿದ್ದರು.

ಪಟೇಲ್ ಅವರು ಈ ಕಾರಣಕ್ಕೆ ರಾಜೀನಾಮೆ ನೀಡಲು ಮುಂದಾದಾಗ ಅವರ ಬೆಂಬಲಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ನಿಂತರು. ಇದರ ಫಲವಾಗಿಯೇ ಸಂವಿಧಾನಕ್ಕೆ 312ನೇ ವಿಧಿ ಸೇರ್ಪಡೆಯಾಯಿತು. 1951ರ ಅಖಿಲ ಭಾರತ ಸೇವೆಗಳ ಕಾಯ್ದೆ ಜಾರಿಗೊಳಿಸಿ ಈ ಅಧಿಕಾರಿಗಳಿಗೆ ರಕ್ಷಣೆ ಒದಗಿಸಲಾಯಿತು. ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಅಸಮಾನತೆಗಳಿಂದ ಕೂಡಿರುವ ದೇಶದಲ್ಲಿ ರಾಷ್ಟ್ರೀಯ ಸಮಗ್ರತೆ ಮತ್ತು ಐಕ್ಯತೆಯ ರಕ್ಷಣೆಗಾಗಿ ಅಖಿಲ ಭಾರತ ಸೇವೆ ಬೇಕು. ರಾಜ್ಯಗಳ ವಿಭಿನ್ನತೆ ಏನೇ ಇದ್ದರೂ ಸಮಾನ ಆಡಳಿತಕ್ಕಾಗಿ ಇದು ಅತ್ಯಗತ್ಯ ಎಂಬುದನ್ನು ಪಟೇಲ್ ಬಲವಾಗಿ ಪ್ರತಿಪಾದಿಸಿದ್ದರು. ಈ ಬೆಳವಣಿಗೆಗಳನ್ನೆಲ್ಲ ಗಮನದಲ್ಲಿಟ್ಟುಕೊಂಡು ಈ ತಿದ್ದುಪಡಿಯನ್ನು ಅವಲೋಕಿಸಬೇಕಾಗುತ್ತದೆ.

ಕೇಂದ್ರ ಆಡಳಿತ ಸುಧಾರಣೆ ಆಯೋಗ, ಸುಪ್ರೀಂ ಕೋರ್ಟ್ ಹಾಗೂ ಆಡಳಿತ ನ್ಯಾಯಮಂಡಳಿಗಳು ಈ ಸೇವೆಯ ನಿಯಮಗಳಲ್ಲಿ ಬದಲಾವಣೆ ತರುವಂತೆ ಶಿಫಾರಸು ಮಾಡಿವೆ. ಹಾಗಾಗಿ ತಿದ್ದುಪಡಿಯ ಅಗತ್ಯವೇ ಇಲ್ಲ ಎನ್ನುವುದು ತಪ್ಪು. ಕೇಂದ್ರ ಸರ್ಕಾರ ಯಾವುದೇ ತಿದ್ದುಪಡಿಗೆ ಮುಂದಾದರೂ ಅದರ ಮಹತ್ವವನ್ನು ಅರ್ಥ ಮಾಡಿಕೊಳ್ಳದೆಯೇ ವಿರೋಧಿಸುವುದು ಇತ್ತೀಚೆಗೆ ಚಾಳಿಯಾಗಿಬಿಟ್ಟದೆ. ಸರಿ– ತಪ್ಪುಗಳ ಕುರಿತು ಚರ್ಚಿಸಿ ನಿರ್ಣಯಕ್ಕೆ ಬರಬಹುದಲ್ಲವೇ?

ಅಖಿಲ ಭಾರತ ಸೇವೆಗಳಲ್ಲಿ ಕೇಡರ್ ನಿಯೋಜನೆ ಮಾಡುವುದು ಕೇಂದ್ರ ಸರ್ಕಾರ. ಈ ಅಧಿಕಾರಿಗಳು ರಾಜ್ಯ ಸರ್ಕಾರದಲ್ಲಿ 10–12 ವರ್ಷ ಕೆಲಸ ಮಾಡಿದ ಬಳಿಕ 'ಕೇಂದ್ರ ನಿಯೋಜನೆಯ ಮೀಸಲು' (ಸಿಡಿಆರ್) ಪ್ರಕಾರ ಕೇಂದ್ರ ಸರ್ಕಾರದಲ್ಲಿ ನಾಲ್ಕೈದು ವರ್ಷ ಕೆಲಸ ಮಾಡಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಸದ್ವಿಚಾರಗಳನ್ನು ಪರಸ್ಪರ ಹಂಚಿಕೊಳ್ಳುವುದೇ ಇದರ ಪ್ರಮುಖ ಉದ್ದೇಶ. ಕೇಂದ್ರವು ರಾಜ್ಯಗಳ ಉತ್ತಮ ಕಾರ್ಯಗಳ ಅನುಭವಗಳನ್ನು ಆಧರಿಸಿ ರಾಷ್ಟ್ರಮಟ್ಟದ ಕಾರ್ಯಯೋಜನೆಗಳನ್ನು ರೂಪಿಸುತ್ತದೆ. ಇದಕ್ಕಾಗಿ ಕೇಂದ್ರಕ್ಕೆ ರಾಜ್ಯಗಳಿಂದ ಅಧಿಕಾರಿಗಳ ನಿಯೋಜನೆ ಅನಿವಾರ್ಯ. ಕೋವಿಡ್‌ನಂತಹ ಬಿಕ್ಕಟ್ಟು ಎದುರಾದಾಗ ಅದನ್ನು ಬಗೆಹರಿಸುವ ಛಾತಿಯಿರುವ ಅಧಿಕಾರಿಗಳನ್ನು ಕೇಂದ್ರ ಸೇವೆಗೆ ಕರೆಸಿಕೊಳ್ಳುವುದರಲ್ಲಿ ತಪ್ಪೇನಿದೆ?

ರಾಜ್ಯದಲ್ಲಿ ಮತ್ತು ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುವುದಕ್ಕೆ ಬಹಳ ವ್ಯತ್ಯಾಸಗಳಿವೆ. ಕೇಂದ್ರದಲ್ಲಿ ಅಧಿಕಾರವೂ ಕೇಂದ್ರೀಕೃತ ಆಗಿರುತ್ತದೆ ಎಂದು ದೂರುವ ಅಧಿಕಾರಿಗಳಿದ್ದಾರೆ. ಆದರೆ ವಸ್ತುಸ್ಥಿತಿ ಹಾಗಿಲ್ಲ. ರಾಜ್ಯ ಮಟ್ಟದಲ್ಲಿ ಮುಖ್ಯಮಂತ್ರಿ ಹಾಗೂ ಸಚಿವ ಸಂಪುಟವೇ ಪ್ರಧಾನ. ಮುಖ್ಯಮಂತ್ರಿಯಿಂದ ಅಧಿಕಾರಿಗೆ ಕರೆ ಬಂದ ಎರಡೇ ದಿನಗಳಲ್ಲಿ ನೀತಿಗಳನ್ನು ರೂಪಿಸಿದ ಅನೇಕ ಉದಾಹರಣೆಗಳನ್ನು ನೋಡಿದ್ದೇನೆ. ಕೇಂದ್ರ ಸರ್ಕಾರದಲ್ಲಿ ಸಾಂಸ್ಥಿಕ ವಿಧಾನಗಳಿಗೆ ಬಹಳ ಪ್ರಾಮುಖ್ಯತೆಗಳಿವೆ. ಪ್ರತಿಯೊಂದು ಸಚಿವಾಲಯದಲ್ಲೂ ಸಾಕಷ್ಟು ವಿಕೇಂದ್ರೀತ ವ್ಯವಸ್ಥೆ ಇದೆ.

ಅಖಿಲ ಭಾರತ ಸೇವೆಯ ಅಧಿಕಾರಿಗಳು ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸಲು ಸಿದ್ಧರಿದ್ದರೂ ರಾಜ್ಯ ಸರ್ಕಾರಗಳು ಅವರನ್ನು ಬಿಡುಗಡೆ ಮಾಡುವುದೇ ಇಲ್ಲ. ಪದೇ ಪದೇ ವರ್ಗಾವಣೆ, ಅಮಾನತು, ಒಲ್ಲದ ಹುದ್ದೆಗೆ ನಿಯೋಜನೆಯಂತಹ ಕಿರುಕುಳವನ್ನೂ ಕೆಲವು ಅಧಿಕಾರಿಗಳು ಎದುರಿಸುವುದುಂಟು. ರಾಜ್ಯದಲ್ಲಿ ಶಿಕ್ಷಣ, ಸೌಕರ್ಯಗಳು ಚೆನ್ನಾಗಿವೆ ಎಂಬ ಕಾರಣಕ್ಕೆ ಕೇಂದ್ರ ಸೇವೆಗೆ ಹೋಗಲು ಇಷ್ಟಪಡದ ಅಧಿಕಾರಿಗಳೂ ಇದ್ದಾರೆ. ಐಎಎಸ್ ಅಧಿಕಾರಿಗಳು ತರಬೇತಿ ಅವಧಿಯಲ್ಲಿ ಗ್ರಾಮಲೆಕ್ಕಿಗ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ತಹಸೀಲ್ದಾರ್, ಉಪವಿಭಾಗಾಧಿಕಾರಿ, ಬಳಿಕ ಜಿಲ್ಲಾಧಿಕಾರಿಯಾಗಿ ಕೆಲಸ ಕಲಿಯಬೇಕಾಗುತ್ತದೆ. ಅದೇ ರೀತಿ ಕೇಂದ್ರ ಸರ್ಕಾರದ ಸೇವೆಗೆ ನಿಯೋಜನೆಗೊಂಡಾಗ ಉಪಕಾರ್ಯದರ್ಶಿ, ನಿರ್ದೇಶಕರ ಹುದ್ದೆಗಳನ್ನು ನಿರ್ವಹಿಸಬೇಕಾಗುತ್ತದೆ.

ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಸಾಂವಿಧಾನಿಕ ಸಂಸ್ಥೆಯನ್ನೇ ದುರ್ಬಲಗೊಳಿಸುವ 'ಕಮಿಟೆಡ್ ಬ್ಯೂರೋಕ್ರಸಿ'ಯ ಪರಿಕಲ್ಪನೆ ಪ್ರಚಲಿತಕ್ಕೆ ಬಂತು. ಅಂದಿನ ಪ್ರಧಾನಿ ಇಂದಿರಾ ಗಾಂಧಿ ತಮ್ಮ ಮಾತನ್ನು ನಿಷ್ಠೆಯಿಂದ ಪಾಲಿಸುವ ಅಧಿಕಾರಿಗಳನ್ನಷ್ಟೇ ಆಯಕಟ್ಟಿನ ಹುದ್ದೆಗೆ ನೇಮಿಸಿಕೊಳ್ಳುತ್ತಿದ್ದರು. ಆ ಬಳಿಕ ಇಡೀ ಆಡಳಿತ ವ್ಯವಸ್ಥೆ ಬಲಹೀನವಾಗುತ್ತಾ ಬರುತ್ತಿದೆ. ಇತ್ತೀಚೆಗೆ ಅಧಿಕಾರಿಗಳೂ ಸ್ಥಳೀಯ ನಾಯಕರ ಜೊತೆ ಶಾಮೀಲಾಗಿ ಅವರ ಮರ್ಜಿಗೆ ತಕ್ಕಂತೆ ನಡೆದುಕೊಳ್ಳುವುದನ್ನು ಕಲಿತುಬಿಟ್ಟಿದ್ದಾರೆ. ಕೇಂದ್ರ ಸರ್ಕಾರದ ಹುದ್ದೆಗಳಲ್ಲಿ ಒಂದು ತಿಂಗಳು ಕೆಲಸ ಮಾಡಲು ಕೂಡಾ ಕೆಲವರು ಸಿದ್ಧರಿಲ್ಲದಿರುವುದು ವಿಪರ್ಯಾಸ.

ಅಖಿಲ ಭಾರತ ನಾಗರಿಕ ಸೇವೆಗಳಿಗೆ 1990ರ ಬಳಿಕ ನೇಮಕಾತಿಗಳೂ ನಿರೀಕ್ಷಿತ ಪ್ರಮಾಣದಲ್ಲಿ ಆಗುತ್ತಿಲ್ಲ. ಇದರಿಂದಾಗಿ ರಾಜ್ಯಗಳಲ್ಲಿ ಹಾಗೂ ಕೇಂದ್ರ ಸರ್ಕಾರದಲ್ಲಿ ಅಧಿಕಾರಿಗಳ ಕೊರತೆ ಎದುರಾಗಿರುವುದು ನಿಜ. ಇದನ್ನೆ ನೆಪವಾಗಿಟ್ಟುಕೊಂಡು ಪಶ್ಚಿಮ ಬಂಗಾಳ, ಕೇರಳ ಸೇರಿದಂತೆ ಕೆಲವು ರಾಜ್ಯಗಳು ಕೇಂದ್ರ ಸೇವೆಗೆ ಅಧಿಕಾರಿಗಳ ನಿಯೋಜನೆ ಮಾಡುತ್ತಿಲ್ಲ. ಗುಜರಾತ್‌ನಂತಹ ರಾಜ್ಯಗಳೂ ಇದಕ್ಕೆ ಹೊರತಾಗಿಲ್ಲ. 'ಕೇಂದ್ರದಲ್ಲೂ ಅಧಿಕಾರಿಗಳು ಸಾಲುತ್ತಿಲ್ಲ. ಹಾಗಾಗಿ ಈ ತಿದ್ದುಪಡಿ ಅಗತ್ಯ' ಎಂಬುದು ಕೇಂದ್ರದ ವಾದ.

ಯಾವುದಾದರೂ ಅಧಿಕಾರಿಯ ಸೇವೆಯನ್ನು ಪಡೆಯಲು ಕೇಂದ್ರವು ಬಯಸಿದರೆ, ರಾಜ್ಯ ಸರ್ಕಾರ ಅವರನ್ನು ಬಿಡುಗಡೆ ಮಾಡಬೇಕು ಎಂಬ ನಿಯಮ ಈಗಾಗಲೇ ಜಾರಿಯಲ್ಲಿದೆ. ನಿಯೋಜನೆ ಕುರಿತು ರಾಜ್ಯ ಹಾಗೂ ಕೇಂದ್ರ ಒಮ್ಮತಕ್ಕೆ ಬರಲು ಸಾಧ್ಯವಾಗದಿದ್ದರೆ, 1954ರ ಐಎಎಸ್ (ವೃಂದ) ನಿಯಮ 6 (1)ರ ಪ್ರಕಾರ ಕೇಂದ್ರ ಸರ್ಕಾರದ ತೀರ್ಮಾನವೇ ಅಂತಿಮವಾಗುತ್ತದೆ. ತಿದ್ದುಪಡಿ ಪ್ರಸ್ತಾವದಲ್ಲಿ ಕೇಂದ್ರದ ನಿರ್ಣಯವನ್ನು 'ನಿರ್ದಿಷ್ಟ ಕಾಲಮಿತಿಯ ಒಳಗೆ' ಜಾರಿಗೊಳಿಸಬೇಕು ಎಂಬ ಪದವನ್ನಷ್ಟೇ ಸೇರ್ಪಡೆ ಮಾಡಲಾಗುತ್ತಿದೆ. ಅದು ತಪ್ಪೇ?

ಇಲ್ಲಿ ಕೇಂದ್ರವು ತನ್ನ ನಿರ್ಧಾರವನ್ನು ಏಕಾಏಕಿ ಹೇರಲಾಗದು. ಎಷ್ಟು ಅಧಿಕಾರಿಗಳನ್ನು ನಿಯೋಜನೆ ಮಾಡಲು ಸಾಧ್ಯ ಎಂಬ ಬಗ್ಗೆ ವಸ್ತುಸ್ಥಿತಿಯ ವಿವರ ಪಡೆದು, ರಾಜ್ಯಗಳ ಜೊತೆ ಸಮಾಲೋಚನೆ ನಡೆಸಿಯೇ ಕೇಂದ್ರವು ತೀರ್ಮಾನಕ್ಕೆ ಬರಬೇಕಾಗುತ್ತದೆ. ತಿದ್ದುಪಡಿ ಪ್ರಸ್ತಾವದಲ್ಲೂ ಇದನ್ನು ಸ್ಪಷ್ಟವಾಗಿ ಹೇಳಲಾಗಿದೆ. ಈ ತಿದ್ದುಪಡಿ ಕೇವಲ ಬಿಜೆಪಿಯೇತರ ಪಕ್ಷಗಳ ಆಡಳಿತವಿರುವ ಪಶ್ಚಿಮ ಬಂಗಾಳ, ಕೇರಳ, ತೆಲಂಗಾಣ, ತಮಿಳುನಾಡಿಗೆ ಮಾತ್ರ ಅನ್ವಯವಾಗುವುದಲ್ಲ; ಇದು ಎಲ್ಲ ರಾಜ್ಯಗಳಿಗೂ ಅನ್ವಯವಾಗುತ್ತದೆ. ಐಎಎಸ್ ಮಾತ್ರವಲ್ಲ, ಐಪಿಎಸ್ ಹಾಗೂ ಐಎಫ್‌ಎಸ್ ಅಧಿಕಾರಿಗಳಿಗೂ ಅನ್ವಯವಾಗುತ್ತದೆ.

ನಾನು ಕೈಮಗ್ಗ ಅಭಿವೃದ್ಧಿ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕನಾಗಿದ್ದೆ. ಆಗ ಆ ಮಂಡಳಿಯು ಮುಚ್ಚುವ ಸ್ಥಿತಿ ಎದುರಾದಾಗ ಕೇಂದ್ರದ ಆರ್ಥಿಕ ಇಲಾಖೆಯಲ್ಲಿದ್ದ ಕರ್ನಾಟಕ ವೃಂದದ ಅಧಿಕಾರಿಯೊಬ್ಬರು ಜವಳಿ ಸಚಿವಾಲಯವನ್ನು ಸಂಪರ್ಕಿಸಿ ಮಂಡಳಿಯ ಪುನಃಶ್ಚೇತನಕ್ಕೆ ಕಾರ್ಯಕ್ರಮ ರೂಪಿಸಲು ನೆರವಾದರು. ಕರ್ನಾಟಕ ವೃಂದದವರು ಕೇಂದ್ರದ ಹುದ್ದೆಯಲ್ಲಿದ್ದರೆ ನಮ್ಮ ರಾಜ್ಯಕ್ಕೆ ಹೆಚ್ಚು ಪ್ರಯೋಜನ. ಅಧಿಕಾರಿಗಳನ್ನು ಕೇಂದ್ರ ಸೇವೆಗೆ ಕಳುಹಿಸದಿದ್ದರೆ, ಆ ರಾಜ್ಯಕ್ಕೇ ನಷ್ಟ ಜಾಸ್ತಿ.

ರಾಷ್ಟ್ರದ ಹಿತಾಸಕ್ತಿಯಿಂದ ತಂದ ತಿದ್ದುಪಡಿ ಇದು. ಒಳ್ಳೆಯ ಆಡಳಿತಕ್ಕೆ ಪೂರಕವಾಗಿರುವ ಈ ತಿದ್ದುಪಡಿಯನ್ನು ಸಂಘರ್ಷದ ಬದಲು ಸಂವಾದದ ಮೂಲಕ ಜಾರಿಗೊಳಿಸುವುದು ಸೂಕ್ತ.

ಲೇಖಕ: ನಿವೃತ್ತ ಐಎಎಸ್ ಅಧಿಕಾರಿ

ನಿರೂಪಣೆ: ಪ್ರವೀಣ್ ಕುಮಾರ್ ಪಿ.ವಿ.

ಪದಬಂಧ 4853 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಕೊನೆಗೆ ತಕ್ಕಡಿ ಹಿಡಿದಿರುವ ದಡ್ಡ! (5)
4.ಸಮೀಪವೆಂದು ಹೀಗೆನ್ನಿ (3)
5.ನಾವಿಕನ ಮೂಗು! (3)
9.ಈತ ಗಣನೀಯನಾದವನು! (2)
10.ಹುತ್ತವನ್ನು ಹೀಗೂ ಹೇಳುವರು (3)
11.ಕೊಡು ಕೊಡು ಎನ್ನುತ್ತಿರುವ ಅಜ್ಜ! (2)
12.ಸಾವಕಾಶವು ತಿರುವು ಮುರುವು ಆಗಿದೆಯಲ್ಲಾ! (3)
15.ಜನರ ನಡುವೆ ನುಸುಳಿದ ಅಳು (3)
16.ಅಚ್ಚುಕೂಟ ಇಲ್ಲಿದೆ (5)

ಮೇಲಿಂದ ಕೆಳಕ್ಕೆ

1.ವ್ಯತ್ಯಾಸ ಈ ತರ ಬಂದಿದೆಯಲ್ಲಾ! (3)
2.ಆವಿಯು ಇಲ್ಲಿ ಉಲ್ಟಾ ಕಾಣುತ್ತಿದೆ (2)
3.ರಕ್ತಧಮನಿಯು ತಿರುವು ಮುರುವು ಆಗಿದೆ (2)
4.ಗತಿಸಿದ ಪತಿಯೊಡನೆ ಚಿತೆಯೇರುವಿಕೆ (5)
6.ಚಪ್ಪಾಳೆಯನ್ನು ಹೀಗೆನ್ನಿ (5)
7.ಕೇಳುವಿಕೆಯು ನಕ್ಷತ್ರದ ಹೆಸರೂ ಆದೀತು (3)
8.ಕಟ ಕಟ ಶಬ್ದ ಮಾಡುತ್ತಿರುವ ಬಂಡಿ (3)
13.ಖುಷಿಯಿಲ್ಲಿ ತಿರುಗಿದ್ದಾನೆ (2)
14.ನಮಸ್ಕಾರವನ್ನು ಹೀಗೆ ಹೇಳಿ (3)
15.ಪರಾಜಯದಲ್ಲೇ ಗೆಲುವು ಬಂದಿದೆಯಲ್ಲಾ! (2)



4852ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ರವ3.ಒನಕೆ5.ರಿಕಾಪು 7.ರುದ್ರಭೂಮಿ 9.ಅಬಲೆ10.ನವೀನ 11.ಯಮದೂತ 13.ಕಮಾನು 15.ಖುಗುಅ16.ಪುಣ್ಯ

ಮೇಲಿಂದ ಕೆಳಕ್ಕೆ: 2.ವಲ್ಲರಿ3.ಒನಪು 4.ಕೆದರು6.ಕಾಮಾಲೆ 8.ಮಿಥುನ9.ಅಳಿಯ 10.ನಪಮಾ 12.ತಮಿಳು13.ಕಭ್ರಅ 14.ನುಣುಪು

ಸುಡೊಕು 5239

				1			6	
				5		7		3
					3		2	
	4	2		9		8	3	
3			8	4	1			2
1	9			2				7
	8						7	
2		4	9		7	1	5	6
	5			3			8	

5238 ಸುಡೊಕು

8	7	2	3	4	6	1	9	5
5	1	4	8	2	9	7	6	3
9	3	6	5	1	7	2	8	4
3	8	9	1	6	5	4	2	7
4	2	1	9	7	3	8	5	6
6	5	7	2	8	4	3	1	9
7	4	8	6	9	2	5	3	1
1	9	5	7	3	8	6	4	2
2	6	3	4	5	1	9	7	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ ಕಮ್ಮರಡಿ

ಶನಿವಾರ ಜನವರಿ 29, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ–ಹೇಮಂತ ಋತು ಮಕರ ಮಾಸದ 15 ನೇ ದಿನ
ತಿಥಿ: (ಪೌಷ ಕೃಷ್ಣ) ದ್ವಾದಶಿ ಗಂ. 20-38 **ನಕ್ಷತ್ರ:** ಮೂಲಾ ಗಂ. 26-49 **ಯೋಗ:** ವ್ಯಾಘಾತ ಗಂ. 18-02, **ಕರಣ:** ಕೌಲವ ಗಂ. 10-09. **ರಾಹುಕಾಲ :** ಬೆಳಿಗ್ಗೆ 09:00 – 10:30
ಸೂರ್ಯೋದಯ : 07-01 **ಸೂರ್ಯಾಸ್ತ :** 06-26 **ಮುಸ್ಲಿಂ ದಿನಾಂಕ :** 25 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ: 6, 11

ಮೇಷ: ಸದಾಕಾಲ ಪಕ್ಕದಲ್ಲಿಯೇ ಇರುವ ಶತ್ರುಗಳಿಂದ ವಂಚನಾ ಪ್ರಸಂಗವಿದ್ದರು, ಖಂಡಿತವಾಗಿ ನೀವೇ ಜಯಶಾಲಿಯಾಗುವಿರಿ. ಮಂಗಲ ಕಾರ್ಯಗಳಿಗೆ ಅಡ್ಡಿ-ಆತಂಕ ಇರುವುದಿಲ್ಲ. ತಾಯಿಯ ಆರೋಗ್ಯದ ಕಡೆ ಎಚ್ಚರವಹಿಸಿ.

ವೃಷಭ: ಹಾಡುಗಾರರಿಗೆ ಈ ದಿನ ಒಳ್ಳೆಯ ಅವಕಾಶವಿರುವುದು. ಈ ದಿನದ ಆಗುಹೋಗುಗಳ ಬಗ್ಗೆ ತಲೆಕೆಡಿಸಿಕೊಳ್ಳುವ ಅವಶ್ಯಕತೆ ಇಲ್ಲ. ಇದೆಲ್ಲವೂ ಕ್ಷಣಿಕ. ಜೀವನದಲ್ಲಿ ಹೊಸ ಚೈತನ್ಯ ತುಂಬಿ, ಆಸಕ್ತಿಯನ್ನು ಹೆಚ್ಚಿಸಿಕೊಳ್ಳಿ.

ಮಿಥುನ: ಬುದ್ಧಿವಂತಿಕೆಯ ಬಲದಿಂದ ಶತ್ರುಗಳ ಬಾಧೆಯನ್ನು ಉಪಶಮನಗೊಳಿಸಿಕೊಳ್ಳುವ ಮಾರ್ಗ ಹುಡುಕಿರಿ. ದುಡ್ಡಿನ ವಿಷಯದಲ್ಲಿ ಮೋಸ ಹೋಗುವ ಸಂಭವ. ಕೆಲಸಗಳನ್ನು ಕಾರ್ಯರೂಪಕ್ಕೆ ತರಲು ಪರಿಶ್ರಮದ ಅಗತ್ಯವಿದೆ.

ಕರ್ಕಾಟಕ: ಅತ್ತೆ ಸೊಸೆಯ ಸಂಬಂಧದಲ್ಲಿ ಭಿನ್ನಾಭಿಪ್ರಾಯ ಮೂಡಲಿದೆ. ನಿಮ್ಮನ್ನು ಪ್ರೀತಿಸುವವರ ಮಾರ್ಗದರ್ಶನದಿಂದ ಜೀವನದಲ್ಲಿನ ನಿರುತ್ಸಾಹವು ದೂರಾಗಲಿದೆ.

ಸಿಂಹ: ಯೋಜನೆಗಳಲ್ಲಿ ಮುಂದಾಳತ್ವ ವಹಿಸಿ ಮತ್ತು ನಿಮ್ಮ ತಂಡ ಎದುರಿಸುತ್ತಿರುವ ಪ್ರಮುಖ ವಿಷಯಗಳ ತೊಂದರೆಯನ್ನು ನಿವಾರಣೆ ಮಾಡುವಿರಿ. ಗೃಹೋಪಯೋಗಿ ವಸ್ತು ಖರೀದಿ. ಬರವಣಿಗೆಯಲ್ಲಿ ಹೆಚ್ಚಿನ ಉತ್ಸಾಹ.

ಕನ್ಯಾ: ಜವಾಬ್ದಾರಿಗಳನ್ನು ನಿಭಾಯಿಸಲು ಸಿದ್ಧರಾಗಿ. ಮನಸ್ಸಿನ ಭಾವನೆಗಳನ್ನು ಹೊರ ಹಾಕುವಂತಾಗಲಿದೆ. ಮನೆಯವರ ಒಳಿತಿಗಾಗಿ ಕೆಲವು ಹೊಸ ಮಾರ್ಗಗಳನ್ನು ಕಂಡುಕೊಳ್ಳಲು ಇದು ಸೂಕ್ತ ಸಮಯ.

ತುಲಾ: ಉದರದಲ್ಲಿ ಹುಣ್ಣುಗಳು ಅಥವಾ ನೋವು ಸಾಧ್ಯತೆ ಇದೆ. ನಿಮ್ಮ ಹೊಸ ಯೋಜನೆಗೆ ಹೊಸ ರೂಪ ನೀಡಲು ಇಂದು ಬಹಳಷ್ಟು ಅವಕಾಶಗಳು ಎದುರಾಗುವುದು ಹಾಗೂ ಸ್ತಬ್ಧಗೊಂಡ ಪ್ರೇರಣೆಯು ಮತ್ತೆ ಮರಳುವುದು.

ವೃಶ್ಚಿಕ: ಅನಾರೋಗ್ಯದಿಂದಾಗಿ ವಿದ್ಯಾರ್ಥಿಗಳ ಸಾಧನೆಗೆ ಅಡೆ-ತಡೆಗಳು ಉಂಟಾಗಬಹುದು. ದಾನ ಧರ್ಮ ಪರೋಪಕಾರಗಳಲ್ಲಿ ಆಸಕ್ತಿ ಮೂಡಿ ಉಪಕಾರ ಮಾಡುವುದರಿಂದ ಪುಣ್ಯ ಸಂಪಾದನೆಯಾಗುತ್ತದೆ.

ಧನು: ನಿಮ್ಮ ನಿರ್ಧಾರಗಳಿಗೆ ಬದ್ಧತೆಯನ್ನು ತೋರಬೇಕಾಗಬಹುದು. ಒತ್ತಡ ತರುವಂತಹ ಕೆಲಸಗಳಿಂದ ದೂರವಿರುವ ಪ್ರಯತ್ನ ಮಾಡಿ. ಸ್ಪರ್ಧೆಯಲ್ಲಿ ಜಯಗಳಿಸುವಿರಿ. ಹಿಂದಿನ ಕೆಟ್ಟ ಘಟನೆಗಳು ಮರುಕಳಿಸದಂತೆ ಎಚ್ಚರ ವಹಿಸಿ.

ಮಕರ: ಮಗನಿಂದ ಮನಸ್ಸಿಗೆ ನೋವಾಗುವಂತಹ ಘಟನೆ ನಡೆಯಬಹುದು. ಕಫ ಪ್ರಕೃತಿ ಶರೀರ ಹೊಂದಿದ ವ್ಯಕ್ತಿಗಳಿಗೆ ಉಸಿರಾಟದ ಸಮಸ್ಯೆ ಕಾಣಿಸಿಕೊಳ್ಳುವ ಸಾಧ್ಯತೆ ಇದೆ. ಜವಳಿ ವ್ಯಾಪಾರಿಗಳಿಗೆ ಹೆಚ್ಚಿನ ಲಾಭ.

ಕುಂಭ: ಕೆಲಸದಲ್ಲಿದ್ದ ಸಣ್ಣಪುಟ್ಟ ತೊಡಕುಗಳನ್ನು ನಿವಾರಿಸಿಕೊಳ್ಳುವಿರಿ. ಸಾಂಸ್ಕೃತಿಕ ಸಮಾರಂಭದಲ್ಲಿ ಭಾಗವಹಿಸುವ ಅವಕಾಶ ದೊರೆತು ಸಂತಸ. ಮಕ್ಕಳ ಮೇಲಿದ್ದ ಮುನಿಸು ಕರಗುವುದು. ದೇವತಾಕಾರ್ಯಗಳಿಂದ ನೆಮ್ಮದಿ.

ಮೀನ: ಅಂದುಕೊಂಡ ಕೆಲಸವು ಯೋಜಿತ ರೀತಿಯಲ್ಲಿ ಮುನ್ನಡೆಯಲಿದೆ. ಪಠ್ಯೇತರ ಚಟುವಟಿಕೆಗಳಲ್ಲಿ ಹೆಚ್ಚಿನ ಉತ್ಸಾಹ ತೋರುವುದರಿಂದ ಮನೋಲ್ಲಾಸ. ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳಲು ಹಿಂಜರಿಕೆ ಬೇಡ.

ಮುಂಬೈ ಧಾರಣೆ

ಶೇಂಗಾ

28-1-2022

ಜಾವಾ 70/80(ಹೊಸ)	11200-11250
ಜಾವಾ 80/90(ಹೊಸ)	10900-10950
ದಪ್ಪ ಮಧ್ಯಪ್ರದೇಶ(ಹೊಸ)	9800-9850
ದಪ್ಪ ಗುಜರಾತ್(ಹೊಸ)	8650-8700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1340 (1330)
ಒಂದು ವಾರದ ಡೆಲಿವರಿ	1335 (1325)
ಸೋಯಾ ಕಚ್ಚಾ	1210 (1190)
ಪಾಮ್ ವಾರದ ಡೆಲಿವರಿ	1210 (1182)
ಸೂರ್ಯಕಾಂತಿ ಎಣ್ಣೆ ಕಚ್ಚಾ	1220 (1200)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	47,700 (48,300)
ಬೆಳ್ಳಿ ಕೆ.ಜಿ	61,200 (62,675)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,110
ಇಂದಿನ ಅಂತ್ಯ	17,102
▼	8
ದಿನದ ಕನಿಷ್ಠ	17,077

ವಿನಿಮಯ ದರ

$ ಡಾಲರ್	75.07
£ ಪೌಂಡ್	100.31
€ ಯುರೊ	83.53
¥ ಯೆನ್ (100ಕ್ಕೆ)	65

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹440
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹435

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1330 (1320)
ಸೋಯಾ (ರಿಫೈನ್ಡ್)	₹1245 (1237)
ಸೂರ್ಯಕಾಂತಿ (ರಿಫೈನ್ಡ್)	₹1275 (1260)
ಪಾಮೋಲಿನ್	₹1212 (1184)

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಪುತ್ತೂರು	₹4000-10500
ತುಮಕೂರು	---
ತುರುವೇಕೆರೆ	₹16900-17150

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1800-2200
ಮಧ್ಯಮ	₹1200-1800
ಸಣ್ಣ	₹500-1200

2021ರಲ್ಲಿ ಚಿನ್ನಕ್ಕೆ ಬೇಡಿಕೆ ಶೇ 78ರಷ್ಟು ಏರಿಕೆ

ಮುಂಬೈ (ಪಿಟಿಐ): 2021ರಲ್ಲಿ ಭಾರತದಲ್ಲಿನ ಚಿನ್ನದ ಬೇಡಿಕೆಯು 797.3 ಟನ್‌ಗೆ ಹೆಚ್ಚಳ ಆಗಿದೆ. ಚಿನ್ನದ ಬೇಡಿಕೆಯಲ್ಲಿ 2022ರಲ್ಲಿಯೂ ಹೆಚ್ಚಳ ಕಾಣುವ ನಿರೀಕ್ಷೆ ಇದೆ ಎಂದು ವಿಶ್ವ ಚಿನ್ನ ಸಮಿತಿ (ಡಬ್ಲ್ಯುಜಿಸಿ) ಹೇಳಿದೆ.

ಗ್ರಾಹಕರಿಂದ ಬೇಡಿಕೆಯಲ್ಲಿ ಸುಧಾರಣೆ ಕಂಡುಬಂದಿದ್ದು, ಕೋವಿಡ್–19ನಿಂದಾಗಿ ಹಿಂದೆ ಚಿನ್ನ ಖರೀದಿಸಲು ಆಗದಿದ್ದವರು, 2021ರಲ್ಲಿ ಖರೀದಿಸಿದ್ದು ಚಿನ್ನಕ್ಕೆ ಬೇಡಿಕೆ ಹೆಚ್ಚಾಗಲು ಕಾರಣ ಎಂದು ಸಮಿತಿಯು ಹೇಳಿದೆ.

ಚಿನ್ನದ ಬೇಡಿಕೆ ಕುರಿತ ವರದಿಯಲ್ಲಿ ಡಬ್ಲ್ಯುಜಿಸಿ, 2021ರಲ್ಲಿ ಭಾರತದಲ್ಲಿ ಚಿನ್ನಕ್ಕೆ ವ್ಯಕ್ತವಾದ ಬೇಡಿಕೆಯಲ್ಲಿ ಶೇಕಡ 78.6ರಷ್ಟು ಹೆಚ್ಚಳ ಆಗಿದೆ ಎಂದು ಹೇಳಿದೆ. 2020ರಲ್ಲಿ 446.4 ಟನ್ ಚಿನ್ನಕ್ಕೆ ಬೇಡಿಕೆ ಬಂದಿತ್ತು. 'ಡಿಸೆಂಬರ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ದೇಶದಲ್ಲಿ 343 ಟನ್ ಚಿನ್ನಕ್ಕೆ ಬೇಡಿಕೆ ಬಂದಿದೆ. ಇದು ನಮ್ಮ ನಿರೀಕ್ಷೆಗಿಂತಲೂ ಹೆಚ್ಚು. ಒಟ್ಟು ಬೇಡಿಕೆ ಹೆಚ್ಚಳವಾಗಿದ್ದಕ್ಕೆ ಡಿಸೆಂಬರ್ ತ್ರೈಮಾಸಿಕದ ಬೇಡಿಕೆಯೂ ಒಂದು ಕಾರಣ. ನಮ್ಮ ದಾಖಲೆಗಳ ಪ್ರಕಾರ ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಡುಬಂದ ಬೇಡಿಕೆಯು ಅತ್ಯುತ್ತಮ ಮಟ್ಟದ್ದಾಗಿತ್ತು' ಎಂದು ಸಮಿತಿಯ ಭಾರತದ ಪ್ರಾದೇಶಿಕ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಪಿ.ಆರ್. ಸೋಮಸುಂದರಂ ತಿಳಿಸಿದರು.

ಕೋವಿಡ್–19, ಮುಂದೆ ಬರಬಹುದಾದ ಕೊರೊನಾದ ರೂಪಾಂತರಿ ತಳಿಗಳು, ಚಿನ್ನದ ಬೆಲೆಯಲ್ಲಿ ಆಗಬಹುದಾದ ವ್ಯತ್ಯಾಸ, ಬಡ್ಡಿ ದರಗಳು ಚಿನ್ನದ ಬೇಡಿಕೆಯ ಮೇಲೆ ಪರಿಣಾಮ ಉಂಟುಮಾಡಲಿವೆ ಎಂದು ಅವರು ಹೇಳಿದರು. 'ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಡುಬಂದ ಪ್ರಮಾಣದ ಬೇಡಿಕೆಯು ಮುಂದಿನ ದಿನಗಳಲ್ಲಿಯೂ ಕಂಡುಬರುತ್ತದೆ ಎನ್ನಲಾಗದು' ಎಂದೂ ಅವರು ಹೇಳಿದರು. 2022ರಲ್ಲಿ ದೊಡ್ಡ ಪ್ರಮಾಣದ ಅಡ್ಡಿಗಳು ಎದುರಾಗದೆ ಇದ್ದರೆ ದೇಶದಲ್ಲಿ ಚಿನ್ನದ ಬೇಡಿಕೆಯು 800 ಟನ್‌ನಿಂದ 850 ಟನ್‌ವರೆಗೆ ಹೆಚ್ಚಳ ಕಾಣಬಹುದು ಎಂದು ಸಮಿತಿ ಅಂದಾಜು ಮಾಡಿದೆ. 2021ರಲ್ಲಿ ಚಿನ್ನಾಭರಣಗಳ ಬೇಡಿಕೆಯು ಶೇ 93ರಷ್ಟು ಹೆಚ್ಚಾಗಿ, 610.9 ಟನ್‌ಗೆ ತಲುಪಿತು. ಹೂಡಿಕೆಗಾಗಿ ಚಿನ್ನದ ಬೇಡಿಕೆಯು ಶೇ 43ರಷ್ಟು ಹೆಚ್ಚಳ ಕಂಡು, 186.5 ಟನ್‌ಗೆ ತಲುಪಿತು.

ಚಿನ್ನ ₹ 423, ಬೆಳ್ಳಿ ₹ 1,105 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ದರ 10 ಗ್ರಾಂಗೆ ₹ 423ರಷ್ಟು ಇಳಿಕೆಯಾಗಿ ₹ 47,777ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆ ಕೆ.ಜಿ.ಗೆ ₹ 1,105ರಷ್ಟು ಇಳಿಕೆಯಾಗಿ ₹ 61,652ಕ್ಕೆ ತಲುಪಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಮತ್ತು ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಹೆಚ್ಚಳದಿಂದಾಗಿ ದೇಶಿ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಕಂಡಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	480
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕುಮಟ	
ಚಿಪ್ಪು	24869-31119
ಕೋಕ	20109-26109
ಹಳೆಚಾಲಿ	47699-49899
ಹೊಸಚಾಲಿ	37869-41799
ಪುತ್ತೂರು	
ಕೋಕ	11000-26000
ಹೊಸತು	27500-45000
ಸಿದ್ದಾಪುರ	
ಬಿಳಿಗೋಟು	20299-30099
ಚಾಲಿ	46599-47899
ಕೋಕ	20699-28199
ಹೊಸಚಾಲಿ	30699-41039
ಕೆಂಪುಗೋಟು	20999-37689
ರಾಶಿ	42109-47509
ತಟ್ಟಿಬೆಟ್ಟೆ	36009-45899
ಶಿರಸಿ	
ಬೆಟ್ಟೆ	22218-45699
ಬಿಳಿಗೋಟು	19099-40899
ಚಾಲಿ	32266-42899
ರಾಶಿ	41589-48208
ಯಲ್ಲಾಪುರ	
ಬಿಳಿಗೋಟು	26899-31899
ಕೋಕ	21669-31899
ಹಳೆಚಾಲಿ	44200-49211
ಹೊಸಚಾಲಿ	36899-41399
ಕೆಂಪುಗೋಟು	30599-36410
ರಾಶಿ	44389-52469
ತಟ್ಟಿಬೆಟ್ಟೆ	38299-43960
ರಾಮನಗರ ರೇಷ್ಮೆ	
ಮಿಶ್ರತಳಿ	400-732
ದ್ವಿತಳಿ	579-920

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	15500	15550	232.05 ಸೆಂಟ್ಸ್
ಎಸಿ	---	7000	7100	
ಆರ್‌ಪಿ	---	7100	7300	ಲಂಡನ್
ಆರ್‌ಸಿ	---	3850	3950	1219 ಡಾಲರ್ಸ್

ಅನಂತ ನಾಗೇಶ್ವರನ್ ಹೊಸ ಸಿಇಎ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ವಿ. ಅನಂತ ನಾಗೇಶ್ವರನ್ ಅವರನ್ನು ಮುಖ್ಯ ಆರ್ಥಿಕ ಸಲಹೆಗಾರರನ್ನಾಗಿ (ಸಿಇಎ) ನೇಮಕ ಮಾಡಿದೆ. ಆರ್ಥಿಕ ಸಮೀಕ್ಷೆ ಮಂಡನೆಗೆ ಕೆಲವೇ ದಿನಗಳು ಬಾಕಿ ಇರುವಾಗ ಈ ನೇಮಕ ನಡೆದಿದೆ.

ಹಿಂದಿನ ಸಿಇಎ ಕೆ.ವಿ. ಸುಬ್ರಮಣಿಯನ್ ಅವರ ಅಧಿಕಾರ ಅವಧಿಯು ಡಿಸೆಂಬರ್‌ನಲ್ಲಿ ಪೂರ್ಣಗೊಂಡಿತ್ತು. ನಾಗೇಶ್ವರನ್ ಅವರು ಕ್ರೆಡಿಟ್ ಸ್ಯೂಸ್ ಗ್ರೂಪ್‌ನಲ್ಲಿ ಕರ್ತವ್ಯ ನಿಭಾಯಿಸಿದ್ದಾರೆ. ನಾಗೇಶ್ವರನ್ ಅವರು ಶುಕ್ರವಾರ ಅಧಿಕಾರ ಸ್ವೀಕರಿಸಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಗುಜರಾತ್‌ನ ನಾಲ್ವರ ಸಾವು: ಕೆನಡಾ ತನಿಖೆ

ನ್ಯೂಯಾರ್ಕ್ / ಟೊರೊಂಟೊ (ಪಿಟಿಐ): ಕೆನಡಾ–ಅಮೆರಿಕ ಗಡಿಯಲ್ಲಿ ಒಂದೇ ಕುಟುಂಬದ ನಾಲ್ವರು ಭಾರತೀಯರು ಮೃತಪಟ್ಟ ಸ್ಥಿತಿಯಲ್ಲಿ ಪತ್ತೆಯಾದ ಪ್ರಕರಣ ಕುರಿತು ಕೆನಡಾ ಸರ್ಕಾರ ತನಿಖೆ ಆರಂಭಿಸಿದೆ. ಟೊರೊಂಟೊದಲ್ಲಿ ಬಂದಿಳಿದ ನಂತರ ಈ ಕುಟುಂಬದ ಸದಸ್ಯರು ಗಡಿಗೆ ಹೇಗೆ ಪ್ರಯಾಣಿಸಿದರು ಎಂಬುದರ ಕುರಿತು ತನಿಖೆ ನಡೆಸಲಾಗುತ್ತದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಗಡಿಯಲ್ಲಿ ಅವರು ಎದುರಿಸಿದ ಸಮಸ್ಯೆಗಳೇನು ಹಾಗೂ ತನಿಖೆಗೆ ಪೂರಕವಾದ ಇತರ ಮಾಹಿತಿಯನ್ನು ಹಂಚಿಕೊಳ್ಳುವಂತೆ ಅಧಿಕಾರಿಗಳು ಜನರಿಗೆ ಮನವಿ ಮಾಡಿದ್ದಾರೆ. ನಾಲ್ವರ ಗುರುತು ಪತ್ತೆ ಮಾಡಲಾಗಿದೆ. ಅವರೆಲ್ಲರೂ ಭಾರತೀಯರು ಎಂದು ಕೆನಡಾದ ಅಧಿಕಾರಿಗಳು ದೃಢಪಡಿಸಿದ್ದಾರೆ ಎಂದು ಇಲ್ಲಿನ ಭಾರತದ ಹೈಕಮಿಷನ್ ತಿಳಿಸಿದೆ. ಅಮೆರಿಕ ಗಡಿಯಿಂದ 12 ಮೀ. ದೂರದಲ್ಲಿರುವ ಮನಿಟೊಬಾದ ಎಮರ್ಸನ್ ಎಂಬಲ್ಲಿ, ಗುಜರಾತಿನವರಾದ ಜಗದೀಶ ಬಲದೇವಭಾಯ್ ಪಟೇಲ್ (39), ವೈಶಾಲಿಬೆನ್ ಜಗದೀಶ ಕುಮಾರ್ ಪಟೇಲ್ (37), ವಿಹಾಂಗಿ ಜಗದೀಶಕುಮಾರ್ ಪಟೇಲ್ (11) ಹಾಗೂ ಧಾರ್ಮಿಕ ಪಟೇಲ್ (3) ಎಂಬುವವರು ಹಿಮಪಾತದಿಂದಾಗಿ ಹೆಪ್ಪುಗಟ್ಟಿ ಜ.19ರಂದು ಮೃತಪಟ್ಟಿದ್ದರು. 'ಪಟೇಲ್ ಕುಟುಂಬ ಜ.12ರಂದು ಟೊರೊಂಟೊಗೆ ಬಂದಿತ್ತು.

ಬ್ಯಾಡ್ ಬ್ಯಾಂಕ್ ಆರಂಭಕ್ಕೆ ಅನುಮೋದನೆ

ಮುಂಬೈ (ಪಿಟಿಐ): ಬ್ಯಾಡ್ ಬ್ಯಾಂಕ್ ಅಥವಾ ರಾಷ್ಟ್ರೀಯ ಆಸ್ತಿ ಪುನರ್‌ರಚನಾ ಕಂಪನಿಯು (ಎನ್‌ಎಆರ್‌ಸಿಎಲ್) ಕಾರ್ಯಾಚರಣೆ ಆರಂಭಿಸಲು ಅಗತ್ಯವಿರುವ ಎಲ್ಲ ಅನುಮೋದನೆಗಳನ್ನು ಪಡೆದುಕೊಂಡಿದ್ದು, ಒಟ್ಟು 38 ಎನ್‌ಪಿಎ (ಅನುತ್ಪಾದಕ ಸಾಲ) ಖಾತೆಗಳು ಈ ಕಂಪನಿಗೆ ವರ್ಗಾವಣೆ ಆಗಲಿವೆ.

ಇಷ್ಟು ಖಾತೆಗಳಲ್ಲಿನ ಸಾಲದ ಒಟ್ಟು ಮೊತ್ತವು ₹ 82,845 ಕೋಟಿ ಎಂದು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಅಧ್ಯಕ್ಷ ದಿನೇಶ್ ಖರಾ ಹೇಳಿದ್ದಾರೆ. 38 ಎನ್‌ಪಿಎ ಖಾತೆಗಳನ್ನು ಕಂಪನಿಗೆ ವರ್ಗಾವಣೆ ಮಾಡುವ ಪ್ರಕ್ರಿಯೆಯು ಹಂತ ಹಂತವಾಗಿ ನಡೆಯಲಿದೆ. ಮೊದಲ ಹಂತದಲ್ಲಿ ಮಾರ್ಚ್‌ಗೆ ಮುನ್ನ ಒಟ್ಟು 15 ಎನ್‌ಪಿಎ ಖಾತೆಗಳನ್ನು ಕಂಪನಿಗೆ ವರ್ಗಾವಣೆ ಮಾಡಲಾಗುತ್ತದೆ. ಇಷ್ಟು ಖಾತೆಗಳಲ್ಲಿನ ಸಾಲದ ಒಟ್ಟು ಮೊತ್ತವು ₹ 50 ಸಾವಿರ ಕೋಟಿ. ಇಂಡಿಯಾ ಡೆಟ್ ರೆಸಲ್ಯೂಷನ್ ಕಂಪನಿ ಲಿ. (ಐಡಿಆರ್‌ಸಿಎಲ್) ಕೂಡ ಕಾರ್ಯಾಚರಣೆ ಆರಂಭಿಸಲು ಅಗತ್ಯವಿರುವ ಅನುಮೋದನೆಗಳನ್ನು ಪಡೆದುಕೊಂಡಿದೆ ಎಂದು ಅವರು ತಿಳಿಸಿದ್ದಾರೆ. ಈ ಕಂಪನಿಯು ಅನುತ್ಪಾದಕ ಆಸ್ತಿಗಳನ್ನು ನಿರ್ವಹಿಸಲಿದ್ದು, ಇದಕ್ಕೆ ಮಾರುಕಟ್ಟೆ ತಜ್ಞರ ನೆರವು ಪಡೆಯಲಿದೆ.

ಕರ್ಣಾಟಕ ಬ್ಯಾಂಕ್ ತೃತೀಯ ತ್ರೈಮಾಸಿಕ ವರದಿ

₹ 146 ಕೋಟಿ ನಿವ್ವಳ ಲಾಭ

ಮಂಗಳೂರು: ಪ್ರಸಕ್ತ ಆರ್ಥಿಕ ವರ್ಷದ ಮೂರನೇ ತ್ರೈಮಾಸಿಕದಲ್ಲಿ ಕರ್ಣಾಟಕ ಬ್ಯಾಂಕ್ ಶೇ 8.16 ವಾರ್ಷಿಕ ವೃದ್ಧಿದರ ಹಾಗೂ ₹ 146.42 ಕೋಟಿ ನಿವ್ವಳ ಲಾಭ ದಾಖಲಿಸಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಇದು ₹ 135.37 ಕೋಟಿ ಆಗಿತ್ತು.

ಮಂಗಳೂರಿನ ಬ್ಯಾಂಕ್ ಪ್ರಧಾನ ಕಚೇರಿಯಲ್ಲಿ ವೆಬೆಕ್ಸ್ ಮುಖಾಂತರ ನಡೆದ ಆಡಳಿತ ಮಂಡಳಿ ಸಭೆಯಲ್ಲಿ 2021-22ರ ತೃತೀಯ ತ್ರೈಮಾಸಿಕದ ಹಣಕಾಸು ವರದಿಯನ್ನು ಅಂಗೀಕರಿಸಲಾಯಿತು. ಬ್ಯಾಂಕ್‌ನ ಅನುತ್ಪಾದಕ ಸ್ವತ್ತುಗಳ ಪ್ರಮಾಣ ಗಮನಾರ್ಹ ಇಳಿಕೆ ಆಗಿವೆ.

'ಫಲಿತಾಂಶ ತೃಪ್ತಿಕರ'

'ಸ್ಥೂಲ ಅನುತ್ಪಾದಕ ಸ್ವತ್ತುಗಳು ಶೇ 4.11ಕ್ಕೆ ಇಳಿಕೆ ಕಂಡಿವೆ. ನಿವ್ವಳ ಅನುತ್ಪಾದಕ ಸ್ವತ್ತುಗಳು ಶೇ 2.45ಕ್ಕೆ ಇಳಿದಿವೆ ಹಾಗೂ ಸ್ಪೆಷಲ್ ಮೆನ್ಷನ್‌ಡ್ ಅಕೌಂಟ್ ಶೇ 2.30 ಇಂದ ಶೇ 1.64 ಕ್ಕೆ ಇಳಿದಿವೆ. ಪ್ರೊವಿಶನ್ ಕವರೇಜ್ ಅನುಪಾತ ಶೇ 73.74 ಕ್ಕೆ ಏರಿದೆ' ಎಂದು ಬ್ಯಾಂಕ್‌ನ ಎಂಡಿ ಹಾಗೂ ಸಿಇಒ ಮಹಾಬಲೇಶ್ವರ ಎಂ.ಎಸ್. ಹರ್ಷವ್ಯಕ್ತ ಪಡಿಸಿದರು.

ಬ್ಯಾಂಕಿನ ಸ್ಥೂಲ ಅನುತ್ಪಾದಕ ಸ್ವತ್ತು ಶೇ 4.11ಕ್ಕೆ ಇಳಿಕೆಯಾಗಿವೆ. ಇದು ₹ 170.60 ಕೋಟಿಯಷ್ಟು ಇಳಿಕೆ ಆಗಿದ್ದು, ಒಟ್ಟು ₹ 2,330.52 ಕೋಟಿಗೆ ತಲುಪಿದೆ. ಬ್ಯಾಂಕ್‌ನ ಒಟ್ಟು ವ್ಯವಹಾರವು 2021ರ ಡಿ. 31ಕ್ಕೆ ಶೇ 5.44 ದರದಲ್ಲಿ ವೃದ್ಧಿ ಕಂಡಿದ್ದು, ₹1.33 ಲಕ್ಷ ಕೋಟಿಗೆ ಏರಿದೆ. ಠೇವಣಿಗಳು ಶೇ 6.24 ದರದಲ್ಲಿ ವೃದ್ಧಿ ಕಂಡು ₹78,428.71 ಕೋಟಿ ಆಗಿವೆ.



ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಶುಕ್ರವಾರ ನಡೆದ ಸಮಾರಂಭದಲ್ಲಿ ಸಿ.ಎಂ ಬಸವರಾಜ ಬೊಮ್ಮಾಯಿ ತಮ್ಮ ಸರ್ಕಾರದ ಆರು ತಿಂಗಳ ಅವಧಿಯ ನಿರ್ಧಾರಗಳ ಕುರಿತು ಐಸೆಕ್ ಸಿದ್ಧಪಡಿಸಿರುವ ಅಧ್ಯಯನ ವರದಿಯನ್ನು ಬಿಡುಗಡೆ ಮಾಡಿದರು. ಸಚಿವರಾದ ಎಂ.ಟಿ.ಬಿ. ನಾಗರಾಜ್, ಬಿ.ಸಿ. ನಾಗೇಶ್, ಎಸ್ ಅಂಗಾರ, ಬಿ.ಸಿ. ಪಾಟೀಲ, ಎಸ್‌ಟಿ. ಸೋಮಶೇಖರ್, ಕೆ.ಎಸ್ ಈಶ್ವರಪ್ಪ, ಗೋವಿಂದ ಎಂ. ಕಾರಜೋಳ, ಉಮೇಶ ಕತ್ತಿ, ವಿ. ಸೋಮಣ್ಣ ಮತ್ತು ಆರಗ ಜ್ಞಾನೇಂದ್ರ ಇದ್ದರು– ಪ್ರಜಾವಾಣಿ ಚಿತ್ರ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ನಿಧನ



ಎಸ್. ವಿ. ಕೃಷ್ಣಪ್ಪ, (99 ವರ್ಷ)

ನಿವೃತ್ತ ಬೆರಳಚ್ಚುಗಾರರು, ಬಿ.ಬಿ.ಎಂ.ಪಿ ಸಾರಕ್ಕಿ, ಬೆಂಗಳೂರು.

ಶ್ರೀಯುತರು ದಿನಾಂಕ 28–1–2022 ರಂದು ಮಧ್ಯಾಹ್ನ 1:30ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಅಂತ್ಯ ಕ್ರಿಯೆಯನ್ನು ದಿನಾಂಕ 29–01–2022 ರಂದು ಬೆಳಿಗ್ಗೆ 11:00 ಗಂಟೆಗೆ ಬನಶಂಕರಿಯ ಚಿತಾಗಾರದಲ್ಲಿ ನೆರವೇರಿಸಲಾಗುವುದು

ಇಂತಿ ದುಃಖತಪ್ತರು: ಮಕ್ಕಳು, ಮೊಮ್ಮಕ್ಕಳು, ಹಾಗೂ ಮರಿಮಕ್ಕಳು

ಮೊ. 9742740305, 9945591912

'ಸುಪ್ರೀಂ' ಮಾನದಂಡ ಇಲ್ಲ

ಒಂದನೇ ಪುಟದಿಂದ

ಕೇಂದ್ರ ಮತ್ತು ರಾಜ್ಯಗಳು ಅನುಸರಿಸುವುದಕ್ಕಾಗಿ ನಿಖರ ಮತ್ತು ನಿರ್ದಿಷ್ಟ ಮಾನದಂಡ ರೂಪುಗೊಳ್ಳದೇ ಇದ್ದರೆ ಅಸಂಖ್ಯ ವ್ಯಾಜ್ಯಗಳು ಸೃಷ್ಟಿಯಾಗಬಹುದು. ಯಾವ ತತ್ವದ ಆಧಾರದಲ್ಲಿ ಮೀಸಲಾತಿ ನೀಡಲಾಗಿದೆ ಎಂಬ ವಿಚಾರಕ್ಕೆ ಕೊನೆಯೇ ಇಲ್ಲದಂತೆ ಆಗಬಹುದು ಎಂದೂ ಅವರು ವಾದಿಸಿದ್ದರು.

ಎಸ್‌ಸಿ ಮತ್ತು ಎಸ್‌ಟಿ ಸಮುದಾಯಗಳಿಗೆ ಬಡ್ತಿ ಮೀಸಲಾತಿ ನೀಡಬೇಕು ಎಂಬ ತೀರ್ಪನ್ನು ಮರಳಿ ವಿಚಾರಣೆಗೆ ಒಳಪಡಿಸುವುದಿಲ್ಲ. ಆದರೆ, ಇದನ್ನು ಹೇಗೆ ಜಾರಿಗೆ ತರಬೇಕು ಎಂಬುದು ರಾಜ್ಯಗಳಿಗೆ ಬಿಟ್ಟ ವಿಚಾರ ಎಂದು ಸುಪ್ರೀಂ ಕೋರ್ಟ್ ಈ ಹಿಂದೆಯೇ ಸ್ಪಷ್ಟಪಡಿಸಿತ್ತು.

ಪ್ರಾತಿನಿಧ್ಯದ ಕೊರತೆ ಇದೆ ಎಂಬುದನ್ನು ಸಾಬೀತು ಮಾಡುವ ಪ್ರಮಾಣೀಕರಿಸಬಹುದಾದ ದತ್ತಾಂಶದ ಸಂಗ್ರಹವು ಕಡ್ಡಾಯ. ಈ ದತ್ತಾಂಶವನ್ನು ನಿಗದಿತ ಅವಧಿಯಲ್ಲಿ ಮರು ಪರಿಶೀಲನೆಗೂ ಒಡ್ಡಬೇಕು ಎಂದು ಕೋರ್ಟ್ ಸ್ಪಷ್ಟವಾಗಿ ತಿಳಿಸಿದೆ.

ಪ್ರಮಾಣೀಕರಿಸಬಹುದಾದ ದತ್ತಾಂಶ ಸಂಗ್ರಹಿಸಬೇಕು, ಅಗತ್ಯ ಪ್ರಾತಿನಿಧ್ಯ ಇದೆಯೇ ಎಂಬುದನ್ನು ಗಮನಿಸಬೇಕು, ಬಡ್ತಿಯಿಂದ ಆಡಳಿತದ ದಕ್ಷತೆಯ ಮೇಲೆ ಪರಿಣಾಮ ಆಗಲಿದೆಯೇ ಎಂಬುದನ್ನು ನೋಡಬೇಕು ಎಂಬ ವಿಚಾರಗಳನ್ನು ಎಂ. ನಾಗರಾಜ್ ಪ್ರಕರಣದ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ಹೇಳಿತ್ತು. ಈ ಎಲ್ಲ ವಿಚಾರಗಳು ಬಡ್ತಿ ಮೀಸಲು ನಿಗದಿ ಸಮಯದಲ್ಲಿ ಅನ್ವಯ ಆಗಲಿದೆ ಎಂದೂ ಪೀಠ ತಿಳಿಸಿದೆ.

ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಪೀಠವು 2019ರಲ್ಲಿ ನೀಡಿದ್ದ ಬಿ.ಕೆ. ಪವಿತ್ರ ಪ್ರಕರಣ–2ರ ತೀರ್ಪು, 2006ರ ಎಂ. ನಾಗರಾಜ್ ಪ್ರಕರಣ ಮತ್ತು 2018ರ ಜರ್ನೈಲ್ ಸಿಂಗ್ ಪ್ರಕರಣದ ತೀರ್ಪಿಗೆ ವ್ಯತಿರಿಕ್ತವಾಗಿದೆ ಎಂದು ಪೀಠವು ಅಭಿಪ್ರಾಯಪಟ್ಟಿದೆ. ಪವಿತ್ರಾ ಪ್ರಕರಣ–2ರಲ್ಲಿ ಒಟ್ಟು ವೃಂದದ ಬದಲಿಗೆ ಹುದ್ದೆ ಗುಂಪಿನ ದತ್ತಾಂಶ ಸಂಗ್ರಹಕ್ಕೆ ಅವಕಾಶ ಕೊಡಲಾಗಿತ್ತು.

ಮೀಸಲಾತಿಗೆ ಅರ್ಹತೆ ಇರುವ ವರ್ಗಗಳಿಗೆ ತತ್ಪರಿಣಾಮ ಜ್ಯೇಷ್ಠತೆ ನೀಡಬೇಕು ಎಂಬ ಕರ್ನಾಟಕದ 2018ರ ಕಾಯ್ದೆಯನ್ನು ಪವಿತ್ರಾ ಪ್ರಕರಣ–2 ತೀರ್ಪು ಎತ್ತಿ ಹಿಡಿದಿತ್ತು. ಸುಪ್ರೀಂ ಕೋರ್ಟ್‌ನ ಈಗಿನ ತೀರ್ಪು, ಕರ್ನಾಟಕದಲ್ಲಿ ಬಡ್ತಿ ಮೀಸಲಾತಿಯ ಬಗ್ಗೆ ಹಲವು ಕಾನೂನು ಪ್ರಶ್ನೆಗಳನ್ನು ಎತ್ತಲಿದೆ ಎನ್ನಲಾಗಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

✓ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600 -62000/- (ಮನೆಯಲ್ಲಿಯೇಕೆಲಸ) ವಸತಿಯೂಟದೊಂದಿಗೆ 8123884588, 8123884788

✓ ಬೇಕಾಗಿದ್ದಾರೆ: ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ ಆನ್‌ಲೈನ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿ.ಯು.ಸಿ, ಡಿಗ್ರಿ, ಡಿಪ್ಲೋಮಾದವರು 18,000 -56,000/- ವಸತಿಯೂಟದೊಂದಿಗೆ 8197650569, 7204396011

Part-Time Jobs

✓ ಕನ್ನಡ ಮತ್ತು ಇಂಗ್ಲೀಷ್ ಓದಲು, ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503

Teachers/ Professors

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ONLINE ತರಗತಿ ನಡೆಸಲು ಪ್ರತಿ ವಿಷಯಕ್ಕೆ ನುರಿತ ಶಿಕ್ಷಕರು ಬೇಕಾಗಿದ್ದಾರೆ.. ಸಂಪರ್ಕಿಸಿ: 9035851947

Wanted

ಚಲನಚಿತ್ರ, ಧಾರಾವಾಹಿಗಾಗಿ ನಟ- ನಟಿ ಪೋಷಕರು, ಮಕ್ಕಳು ಅಭಿನಯಿಸಲು ಹೊಸ ಕಲಾವಿದರಿಗೆ ಅವಕಾಶವಿದೆ ಮೊದಲು ಭಾವಚಿತ್ರದೊಂದಿಗೆ ಸಂಪರ್ಕಿಸಿ: 9353637689, 9035541461

ವ್ಯಾಪಾರ

Business Offers

Dealers And Stockists

WANTED C&F, CSA, SS, DEALER, ASM/SO For ARKA FOODS (Basmati Rice) Entire South.Contact: 8328062756/ 9014323115. foodsarka27@gmail.com www.arkafoods.com

ಭವಿಷ್ಯ

Astrology

ಸ್ತ್ರೀ ಪುರುಷ ವಶೀಕರಣ ಇಷ್ಟಪಟ್ಟವರು ನಿಮ್ಮಂತಾಗಲು ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ಕಡಿಮೆ ಖರ್ಚಿನಲ್ಲಿ ಒಂದು ದಿನದಲ್ಲಿ ಕೇರಳದಿಂದ ನೇರಪರಿಹಾರ 9148890039

★ಓಂದುರ್ಗಾ ಅಂಜನಂ★ ಜ್ಯೋತಿಷ್ಯ ಮತ್ತು ವಾಸ್ತುಕೇಂದ್ರ, ವಿಶ್ವವಿಖ್ಯಾತ ದಕ್ಷಿಣಕನ್ನಡ ಕೇರಳಿಯ ದೈವಸಂಭೂತ ಮಹಾಮಾಂತ್ರಿಕ ಜ್ಯೋತಿಷ್ಯ ವಾಸ್ತು ವಿದ್ವಾನ್ ಗುರು ಶ್ರೀದೇವನಂದನ್ ರವರಿಂದ ನಿಮ್ಮ ಜೀವನದ ಸರ್ವತೋಮುಖ ಅಭಿವೃದ್ಧಿ,ಸುಖಶಾಂತಿ ನೆಮ್ಮದಿಗಾಗಿ,ಸಿರಿಸಂಪತ್ತು,ಸ್ತ್ರೀ ಪುರುಷ,ದಾಂಪತ್ಯ,ಮದುವೆ, ಸಂತಾನ,ಆರೋಗ್ಯಕ್ಕೆ ಬೇಕಾಗುವ ಸರ್ವಮನಇಚ್ಛಾ ಅತಿಘೋರ,ನಿಗೂಡ 100008 ಪಂಚಭೂತ ಅತೀಂದ್ರಿಯ ಪ್ರಬಲ ಮಹಾವಶೀಕರಣ ಆಕರ್ಷಣ ಸಂಮೋಹನ,ದುಷ್ಟಶಕ್ತಿಗಳು ಉಚ್ಚಾಟನೆ ಮತ್ತು ಶತ್ರು ಸಂಬಂಧಿತ ಮಾಟ,ದೃಷ್ಟಿಶಾಪಗಳಿಗೆ ಇಲ್ಲೇ ಇಂದೇ_ಪರಿಹಾರಕ್ಕೆ ಸಂಪರ್ಕಿಸಿರಿ: 8217437023 ನಿಮ್ಮ ಇಚ್ಛೆಗೆ 24ಘಂಟೆಗಳು ಮಾತ್ರ.

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

ಸ್ತ್ರೀವಶೀಕರಣ, ಪುರುಷವಶೀಕರಣ, ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು 11ಗಂಟೆಗಳಲ್ಲಿ, ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9845544363

ಸಮಾಜಸೇವೆ

Others

ಬಿಸಿನೆಸ್ ಮೆನ್ ಗಾಗಿ ಕೇಂದ್ರ ಸರಕಾರದ ಬ್ಯಾಂಕಿಂಗ್ ಮಾಹಿತಿಗಾಗಿ ಸಂಪರ್ಕಿಸಿ: 8088231127, 9741103367, 8147012578

Classifieds
Book Your Classifieds Ads
Online Log in to
dhclassifieds.com
For More Details Call
9880856233 ▪ 9886213331
Email: Santhoshkumar@deccanherald.co.in

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ರಾಜ್ಯದಲ್ಲಿ ಬಡ್ತಿ ಮೀಸಲಾತಿ ನೀತಿ ಮರುಪರಿಶೀಲನೆ?

ಒಂದನೇ ಪುಟದಿಂದ

ಎಸ್.ಸಿ ಮತ್ತು ಎಸ್.ಟಿ ಸಮುದಾಯಗಳಿಗೆ ಸೇರಿದ ನೌಕರರಿಗೆ 1978ರಿಂದಲೂ ಬಡ್ತಿಯಲ್ಲಿ ಮೀಸಲಾತಿ ನೀಡಿದ್ದ ತೀರ್ಮಾನವನ್ನು ರದ್ದುಗೊಳಿಸಿ ಸುಪ್ರೀಂ ಕೋರ್ಟ್ 2017ರ ಫೆಬ್ರುವರಿಯಲ್ಲಿ ತೀರ್ಪು ನೀಡಿತ್ತು. ಪರಿಣಾಮವಾಗಿ 3,700 ನೌಕರರಿಗೆ ಹಿಂಬಡ್ತಿಯಾಗಿತ್ತು. 5,000 ನೌಕರರಿಗೆ ಬಡ್ತಿ ದೊರೆತರೆ, 65,000 ನೌಕರರ ಸೇವಾ ಜೇಷ್ಠತೆಯಲ್ಲಿ ಬದಲಾವಣೆಯಾಗಿತ್ತು.ಸುಪ್ರೀಂ ಕೋರ್ಟ್ ತೀರ್ಪಿನಿಂದ ತೊಂದರೆಗೆ ಸಿಲುಕಿದ ನೌಕರರ ಹಿತರಕ್ಷಿಸಲು ರಾಜ್ಯ ಸರ್ಕಾರ, ಸರ್ಕಾರಿ ನೌಕರರ ಜೇಷ್ಠತೆ ಸಂರಕ್ಷಣಾ ಕಾಯ್ದೆ–2017 ಅನ್ನು ಜಾರಿಗೆ ತಂದಿತ್ತು. 2017ರ ನವೆಂಬರ್‌ನಲ್ಲಿ ಈ ಮಸೂದೆಗೆ ವಿಧಾನಮಂಡಲದ ಅಂಗೀಕಾರ ದೊರಕಿತ್ತು. ಸುಪ್ರೀಂಕೋರ್ಟ್‌ನಲ್ಲಿ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠ ಈ ಕಾಯ್ದೆಯನ್ನು ಎತ್ತಿಹಿಡಿದು 2019ರ ಮೇ ತಿಂಗಳಲ್ಲಿ ತೀರ್ಪು ನೀಡಿತ್ತು.

'ಈ ಪ್ರಕರಣದಲ್ಲಿ 2019ರಲ್ಲಿ ನ್ಯಾಯಪೀಠವು ನೀಡಿರುವ ತೀರ್ಪು ಕಾನೂನಿನ ದೃಷ್ಟಿಯಿಂದ ತಪ್ಪಿನಿಂದ ಕೂಡಿದೆ. ಇದೇ ವಿಚಾರದಲ್ಲಿ ಎಂ. ನಾಗರಾಜ್ ಪ್ರಕರಣದಲ್ಲಿ 2006ರಲ್ಲಿ ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪಿನಲ್ಲಿ ನೀಡಿದ ಮೂಲ ತತ್ವಗಳನ್ನು ಉಲ್ಲಂಘಿಸಲಾಗಿದೆ' ಎಂದು ಸುಪ್ರೀಂಕೋರ್ಟ್‌ನ ಮತ್ತೊಂದು ಪೀಠ ಶುಕ್ರವಾರ ನೀಡಿದ ತೀರ್ಪಿನಲ್ಲಿ ಹೇಳಿದೆ.

'ಬಡ್ತಿಯಲ್ಲಿ ಮೀಸಲಾತಿಯನ್ನು ಸಮರ್ಥಿಸಬಲ್ಲ ಬೃಹತ್ ಪ್ರಮಾಣದ ಅಂಕಿಅಂಶವನ್ನು ವೃಂದವಾರು ಒದಗಿಸಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಎಲ್ಲ ನೌಕರರನ್ನೂ ಒಟ್ಟಾಗಿ ಪರಿಗಣಿಸಿ ಅಂಕಿಅಂಶ ಪಡೆಯುವಂತಿಲ್ಲ. 2017ರ ಕಾನೂನಿನಲ್ಲೇ ದೋಷಗಳಿದ್ದವು. ಎಸ್.ಸಿ ಮತ್ತು ಎಸ್.ಸಿ ನೌಕರರ ಪ್ರಮಾಣವನ್ನು ಲೆಕ್ಕ ಹಾಕುವುದರಲ್ಲಿ ತಪ್ಪುಗಳಿಗಿದ್ದವು' ಎನ್ನುತ್ತಾರೆ ಅಲ್ಪಸಂಖ್ಯಾತ ಮತ್ತು ಹಿಂದುಳಿದ ನೌಕರರ ಒಕ್ಕೂಟದ ಅಧ್ಯಕ್ಷ ಎಂ. ನಾಗರಾಜ್.

'ಕರ್ನಾಟಕದಲ್ಲಿ ಐದು ಲಕ್ಷ ಸರ್ಕಾರಿ ನೌಕರರಿದ್ದಾರೆ. ಇಲ್ಲಿ ಎಸ್.ಸಿ ಮತ್ತು ಎಸ್.ಟಿ ಸಮುದಾಯಗಳಿಗೆ ಶೇ 18ರಷ್ಟು ಮೀಸಲಾತಿ ಇದೆ. ಆ ಪ್ರಕಾರ ಈ ಎರಡೂ ಸಮುದಾಯದ 90,000 ನೌಕರರು ಇರಬೇಕು. ಆದರೆ, ಎಸ್.ಸಿ ಮತ್ತು ಎಸ್.ಟಿ ಸಮುದಾಯಗಳಿಗೆ ಸೇರಿದ 85,000 ನೌಕರರು ಮಾತ್ರ ಇದ್ದಲ್ಲಿ ಕೊರತೆ ಎಂದು ವಾದಿಸಲಾಗುತ್ತಿದೆ. ಅದರ ಆಧಾರದಲ್ಲೇ ಬಡ್ತಿಯಲ್ಲೂ ಮೀಸಲಾತಿ ಮುಂದುವರಿಸಲಾಗಿದೆ. ಆದರೆ, ಈಗ ವೃಂದವಾರು ಮೀಸಲಾತಿ ನಿರ್ಧರಿಸಲು ಸುಪ್ರೀಂ ಕೋರ್ಟ್ ಹೇಳಿದೆ. ಅದರ ಪ್ರಕಾರವೇ ಎಲ್ಲವೂ ಆಗಬೇಕಿದೆ' ಎಂದರು.

'ಸುಪ್ರೀಂ ಕೋರ್ಟ್‌ನ ಈ ಆದೇಶದ ಆಧಾರದಲ್ಲಿ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು. ಈಗ ಸರ್ಕಾರ ಬಡ್ತಿ ಮೀಸಲಾತಿ ನೀತಿಯನ್ನು ಮರುಪರಿಶೀಲನೆ ಮಾಡಲೇಬೇಕಾಗುತ್ತದೆ' ಎಂದು ನಾಗರಾಜ್ ಹೇಳಿದರು.

'ಯಾರಿಗೂ ತೊಂದರೆಯಾಗದು: ''ಬಡ್ತಿ ಮೀಸಲಾತಿ ವಿಚಾರ ಆಯಾ ರಾಜ್ಯಗಳಿಗೆ ಸಂಬಂಧಿಸಿದ್ದು ಎಂದು ಸುಪ್ರೀಂಕೋರ್ಟ್ ಸ್ಪಷ್ಟವಾಗಿ ಹೇಳಿದೆ. ಬಡ್ತಿ ಮೀಸಲಾತಿ ಕುರಿತು ರಾಜ್ಯ ಸರ್ಕಾರವು ಜೇಷ್ಠತೆ ಸಂರಕ್ಷಣಾ ಕಾಯ್ದೆ ರೂಪಿಸಿ, ಜಾರಿಗೊಳಿಸಿದೆ. ಸುಪ್ರೀಂಕೋರ್ಟ್ ಕೂಡ ಕಾಯ್ದೆಯನ್ನು ಎತ್ತಿಹಿಡಿದಿದೆ. ಇದರಿಂದ ರಾಜ್ಯದ ಎಸ್.ಸಿ ಮತ್ತು ಎಸ್.ಟಿ ನೌಕರರಿಗೆ ಯಾವ ತೊಂದರೆಯೂ ಆಗುವುದಿಲ್ಲ. ಯಾರೂ ಗೊಂದಲಕ್ಕೆ ಒಳಗಾಗಬಾರದು' ಎಂದು ರಾಜ್ಯ ಸರ್ಕಾರದ ಎಸ್.ಸಿ ಮತ್ತು ಎಸ್.ಟಿ ನೌಕರರ ಸಂಘದ ಅಧ್ಯಕ್ಷ ಡಿ. ಚಂದ್ರಶೇಖರಯ್ಯ ತಿಳಿಸಿದ್ದಾರೆ.

ನಮ್ಮದು ಅಂತಃಕರಣದ ಸರ್ಕಾರ: ಬೊಮ್ಮಾಯಿ

ಒಂದನೇ ಪುಟದಿಂದ

ಆ ದಿಸೆಯಲ್ಲಿ ರಾಜ್ಯ ಸರ್ಕಾರ ಕೆಲಸ ಮಾಡುತ್ತಿದೆ. ಸಾಮಾಜಿಕ ನ್ಯಾಯ, ಸಮಾನತೆ ಎಂಬುದು ಮಾತಿನಲ್ಲೇ ಉಳಿಯಬಾರದು. ಎಲ್ಲ ಹಂತಗಳಲ್ಲೂ ಅವುಗಳನ್ನು ಕಾರ್ಯರೂಪಕ್ಕೆ ತರುವುದು ಈ ಸರ್ಕಾರದ ಗುರಿ ಎಂದರು.

ತಮ್ಮ ಸರ್ಕಾರ ಆರು ತಿಂಗಳ ಅವಧಿಯಲ್ಲಿ ಅನೇಕ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸಿ, ರಾಜ್ಯದ ಅಭಿವೃದ್ಧಿಗೆ ಪೂರಕವಾದ ಭದ್ರ ಬುನಾದಿ ಹಾಕಿದೆ. ಮುಂದೆ ಬರುವ ಎಲ್ಲ ಸವಾಲುಗಳನ್ನೂ ಎದುರಿಸುವ ಆತ್ಮವಿಶ್ವಾಸ ಸರ್ಕಾರಕ್ಕೆ ಇದೆ ಎಂದು ಬೊಮ್ಮಾಯಿ ಪ್ರತಿಪಾದಿಸಿದರು.

'ರಾಜ್ಯವು ಈಗ ವಿಚಿತ್ರವಾದ ಸನ್ನಿವೇಶ ಎದುರಿಸುತ್ತಿದೆ. ಕೋವಿಡ್‌ನಿಂದ ಆರೋಗ್ಯ ತುರ್ತು ಪರಿಸ್ಥಿತಿ ಇರುವ ಜತೆಯಲ್ಲೇ ಪ್ರವಾಹದಿಂದ ಸಂಕಷ್ಟಕ್ಕೀಡಾದ ಜನರಿಗೆ ನೆರವಾಗಬೇಕಾದ ಸವಾಲು ಕೂಡ ಸರ್ಕಾರದ ಮುಂದಿತ್ತು. ಎರಡನ್ನೂ ಸಮರ್ಥವಾಗಿ ಎದುರಿಸುವಲ್ಲಿ ಸರ್ಕಾರ ಯಶಸ್ವಿಯಾಗಿದೆ. ಕೋವಿಡ್ ಅವಧಿಯಲ್ಲೇ ಅಭಿವೃದ್ಧಿ ಯೋಜನೆಗಳಿಗೆ ₹ 24,000 ಕೋಟಿ ವೆಚ್ಚ ಮಾಡಿದ್ದರೆ, ಪ್ರವಾಹದಿಂದ ಸಂಕಷ್ಟಕ್ಕೀಡಾದ 14 ಲಕ್ಷ ರೈತರಿಗೆ ಪರಿಹಾರ ವಿತರಿಸಲಾಗಿದೆ' ಎಂದರು.

'ದೇಶದಲ್ಲೇ ಅತ್ಯಧಿಕ ಪ್ರಮಾಣದ ವಿದೇಶಿ ನೇರ ಬಂಡವಾಳ ರಾಜ್ಯಕ್ಕೆ ಹರಿದುಬರುತ್ತಿದೆ. ರಾಜ್ಯದ ಸಮಗ್ರ ಅಭಿವೃದ್ಧಿಯ ದೂರದೃಷ್ಟಿಯಿಂದ ಈ ಸರ್ಕಾರ ಕೆಲಸ ಮಾಡುತ್ತಿರುವುದರಿಂದ ಹೂಡಿಕೆದಾರರು ವಿಶ್ವಾಸ ಇರಿಸಿದ್ದಾರೆ. 'ದುಡಿಮೆಯೇ ದೊಡ್ಡಪ್ಪ' ಎಂಬ ಮಾತಿನಲ್ಲಿ ನಾವು ನಂಬಿಕೆ ಇಟ್ಟಿದ್ದೇವೆ' ಎಂದು ಹೇಳಿದರು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ರಾಜ್ಯಕ್ಕೆ ಸಂಪೂರ್ಣ ಸಹಕಾರ ನೀಡುತ್ತಿದೆ. ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ 6.5 ಲಕ್ಷ ಮನೆಗಳನ್ನೂ ಕೇಂದ್ರ ಸರ್ಕಾರ ಮಂಜೂರು ಮಾಡಿದೆ. ಪ್ರಧಾನಿಯವರ ಆಶಯದಂತೆ ರೈತರ ಆದಾಯ ಹೆಚ್ಚಿಸುವುದಕ್ಕಾಗಿ ರಾಜ್ಯದಲ್ಲಿ 'ಸೆಕೆಂಡರಿ ಕೃಷಿ ನಿರ್ದೇಶನಾಲಯ' ಸ್ಥಾಪಿಸಲಾಗಿದೆ ಎಂದರು.

ಸಂಪುಟದ ಬಹುತೇಕ ಸದಸ್ಯರು ಮತ್ತು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಆಮೂಲಾಗ್ರ ಬದಲಾವಣೆಗೆ ಚಿಂತನೆ

'ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ಬಳಿಕ ಕೆಲವು ಇಲಾಖೆಗಳಲ್ಲಿ ಹಲವು ಬದಲಾವಣೆಗಳನ್ನು ತರಲಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ನಗರಾಭಿವೃದ್ಧಿ ಇಲಾಖೆಗಳು ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಗಳಲ್ಲಿ ಆಮೂಲಾಗ್ರ ಬದಲಾವಣೆ ತರುವ ಚಿಂತನೆ ನಡೆದಿದೆ' ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದರು.

'ನಾವು ಸಮಾಜದ ಕಟ್ಟ ಕಡೆಯಲ್ಲಿ ಕುಳಿತಿರುವ ವ್ಯಕ್ತಿಯ ಕುರಿತು ಯೋಚಿಸುತ್ತೇವೆ. ಸರ್ಕಾರ ಸರ್ವ ಸ್ಪರ್ಶಿಯಾಗಿರಬೇಕು. ಅದಕ್ಕೆ ಪೂರಕವಾಗಿ ವಿವಿಧ ಇಲಾಖೆ ಮತ್ತು ಸಂಸ್ಥೆಗಳಲ್ಲಿ ಆಮೂಲಾಗ್ರ ಬದಲಾವಣೆ ತರುವ ಕ್ರಮಗಳನ್ನು ಈ ವರ್ಷದ ಬಜೆಟ್‌ನಲ್ಲಿ ಪ್ರಕಟಿಸಲಾಗುವುದು' ಎಂದು ತಿಳಿಸಿದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಅಧ್ಯಯನ ವರದಿ ಬಿಡುಗಡೆ

ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದ ಬಳಿಕದ ಆರು ತಿಂಗಳ ಅವಧಿಯಲ್ಲಿ ಕೈಗೊಂಡಿರುವ ನಿರ್ಧಾರಗಳ ಕುರಿತು ಭಾರತೀಯ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ (ಐಸೆಕ್) ಅಧ್ಯಯನದ ನಡೆಸಿ, ಸಿದ್ಧಪಡಿಸಿರುವ ವರದಿಯನ್ನು ಸಮಾರಂಭದಲ್ಲಿ ಬಿಡುಗಡೆ ಮಾಡಲಾಯಿತು. ಸರ್ಕಾರದ ನಿರ್ಣಯಗಳ ದೂರಗಾಮಿ ಪರಿಣಾಮಗಳು ಮತ್ತು ಅನುಕೂಲಗಳ ಕುರಿತು ವರದಿಯಲ್ಲಿ ವಿಶ್ಲೇಷಣೆ ಇದೆ ಎಂದು ಐಸೆಕ್ ನಿರ್ದೇಶಕ ಪ್ರೊ. ಡಿ. ರಾಜಶೇಖರ್ ತಿಳಿಸಿದರು.

'ಐಸೆಕ್ ಅಧ್ಯಯನವನ್ನು ಮುಂದುವರಿಸಬೇಕು. ಕಾಲಕಾಲಕ್ಕೆ ಸಲಹೆ ನೀಡಬೇಕು. ಅಗತ್ಯವಿರುವ ಎಲ್ಲ ಸುಧಾರಣೆಗಳನ್ನು ತರಲು ನಾವು ಸಿದ್ಧರಿದ್ದೇವೆ' ಎಂದು ಮುಖ್ಯಮಂತ್ರಿ ಮನವಿ ಮಾಡಿದರು.

ಆಯುಷ್ಮಾನ್: ಚಿಕಿತ್ಸೆಗೆ ತಪ್ಪದ ಅಲೆದಾಟ

ಒಂದನೇ ಪುಟದಿಂದ

ಬಿಪಿಎಲ್ ಪಡಿತರ ಕಾರ್ಡ್ ಹೊಂದಿದವರು ಹಾಗೂ ರಾಷ್ಟ್ರೀಯ ಆರೋಗ್ಯ ವಿಮೆ ಯೋಜನೆಯಡಿ ನೋಂದಾಯಿಸಿದವರು ಈ ಯೋಜನೆಯ ಫಲಾನುಭವಿಗಳಾಗಿದ್ದಾರೆ.

21 ಲಕ್ಷ ಮಂದಿಗೆ ಚಿಕಿತ್ಸೆ: ರಾಜ್ಯದಲ್ಲಿ 62.09 ಲಕ್ಷ ಕುಟುಂಬಗಳು 'ಆಯುಷ್ಮಾನ್ ಭಾರತ್' ಯೋಜನೆಯಡಿ, ಉಳಿದ ಕುಟುಂಬಗಳು 'ಆರೋಗ್ಯ ಕರ್ನಾಟಕ' ಯೋಜನೆಯಡಿ ಬರಲಿವೆ. ಯೋಜನೆಯಡಿ ನಾಲ್ಕು ವರ್ಷಗಳಲ್ಲಿ 21 ಲಕ್ಷ ಮಂದಿಗೆ ಚಿಕಿತ್ಸೆ ಒದಗಿಸಲಾಗಿದೆ. ಹೆಚ್ಚಿನವರಿಗೆ ತಾಲ್ಲೂಕು ಮಟ್ಟದಲ್ಲಿ ದ್ವಿತೀಯ ಹಂತದ ಚಿಕಿತ್ಸೆ ನೀಡಲಾಗಿದೆ.ಯೋಜನೆಯ ನಿಯಮಗಳ ಪ್ರಕಾರ ತುರ್ತು ಚಿಕಿತ್ಸೆಗಳಿಗೆ ಮಾತ್ರ ಶಿಫಾರಸು ಇಲ್ಲದೆ ನೇರವಾಗಿ ನೋಂದಾಯಿತ ಆಸ್ಪತ್ರೆಗಳಿಗೆ ಹೋಗಿ, ಚಿಕಿತ್ಸೆ ಪಡೆಯಬಹುದು. ಕಳೆದ ವರ್ಷಾಂತ್ಯದ ವೇಳೆಗೆ ಯೋಜನೆಯಡಿ 1.90 ಲಕ್ಷ ಮಂದಿ ತುರ್ತು ವೈದ್ಯಕೀಯ ಸೇವೆ ಪಡೆದುಕೊಂಡಿದ್ದಾರೆ.

'ಕೋವಿಡ್ ಕಾಣಿಸಿಕೊಂಡ ಬಳಿಕ ತುರ್ತಾಗಿ ಅಗತ್ಯವಲ್ಲದ ಚಿಕಿತ್ಸೆಗಳನ್ನು ಮುಂದೂಡುವಂತೆ ಸೂಚಿಸಲಾಯಿತು. ಇದರಿಂದ ಅನ್ಯ ಕಾಯಿಲೆಗಳನ್ನು ಎದುರಿಸುತ್ತಿರುವವರಿಗೆ ಚಿಕಿತ್ಸೆ ಸಮಸ್ಯೆಯಾಯಿತು. ಕೋವಿಡ್‌ನಿಂದಾಗಿ ಕೆಲ ರೋಗಿಗಳು ಆಸ್ಪತ್ರೆಗಳಿಗೆ ಬಂದು, ಯೋಜನೆಯಡಿ ವೈದ್ಯಕೀಯ ಸೇವೆ ಪಡೆಯಲು ಹಿಂದೇಟು ಹಾಕಿದರು' ಎಂದು ವಿಕ್ಟೋರಿಯಾ ಆಸ್ಪತ್ರೆಯ ವೈದ್ಯರೊಬ್ಬರು ತಿಳಿಸಿದರು.

ಹೆಲಿಕಾಪ್ಟರ್ ಹಾರಾಟಕ್ಕೆ ಅನುಮತಿ ವಿಳಂಬ: ಅಖಿಲೇಶ್ ಯಾದವ್ ಆರೋಪ

‘ಸೋಲಿನ ಭಯದಿಂದ ಬಿಜೆಪಿ ಸಂಚು’

ಪ್ರಜಾವಾಣಿ ವಾರ್ತೆ

ಲಖನೌ: ‘ಸೋಲುವ ಭಯದಲ್ಲಿರುವ ಬಿಜೆಪಿ ನನ್ನ ವಿರುದ್ಧ ಸಂಚು ಮಾಡಿದೆ’ ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಆರೋಪಿಸಿದ್ದಾರೆ. ದೆಹಲಿಯಿಂದ ಅವರ ಹೆಲಿಕಾಪ್ಟರ್ ಉತ್ತರ ಪ್ರದೇಶದ ಮುಜಫ್ಫರ್‌ನಗರಕ್ಕೆ ತೆರಳಲು ಅನುಮತಿ ನಿರಾಕರಿಸಿದ ಕಾರಣ ಅಖಿಲೇಶ್ ಅವರು ಈ ಆರೋಪ ಮಾಡಿದ್ದಾರೆ.

ಶುಕ್ರವಾರ ಮಧ್ಯಾಹ್ನ ಅವರು ಉತ್ತರ ಪ್ರದೇಶದಲ್ಲಿನ ಮುಜಫ್ಫರ್ ನಗರದಲ್ಲಿ ಸಮಾಜವಾದಿ ಪಕ್ಷ ಮತ್ತು ಜಯಂತ್ ಚೌಧರಿ ಅವರ ಆರ್‌ಎಲ್‌ಡಿ ಪ್ರಚಾರ ಕಾರ್ಯಕ್ರಮವನ್ನು ಆಯೋಜಿಸಿದ್ದವು. ಅಲ್ಲಿಗೆ ತೆರಳಲು ಅಖಿಲೇಶ್ ಯಾದವ್ ಅವರು ದೆಹಲಿಯಿಂದ ಹೆಲಿಕಾಪ್ಟರ್ ಮೂಲಕ ಹೊರಡಬೇಕಿತ್ತು. ಆದರೆ ಅವರ ಹೆಲಿಕಾಪ್ಟರ್ ಹಾರಾಟಕ್ಕೆ ಅನುಮತಿ ನೀಡಿರಲಿಲ್ಲ. ಈ ಬಗ್ಗೆ ಅಖಿಲೇಶ್ ಟ್ವೀಟ್ ಮಾಡಿದ್ದರು. ಹೆಲಿಕಾಪ್ಟರ್ ಮುಂದೆ ತಾವು ನಿಂತಿರುವ ಚಿತ್ರವನ್ನೂ ಅವರು ಟ್ವೀಟ್ ಮಾಡಿದ್ದರು.

ಅಖಿಲೇಶ್ ಯಾದವ್ ಅವರು ಟ್ವೀಟ್ ಮಾಡಿದ್ದ ಚಿತ್ರ —ಪಿಟಿಐ ಚಿತ್ರ

‘ನನ್ನ ಹೆಲಿಕಾಪ್ಟರ್ ಹಾರಾಟಕ್ಕೆ ಯಾವುದೇ ಕಾರಣ ಇಲ್ಲದೆ ಅನುಮತಿ ನಿರಾಕರಿಸಲಾಗಿದೆ. ಇಲ್ಲಿಂದ ಮುಜಫ್ಫರ್‌ನಗರಕ್ಕೆ ಹೋಗಲು ಅನುಮತಿ ನೀಡಿಲ್ಲ. ಆದರೆ ಇದೇ ಸಂದರ್ಭದಲ್ಲಿ ಬಿಜೆಪಿ ನಾಯಕರೊಬ್ಬರ ಹೆಲಿಕಾಪ್ಟರ್ ಹಾರಾಟಕ್ಕೆ ಅನುಮತಿ ನೀಡಲಾಯಿತು. ಇದು ಈ ಚುನಾವಣೆಯಲ್ಲಿ ಸೋಲುತ್ತಿರುವ ಬಿಜೆಪಿಯ ಸಂಚು ಅಷ್ಟೆ. ಅವರು ಹತಾಶರಾಗಿದ್ದಾರೆ ಎಂಬುದಕ್ಕೆ ಇದೇ ಸಾಕ್ಷ್ಯ’ ಎಂದು ಅಖಿಲೇಶ್ ಆರೋಪಿಸಿದ್ದಾರೆ.

ನಂತರ ಅವರ ಹೆಲಿಕಾಪ್ಟರ್ ಹಾರಾಟಕ್ಕೆ ಅನುಮತಿ ನೀಡಲಾಯಿತು. ಈ ಬಗ್ಗೆ ಸಹ ಅವರು ಟ್ವೀಟ್ ಮಾಡಿ ಮಾಹಿತಿ ನೀಡಿದ್ದಾರೆ. ‘ಈ ರೀತಿ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುತ್ತಿರುವುದು ಸೋಲುವ ಭಯದಲ್ಲಿರುವವರ ಲಕ್ಷಣ. ಸಮಾಜವಾದಿ ಪಕ್ಷದ ಇತಿಹಾಸದಲ್ಲಿ ಇದು ಐತಿಹಾಸಿಕ ದಿನ ಎಂದು ದಾಖಲಾಗುತ್ತದೆ. ಈಗ ನಾವು ಗೆಲುವಿನತ್ತ ಹಾರಾಟ ಆರಂಭಿಸುತ್ತಿದ್ದೇವೆ’ ಎಂದು ಅಖಿಲೇಶ್ ಟ್ವೀಟ್ ಮಾಡಿದ್ದರು.

ಅಖಿಲೇಶ್ ಅವರ ಆರೋಪದ ಬಗ್ಗೆ ಬಿಜೆಪಿ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಹೆಲಿಕಾಪ್ಟರ್ ಹಾರಾಟಕ್ಕೆ ಅನುಮತಿ ನಿರಾಕರಿಸಿದ್ದು ಏಕೆ ಎಂಬುದರ ಮಾಹಿತಿ ಲಭ್ಯವಾಗಿಲ್ಲ. ಎರಡೂವರೆ ಗಂಟೆಯ ವಿಳಂಬದ ನಂತರ ಅಖಿಲೇಶ್ ಅವರು ಮುಜಫ್ಫರ್‌ನಗರಕ್ಕೆ ತೆರಳಿದರು. ಅಲ್ಲಿ ನಿಗದಿಯಾಗಿದ್ದ ಪ್ರಚಾರ ಕಾರ್ಯಕ್ರಮದಲ್ಲಿ ಭಾಗಿಯಾದರು. ಅಖಿಲೇಶ್ ಮತ್ತು ಆರ್‌ಎಲ್‌ಡಿಯ ಜಯಂತ್ ಚೌಧರಿ ಅವರು ಜಂಟಿಯಾಗಿ ಪ್ರಚಾರ ಕಾರ್ಯಕ್ರಮ ನಡೆಸಿದರು.

‘ಬಿಜೆಪಿ ಹತಾಶವಾಗಿದೆ’

‘ಬಿಜೆಪಿ ತನ್ನಿಂದ ದೂರ ಹೋದವರಿಗೆ, ವಾಪಸ್ ಬರುವಂತೆ ಪದೇ–ಪದೇ ಆಹ್ವಾನ ನೀಡುತ್ತಿದೆ. ಸೋಲುವ ಭಯದಿಂದ ಬಿಜೆಪಿ ಎಷ್ಟು ಹತಾಶವಾಗಿದೆ ಎಂಬುದನ್ನು ಈ ಆಹ್ವಾನಗಳೇ ತೋರಿಸುತ್ತಿವೆ’ ಎಂದು ಅಖಿಲೇಶ್ ಯಾದವ್ ಅವರು ಲೇವಡಿ ಮಾಡಿದ್ದಾರೆ.

‘ಬಿಜೆಪಿ ಜತೆಗೆ ಮೈತ್ರಿ ಮಾಡಿಕೊಳ್ಳಲು ಯಾರು ತಯಾರಿದ್ದಾರೆ? ಅಮಿತ್ ಶಾ ಅವರ ಆಹ್ವಾನವನ್ನು ಒಪ್ಪಿಕೊಳ್ಳುವವರು ಯಾರೂ ಇಲ್ಲ’ ಎಂದು ಅಖಿಲೇಶ್ ಹೇಳಿದ್ದಾರೆ.

‘ಈಗ ಚುನಾವಣೆ ಸಂದರ್ಭದಲ್ಲಿ ಬಿಜೆಪಿ ಜಾಟ್ ಸಮುದಾಯವನ್ನು ಓಲೈಸಲು ಯತ್ನಿಸುತ್ತಿದೆ. ಉತ್ತರ ಪ್ರದೇಶದ ಒಂದು ಭಾಗವನ್ನು ಜಾಟ್‌ಲ್ಯಾಂಡ್ ಎಂದು ಕರೆಯುತ್ತಿದೆ. ಬಿಜೆಪಿಯ ಈ ಜಾತಿ ಧ್ರುವೀಕರಣದಿಂದ ಯಾವುದೇ ಉಪಯೋಗವಿಲ್ಲ. ಮೊದಲು ಅನ್ಯಾಯಕ್ಕೆ ಗುರಿಯಾದ ರೈತರಿಗೆ ನ್ಯಾಯ ಒದಗಿಸಿ. ಲಖಿಂಪುರ ಖೇರಿ ಪ್ರಕರಣದಲ್ಲಿ ಏನಾಗಿದೆ? ಆರೋಪಿಯ ತಂದೆ ಅಜಯ್ ಮಿಶ್ರಾ ಇನ್ನೂ ಕೇಂದ್ರ ಸಂಪುಟದಲ್ಲಿ ಇದ್ದಾರೆ. ಆದರೆ ರೈತರನ್ನು ಬಂಧಿಸಲಾಗುತ್ತಿದೆ’ ಎಂದು ಆರ್‌ಎಲ್‌ಡಿಯ ಜಯಂತ್ ಚೌಧರಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸೊಸೆ ಕಣಕ್ಕೆ: ಪ್ರತಾಪ್‌ಸಿಂಹ ರಾಣೆ ಸ್ಪರ್ಧೆಯಿಂದ ಹಿಂದಕ್ಕೆ

ಪಣಜಿ (ಪಿಟಿಐ): ಗೋವಾ ಕಾಂಗ್ರೆಸ್‌ನ ಹಿರಿಯ ಮುಖಂಡ ಮತ್ತು ಮಾಜಿ ಮುಖ್ಯಮಂತ್ರಿ ಪ್ರತಾಪ್‌ಸಿಂಹ ರಾಣೆ ಅವರು ಹಲವು ಬಾರಿ ಪ್ರತಿನಿಧಿಸಿದ್ದ ಪೊರಿಯೆಂ ಕ್ಷೇತ್ರದ ಸ್ಪರ್ಧೆಯಿಂದ ಹಿಂದಕ್ಕೆ ಸರಿದಿದ್ದಾರೆ. ಇದು ಕಾಂಗ್ರೆಸ್‌ಗೆ ಹಿನ್ನಡೆ ಎಂದು ಹೇಳಲಾಗಿದೆ.

ರಾಣೆ ಅವರು ಪ್ರತಿಕ್ರಿಯೆಗೆ ಲಭ್ಯರಾಗಿಲ್ಲ. ಆದರೆ, ಸ್ಪರ್ಧಿಸುವುದಿಲ್ಲ ಎಂದು ಅವರು ಪಕ್ಷಕ್ಕೆ ತಿಳಿಸಿದ್ದಾರೆ ಎಂದು ಕಾಂಗ್ರೆಸ್‌ನ ಮೂಲಗಳು ಸ್ಪಷ್ಟಪಡಿಸಿವೆ. ರಾಣೆ ಅವರ ಸೊಸೆ ದಿವ್ಯಾ ರಾಣೆ ಅವರು ಇದೇ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಲಿದ್ದಾರೆ. ಸೊಸೆಯೊಂದಿಗೆ ಸಂಘರ್ಷ ಬೇಡ ಎಂಬ ಕಾರಣಕ್ಕೆ ಪ್ರತಾಪ್ ಸಿಂಹ ರಾಣೆ ಅವರು ಸ್ಪರ್ಧೆಯಿಂದ ಹಿಂದೆ ಸರಿದರು ಎಂದು ಮೂಲಗಳು ಹೇಳಿವೆ.

87 ವರ್ಷದ ರಾಣೆ ಅವರು ಆರು ಬಾರಿ ಗೋವಾದ ಮುಖ್ಯಮಂತ್ರಿ ಆಗಿದ್ದರು. ಸತತ 11 ಬಾರಿ ಅವರು ಪೊರಿಯೆಂ ಕ್ಷೇತ್ರದಿಂದ ಗೆದ್ದಿದ್ದಾರೆ.

‘ಪೊರಿಯೆಂನಿಂದ ಸ್ಪರ್ಧಿಸುವುದಿಲ್ಲ ಎಂದು ರಾಣೆ ಅವರು ಪಕ್ಷಕ್ಕೆ ಸ್ಪಷ್ಟಪಡಿಸಿದ್ದಾರೆ. ಹಾಗಾಗಿಯೇ, ಈ ಕ್ಷೇತ್ರದಿಂದ ಬೇರೊಬ್ಬ ಅಭ್ಯರ್ಥಿಯನ್ನು ಪಕ್ಷವು ಕಣಕ್ಕೆ ಇಳಿಸಿದೆ’ ಎಂದು ಕಾಂಗ್ರೆಸ್ ವಕ್ತಾರರು ಹೇಳಿದ್ದಾರೆ.

ದಿವ್ಯಾ ರಾಣೆ ಅವರು ರಾಜ್ಯದ ಆರೋಗ್ಯ ಸಚಿವ ವಿಶ್ವಜಿತ್ ರಾಣೆ ಅವರ ಹೆಂಡತಿ. ತಮ್ಮ ಹೆಂಡತಿ ವಿಜಯಾದೇವಿ ಅವರ ಹೆಸರನ್ನು ಪೊರಿಯೆಂನಿಂದ ಸ್ಪರ್ಧಿಸಲು ರಾಣೆ ಅವರು ಸೂಚಿಸಬಹುದು ಎಂಬ ವರದಿಗಳಿದ್ದವು. ಆದರೆ, ಕಾಂಗ್ರೆಸ್‌ನ ಪರಿಷ್ಕೃತ ಪಟ್ಟಿಯಲ್ಲಿ ಈ ಕ್ಷೇತ್ರದ ಅಭ್ಯರ್ಥಿಯಾಗಿ ರಂಜಿತ್ ರಾಣೆ ಅವರನ್ನು ಹೆಸರಿಸಲಾಗಿದೆ.

ಪೊರಿಯೆಂನಿಂದ ಸ್ಪರ್ಧಿಸಲು ಪ್ರತಾಪ್ ಸಿಂಹ ರಾಣೆ ಅವರ ಮನವೊಲಿಸಲು ಬಿಜೆಪಿ ಪ್ರಯತ್ನಿಸಿತ್ತು. ಆದರೆ, ಅವರು ಒಪ್ಪದ ಕಾರಣಕ್ಕೆ ಸೊಸೆಗೆ ಟಿಕೆಟ್ ನೀಡಲು ನಿರ್ಧರಿಸಿತು ಎನ್ನಲಾಗಿದೆ. ರಾಣೆ ಅವರು ಶಾಸಕರಾಗಿ 50 ವರ್ಷ ಪೂರೈಸಿದ ಸಂದರ್ಭದಲ್ಲಿ, ಅವರಿಗೆ ಆಜೀವ ಸಂಪುಟ ದರ್ಜೆಯ ಸ್ಥಾನಮಾನ ನೀಡಲು ಪ್ರಮೋದ್ ಸಾವಂತ್ ನೇತೃತ್ವದ ಸರ್ಕಾರವು ನಿರ್ಧರಿಸಿತ್ತು.

1972ರಲ್ಲಿ ಮೊದಲ ಬಾರಿಗೆ ಮಹಾರಾಷ್ಟ್ರವಾದಿ ಗೋಮಾಂತಕ ಪಕ್ಷದಿಂದ ರಾಣೆ ಗೆದ್ದಿದ್ದರು. ನಂತರದ ಎಲ್ಲ ಚುನಾವಣೆಯಲ್ಲಿಯೂ ಅವರು ಕಾಂಗ್ರೆಸ್ ಅಭ್ಯರ್ಥಿಯಾಗಿ ಗೆದ್ದಿದ್ದಾರೆ. 2017ರ ಚುನಾವಣೆಯಲ್ಲಿ ಅವರಿಗೆ ಶೇ 54.27ರಷ್ಟು ಮತಗಳು ಸಿಕ್ಕಿದ್ದವು. ದಿವ್ಯಾ ರಾಣೆ ಅವರಿಗೆ ಇದು ಮೊದಲ ಚುನಾವಣೆ.

ಪ್ರಜಾಮತ ಪ್ರಜಾವಾಣಿ ಕನ್ನಡ ಧ್ವನಿ ಪಾಡ್‌ಕಾಸ್ಟ್
ಉತ್ತರ ಪ್ರದೇಶ, ಪಂಜಾಬ್, ಗೋವಾ, ಉತ್ತರಾಖಂಡ, ಮಣಿಪುರ ಐದು ರಾಜ್ಯಗಳ ವಿಧಾನಸಭಾ ಚುನಾವಣೆಯ ನಿಷ್ಪಕ್ಷಪಾತ ಸುದ್ದಿ, ವಿಶ್ಲೇಷಣೆಗಳಿಗೆ ಆಲಿಸಿರಿ
ಪ್ರಜಾವಾಣಿ ಪಾಡ್‌ಕಾಸ್ಟ್
ಪ್ರತಿ ರಾತ್ರಿ 9.00 ಗಂಟೆಗೆ
prajavani.net/podcast

ಪಣಜಿಯಿಂದ ಪಕ್ಷೇತರ ಅಭ್ಯರ್ಥಿಯಾಗಿ ಮನೋಹರ ಪರಿಕ್ಕರ್ ಮಗ ಸ್ಪರ್ಧೆ

ಗೋವಾ ಬಿಜೆಪಿ: 4 ಕ್ಷೇತ್ರಗಳಲ್ಲಿ ತಣಿಯದ ಬಂಡಾಯ

ಪಣಜಿ (ಪಿಟಿಐ): ಗೋವಾ ವಿಧಾನಸಭೆಯ ವಿವಿಧ ಕ್ಷೇತ್ರಗಳಲ್ಲಿ ಕಾಣಿಸಿಕೊಂಡಿದ್ದ ಬಂಡಾಯವನ್ನು ಶಮನ ಮಾಡುವಲ್ಲಿ ಬಿಜೆಪಿ ಯಶಸ್ವಿಯಾಗಿದೆ. ಆದರೆ, ನಾಲ್ಕು ಕ್ಷೇತ್ರಗಳಲ್ಲಿನ ಬಂಡಾಯ ಮಾತ್ರ ಹಾಗೆಯೇ ಉಳಿದಿದೆ. ಅದರಲ್ಲಿ, ಪ್ರತಿಷ್ಠಿತ ಪಣಜಿ ಕ್ಷೇತ್ರವೂ ಒಂದು.

ಬಿಜೆಪಿಯ ಹಿರಿಯ ನಾಯಕ ಮತ್ತು ಮಾಜಿ ಮುಖ್ಯಮಂತ್ರಿ ಮನೋಹರ ಪರಿಕ್ಕರ್ ಅವರ ಮಗ ಉತ್ಪಲ್ ಪರಿಕ್ಕರ್ ಅವರು ಪಣಜಿ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕೆ ಇಳಿದಿದ್ದಾರೆ. ಪಕ್ಷದ ಅಭ್ಯರ್ಥಿ ಅಂಟಾಸಿಯೊ ಮಾನ್ಸೆರಾಟ್ ಅವರ ವಿರುದ್ಧ ಸ್ಪರ್ಧಿಸುತ್ತಿದ್ದಾರೆ. ಅಂಟಾಸಿಯೊ ಅವರು 2019ರಲ್ಲಿ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ್ದರು.

ತಮ್ಮ ಮನಸ್ಸು ಇನ್ನೂ ಬಿಜೆಪಿಯಲ್ಲಿಯೇ ಇದೆ. ಆದರೆ, ತಮ್ಮ ತಂದೆ ಹಲವು ಬಾರಿ ಪ್ರತಿನಿಧಿಸಿದ್ದ ಕ್ಷೇತ್ರದಲ್ಲಿ ‘ಕೆಟ್ಟ ವ್ಯಕ್ತಿ’ ಗೆಲ್ಲುವುದನ್ನು ತಡೆಯುವುದೇ ತಮ್ಮ ಸ್ಪರ್ಧೆಯ ಗುರಿ ಎಂದು ಉತ್ಪಲ್ ಹೇಳಿದ್ದಾರೆ. ಅಂಟಾಸಿಯೊ ವಿರುದ್ಧ ಗಂಭೀರವಾದ ಹಲವು ಕ್ರಿಮಿನಲ್ ಪ್ರಕರಣಗಳು ಇವೆ.

ಮಾಜಿ ಮುಖ್ಯಮಂತ್ರಿ ಮತ್ತು ಬಿಜೆಪಿ ಪ್ರಣಾಳಿಕೆ ಸಮಿತಿ ಅಧ್ಯಕ್ಷರಾಗಿದ್ದ ಲಕ್ಷ್ಮಿಕಾಂತ್ ಪರ್ಸೇಕರ್ ಅವರು ಬಿಜೆಪಿ ತೊರೆದು ಮಾಂಡ್ರೆಮ್ ಕ್ಷೇತ್ರದಲ್ಲಿ ಪಕ್ಷೇತರರಾಗಿ ಸ್ಪರ್ಧಿಸುತ್ತಿದ್ದಾರೆ. ಕಾಂಗ್ರೆಸ್‌ನಲ್ಲಿದ್ದ ದಯಾನಂದ ಸೊಪ್ತೆ ಅವರು ಈಗ ಇಲ್ಲಿ ಬಿಜೆಪಿ ಅಭ್ಯರ್ಥಿ. 2017ರಲ್ಲಿ ಈ ಕ್ಷೇತ್ರದಲ್ಲಿ ಪರ್ಸೇಕರ್ ಅವರನ್ನು ಸೊಪ್ತೆ ಸೋಲಿಸಿದ್ದರು.

ಕಾಂಗ್ರೆಸ್‌ನಿಂದ ಬಿಜೆಪಿ ಸೇರಿದ್ದ ಚಂದ್ರಕಾಂತ ಕವಲೇಕರ್ ಅವರ ಹೆಂಡತಿ ಸಾವಿತ್ರಿ ಕವಲೇಕರ್ ಅವರು ಸಂಗ್ವೆಮ್ ಕ್ಷೇತ್ರದ ಬಂಡಾಯ ಅಭ್ಯರ್ಥಿಯಾಗಿದ್ದಾರೆ. ಮಾಜಿ ಶಾಸಕ ಸುಭಾಷ್ ಫಲ್‌ದೇಸಾಯಿ ಅವರು ಇಲ್ಲಿ ಬಿಜೆಪಿಯ ಅಧಿಕೃತ ಅಭ್ಯರ್ಥಿ.

ಸಂಗ್ವೆಮ್‌ನ ಸಮೀಪದ ಕ್ಷೇತ್ರ ಕ್ಯೂಪೆಮ್‌ನಲ್ಲಿ ಚಂದ್ರಕಾಂತ ಕವಲೇಕರ್ ಅವರು ಬಿಜೆಪಿಯ ಅಧಿಕೃತ ಅಭ್ಯರ್ಥಿ. ಪಕ್ಷೇತರ ಶಾಸಕರಾಗಿದ್ದ ಪ್ರಸಾದ್ ಗಾಂವ್ಕರ್ ಅವರು ಈ ಬಾರಿ ಇಲ್ಲಿಯ ಕಾಂಗ್ರೆಸ್ ಅಭ್ಯರ್ಥಿ.

ಕೇಂದ್ರ ಸಚಿವ ಶ್ರೀಪಾದ ನಾಯಕ ಅವರ ಮಗ ಸಿದ್ದೇಶ್ ಅವರು ಕುಂಭರುಜ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದರು. ಟಿಕೆಟ್ ದೊರೆಯದಿದ್ದರೆ ಪಕ್ಷೇತರನಾಗಿ ಸ್ಪರ್ಧಿಸುವುದಾಗಿಯೂ ಅವರು ಹೇಳಿದ್ದರು. ಆದರೆ, ಅವರ ಮನವೊಲಿಸಲು ಬಿಜೆಪಿ ಯಶಸ್ವಿಯಾಗಿದೆ. ಶಾಸಕ ಪಾಂಡುರಂಗ ಮಡಕೈಕರ್ ಅವರ ಹೆಂಡತಿ ಜೈನಿತಾ ಮಡಕೈಕರ್ ಅವರು ಈ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ. ಆದರೆ, ಬಿಜೆಪಿಯಲ್ಲಿದ್ದ ರೋಹನ್ ಹರ್ಮಲ್ಕರ್ ಅವರು ಈ ಕ್ಷೇತ್ರದಲ್ಲಿ ಪಕ್ಷೇತರರಾಗಿ ಸ್ಪರ್ಧಿಸುತ್ತಿದ್ದಾರೆ.

ಉತ್ಪಲ್ ಪರಿಕ್ಕರ್ ಅವರು ಪಣಜಿ ಕ್ಷೇತ್ರದಿಂದ ನಾಮಪತ್ರ ಸಲ್ಲಿಸುವ ಮೊದಲು ಮಹಾಲಕ್ಷ್ಮಿ ದೇವಾಲಯದಲ್ಲಿ ಶುಕ್ರವಾರ ಪೂಜೆ ಸಲ್ಲಿಸಿದರು —ಪಿಟಿಐ ಚಿತ್ರ

‘ಶಾಸಕರನ್ನು ಕುರಿಗಳಂತೆ ಖರೀದಿಸಿದ್ದ ಬಿಜೆಪಿ’

ಪಣಜಿ: ಗೋವಾದಲ್ಲಿ ಬಿಜೆಪಿಯು ಶಾಸಕರನ್ನು ಕುರಿ ಮತ್ತು ಮೇಕೆಗಳಂತೆ ಖರೀದಿ ಮಾಡಿತ್ತು ಎಂದು ಕರ್ನಾಟಕ ಕಾಂಗ್ರೆಸ್ ಘಟಕದ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಶುಕ್ರವಾರ ಆರೋಪಿಸಿದ್ದಾರೆ. ಒಬ್ಬೊಬ್ಬ ಶಾಸಕನನ್ನು ಪಕ್ಷಕ್ಕೆ ಸೆಳೆದುಕೊಳ್ಳಲು ₹30 ಕೋಟಿ ಆಮಿಷ ಒಡ್ಡಲಾಗಿದೆ ಎಂದೂ ಅವರು ಹೇಳಿದ್ದಾರೆ.

ಪಕ್ಷಾಂತರ ಮಾಡಿರುವ 13 ಶಾಸಕರನ್ನು ಮರಳಿ ಪಕ್ಷಕ್ಕೆ ಸೇರಿಸಿಕೊಳ್ಳದಿರುವ ನೀತಿಯನ್ನು ಕಾಂಗ್ರೆಸ್ ಅನುಸರಿಸಿದೆ ಎಂದು ಗೋವಾದಲ್ಲಿ ಚುನಾವಣಾ ಪ್ರಚಾರ ನಡೆಸಿದ ಶಿವಕುಮಾರ್ ಹೇಳಿದರು.

‘ಬಿಜೆಪಿ ಹಣ ಬಲ ಬಳಸುತ್ತಿರುವುದು ಎಲ್ಲರಿಗೂ ಗೊತ್ತಿದೆ. ₹30 ಕೋಟಿಯಿಂದ ₹40 ಕೋಟಿ ವೆಚ್ಚ ಮಾಡಿದೆ. ಭಾರಿ ಮೊತ್ತ ನೀಡುವ ಭರವಸೆ ಕೊಡಲಾಗಿದೆ, ಮುಂಗಡವನ್ನೂ ನೀಡಲಾಗಿದೆ ಎಂದು ಕೆಲವು ಶಾಸಕರು ಸದನದಲ್ಲಿಯೇ ಹೇಳಿದ್ದರು. ಶಾಸಕರನ್ನು ಕುರಿ–ಮೇಕೆಗಳ ರೀತಿಯಲ್ಲಿ ಖರೀದಿ ಮಾಡಲಾಗಿದೆ. ಪ್ರಜಾಪ್ರಭುತ್ವ ಎಲ್ಲಿ ಹೋಯಿತು? ಪ್ರಜಾಪ್ರಭುತ್ವವು ಸಂಪೂರ್ಣವಾಗಿ ವಿಫಲವಾಗಿದೆ’ ಎಂದು ಅವರು ಹೇಳಿದ್ದಾರೆ.

ಡಿ.ಕೆ. ಶಿವಕುಮಾರ್

ಪಕ್ಷ ಬಿಟ್ಟ 13 ಶಾಸಕರಲ್ಲಿ ಹಲವರು ಮರಳಿ ಪಕ್ಷ ಸೇರುವುದಕ್ಕಾಗಿ ತಮ್ಮ ಜತೆ ಸಂಪರ್ಕದಲ್ಲಿದ್ದಾರೆ ಎಂದರು.

‘ಬಿಜೆಪಿ ಆಪರೇಷನ್ ಕಮಲ ನಡೆಸಿತು. ಪಕ್ಷಾಂತರಿಗಳು ಮರಳಿ ಬರಬಾರದು ಎಂಬ ನಿರ್ಧಾರಕ್ಕೆ ನಾವು ಬಂದಿದ್ದೇವೆ. 13 ಶಾಸಕರ ಪೈಕಿ 10 ಮಂದಿ ವಾಪಸ್ ಬರಲು ಸಿದ್ಧರಿದ್ದಾರೆ. ಅವರು ನನ್ನನ್ನು ಭೇಟಿಯಾಗಿದ್ದಾರೆ. ಕೆಲವರು ದೆಹಲಿಯಲ್ಲಿ ಭೇಟಿಯಾಗಿದ್ದರು. ನಾವು ಒಪ್ಪಿಲ್ಲ’ ಎಂದು ಶಿವಕುಮಾರ್ ತಿಳಿಸಿದ್ದಾರೆ.

‘ನಾವು ಹೊಸ ಮುಖಗಳನ್ನೇ ಆಯ್ಕೆ ಮಾಡಿಕೊಂಡಿದ್ದೇವೆ. ಪಕ್ಷ ಬಿಡುವುದಿಲ್ಲ ಎಂದು ಅವರು ಪ್ರತಿಜ್ಞೆಯನ್ನೂ ಮಾಡಿದ್ದಾರೆ’ ಎಂದು ಅವರು ಹೇಳಿದ್ದಾರೆ.

ಗೋವಾ ಕಾಂಗ್ರೆಸ್ ಅಧ್ಯಕ್ಷ ಗಿರೀಶ್ ಚೋಡಣ್‌ಕರ್ ಪ್ರಕಾರ, ಪಕ್ಷವು 36–37 ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲಿದೆ. ಕಾಂಗ್ರೆಸ್ ಅಭ್ಯರ್ಥಿಗಳ ಸರಾಸರಿ ವಯಸ್ಸು 48 ಮೀರುವುದಿಲ್ಲ.

ಒಂದೆಡೆ ವಂಚನೆ, ಮತ್ತೊಂದೆಡೆ ಮತಯಾಚನೆ: ಪೈಲಟ್

ಚಂಡೀಗಡ (ಪಿಟಿಐ): ಸೈನಿಕರ ಹೆಸರಿನಲ್ಲಿ ಮತ ಕೇಳುತ್ತಿರುವ ಬಿಜೆಪಿ, ಸೈನಿಕರಿಗೆ ಅನ್ಯಾಯ ಮಾಡುತ್ತಿದೆ. ದೇಶದ ಭದ್ರತೆಯಲ್ಲಿ ರಾಜಿ ಮಾಡಿಕೊಂಡಿದೆ ಎಂದು ಕಾಂಗ್ರೆಸ್ ಮುಖಂಡ ಸಚಿನ್ ಪೈಲಟ್ ಆರೋಪಿಸಿದ್ದಾರೆ.

ಇಲ್ಲಿ ನಡೆದ ಚುನಾವಣಾ ಪ್ರಚಾರ ಕಾರ್ಯದ ವೇಳೆ ಅವರು, ಸೈನಿಕರಿಗೆ ಸಂಬಂಧಿಸಿದ ಕೇಂದ್ರ ಸರ್ಕಾರದ ನೀತಿಗಳನ್ನು ಪ್ರಶ್ನಿಸಿದ್ದಾರೆ. ‘ಶೌರ್ಯ ಕೆ ನಾಮ್ ಪರ್ ವೋಟ್, ಸೇನಾ ಕೆ ಹಿತೋ ಪರ್ ಚೋಟ್’ ಎಂಬ ಕಾಂಗ್ರೆಸ್‌ನ ಕಿರು ಹೊತ್ತಗೆಯನ್ನೂ ಅವರು ಬಿಡುಗಡೆ ಮಾಡಿದ್ದಾರೆ.

‘ಕೇಂದ್ರದ ಬಿಜೆಪಿ ಸರ್ಕಾರವು ಸೈನಿಕರ ಶ್ರೇಯೋಭಿವೃದ್ಧಿ ಬಗ್ಗೆ ಮಾತನಾಡುತ್ತದೆ. ಆದರೆ ಭಾರತೀಯ ಸೇನೆಯಲ್ಲಿ 1.22 ಲಕ್ಷ ಹುದ್ದೆಗಳು ಖಾಲಿ ಇವೆ. ಇವುಗಳಲ್ಲಿ 10,000 ಅಧಿಕಾರಿಗಳ ಹುದ್ದೆ ಖಾಲಿ ಇವೆ. ಕೇಂದ್ರ ಸರ್ಕಾರವು ದೇಶದ ಭದ್ರತೆಯಲ್ಲಿ ರಾಜಿಯಾಗಿದೆ’ ಎಂದು ಅವರು ಆರೋಪಿಸಿದ್ದಾರೆ.

> ನಮಗೆ ನಮ್ಮ ಸೇನೆ ಕುರಿತು ಹೆಮ್ಮೆಯಿದೆ. ಯೋಧರ ವಿಷಯದಲ್ಲಿ ಸರ್ಕಾರ ಹೇಗೆ ನಡೆದುಕೊಳ್ಳುತ್ತಿದೆ ಎಂದು ಜನರಿಗೆ ತಿಳಿಸುವುದು ನಮ್ಮ ಕರ್ತವ್ಯ
> **ಸಚಿನ್ ಪೈಲಟ್**, ಕಾಂಗ್ರೆಸ್ ನಾಯಕ

‘ಅಧಿಕಾರಕ್ಕೆ ಬರುವ ಮುನ್ನ ಒಂದು ಶ್ರೇಣಿ, ಒಂದು ಪಿಂಚಣಿ (ಒಆರ್‌ಒಪಿ) ಜಾರಿಗೆ ತರುತ್ತೇವೆ ಎಂದು ಬಿಜೆಪಿ ಹೇಳಿತ್ತು. ಎರಡು ಬಾರಿ ಅಧಿಕಾರಕ್ಕೆ ಬಂದರೂ ಒಆರ್‌ಒಪಿ ಸರಿಯಾಗಿ ಅನುಷ್ಠಾನಕ್ಕೆ ಬರಲಿಲ್ಲ. ಬಿಜೆಪಿ ಅಧಿಕಾರದ ಏಳೂ ವರ್ಷಗಳಲ್ಲಿ 30 ಲಕ್ಷ ನಿವೃತ್ತ ಸೈನಿಕರಿಗೆ ಏನೂ ದೊರೆತಿಲ್ಲ. ಅವರೆಲ್ಲರಿಗೆ ಬಿಜೆಪಿ ಮೋಸ ಮಾಡಿದೆ’ ಎಂದಿದ್ದಾರೆ.

‘ಸೇನಾ ಕ್ಯಾಂಟೀನ್‌ಗಳಲ್ಲಿ ಖರೀದಿಸುವ ವಸ್ತುಗಳಿಗೆ ಬಿಜೆಪಿ ಸರ್ಕಾರವು ಜಿಎಸ್‌ಟಿ ವಿಧಿಸುತ್ತಿದೆ. ಸೇನಾ ಸಿಬ್ಬಂದಿಯ ಅಂಗವಿಕಲ ಪಿಂಚಣಿ ಮತ್ತು ನಾಗರಿಕ ಸೇವಾ ಸಿಬ್ಬಂದಿಯ ಅಂಗವಿಕಲ ಪಿಂಚಣಿಯಲ್ಲೂ ಕೇಂದ್ರ ಸರ್ಕಾರವು ಮಲತಾಯಿ ಧೋರಣೆ ತೋರುತ್ತಿದೆ. ಹೆಚ್ಚುವರಿ ಕಾರ್ಯದರ್ಶಿ ರ‍್ಯಾಂಕ್‌ನ ಹುದ್ದೆಗೆ ₹60,000 ಅಂಗವಿಕಲ ವೇತನ ನಿಗದಿ ಮಾಡಲಾಗಿದೆ. ಲೆಫ್ಟಿನೆಂಟ್ ಜನರಲ್ ಹುದ್ದೆಗೆ ₹27,000 ಅಂಗವಿಕಲ ವೇತನ ನಿಗದಿ ಮಾಡಲಾಗಿದೆ’ ಎಂದು ಅವರು ಆರೋಪಿಸಿದ್ದಾರೆ.

ರಾಶಿ ರಾಶಿ ಕೆಂಪು ಟೋಪಿ ಖರೀದಿ

ಲಖನೌ (ಪಿಟಿಐ): ಸಮಾಜವಾದಿ ಪಕ್ಷದ ಕಾರ್ಯಕರ್ತರು ಪಕ್ಷದ ಚಿಹ್ನೆ ಇರುವ ಕೆಂಪು ಟೋಪಿಗಳನ್ನು ಭಾರಿ ಪ್ರಮಾಣದಲ್ಲಿ ಕೊಳ್ಳುತ್ತಿದ್ದಾರೆ. ಈ ಟೋಪಿಗಳು ಬದಲಾವಣೆ ಮತ್ತು ಕ್ರಾಂತಿಯ ಸಂಕೇತ ಎಂದು ಪ್ರಚಾರ ಮಾಡುತ್ತಿದ್ದಾರೆ. ‘ಕೆಂಪು ಟೋಪಿ ಅಪಾಯದ ಎಚ್ಚರಿಕೆ’ ಎಂದು ಪ್ರಧಾನಿ ನರೇಂದ್ರ ಮೋದಿ ನೀಡಿದ್ದ ಹೇಳಿಕೆಯನ್ನು ಖಂಡಿಸಲು ಎಸ್‌ಪಿ ಕಾರ್ಯಕರ್ತರು ಟೋಪಿ ಖರೀದಿ ಮಾಡುತ್ತಿದ್ದಾರೆ.

ಪಕ್ಷದ ಟೋಪಿಯನ್ನು ಧರಿಸುವ ಮೂಲಕ, ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್ ನೇತೃತ್ವದಲ್ಲಿ ಎಸ್‌ಪಿ ನಾಯಕರು ಮತ್ತು ಕಾರ್ಯಕರ್ತರು ಮೋದಿ ಹೇಳಿಕೆ ವಿರುದ್ಧ ಮೌನ ಪ್ರತಿಭಟನೆ ದಾಖಲಿಸುತ್ತಿದ್ದಾರೆ.

‘ಗ್ರಾಮಗಳು ಮತ್ತು ರಸ್ತೆಗಳಲ್ಲಿ ಪ್ರಚಾರದಲ್ಲಿ ತೊಡಗಿರುವ ಎಸ್‌ಪಿ ನಾಯಕರು ಮತ್ತು ಕಾರ್ಯಕರ್ತರು ಕೆಂಪು ಟೋಪಿ ಧರಿಸಿ ಪ್ರಚಾರ ನಡೆಸುತ್ತಿದ್ದಾರೆ. ಕೆಂಪು ಟೋಪಿ ಧರಿಸಿ ರಾಜ್ಯದಲ್ಲಿ ಸಮಾಜವಾದವನ್ನು ಮರಳಿ ತರುತ್ತೇವೆ’ ಎಂದು ಎಸ್‌ಪಿ ರಾಷ್ಟ್ರೀಯ ವಕ್ತಾರ ಸುನೀಲ್ ಸಿಂಗ್ ಸಾಜನ್ ಹೇಳಿದ್ದಾರೆ.

ಚುನಾವಣಾ ಕಣದಲ್ಲಿ

- ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ‘ರಾಷ್ಟ್ರೀಯತೆಯ ಸಂದೇಶ’ ಸಾರಲು ಎರಡು ದಶಕಗಳ ಹಿಂದೆ ಸ್ಥಾಪಿಸಿದ್ದ ಹಿಂದೂ ಯುವ ವಾಹಿನಿಯು ಈಗ ಅವರ ಪರ ಪ್ರಚಾರಕ್ಕೆ ಧುಮುಕಿದೆ. ಯೋಗಿ ಅವರು ಸ್ಪರ್ಧಿಸುವುದು ಖಚಿತವಾದ ಬಳಿಕ, ಸಂಘಟನೆಯ ಸದಸ್ಯರು ಮತಗಟ್ಟೆ ಮಟ್ಟದಲ್ಲಿ ಪ್ರಚಾರ ನಡೆಸುತ್ತಿದ್ದಾರೆ. ಬಿಜೆಪಿಯ ಬಗ್ಗೆ ಅಸಮಾಧಾನಗೊಂಡ ಯೋಗಿ ಅವರು 2002ರಲ್ಲಿ ಈ ಸಂಘಟನೆ ಕಟ್ಟಿದ್ದರು. ಇತ್ತೀಚಿನ ವರ್ಷಗಳಲ್ಲಿ ಸಂಘಟನೆಯು ನಿಷ್ಕ್ರಿಯವಾಗಿತ್ತು
- ಉತ್ತರ ಪ್ರದೇಶ ಚುನಾವಣೆಗೆ ಬಿಜೆಪಿಯು ತನ್ನ 91 ಅಭ್ಯರ್ಥಿಗಳ ಪಟ್ಟಿಯನ್ನು ಶುಕ್ರವಾರ ಬಿಡುಗಡೆ ಮಾಡಿದೆ. ಇದರಲ್ಲಿ 13 ಸಚಿವರಿಗೆ ಟಿಕೆಟ್ ನೀಡಲಾಗಿದೆ. ಕೆಲವು ಕ್ಷೇತ್ರಗಳಲ್ಲಿ ಹಾಲಿ ಶಾಸಕರಿಗೆ ಟಿಕೆಟ್ ನೀಡಿಲ್ಲ. ಬದಲಿಗೆ ಅವರ ಮಕ್ಕಳಿಗೆ ಟಿಕೆಟ್ ನೀಡಲಾಗಿದೆ
- ಉತ್ತರ ಪ್ರದೇಶದಲ್ಲಿ ನಾಲ್ಕನೇ ಹಂತದಲ್ಲಿ ಮತದಾನ ನಡೆಯಲಿರುವ 53 ಕ್ಷೇತ್ರಗಳಿಗೆ ತನ್ನ ಅಭ್ಯರ್ಥಿಗಳ ಪಟ್ಟಿಯನ್ನು ಬಿಎಸ್‌ಪಿ ಶುಕ್ರವಾರ ಬಿಡುಗಡೆ ಮಾಡಿದೆ
- ಮಣಿಪುರ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಪಕ್ಷವು ಐದು ಪಕ್ಷಗಳ ಜತೆಗೆ ಮೈತ್ರಿ ಮಾಡಿಕೊಂಡಿದೆ. ಸಿಪಿಐ, ಸಿಪಿಎಂ, ಆರ್‌ಎಸ್‌ಪಿ, ಜೆಡಿಎಸ್ ಮತ್ತು ಫಾರ್ವರ್ಡ್ ಬ್ಲಾಕ್ ಪಕ್ಷಗಳ ಜತೆಗೆ ಕಾಂಗ್ರೆಸ್ ಮೈತ್ರಿ ಮಾಡಿಕೊಂಡಿದೆ
- ಉತ್ತರಾಖಂಡದ ರುದ್ರಪ್ರಯಾಗದಲ್ಲಿ ಬಿಜೆಪಿ ಅಭ್ಯರ್ಥಿಗಳ ಪರವಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಗುರುವಾರ ಪ್ರಚಾರ ನಡೆಸಿದ್ದಾರೆ. ಬಿಜೆಪಿಯನ್ನು ಮರಳಿ ಅಧಿಕಾರಕ್ಕೆ ತನ್ನಿ ಎಂದು ಮತದಾರರನ್ನು ಕೋರಿದ್ದಾರೆ
- ಉತ್ತರಾಖಂಡ ಬಿಜೆಪಿಯನ್ನು ತೊರೆದು ಮರಳಿ ಕಾಂಗ್ರೆಸ್ ಸೇರಿದ್ದ ಹರಕ್ ಸಿಂಗ್ ರಾವತ್ ಅವರಿಗೆ ಈ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ದೊರೆತಿಲ್ಲ

ಆಧಾರ: ಪಿಟಿಐ

ನುಡಿ–ಕಿಡಿ

ಅವರು (ಎಸ್‌ಪಿ) ಜಿನ್ನಾ ಆರಾಧಕರು. ನಾವು ಸರ್ದಾರ್ ಪಟೇಲ್ ಆರಾಧಕರು. ಅವರಿಗೆ ಪಾಕಿಸ್ತಾನ ಬಹಳ ಆಪ್ತ. ನಾವು ಭಾರತ ಮಾತೆಗಾಗಿ ಜೀವ ತ್ಯಾಗ ಮಾಡುವೆವು. ಅವರು ಅಧಿಕಾರದಲ್ಲಿದ್ದಾಗ ರಾಮಭಕ್ತರ ಮೇಲೆ ಗುಂಡು ಹಾರಿಸಲಾಯಿತು. ಕಂವರ್ ಯಾತ್ರೆ ಸ್ಥಗಿತಗೊಂಡಿತು. ಆದರೆ, ನಾವು ಅಧಿಕಾರಕ್ಕೆ ಬಂದಾಗ ರಾಮಲಲ್ಲಾ ವಿರಾಜಮಾನ ಕನಸು ನನಸಾಯಿತು. ದೀಪೋತ್ಸವ, ರಂಗೋತ್ಸವ ಉತ್ತರ ಪ್ರದೇಶದ ಅನನ್ಯತೆಯಾಯಿತು

ಯೋಗಿ ಆದಿತ್ಯನಾಥ, ಉತ್ತರ ಪ್ರದೇಶ ಮುಖ್ಯಮಂತ್ರಿ

ನಿರುದ್ಯೋಗವು ದೇಶದ ಅತ್ಯಂತ ದೊಡ್ಡ ಸಮಸ್ಯೆಯಾಗಿ ಬೆಳೆದಿದೆ. ಪರಿಸ್ಥಿತಿಯು ಅತ್ಯಂತ ಘೋರವಾಗಿ ಪರಿವರ್ತನೆಯಾಗಿದೆ. ನಿರುದ್ಯೋಗ ಸಮಸ್ಯೆಯನ್ನು ನಿರ್ಲಕ್ಷಿಸುವುದು ಎಂದರೆ, ಬೆಂಕಿ ಬಿದ್ದಾಗ ಹತ್ತಿಯನ್ನು ಹೊದ್ದುಕೊಂಡು ರಕ್ಷಣೆ ಪಡೆದಂತೆ

ವರುಣ್ ಗಾಂಧಿ, ಬಿಜೆಪಿ ಸಂಸದ

ರೈತರ ಆದಾಯ ದುಪ್ಪಟ್ಟು ಮಾಡುತ್ತೇವೆ ಎಂದು ಅಧಿಕಾರಕ್ಕೆ ಬರುವ ಮುನ್ನ ಬಿಜೆಪಿ ಹೇಳಿತ್ತು. ಬದಲಿಗೆ ಕೃಷಿಯ ಮೂರು ಕರಾಳ ಕಾಯ್ದೆಗಳನ್ನು ಜಾರಿಗೆ ತಂದಿತು. ರೈತರು ಒಂದು ವರ್ಷ ಹೋರಾಡಿದರೂ ಕಾಯ್ದೆ ರದ್ದು ಮಾಡಲಿಲ್ಲ. ಈಗ ಕೇವಲ ಚುನಾವಣೆಗಾಗಿ ಕಾಯ್ದೆಗಳನ್ನು ರದ್ದುಪಡಿಸಿದೆ. ಸದ್ದೇ ಮಾಡದೆ ಅವುಗಳನ್ನು ಮತ್ತೆ ಜಾರಿಗೆ ತರುವ ಅಪಾಯವಿದೆ

ಅಖಿಲೇಶ್ ಯಾದವ್, ಸಮಾಜವಾದಿ ಪಕ್ಷದ ಮುಖ್ಯಸ್ಥ

ಆಧಾರ: ಪಿಟಿಐ

ಬಜೆಟ್ ಅಧಿವೇಶನ: ಕಾಂಗ್ರೆಸ್ ಕಾರ್ಯತಂತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಲೆ ಏರಿಕೆ, ಭಾರತ–ಚೀನಾ ಗಡಿ ವಿವಾದ, ಕೋವಿಡ್ ಪರಿಹಾರ ಪ್ಯಾಕೇಜ್ ಘೋಷಣೆ ಹಾಗೂ ರೈತರ ಸಮಸ್ಯೆಗಳ ಕುರಿತು ಸೋಮವಾರದಿಂದ ಆರಂಭವಾಗಲಿರುವ ಸಂಸತ್‌ನ ಬಜೆಟ್ ಅಧಿವೇಶನದಲ್ಲಿ ಧ್ವನಿ ಎತ್ತಲು ಪ್ರಮುಖ ವಿರೋಧ ಪಕ್ಷ ಕಾಂಗ್ರೆಸ್ ನಿರ್ಧರಿಸಿದೆ.

ಅಧಿವೇಶನ ಕುರಿತ ಕಾರ್ಯತಂತ್ರ ರೂಪಿಸಲು ಶುಕ್ರವಾರ ಇಲ್ಲಿ ಆಯೋಜಿಸಿದ್ದ ಪಕ್ಷದ ಮಹತ್ವದ ಸಭೆಯಲ್ಲಿ ಚರ್ಚಿಸಿದ ಮುಖಂಡರು, ಹೋರಾಟದಲ್ಲಿ ಭಾಗಿಯಾಗುವಂತೆ ಸಮಾನ ಮನಸ್ಕ ಪಕ್ಷಗಳನ್ನೂ ಕೋರಲು ನಿರ್ಧರಿಸಿದರು. ಬಜೆಟ್ ಅಧಿವೇಶನದ ಮೊದಲ ಹಂತವು ಜನವರಿ 31ರಿಂದ ಫೆಬ್ರುವರಿ 11ರವರೆಗೆ ಇರಲಿದ್ದು, ಪಂಚ ರಾಜ್ಯಗಳ ಚುನಾವಣಾ ಫಲಿತಾಂಶದ ಬಳಿಕ ಮಾರ್ಚ್ 14ರಿಂದ ಎರಡನೇ ಹಂತ ಆರಂಭವಾಗಲಿದೆ. ಮೊದಲ ಹಂತದಲ್ಲಿ ರಾಷ್ಟ್ರಪತಿ ಭಾಷಣ ಹಾಗೂ ಬಜೆಟ್ ಮೇಲಿನ ನಿಗದಿತ ಚರ್ಚೆಗಳು ನಡೆಯುವುದರಿಂದ ಕಲಾಪಕ್ಕೆ ಅಡ್ಡಿಪಡಿಸದಿರಲು ನಿರ್ಧರಿಸಲಾಗಿದೆ. ಏರ್ ಇಂಡಿಯಾ ಮಾರಾಟ, ಬಿಹಾರ ಮತ್ತು ಉತ್ತರ ಪ್ರದೇಶದಲ್ಲಿ ಅನ್ಯಾಯಕ್ಕೆ ಒಳಗಾಗಿರುವ ರೈಲ್ವೆ ಉದ್ಯೋಗಾಕಾಂಕ್ಷಿಗಳ ಪರ ಎರಡನೇ ಹಂತದಲ್ಲಿ ಧ್ವನಿ ಎತ್ತಲಾಗುವುದು ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ನಿಧನ ವಾರ್ತೆ

ಕಟ್ಟೆ ರಾಮಚಂದ್ರ

ಬೆಂಗಳೂರು: ಚಲನಚಿತ್ರ ಹಾಗೂ ಕಿರುತೆರೆ ನಿರ್ದೇಶಕ ಕಟ್ಟೆ ರಾಮಚಂದ್ರ(75) ಅವರು ಶುಕ್ರವಾರ ಕೋವಿಡ್‌ನಿಂದಾಗಿ ನಗರದ ಸೆಂಟ್ ಜಾನ್ಸ್ ಆಸ್ಪತ್ರೆಯಲ್ಲಿ ನಿಧನರಾದರು.

ರಂಗಭೂಮಿ, ಚಲನಚಿತ್ರ, ಕಿರುತೆರೆ ಕ್ಷೇತ್ರಗಳಲ್ಲಿ ಹಲವು ದಶಕಗಳಿಂದ ಸಕ್ರಿಯರಾಗಿದ್ದ ಅವರು, ವಿಷ್ಣುವರ್ಧನ್ ಅಭಿನಯದ ವೈಶಾಖದ ದಿನಗಳು, ಮಹಾಲಕ್ಷ್ಮೀ ಚಿತ್ರಗಳನ್ನು ನಿರ್ಮಿಸಿ, ನಿರ್ದೇಶಿಸಿದ್ದರು. ಅವರು ನಿರ್ದೇಶಿಸಿದ ಮೊದಲ ಚಿತ್ರ ‘ಅರಿವು’ಗೆ ರಾಷ್ಟ್ರಪ್ರಶಸ್ತಿ ಸಿಕ್ಕಿತ್ತು. ‘ಮನೆ ಮನೆ ಕಥೆ’, ‘ಅಲೆಗಳು’ ಮತ್ತು ಇತರ ಧಾರಾವಾಹಿಗಳಲ್ಲಿ ನಟಿಸಿದ್ದರು. ಹಲವು ಚಿತ್ರೋತ್ಸವಗಳಿಗೆ ತೀರ್ಪುಗಾರರಾಗಿದ್ದರು.

ಜ. 23ರಂದು ಅವರ ಪತ್ನಿ ಸುಧಾಮಣಿ ಅವರೂ ನಿಧನರಾಗಿದ್ದರು. ರಾಮಚಂದ್ರ– ಸುಧಾಮಣಿ ದಂಪತಿಗೆ ಒಬ್ಬರು ಪುತ್ರಿ ಇದ್ದಾರೆ. ಮಧ್ಯಾಹ್ನ ಚಾಮರಾಜಪೇಟೆಯ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ಮೂಗಿನ ಮೂಲಕ ಲಸಿಕೆ: 3ನೇ ಹಂತದ ಕ್ಲಿನಿಕಲ್ ಟ್ರಯಲ್‌ಗೆ ಒಪ್ಪಿಗೆ

ನವದೆಹಲಿ/ಹೈದರಾಬಾದ್ (ಪಿಟಿಐ): ಮೂಗಿನ ಮೂಲಕ ಹಾಕಬಹುದಾದ (ಇಂಟ್ರಾನೇಸಲ್) ಕೋವಿಡ್ ಲಸಿಕೆಯ ಮೂರನೇ ಹಂತದ ಕ್ಲಿನಿಕಲ್ ಟ್ರಯಲ್ ನಡೆಸಲು ಭಾರತೀಯ ಔಷಧ ನಿಯಂತ್ರಕರು (ಡಿಸಿಜಿಐ) ಭಾರತ್ ಬಯೋಟೆಕ್‌ಗೆ ಅನುಮತಿ ನೀಡಿದ್ದಾರೆ.

ಈಗಾಗಲೇ ಕೋವಿಡ್ ಲಸಿಕೆಗಳ ಎರಡು ಡೋಸ್‌ಗಳನ್ನು ಪಡೆದವರಿಗೆ ಭಾರತ್ ಬಯೋಟೆಕ್ ಅಭಿವೃದ್ಧಿಪಡಿಸಿರುವ ಈ ಇಂಟ್ರಾನೇಸಲ್ (ಬಿಬಿವಿ154) ಲಸಿಕೆಯನ್ನು ಬೂಸ್ಟರ್ ಡೋಸ್ ಆಗಿ ನೀಡುವ ಉದ್ದೇಶ ಹೊಂದಲಾಗಿದೆ.

ದೆಹಲಿಯ ಏಐಐಎಂಎಸ್ ಸೇರಿದಂತೆ ದೇಶದ ಆಯ್ದ ಐದು ಕೇಂದ್ರಗಳಲ್ಲಿ ಈ ಲಸಿಕೆಯ ಕ್ಲಿನಿಕಲ್ ಟ್ರಯಲ್ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

‘ಕೋವಿಡ್ ಲಸಿಕೆಯ ಎರಡು ಡೋಸ್‌ಗಳನ್ನು ಪಡೆದವರು ಈ ಕ್ಲಿನಿಕಲ್ ಟ್ರಯಲ್‌ನಲ್ಲಿ ಪಾಲ್ಗೊಳ್ಳುವರು. ಇಂಟ್ರಾನೇಸಲ್ ಲಸಿಕೆಯಿಂದ ಇವರಲ್ಲಿ ಎಷ್ಟು ಪ್ರಮಾಣದಲ್ಲಿ ರೋಗ ನಿರೋಧಕ ಶಕ್ತಿ ಉತ್ಪತ್ತಿಯಾಯಿತು ಹಾಗೂ ಎಷ್ಟರ ಮಟ್ಟಿಗೆ ಈ ಲಸಿಕೆ ಸುರಕ್ಷಿತ ಎಂಬುದರ ಮೌಲ್ಯಮಾಪನ ನಡೆಸಲು ಕಂಪನಿಗೆ ಜ.27ರಂದು ಅನುಮತಿ ನೀಡಲಾಗಿದೆ’ ಡಿಸಿಜಿಐ ಮೂಲಗಳು ಹೇಳಿವೆ.

ಲಸಿಕೆಯ ಕ್ಲಿನಿಕಲ್ ಟ್ರಯಲ್‌ಗೆ ಅನುಮತಿ ಕೋರಿ ಕಂಪನಿಯು ಕಳೆದ ಡಿಸೆಂಬರ್‌ನಲ್ಲಿ ಡಿಸಿಜಿಐಗೆ ಅರ್ಜಿ ಸಲ್ಲಿಸಿತ್ತು.

‘ಈ ಲಸಿಕೆಯನ್ನು ಸುಲಭವಾಗಿ ಹಾಕಬಹುದು. ಸಿರಿಂಜ್ ಹಾಗೂ ಸೂಜಿಗಳ ಅಗತ್ಯವೇ ಇರುವುದಿಲ್ಲ. ಅಲ್ಲದೇ, ಲಸಿಕೆ ಕಾರ್ಯಕ್ರಮಕ್ಕೆ ತಗುಲುವ ವೆಚ್ಚ ಗಣನೀಯವಾಗಿ ಕಡಿಮೆಯಾಗುವುದು’ ಎಂದು ಕಂಪನಿಯ ಅಧ್ಯಕ್ಷ ಕೃಷ್ಣ ಎಲ್ಲಾ ಪ್ರತಿಕ್ರಿಯಿಸಿದ್ದಾರೆ.

ಶೇ 60ಕ್ಕೂ ಹೆಚ್ಚು ಮಕ್ಕಳಿಗೆ ಮೊದಲ ಡೋಸ್: ‘15 –18 ವರ್ಷ ವಯೋಮಾನದವರ ಪೈಕಿ ಶೇ 60ಕ್ಕೂ ಹೆಚ್ಚು ಮಕ್ಕಳಿಗೆ ಕೋವಿಡ್ ಲಸಿಕೆಯ ಮೊದಲ ಡೋಸ್ ನೀಡಲಾಗಿದೆ’ ಎಂದು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯಾ ಶುಕ್ರವಾರ ಹೇಳಿದ್ದಾರೆ. ಲಸಿಕೆ ಹಾಕಿಸಿಕೊಂಡಿರುವ ಮಕ್ಕಳನ್ನು ಅಭಿನಂದಿಸಿ ಅವರು ಟ್ವೀಟ್ ಮಾಡಿದ್ದಾರೆ.

‘ಟೆಲಿ ಸಮಾಲೋಚನೆಗೆ ಒತ್ತು’: ಮನೆಯಲ್ಲಿ ಪ್ರತ್ಯೇಕವಾಸದಲ್ಲಿರುವ ಕೋವಿಡ್ ರೋಗಿಗಳಿಗೆ ಹಾಗೂ ದೂರದ ಪ್ರದೇಶಗಳಲ್ಲಿನ ಜನರಿಗೆ ವೈದ್ಯಕೀಯ ಸೇವೆ ನೀಡುವಲ್ಲಿ ಟೆಲಿ ಸಮಾಲೋಚನೆ ವಿಧಾನ ಮಹತ್ವದ ಪಾತ್ರ ವಹಿಸುತ್ತಿದೆ ಎಂದು ಸಚಿವ ಮಾಂಡವಿಯಾ ಹೇಳಿದ್ದಾರೆ.

‘ಬಾವಲಿಯಲ್ಲಿ ‘ನಿಯೊಕೋವ್’ ಕೊರೊನಾ ವೈರಸ್ ಪತ್ತೆ’

ಬೀಜಿಂಗ್: ಕೊರೊನಾ ವೈರಸ್ ಕುಟುಂಬಕ್ಕೆ ಸೇರಿದ ‘ನಿಯೊಕೋವ್’ ಎಂಬ ವೈರಸ್‌ಅನ್ನು ದಕ್ಷಿಣ ಆಫ್ರಿಕಾದ ಬಾವಲಿಗಳಲ್ಲಿ ಪತ್ತೆ ಹಚ್ಚಿದ್ದಾಗಿ ಚೀನಾ ಸಂಶೋಧಕರು ಹೇಳಿದ್ದಾರೆ.

‘ಈ ವೈರಸ್ ರೂಪಾಂತರಗೊಂಡಿದ್ದೇ ಆದಲ್ಲಿ ಮುಂಬರುವ ದಿನಗಳಲ್ಲಿ ಮನುಷ್ಯರಿಗೆ ಅಪಾಯವೊಡ್ಡಲಿದೆ’ ಎಂದೂ ಅವರು ಎಚ್ಚರಿಸಿದ್ದಾರೆ.

‘ಮಿಡಲ್ ಈಸ್ಟ್ ರೆಸ್ಪಿರೇಟರಿ ಸಿಂಡ್ರೋಮ್’ (ಎಂಇಆರ್‌ಎಸ್) ಎಂಬ ಉಸಿರಾಟ ತೊಂದರೆ ಕಾಯಿಲೆಗೆ ಕಾರಣವಾಗುವ ವೈರಸ್‌ಗೆ ಇರುವಂತಹ ಗುಣಲಕ್ಷಣಗಳನ್ನೇ 'ನಿಯೊಕೋವ್' ವೈರಾಣು ಹೊಂದಿದೆ ಎಂದಿರುವ ಸಂಶೋಧಕರು, ಈ ವೈರಸ್ ಕುರಿತು ಹೆಚ್ಚಿನ ಅಧ್ಯಯನದ ಅಗತ್ಯ ಇದೆ ಎಂದಿದ್ದಾರೆ. ವಿಶ್ವ ಆರೋಗ್ಯ ಸಂಸ್ಥೆ ಕೂಡ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ.

ರೈಲ್ವೆ ನೇಮಕದಲ್ಲಿ ಅಕ್ರಮ ಆರೋಪ ಬಿಹಾರ ಬಂದ್

ಪಟ್ನಾ (ಪಿಟಿಐ): ತಾಂತ್ರಿಕಯೇತರ ಹುದ್ದೆಗಳ ನೇಮಕದಲ್ಲಿ ರೈಲ್ವೆ ನೇಮಕಾತಿ ಮಂಡಳಿ ತಾರತಮ್ಯ ತೋರುತ್ತಿದ್ದು, ಅಕ್ರಮ ತಡೆಯಬೇಕು ಎಂದು ಆಗ್ರಹಿಸಿ ಶುಕ್ರವಾರ ನೀಡಿದ್ದ ಬಿಹಾರ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

ವಿವಿಧ ವಿದ್ಯಾರ್ಥಿ ಸಂಘಟನೆಗಳು ನೀಡಿದ್ದ ಈ ಬಂದ್ ಕರೆಗೆ ಬಹುತೇಕ ಪಕ್ಷಗಳು ಬೆಂಬಲ ವ್ಯಕ್ತಪಡಿಸಿದ್ದವು. ರೈಲ್ವೆ ನೇಮಕಾತಿ ಮಂಡಳಿಯ ವಿರುದ್ಧ ಪ್ರತಿಭಟನೆ, ಘೋಷಣೆ, ಅಲ್ಲಲ್ಲಿ ಟೈರ್‌ಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಲಾಯಿತು. ಬಹುತೇಕ ವಾಣಿಜ್ಯ ಚಟುವಟಿಕೆ ಬಂದ್ ಆಗಿದ್ದವು. ವಾಹನ, ಜನಸಂಚಾರವೂ ಅಸ್ತವ್ಯಸ್ತಗೊಂಡಿತು.

ಪಟ್ನಾದಲ್ಲಿ ಜನನಿಬಿಡ ಅಶೋಕ ರಾಜಪಥದಲ್ಲಿ, ಹೃದಯಭಾಗದ ಡಾಕ್ ಬಂಗಲೆ ಬಳಿ ಭಾರಿ ಪ್ರತಿಭಟನೆ ನಡೆಯಿತು. ಪ್ರತಿಭಟನಕಾರರು ರಾಜಭವನದತ್ತ ತೆರಳುವಾಗ ಪೊಲೀಸರು ಅವರನ್ನು ಅಡ್ಡಗಟ್ಟಿದರು. ಅಲ್ಲಲ್ಲಿ ಪೊಲೀಸರ ಜೊತೆಗೆ ವಾಗ್ಯುದ್ಧ ನಡೆಸಿದ ಬೆಳವಣಿಗೆಗಳೂ ನಡೆದವು.

ರಾಜ್ಯದ ಬಕ್ಸಾರ್, ಜೆಹಾನಾಬಾದ್, ಭಾಗಲ್ಪುರ, ಕತಿಹಾರ್, ಬೆಗುಸರಾಯ್, ಮುಂಗೆರ್ ಸೇರಿದಂತೆ ಪ್ರಮುಖ ನಗರಗಳಲ್ಲಿಯೂ ಪ್ರತಿಭಟನೆ ನಡೆಯಿತು. ಆರ್‌ಜೆಡಿ, ಸಿಪಿಐ–ಎಂಎಲ್ ಕಾರ್ಯಕರ್ತರು ಬೆಂಬಲ ವ್ಯಕ್ತಪಡಿಸಿದರು.

ಸೂರಜ್ ರೇವಣ್ಣ ಪ್ರಮಾಣವಚನ ಸ್ವೀಕಾರ

ಬೆಂಗಳೂರು: ಹಾಸನ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ಆಯ್ಕೆಯಾಗಿದ್ದ ಜೆಡಿಎಸ್‌ನ ಸೂರಜ್ ರೇವಣ್ಣ ವಿಧಾನಸೌಧದಲ್ಲಿ ಶುಕ್ರವಾರ ಭಗವಂತನ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದರು.

ಸಭಾಪತಿ ಬಸವರಾಜ ಹೊರಟ್ಟಿ ಪ್ರಮಾಣವಚನ ಬೋಧಿಸಿದರು. ಸೂರಜ್ ಅವರ ತಂದೆ ಎಚ್.ಡಿ. ರೇವಣ್ಣ, ತಾಯಿ ಭವಾನಿ, ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಕೆ.ಕುಮಾರಸ್ವಾಮಿ ಉಪಸ್ಥಿತರಿದ್ದರು.

ನಿಷ್ಠುರತೆ ಹೆಚ್ಚಿಸುತ್ತಿರುವ ಶಾಸನಸಭೆ: ‘ಸುಪ್ರೀಂ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ವಿಧಾನಸಭೆ ಹಾಗೂ ಸಂಸತ್ತು ನಿಷ್ಠುರತೆ ಹೆಚ್ಚಿಸುವ ಸ್ಥಳಗಳಾಗಿ ಬದಲಾಗುತ್ತಿರುವುದು ನಿರಾಶಾದಾಯಕ ಬೆಳವಣಿಗೆ’ ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ವಿಷಾದ ವ್ಯಕ್ತಪಡಿಸಿದೆ.

ಮಹಾರಾಷ್ಟ್ರದ 12 ಜನ ಬಿಜೆಪಿ ಶಾಸಕರನ್ನು ಒಂದು ವರ್ಷ ಅಮಾನತ್ತಿನಲ್ಲಿ ಇರಿಸಿರುವ ಸ್ಪೀಕರ್ ಕ್ರಮವು ‘ಅಸಾಂವಿಧಾನಿಕ’ ಎಂದು ತೀರ್ಪು ನೀಡಿರುವ ನ್ಯಾಯಮೂರ್ತಿ ಎ.ಎಂ. ಖಾನ್ವಿಲ್ಕರ್ ನೇತೃತ್ವದ ಪೀಠ, ಉನ್ನತ ಮಟ್ಟದ ಚರ್ಚೆಗಳು ನಡೆಯುವ ಈ ತಾಣಗಳ ವೈಭವ ಹಾಗೂ ಗುಣಮಟ್ಟವನ್ನು ಪುನಃ ಸ್ಥಾಪಿಸಲು ಇದು ಸೂಕ್ತ ಸಮಯ ಎಂದು ಅಭಿಪ್ರಾಯಪಟ್ಟಿದೆ.

‘ಸದನದ ಸದಸ್ಯರನ್ನು ಅವರ ಬೆಂಬಲಿಗರು ಅನುಸರಿಸುತ್ತಾರೆ. ಅವರಿಂದ ರಾಜನೀತಿಯನ್ನು ನಿರೀಕ್ಷಿಸಬಹುದೇ ವಿನಾ ಕ್ರೌರ್ಯವನ್ನಲ್ಲ. ಹಾಗಾಗಿ, ಸದನವನ್ನು ಅಸ್ತವ್ಯಸ್ತವಾಗಿಸುವ ನಡವಳಿಕೆಗೆ ಅವಕಾಶವಿಲ್ಲ’ ಎಂದಿದೆ.

ಸದನವು ಕ್ರಮಬದ್ಧವಾಗಿ ಕಾರ್ಯ ನಿರ್ವಹಿಸುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಇಂತಹ ಕಟ್ಟುನಿಟ್ಟಾದ ಕ್ರಮಗಳನ್ನು ಕೈಗೊಳ್ಳುವುದು ಅತ್ಯಗತ್ಯ ಎಂದಿರುವ ಪೀಠವು, ಆ ಕ್ರಮವು ಸಾಂವಿಧಾನಿಕವಾಗಿಯೂ, ಕಾನೂನುಬದ್ಧವಾಗಿಯೂ, ತರ್ಕಬದ್ಧವಾಗಿಯೂ ಇರಬೇಕಷ್ಟೇ ಎಂದು ಹೇಳಿದೆ.

ಈ ಪ್ರಕರಣವು ಇಂಥ ಉನ್ನತ ಸಂಸ್ಥೆಯಲ್ಲಿ ಉತ್ತಮ ನಡವಳಿಕೆಯನ್ನು ರೂಢಿಸುವ ಮತ್ತು ಅನುಸರಿಸುವ ಅಗತ್ಯತೆಯ ಕುರಿತ ಚಿಂತನೆಗೆ ಅವಕಾಶ ನೀಡಿದೆ. ಚುನಾಯಿತ ಪ್ರತಿನಿಧಿಗಳು ಸದನದಲ್ಲಿ ಪ್ರಜಾಸತ್ತಾತ್ಮಕವಲ್ಲದ ಚಟುವಟಿಕೆಯಲ್ಲಿ ತೊಡಗುವುದನ್ನು ಖಂಡಿಸಬೇಕಿದೆ ಎಂದು ನ್ಯಾಯಮೂರ್ತಿಗಳಾದ ದಿನೇಶ್ ಮಾಹೇಶ್ವರಿ ಹಾಗೂ ಸಿ.ಟಿ. ರವಿಕುಮಾರ್ ಅವರಿದ್ದ ಪೀಠ ತಿಳಿಸಿದೆ.

ಏಷ್ಯಾಕಪ್ ಹಾಕಿ: ಭಾರತಕ್ಕೆ ಕಂಚು

ಮಸ್ಕತ್ (ಪಿಟಿಐ): ಚೀನಾವನ್ನು ಎರಡು ಗೋಲುಗಳಿಂದ ಮಣಿಸಿದ ಭಾರತ ತಂಡ ಮಹಿಳೆಯರ ಏಷ್ಯಾಕಪ್ ಹಾಕಿ ಟೂರ್ನಿಯಲ್ಲಿ ಕಂಚಿನ ಪದಕ ಗೆದ್ದಿತು. ಮೂರು ಹಾಗೂ ನಾಲ್ಕನೇ ಸ್ಥಾನ ನಿರ್ಣಯಿಸಲು ಶುಕ್ರವಾರ ರಾತ್ರಿ ನಡೆದ ಪಂದ್ಯದಲ್ಲಿ ಶರ್ಮಿಳಾ ದೇವಿ ಮತ್ತು ಗುರ್ಜಿತ್ ಕೌರ್ ಭಾರತಕ್ಕೆ ಗೋಲು ತಂದುಕೊಟ್ಟರು. ಕಳೆದ ಬಾರಿ ಭಾರತ ಚಾಂಪಿಯನ್ ಆಗಿತ್ತು.

ಸೆಮಿಫೈನಲ್‌ನಲ್ಲಿ ಕೊರಿಯಾ ಎದುರು ಸೋತಿದ್ದ ಭಾರತ ಆ ನಿರಾಸೆಯನ್ನು ಮರೆತು ಈ ಪಂದ್ಯದಲ್ಲಿ ಆಡಿತು. ಮೊದಲ ಆರಂಭದಿಂದಲೇ ಆಕ್ರಮಣಕ್ಕೆ ಇಳಿದ ತಂಡ ಮೊದಲ ಎರಡು ಕ್ವಾರ್ಟರ್‌ಗಳಲ್ಲಿ ಪೂರ್ಣ ಅಧಿಪತ್ಯ ಸ್ಥಾಪಿಸಿತು. ಹೀಗಾಗಿ ಮೊದಲಾರ್ಧದ ಮುಕ್ತಾಯಕ್ಕೆ ತಂಡ ಎರಡು ಗೋಲುಗಳ ಮುನ್ನಡೆ ಗಳಿಸಿತು. ಆದರೆ ದ್ವಿತೀಯಾರ್ಧದಲ್ಲಿ ಮುನ್ನಡೆಯನ್ನು ಹೆಚ್ಚಿಸುವ ಆಸೆಗೆ ಚೀನಾ ತಡೆಯೊಡ್ಡಿತು.

ಆರಂಭದಲ್ಲೇ ಭಾರತಕ್ಕೆ ಪೆನಾಲ್ಟಿ ಕಾರ್ನರ್‌ಗಳು ಲಭಿಸತೊಡಗಿದವು. 13ನೇ ನಿಮಿಷದಲ್ಲಿ ಗುರ್ಜಿತ್ ಕೌರ್ ಅವರ ಫ್ಲಿಕ್ ಚೀನಾ ಡಿಫೆಂಡರ್‌ಗಳ ಸ್ಟಿಕ್‌ಗೆ ಬಡಿದು ವಾಪಸ್ ಬಂತು. ಶರ್ಮಿಳಾ ದೇವಿ ಚೆಂಡನ್ನು ನಿಯಂತ್ರಿಸಿ ವಾಪಸ್ ಗುರಿಯತ್ತ ತಳ್ಳಿದರು. ಈ ಮೂಲಕ ತಂಡಕ್ಕೆ ಮುನ್ನಡೆ ಲಭಿಸಿತು.

ದ್ವಿತೀಯ ಕ್ವಾರ್ಟರ್‌ನಲ್ಲೂ ಸತತ ಆಕ್ರಮಣ ನಡೆಸಿದ ಭಾರತ ತಂಡ ಎದುರಾಳಿಗಳ ರಕ್ಷಣಾ ವಿಭಾಗದಲ್ಲಿ ಆತಂಕ ಸೃಷ್ಟಿಸಿತು. ಇದರ ಪರಿಣಾಮ 19ನೇ ನಿಮಿಷದಲ್ಲಿ ಪೆನಾಲ್ಟಿ ಅವಕಾಶ ಲಭಿಸಿತು. ಗುರ್ಜಿತ್ ಕೌರ್ ಅವರು ಮೋಹಕ್ ಡ್ರ್ಯಾಗ್ ಫ್ಲಿಕ್ ಮೂಲಕ ಚೆಂಡನ್ನು ಗುರಿ ಮುಟ್ಟಿಸಿದರು.

ಮರುಕ್ಷಣದಲ್ಲೇ ಚೀನಾಗೂ ಪೆನಾಲ್ಟಿ ಕಾರ್ನರ್ ಅವಕಾಶ ಲಭಿಸಿತು. ಆದರೆ ಭಾರತ ತಂಡದ ನಾಯಕಿ ಮತ್ತು ಗೋಲ್‌ಕೀಪರ್ ಸವಿತಾ ಪೂನಿಯಾ, ಚೆಂಡು ಗುರಿ ಮುಟ್ಟಲು ಬಿಡಲಿಲ್ಲ. ದ್ವಿತೀಯಾರ್ಧದಲ್ಲಿ ಚೀನಾ ಪ್ರಬಲ ಹೋರಾಟ ನಡೆಸಿತು. ಆದರೆ ಫಲ ಕಾಣಲಿಲ್ಲ. ಪಂದ್ಯ ಮುಗಿಯಲು 10 ನಿಮಿಷ ಇದ್ದಾಗ ಚೀನಾಗೆ ಪೆನಾಲ್ಟಿ ಅವಕಾಶ ಲಭಿಸಿತ್ತು. ಆದರೆ ಭಾರತದ ಡಿಫೆಂಡರ್‌ಗಳು ಚೆಂಡನ್ನು ತಡೆದರು.

ಚಿನ್ನ ಗೆದ್ದ ಜಪಾನ್

ಫೈನಲ್ ಪಂದ್ಯದಲ್ಲಿ ಶುಕ್ರವಾರ ಜಪಾನ್ ತಂಡವು ಕೊರಿಯಾ ತಂಡವನ್ನು 4–2ರಿಂದ ಮಣಿಸಿ ಪ್ರಶಸ್ತಿ ಜಯಿಸಿತು. ಜಪಾನ್ 2007 ಮತ್ತು 2013ರಲ್ಲೂ ಚಾಂಪಿಯನ್ ಆಗಿತ್ತು.

ಗುರ್ಜಿತ್ ಕೌರ್ – ಪಿಟಿಐ ಚಿತ್ರ

ಶರ್ಮಿಳಾ ದೇವಿ

ಎರಡು ಹಂತಗಳಲ್ಲಿ ಆಯೋಜನೆಗೆ ಬಿಸಿಸಿಐ ನಿರ್ಧಾರ

ಮುಂದಿನ ತಿಂಗಳು ರಣಜಿ ಟ್ರೋಫಿ ಕ್ರಿಕೆಟ್

ನವದೆಹಲಿ (ಪಿಟಿಐ): ಮುಂದಿನ ತಿಂಗಳ ಎರಡನೇ ವಾರದಲ್ಲಿ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿ ಆರಂಭವಾಗಲಿದೆ. ಈ ಬಾರಿ ಟೂರ್ನಿಯನ್ನು ಎರಡು ಹಂತಗಳಲ್ಲಿ ನಡೆಸಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ನಿರ್ಧರಿಸಿದೆ.

‘ದೇಶಿ ಕ್ರಿಕೆಟ್‌ನ ರಾಜ’ ರಣಜಿ ಟೂರ್ನಿಯನ್ನು ಹೋದ ವರ್ಷ ಕೋವಿಡ್ ಕಾರಣಕ್ಕಾಗಿ ರದ್ದು ಮಾಡಲಾಗಿತ್ತು. ಈ ವರ್ಷದ ಟೂರ್ನಿಯನ್ನು ಜನವರಿ 13ರಂದು ಆರಂಭಿಸಬೇಕಿತ್ತು. ಆದರೆ, ದೇಶದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಿದ್ದರಿಂದ ಮುಂದೂಡಲಾಯಿತು.

’ರಣಜಿ ಟೂರ್ನಿಯನ್ನು ಎರಡು ಹಂತಗಳಲ್ಲಿ ನಡೆಸಲು ಮಂಡಳಿಯು ನಿರ್ಧರಿಸಿದೆ. ಫೆಬ್ರುವರಿ ಎರಡನೇ ವಾರದಲ್ಲಿ ಮೊದಲ ಹಂತ ಶುರುವಾಗುವುದು. ಇದರಲ್ಲಿ ಎಲ್ಲ ಲೀಗ್ ಪಂದ್ಯಗಳನ್ನು ಮುಗಿಸಲಾಗುವುದು. ಜೂನ್‌ನಲ್ಲಿ ಎರಡನೇ ಹಂತ ಆಯೋಜಿಸಿ ನಾಕೌಟ್ ಪಂದ್ಯಗಳನ್ನು ನಡೆಸಲಾಗುವುದು’ ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ತಿಳಿಸಿದ್ದಾರೆ.

‘ಟೂರ್ನಿಯ ಸಂದರ್ಭದಲ್ಲಿ ಆಟಗಾರರು, ಸಿಬ್ಬಂದಿ ಮತ್ತು ಅಧಿಕಾರಿ ವರ್ಗದವರಿಗೆ ಕೋವಿಡ್‌ನಿಂದ ತೊಂದರೆಯಾಗದಂತೆ ಎಚ್ಚರ ವಹಿಸಲು ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುವುದು. ಅದಕ್ಕಾಗಿ ನಮ್ಮ ತಂಡವು ಕಾರ್ಯ ನಿರ್ವಹಿಸುತ್ತಿದೆ. ಎಲ್ಲ ಸವಾಲುಗಳ ನಡುವೆಯೂ ಉತ್ತಮವಾಗಿ ಟೂರ್ನಿ ಆಯೋಜಿಸಲಾಗುವುದು’ ಎಂದು ಶಾ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮಾರ್ಚ್ 27ರಿಂದ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿ ನಿಗದಿಯಾಗಿದೆ. ಅದಕ್ಕೂ ಮುನ್ನ ಒಂದು ಹಂತ ಮತ್ತು ನಂತರ 2ನೇ ಹಂತದ ರಣಜಿ ಟೂರ್ನಿ ಆಯೋಜಿಸಲು ಚಿಂತನೆ ನಡೆಸಲಾಗುತ್ತಿದೆ ಎಂದು ಮಂಡಳಿಯ ಖಜಾಂಚಿ ಅರುಣ ಧುಮಾಲ್ ಗುರುವಾರ ಹೇಳಿದ್ದರು.

ಭಾರತ ಕ್ರಿಕೆಟ್‌ನ ಬೆನ್ನೆಲುಬು: ಶಾಸ್ತ್ರಿ

ನವದೆಹಲಿ (ಪಿಟಿಐ): ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯನ್ನು ನಿರ್ಲಕ್ಷಿಸಿದರೆ ಭಾರತದ ಕ್ರಿಕೆಟ್‌ನ ಬೆನ್ನುಹುರಿಯೇ ಇಲ್ಲದಂತಾಗುತ್ತದೆ ಎಂದು ಕ್ರಿಕೆಟಿಗ ರವಿಶಾಸ್ತ್ರಿ ಅಭಿಪ್ರಾಯಪಟ್ಟಿದ್ದಾರೆ.

‘ಭಾರತದ ಕ್ರಿಕೆಟ್‌ಗೆ ರಣಜಿ ಟ್ರೋಫಿಯು ಬೆನ್ನೆಲುಬಿದ್ದಂತೆ. ಅದನ್ನು ನಿರ್ಲಕ್ಷಿಸಿದರೆ ಕ್ರಿಕೆಟ್ ಕ್ಷೀಣಿಸಲಿದೆ’ ಎಂದು ಟ್ವೀಟ್ ಮಾಡಿದ್ದಾರೆ.

ಆಸ್ಟ್ರೇಲಿಯನ್ ಓಪನ್: ಫೈನಲ್‌ನಲ್ಲಿ ಮೆಡ್ವೆಡೆವ್ ಎದುರಾಳಿ; ಮುಗ್ಗರಿಸಿದ ಸಿಟ್ಸಿಪಾಸ್, ಬೆರೆಟಿನಿ

ನಡಾಲ್ ದಾಖಲೆಗೆ ಇನ್ನೊಂದೇ ಹೆಜ್ಜೆ

ಮೆಲ್ಬರ್ನ್ (ಎಪಿ/ರಾಯಿಟರ್ಸ್): ಟೆನಿಸ್‌ನಲ್ಲಿ ದಾಖಲೆ ಬರೆಯಲು ಸ್ಪೇನ್‌ನ ರಫೆಲ್ ನಡಾಲ್ ಅವರು ಇನ್ನು ಒಂದು ಪಂದ್ಯ ಗೆದ್ದರೆ ಸಾಕು. ಭಾನುವಾರ ನಡೆಯಲಿರುವ ಆಸ್ಟ್ರೇಲಿಯನ್ ಓಪನ್ ಟೂರ್ನಿಯ ಫೈನಲ್‌ನಲ್ಲಿ ಅವರು ರಷ್ಯಾದ ಡ್ಯಾನಿಲ್ ಮೆಡ್ವೆಡೆವ್ ವಿರುದ್ಧ ಜಯ ಸಾಧಿಸಿದರೆ 21 ಗ್ರ್ಯಾನ್‌ಸ್ಲಾಂ ಪ್ರಶಸ್ತಿಗಳ ಒಡೆಯ ಎನಿಸಿಕೊಳ್ಳಲಿದ್ದಾರೆ.

ಈ ಮೂಲಕ ಸ್ವಿಟ್ಜರ್ಲೆಂಡ್‌ನ ರೋಜರ್ ಫೆಡರರ್ ಮತ್ತು ಸರ್ಬಿಯಾದ ನೊವಾಕ್ ಜೊಕೊವಿಚ್ ಅವರನ್ನು ಹಿಂದಿಕ್ಕಲಿದ್ದಾರೆ. ಎಲ್ಲ ನಾಲ್ಕು ಗ್ರ್ಯಾನ್‌ಸ್ಲಾಂ ಟೂರ್ನಿಗಳಲ್ಲಿ ಕನಿಷ್ಠ ಎರಡು ಬಾರಿ ಪ್ರಶಸ್ತಿ ಗೆದ್ದ ನಾಲ್ಕನೇ ಆಟಗಾರ ಎಂಬ ಖ್ಯಾತಿಯೂ ಅವರದಾಗಲಿದೆ.

ರಾಡ್ ಲೇವರ್ ಅರೆನಾದಲ್ಲಿ ಶುಕ್ರವಾರ ನಡೆದ ಪುರುಷರ ವಿಭಾಗದ ಸೆಮಿಫೈನಲ್‌ನಲ್ಲಿ ನಡಾಲ್ ಇಟಲಿಯ ಮಟಿಯೊ ಬೆರೆಟಿನಿ ವಿರುದ್ಧ 6-3, 6-2, 3-6, 6-3ರಲ್ಲಿ ಜಯ ಗಳಿಸಿದರು. ಮತ್ತೊಂದು ಸೆಮಿಫೈನಲ್‌ನಲ್ಲಿ ಮೆಡ್ವೆಡೆವ್ 7-6(5), 4-6, 6-4, 6-1ರಲ್ಲಿ ಗ್ರೀಸ್‌ನ ಸ್ಟೆಫನೊಸ್ ಸಿಟ್ಸಿಪಾಸ್ ಅವರನ್ನು ಮಣಿಸಿದರು.

35 ವರ್ಷದ ನಡಾಲ್‌ಗೆ ಆಸ್ಟ್ರೇಲಿಯನ್ ಓಪನ್ ಟೂರ್ನಿಯಲ್ಲಿ ಇದು ಆರನೇ ಫೈನಲ್ ಆಗಿದೆ. ನಾಲ್ಕನೇ ಸೆಟ್‌ನ ಒಂಬತ್ತನೇ ಗೇಮ್‌ನಲ್ಲಿ ಮ್ಯಾಚ್ ಪಾಯಿಂಟ್ ಗಳಿಸಿದ ಕೂಡಲೇ ಒಂದು ಕ್ಷಣ ಸುಮ್ಮನೆ ನಿಂತ ನಡಾಲ್ ನಂತರ ಕೈಗಳನ್ನು ಮೇಲೆತ್ತಿ ಸಂಭ್ರಮಿಸಿದರು. ಮೂರು ಬಾರಿ ಗಾಳಿಗೆ ‘ಪಂಚ್’ ಮಾಡಿ ಅಭಿಮಾನಿಗಳತ್ತ ನೋಟ ಬೀರಿದರು.

ಆಸ್ಟ್ರೇಲಿಯನ್ ಓಪನ್ ಟೂರ್ನಿಯಲ್ಲಿ ಒಂದು ಬಾರಿ ಮಾತ್ರ (2009) ಪ್ರಶಸ್ತಿ ಗೆದ್ದಿರುವ ನಡಾಲ್ ಶುಕ್ರವಾರ ಟೂರ್ ಹಂತದ ಟೂರ್ನಿಯಲ್ಲಿ ಹಸಿರು ಅಂಗಣದಲ್ಲಿ 500ನೇ ಪಂದ್ಯ ಆಡಿದರು. ಭಾರಿ ಮಳೆಯಿಂದಾಗಿ ಅಂಗಣದ ಮೇಲ್ಛಾವಣಿಯನ್ನು ಮುಚ್ಚಿ ಪಂದ್ಯ ನಡೆಸಲಾಯಿತು.

ಆರನೇ ಶ್ರೇಯಾಂಕದ ನಡಾಲ್ ಏಳನೇ ಶ್ರೇಯಾಂಕಿತ ಬೆರೆಟಿನಿ ಎದುರು ದಿಟ್ಟ ಆಟವಾಡಿದರು. ಮೊದಲ ಎರಡು ಸೆಟ್‌ಗಳಲ್ಲಿ ಬೆರೆಟಿನಿ ಅವರ ಆರಂಭದ ಸರ್ವಿಸ್ ಗೇಮ್‌ಗಳನ್ನು ಮುರಿದು ಮುನ್ನುಗ್ಗಿದ ನಡಾಲ್ ಮೂರನೇ ಸೆಟ್‌ನಲ್ಲಿ ಸೋತರು. ಆದರೆ ನಂತರ ಚೇತರಿಸಿಕೊಂಡು ಗೆಲುವು ಸಾಧಿಸಿದರು. ಮೂರು ತಾಸಿನ ಒಳಗೆ ಪಂದ್ಯವನ್ನು ಮುಕ್ತಾಯಗೊಳಿಸಿದರು. ಆಸ್ಟ್ರೇಲಿಯನ್ ಓಪನ್‌ನ ಸೆಮಿಫೈನಲ್‌ನಲ್ಲಿ ಆಡಿದ ಇಟಲಿಯ ಮೊದಲ ಆಟಗಾರ ಎನಿಸಿಕೊಂಡಿರುವ ಬೆರೆಟಿನಿ ಅವರ ಬ್ಯಾಕ್‌ಹ್ಯಾಂಡ್ ದೌರ್ಬಲ್ಯ ಪಂದ್ಯದುದ್ದಕ್ಕೂ ಕಂಡು ಬಂತು. ಒಟ್ಟು 39 ಸ್ವಯಂ ತಪ್ಪುಗಳ ಪೈಕಿ 20 ಬ್ಯಾಕ್‌ಹ್ಯಾಂಡ್ ಹೊಡೆತಗಳಲ್ಲಿ ಆದವು. ಮೂರನೇ ಸೆಟ್‌ನಲ್ಲಿ ಮಾತ್ರ ಅವರ ಆಟದ ವೈಭವ ಎದ್ದು ಕಂಡಿತು.

ಸತತ ಎರಡನೇ ಫೈನಲ್: ವಿಶ್ವ ಕ್ರಮಾಂಕದಲ್ಲಿ ಎರಡನೇ ಸ್ಥಾನದಲ್ಲಿರುವ ಮೆಡ್ವೆಡೆವ್ ನಾಲ್ಕನೇ ಶ್ರೇಯಾಂಕಿತ ಸಿಟ್ಸಿಪಾಸ್ ವಿರುದ್ಧ ಗೆದ್ದು ಸತತ ಎರಡನೇ ಬಾರಿ ಆಸ್ಟ್ರೇಲಿಯನ್ ಓಪನ್‌ನ ಫೈನಲ್ ಪ್ರವೇಶಿಸಿದರು. ಕಳೆದ ಸೆಪ್ಟೆಂಬರ್‌ನಲ್ಲಿ ಅಮೆರಿಕ ಓಪನ್ ಫೈನಲ್‌ನಲ್ಲಿ ನೊವಾಕ್ ಜೊಕೊವಿಚ್ ಅವರನ್ನು ಮಣಿಸಿದ್ದರು. ಆ ಮೂಲಕ ಅತಿಹೆಚ್ಚು ಗ್ರ್ಯಾನ್ ಸ್ಲಾಂ ಪ್ರಶಸ್ತಿ ಗೆಲ್ಲುವ ಜೊಕೊವಿಚ್ ಕನಸು ಭಗ್ನಗೊಳಿಸಿದ್ದರು. ಈಗ ಸತತ ಎರಡನೇ ಗ್ರ್ಯಾನ್ ಸ್ಲಾಂ ಪ್ರಶಸ್ತಿ ಮೇಲೆ ಕಣ್ಣಿಟ್ಟಿದ್ದಾರೆ.

2ನೇ ಸೆಟ್‌ನ ನಡುವೆ ತಾಳ್ಮೆ ಕಳೆದುಕೊಂಡ ಮೆಡ್ವೆಡೆವ್ ಎದುರಾಳಿಯ ತಂದೆ ಸ್ಟ್ಯಾಂಡ್‌ನಲ್ಲಿ ಕುಳಿತು ‘ಕೋಚಿಂಗ್’ ಮಾಡುತ್ತಿದ್ದಾರೆ ಎಂದು ಚೇರ್ ಅಂಪೈರ್‌ಗೆ ಆರೋಪಿಸಿದರು.

ರಫೆಲ್ ನಡಾಲ್ ಅವರ ಆಟದ ಸೊಬಗು –ರಾಯಿಟರ್ಸ್ ಚಿತ್ರ

ಬಾರ್ಟಿ–ಕಾಲಿನ್ಸ್ ‘ಮೊದಲ’ ಪ್ರಶಸ್ತಿಗೆ ಪೈಪೋಟಿ

ವಿವಿಧ ಕ್ರೀಡೆಗಳಲ್ಲಿ ಪಳಗಿರುವ ಆ್ಯಶ್ಲಿ ಬಾರ್ಟಿ ಅವರು ಆಸ್ಟ್ರೇಲಿಯನ್ ಓಪನ್ ಟೂರ್ನಿಯಲ್ಲಿ ಮೊದಲ ಬಾರಿ ಪ್ರಶಸ್ತಿ ಗೆಲ್ಲುವ ಹುಮ್ಮಸ್ಸಿನಲ್ಲಿದ್ದರೆ ಡ್ಯಾನಿಯಲ್ ಕಾಲಿನ್ಸ್ ಮೊದಲ ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಗಳಿಸುವ ಹುಮ್ಮಸ್ಸಿನಲ್ಲಿದ್ದಾರೆ. ವೃತ್ತಿಪರ ಕ್ರಿಕೆಟ್ ಆಟಗಾರ್ತಿಯಾಗಿರುವ ಬಾರ್ಟಿ ಗಾಲ್ಫ್ ಟೂರ್ನಿಯೊಂದರಲ್ಲಿ ಪ್ರಶಸ್ತಿ ಗೆದ್ದುಕೊಂಡಿದ್ದಾರೆ. ಎರಡು ಗ್ರ್ಯಾನ್‌ಸ್ಲಾಂ ಪ್ರಶಸ್ತಿಗಳೂ ಅವರ ಮುಡಿಯೇರಿವೆ. ಕಾಲಿನ್ಸ್ ವಿವಿಧ ಟೂರ್ನಿಗಳಲ್ಲಿ ಒಟ್ಟು ಎರಡು ಪ್ರಶಸ್ತಿಗಳನ್ನು ಗೆದ್ದುಕೊಂಡಿದ್ದಾರೆ. ಮಹತ್ವದ ಟೂರ್ನಿಯೊಂದರ ಫೈನಲ್ ಪ್ರವೇಶಿಸಿ ಮೆಚ್ಚುಗೆ ಗಳಿಸಿದ್ದಾರೆ.

ಕಾಲಿನ್ಸ್
ವಯಸ್ಸು 28
ಅಮೆರಿಕ

ಮುಖಾಮುಖಿ
4 ಪಂದ್ಯ | 3 ಬಾರ್ಟಿ ಜಯ | 1 ಕಾಲಿನ್ಸ್ ಜಯ

ರ್‍ಯಾಂಕಿಂಗ್
30 | 1

ಶ್ರೇಯಾಂಕ
27 | 1

ಆ್ಯಶ್ಲಿ ಬಾರ್ಟಿ
ವಯಸ್ಸು 25
ಆಸ್ಟ್ರೇಲಿಯಾ

ಮಹಿಳೆಯರ ಫೈನಲ್
ಆರಂಭ: ಮಧ್ಯಾಹ್ನ 2.00 (ಭಾರತೀಯ ಕಾಲಮಾನ)
ನೇರ ಪ್ರಸಾರ: ಸೋನಿ ನೆಟ್‌ವರ್ಕ್

ಕಾಲಿನ್ಸ್: ಪ್ರಶಸ್ತಿಗಳು 2
ಗ್ರ್ಯಾನ್‌ಸ್ಲಾಂ ಪ್ರಶಸ್ತಿ 0
ಆಸ್ಟ್ರೇಲಿಯನ್ ಓಪನ್: ಫೈನಲ್ (2022)

ಬಾರ್ಟಿ: ಪ್ರಶಸ್ತಿಗಳು 14
ಗ್ರ್ಯಾನ್‌ಸ್ಲಾಂ 2 (ಫ್ರೆಂಚ್ ಓಪನ್: 2019; ವಿಂಬಲ್ಡನ್: 2021)
ಆಸ್ಟ್ರೇಲಿಯನ್ ಓಪನ್: ಫೈನಲ್ (2022)

19 ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್ ಟೂರ್ನಿ: ಕ್ವಾರ್ಟರ್‌ಫೈನಲ್ ಇಂದು

ಭಾರತ ತಂಡಕ್ಕೆ ಬಾಂಗ್ಲಾದೇಶ ಸವಾಲು

ಒಸ್ಬಾರ್ನ್, ಆ್ಯಂಟಿಗಾ (ಪಿಟಿಐ): ಕೋವಿಡ್‌ನಿಂದ ಚೇತರಿಸಿಕೊಂಡು ಪ್ರಮುಖ ಆಟಗಾರರು ಮರಳಿರುವ ಸಂತಸದಲ್ಲಿರುವ ಭಾರತ ತಂಡವು ಶನಿವಾರ ನಡೆಯಲಿರುವ 19 ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಬಾಂಗ್ಲಾದೇಶವನ್ನು ಎದುರಿಸಲಿದೆ.

ಗುಂಪು ಹಂತದಲ್ಲಿ ಐರ್ಲೆಂಡ್ ಎದುರಿನ ಪಂದ್ಯದ ಸಂದರ್ಭಧಲ್ಲಿ ಭಾರತ ತಂಡದ ನಾಯಕ ಯಶ್ ಧುಳ್ ಸೇರಿದಂತೆ ಆರು ಆಟಗಾರರು ಕೊರೊನಾ ಸೋಂಕಿಗೊಳಗಾಗಿದ್ದರು. ಅವರನ್ನು ಪ್ರತ್ಯೇಕವಾಸದಲ್ಲಿರಿಸಲಾಗಿತ್ತು. ಅವರ ಅನುಪಸ್ಥಿತಿಯಲ್ಲಿಯೂ ತಂಡವು ಲೀಗ್ ಪಂದ್ಯಗಳಲ್ಲಿ ಮಿಂಚಿ, ನಾಕೌಟ್ ಹಂತಕ್ಕೆ ಪ್ರವೇಶಿಸಿತ್ತು.

‘ಎಲ್ಲ ಆಟಗಾರರೂ ಚೇತರಿಸಿಕೊಂಡಿದ್ದಾರೆ. ಈ ಪಂದ್ಯದಲ್ಲಿ ಆಡಲು ಫಿಟ್ ಆಗಿರುವ ವಿಶ್ವಾಸವಿದೆ’ ಎಂದು ಬಿಸಿಸಿಐ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನಾಲ್ಕು ಬಾರಿಯ ಚಾಂಪಿಯನ್ ಭಾರತ ತಂಡವು ಇದೀಗ ಮತ್ತೊಮ್ಮೆ ಪ್ರಶಸ್ತಿ ಗೆಲುವಿನತ್ತ ಚಿತ್ತ ನೆಟ್ಟಿದೆ. ಆರಂಭಿಕ ಬ್ಯಾಟ್ಸ್‌ಮನ್ ಅಂಗಕ್ರಿಷ್ ರಘುವಂಶಿ ಮತ್ತು ಆಲ್‌ರೌಂಡರ್ಸ್ ರಾಜ್ ಬಾವಾ ಅಮೋಘ ಲಯದಲ್ಲಿದ್ದಾರೆ. ಎಡಗೈ ಸ್ಪಿನ್ನರ್ ವಿಕ್ಕಿ ಓಸ್ವಾಲ್ ಟೂರ್ನಿಯಲ್ಲಿ ಏಳು ವಿಕೆಟ್‌ಗಳನ್ನು ಗಳಿಸಿದ್ದಾರೆ.

ಹಾಲಿ ಚಾಂಪಿಯನ್ ಬಾಂಗ್ಲಾದೇಶ ತಂಡವು ನಾಕೌಟ್ ಹಾದಿ ಸುಗಮವಾಗಿರಲಿಲ್ಲ. ಇಂಗ್ಲೆಂಡ್ ವಿರುದ್ಧ ಭಾರಿ ಸೋಲನುಭವಿಸಿತ್ತು. ಆದರೆ, ಕೆನಡಾ ಮತ್ತು ಯುಎಇ ತಂಡಗಳ ವಿರುದ್ಧ ಜಯಿಸಿ ಎಂಟರ ಘಟ್ಟ ಪ್ರವೇಶಿಸಿತ್ತು.

ನಿಶಾಂತ್‌ಗೆ ಕೋವಿಡ್: ತಂಡದ ಆಟಗಾರ ನಿಶಾಂತ್ ಸಿಂಧು ಅವರಿಗೆ ಕೋವಿಡ್ ಇರುವುದು ಖಚಿತವಾಗಿದೆ. ಅವರ ಬದಲಿಗೆ ಅನೀಶ್ವರ್ ಗೌತಮ್ ಕಣಕ್ಕಿಳಿಯಲಿದ್ದಾರೆ.

ಪಂದ್ಯ ಆರಂಭ: ಸಂಜೆ 6.30
ನೇರಪ್ರಸಾರ: ಸ್ಟಾರ್ ನೆಟ್‌ವರ್ಕ್

ಯಶ್ ಧುಳ್

ಸೆಮಿಫೈನಲ್‌ಗೆ ಅಫ್ಗಾನಿಸ್ತಾನ

ಆ್ಯಂಟಿಗಾ: ಅಫ್ಗಾನಿಸ್ತಾನದ ಯುವ ಕ್ರಿಕೆಟಿಗರು ಗುರುವಾರ ಇತಿಹಾಸ ಬರೆದರು.

19 ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ರೋಚಕ ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಅಫ್ಗಾನಿಸ್ತಾನ 4 ರನ್‌ಗಳಿಂದ ಶ್ರೀಲಂಕಾ ವಿರುದ್ಧ ಜಯಿಸಿತು.ಮೊದಲು ಬ್ಯಾಟಿಂಗ್ ಮಾಡಿದ ಅಫ್ಗನ್ ತಂಡವು 47.1 ಓವರ್‌ಗಳಲ್ಲಿ 134 ರನ್ ಗಳಿಸಿ ಆಲೌಟ್ ಆಯಿತು. ಈ ಅಲ್ಪಮೊತ್ತದ ಗುರಿಯನ್ನು ಬೆನ್ನಟ್ಟಿದ ಶ್ರೀಲಂಕಾ ತಂಡವನ್ನುಅಫ್ಗನ್ ಬೌಲರ್‌ಗಳು ಕಾಡಿದರು. 46 ಓವರ್‌ಗಳಲ್ಲಿ 130 ರನ್‌ಗಳಿಗೆ ಆಲೌಟ್ ಆಯಿತು. 46ನೇ ಓವರ್‌ನ ಕೊನೆಯ ಎಸೆತದಲ್ಲಿ ಅಫ್ಗನ್ ತಂಡದ ನವೀದ್ ಜದ್ರಾನ್ ಮತ್ತು ನೇಂಗೆಲಿಯಾ ಖರೋಟೆ ಅವರ ಚುರುಕಿನ ಥ್ರೋನಿಂದಾಗಿ ಟ್ರೆವಿನ್ ಮ್ಯಾಥ್ಯೂ (4 ರನ್) ರನ್‌ಔಟ್ ಆದರು. ಅಫ್ಗನ್ ತಂಡದಲ್ಲಿ ಗೆಲುವಿನ ಸಂಭ್ರಮ ಗರಿಗೆದರಿತು.

ಸಂಕ್ಷಿಪ್ತ ಸ್ಕೋರು: ಅಫ್ಗಾನಿಸ್ತಾನ: 47.1 ಓವರ್‌ಗಳಲ್ಲಿ 134 (ಅಲ್ಲಾ ನೂರ್ 25, ಅಬ್ದುಲ್ ಹದಿ 37, ನೂರ್ ಅಹಮದ್ 30; ವಿನುಜ ರಣಪೂಲ್ 10ಕ್ಕೆ5, ದನುತ್ ವೆಲಾಲ್ಗೆ 36ಕ್ಕೆ3) ಶ್ರೀಲಂಕಾ: 46 ಓವರ್‌ಗಳಲ್ಲಿ 130 (ದುನಿತ್ ವೆಲಾಲ್ಗೆ 34, ರವೀನ್ ಡಿಸಿಲ್ವಾ 21, ಬಿಲಾಲ್ ಸಮಿ 33ಕ್ಕೆ2) ಫಲಿತಾಂಶ: ಅಫ್ಗಾನಿಸ್ತಾನ ತಂಡಕ್ಕೆ 4 ರನ್‌ಗಳ ಜಯ.

ನಾಲ್ಕರ ಘಟ್ಟಕ್ಕೆ ಕಿರಣ್ ಲಗ್ಗೆ

ಒಡಿಶಾ ಓಪನ್ ಬ್ಯಾಡ್ಮಿಂಟನ್: ಸೆಮಿಗೆ ಮಾಳವಿಕಾ

ಕಟಕ್ (ಪಿಟಿಐ): ಅಮೋಘ ಆಟವಾಡಿದ ಭಾರತದ ಕಿರಣ್ ಜಾರ್ಜ್ ಅವರು ಮೂರನೇ ಶ್ರೇಯಾಂಕದ ಶುಭಂಕರ್ ಡೇ ಅವರಿಗೆ ಆಘಾತ ನೀಡಿ ಒಡಿಶಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್‌ಗೆ ಲಗ್ಗೆಯಿಟ್ಟರು. ಉತ್ತಮ ಲಯದಲ್ಲಿರುವ ಮಾಳವಿಕಾ ಬಂಸೋಡ್ ಕೂಡ ನಾಲ್ಕರ ಘಟ್ಟ ತಲುಪಿದರು.

ಶ್ರೇಯಾಂಕರಹಿತ ಆಟಗಾರ ಕಿರಣ್, ಪುರುಷರ ಸಿಂಗಲ್ಸ್ ವಿಭಾಗದ ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ 21–16, 10–21, 21–19ರಿಂದ ಸ್ವದೇಶದ ಆಟಗಾರ ಶುಭಂಕರ್ ಸವಾಲು ಮೀರಿದರು.

21 ವರ್ಷದ ಕಿರಣ್ ಅವರು ನಾಲ್ಕರ ಘಟ್ಟದಲ್ಲಿ, ಅನ್ಸಲ್ ಯಾದವ್ ಮತ್ತು ತರುಣ್ ಮನ್ನೆಪಲ್ಲಿ ನಡುವಣ ಕ್ವಾರ್ಟರ್‌ಫೈನಲ್ ಪಂದ್ಯದ ವಿಜೇತರನ್ನು ಎದುರಿಸಲಿದ್ದಾರೆ.

ಮಹಿಳಾ ಸಿಂಗಲ್ಸ್ ವಿಭಾಗದ 58 ನಿಮಿಷಗಳ ಮ್ಯಾರಥಾನ್ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಮಾಳವಿಕಾ 21-13, 16-21, 21-17ರಿಂದ ಭಾರತದವರೇ ಆದ ತಾನಿಯಾ ಹೇಮಂತ್ ಅವರಿಗೆ ಸೋಲುಣಿಸಿದರು. ಮಾಳವಿಕಾ ಅವರಿಗೆ ಸೆಮಿಫೈನಲ್‌ನಲ್ಲಿ ಉನ್ನತಿ ಹೂಡಾ ಸವಾಲು ಎದುರಾಗಿದೆ. ಇನ್ನೊಂದು ಪಂದ್ಯದಲ್ಲಿ ಉನ್ನತಿ 21-10, 21-15ರಿಮದ ಸಮಿಯಾ ಇಮದ್ ಫಾರೂಕಿ ಎದುರು ಗೆದ್ದರು.

ಐದನೇ ಶ್ರೇಯಾಂಕದ ಅಸ್ಮಿತಾ ಚಲಿಹಾ 21-17, 21-15ರಿಂದ ರುಚಾ ಸಾವಂತ್ ಅವರನ್ನು ಪರಾಭವಗೊಳಿಸಿದರು. ನಾಲ್ಕರ ಘಟ್ಟದ ಪಂದ್ಯದಲ್ಲಿ ಅವರು ಭಾರತದವರೇ ಆದ ಸ್ಮಿತ್ ತೋಶ್ನಿವಾಲ್ ಅವರನ್ನು ಎದುರಿಸುವರು. ಎಂಟರಘಟ್ಟದ ಇನ್ನೊಂದು ಪಂದ್ಯದಲ್ಲಿ ಸ್ಮಿತ್ 8-21, 21-9, 21-14ರಿಂದ ಅಮೆರಿಕದ ಇಶಿಕಾ ಚೌಧರಿ ಅವರನ್ನು ಸೋಲಿಸಿದರು.

ಪುರುಷರ ಸಿಂಗಲ್ಸ್ ವಿಭಾಗದ ಇನ್ನೊಂದು ಜಿದ್ದಾಜಿದ್ದಿನ ಎಂಟರಘಟ್ಟದ ಹೋರಾಟದಲ್ಲಿ ಮಿಥುನ್ ಮಂಜುನಾಥ್ 21-13, 14-21, 8-21ರಿಂದ ಪ್ರಿಯಾಂಶು ರಾಜಾವತ್ ಎದುರು ಎಡವಿದರು. ಮಿಶ್ರ ಡಬಲ್ಸ್‌ನಲ್ಲಿ ಭಾರತದ ಎಂ.ಆರ್.ಅರ್ಜುನ್–ತ್ರೀಶಾ ಜೋಲಿ, ಬಾಲಕೇಸರಿ ಯಾದವ್– ಶ್ವೇತಪರ್ಣ ಪಾಂಡಾ, ಮೌರ್ಯನ್ ಕಥಿವರನ್–ಕುಹಾಮ್ ಬಾಲಶ್ರೀ ನಾಲ್ಕರ ಘಟ್ಟಕ್ಕೆ ಕಾಲಿಟ್ಟರು.

ಕಿರಣ್ ಜಾರ್ಜ್– ಪ್ರಜಾವಾಣಿ ಸಂಗ್ರಹ ಚಿತ್ರ

ಟೇಲರ್‌ಗೆ ನಿಷೇಧ

ದುಬೈ (ಪಿಟಿಐ): ಸ್ಪಾಟ್ ಫಿಕ್ಸಿಂಗ್‌ಗಾಗಿ ಬುಕ್ಕಿಗಳಿಂದ ಹಣ ಪಡೆದ ಮತ್ತು ಆ ವಿಷಯವನ್ನು ಬಹಿರಂಗಪಡಿಸಲು ತಡಮಾಡಿದ ಜಿಂಬಾಬ್ವೆ ಕ್ರಿಕೆಟ್ ತಂಡದ ಮಾಜಿ ನಾಯಕ ಬ್ರೆಂಡನ್ ಟೇಲರ್ ಮೇಲೆ ಮೂರೂವರೆ ವರ್ಷ ನಿಷೇಧ ಹೇರಲು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ನಿರ್ಧರಿಸಿದೆ.

2019ರಲ್ಲಿ ಭಾರತದ ಉದ್ಯಮಿಯೊಬ್ಬರು ಸ್ಪಾಟ್ ಫಿಕ್ಸಿಂಗ್ ಆಮಿಷವೊಡ್ಡಿದ್ದರು. ಇದಕ್ಕಾಗಿ ಕೊಕೇನ್ ಮತ್ತು ಹಣ ನೀಡಿದ್ದರು. ಅದರ ನಂತರ ತಮ್ಮ ವೃತ್ತಿಜೀವನ ಸಂಪೂರ್ಣ ಹದಗೆಟ್ಟಿತು ಎಂದು ಟೇಲರ್ ಕಳೆದ ವಾರ ಹೇಳಿದ್ದರು. ಕೊಕೇನ್ ಸೇವನೆಗೆ ಸಂಬಂಧಿಸಿ ಅವರನ್ನು ಒಂದು ತಿಂಗಳು ಅಮಾನತು ಕೂಡ ಮಾಡಲಾಗಿದೆ ಎಂದು ಐಸಿಸಿ ತಿಳಿಸಿದೆ. ‘ಸೌಹಾರ್ದ ಮಾತುಕತೆಗೆ ಕರೆದ ಭಾರತದ ಉದ್ಯಮಿ ಕೊಕೇನ್ ನೀಡಿ ಸ್ಪಾಟ್ ಫಿಕ್ಸಿಂಗ್‌ಗೆ ಸಹಕರಿಸಲು ಬೆದರಿಕೆ ಹಾಕಿದ್ದರು. ಈ ವಿಷಯವನ್ನು ಬಹಿರಂಗಗೊಳಿಸದ್ದಕ್ಕೆ ನಾನು ನಿಷೇಧ ಶಿಕ್ಷೆಗೆ ಒಳಗಾಗಬೇಕಾಯಿತು’ ಎಂದು ಟೇಲರ್ ಹೇಳಿದ್ದರು.

ಟೇಲರ್

ಕಬಡ್ಡಿ: ಪೈರೇಟ್ಸ್ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರಂಭದಿಂದಲೇ ಭರ್ಜರಿ ಆಟವಾಡಿದ ಪಟ್ನಾ ಪೈರೇಟ್ಸ್ ತಂಡ ಪ್ರೊ ಕಬಡ್ಡಿ ಲೀಗ್‌ನಲ್ಲಿ ಶುಕ್ರವಾರ ಭರ್ಜರಿ ಗೆಲುವು ಸಾಧಿಸಿತು. ವೈಟ್‌ಫೀಲ್ಡ್‌ನ ಶೆರಟಾನ್ ಗ್ರ್ಯಾಂಡ್ ಹೋಟೆಲ್‌ನ ಆವರಣದಲ್ಲಿ ನಡೆಯುತ್ತಿರುವ ಟೂರ್ನಿಯ ಪಂದ್ಯದಲ್ಲಿ ಪೈರೇಟ್ಸ್ 52–24ರಲ್ಲಿ ತಮಿಳ್ ತಲೈವಾಸ್ ವಿರುದ್ಧ ಜಯಭೇರಿ ಮೊಳಗಿಸಿತು.

ಇದರೊಂದಿಗೆ 12 ಪಂದ್ಯಗಳಲ್ಲಿ ಎಂಟು ಜಯದೊಂದಿಗೆ ಪಟ್ನಾ ಎರಡನೇ ಸ್ಥಾನಕ್ಕೇರಿತು. ಬೆಂಗಳೂರು ಬುಲ್ಸ್ ಅಗ್ರಸ್ಥಾನದಲ್ಲೇ ಉಳಿದಿದೆ.

ಮೊದಲಾರ್ಧದಲ್ಲೇ ಒಂಬತ್ತು ಪಾಯಿಂಟ್‌ಗಳ (21–12) ಮುನ್ನಡೆ ಸಾಧಿಸಿದ ತಂಡ ದ್ವಿತೀಯಾರ್ಧದಲ್ಲೂ ಪಾಯಿಂಟ್‌ಗಳನ್ನು ಕಲೆ ಹಾಕುತ್ತ ಸಾಗಿತು. ಪ್ರಶಾಂತ್ ಕುಮಾರ್ ರೈ ಮತ್ತು ಮೋನು ಗೋಯತ್ ರೇಡಿಂಗ್‌ನಲ್ಲಿ ಮಿಂಚಿದರು. ಅವರಿಬ್ಬರಿಗೆ ಸಚಿನ್ ಉತ್ತಮ ಸಹಕಾರ ನೀಡಿದರು. ನೀರಜ್ ಕುಮಾರ್ ಮತ್ತು ಸುನಿಲ್ ರಕ್ಷಣಾ ವಿಭಾಗದ ಚುಕ್ಕಾಣಿ ಹಿಡಿದರು. ಆಲ್‌ರೌಂಡರ್ ಮೊಹಮ್ಮದ್ರೇಜಾ ಚಿಯಾನೆ ಆರು ಪಾಯಿಂಟ್ ಕಲೆ ಹಾಕಿದರು. ಮೋನು ಗೋಯತ್ ಆರು ಟಚ್ ಪಾಯಿಂಟ್ ಮತ್ತು ಎರಡು ಟ್ಯಾಕ್ಲಿಂಗ್ ಪಾಯಿಂಟ್ ಒಳಗೊಂಡ ಒಳಗೊಂಡ ಒಂಬತ್ತು ಪಾಯಿಂಟ್ ಕಲೆ ಹಾಕಿದರು. ಪ್ರಶಾಂತ್ ರೈ ಏಳು ಟಚ್ ಪಾಯಿಂಟ್ ಸೇರಿದಂತೆ ಎಂಟು ಪಾಯಿಂಟ್ ತಂದುಕೊಟ್ಟರು. ಸಚಿನ್, ಮೊಹಮ್ಮದ್ರೇಜಾ ಮತ್ತು ನೀರಜ್ ತಲಾ ಆರು ಪಾಯಿಂಟ್ ಗಳಿಸಿದರು. ಬಲಬದಿಯ ಕಾರ್ನರ್‌ನಲ್ಲಿ ಅಮೋಘ ಆಟವಾಡಿದ ಸುನಿಲ್ ಐದು ಪಾಯಿಂಟ್ ಗಳಿಸಿದರು. ತಲೈವಾಸ್ ಪರ ಸಾಗರ್ ಏಳು ಟ್ಯಾಕ್ಲಿಂಗ್ ಪಾಯಿಂಟ್ ಸೇರಿದಂತೆ ಒಟ್ಟು ಎಂಟು ಪಾಯಿಂಟ್ ಗಳಿಸಿದರು. ಅಜಿಂಕ್ಯ ಪವಾರ್ ಐದು ಮತ್ತು ಮಂಜೀತ್ 4 ಪಾಯಿಂಟ್ ಗಳಿ ಸಿದರು.

ಶನಿವಾರ ಮೊದಲ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ಮತ್ತು ದಬಂಗ್ ಡೆಲ್ಲಿ, ಎರಡನೇ ಪಂದ್ಯದಲ್ಲಿ ತೆಲುಗು ಟೈಟನ್ಸ್ ಮತ್ತು ಬೆಂಗಾಲ್ ವಾರಿಯರ್ಸ್ ಸೆಣಸಲಿವೆ.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ಬೆಂಗಳೂರು ಬುಲ್ಸ್	15	8	6	1	46
ಪಟ್ನಾ ಪೈರೇಟ್ಸ್	12	8	3	1	45
ದಬಂಗ್ ಡೆಲ್ಲಿ	13	7	4	2	43
ಹರಿಯಾಣ ಸ್ಟೀಲರ್ಸ್	14	6	5	3	42
ಯು ಮುಂಬಾ	13	5	3	5	41
ಬೆಂಗಾಲ್ ವಾರಿಯರ್ಸ್	14	7	6	1	41
ಯುಪಿ ಯೋಧಾ	14	5	6	3	40
ಪುಣೇರಿ ಪಲ್ಟನ್	14	7	7	-	37
ಜೈಪುರ ಪಿಂಕ್ ಪ್ಯಾಂಥರ್ಸ್	13	5	6	2	35
ತಮಿಳ್ ತಲೈವಾಸ್	13	3	4	6	34
ಗುಜರಾತ್ ಜೈಂಟ್ಸ್	11	3	5	3	28
ತೆಲುಗು ಟೈಟನ್ಸ್	14	1	10	3	22

(ಶುಕ್ರವಾರದ ಪಂದ್ಯದ ಅಂತ್ಯಕ್ಕೆ)

ಪ್ರಶಸ್ತಿಯೊಂದಿಗೆ ಅರ್ಜಾನ್ ಖೊರಾಕಿವಾಲ ಮತ್ತು ಕೌಶಿಕ್ ರಾಜೇಶ್

ಎಐಟಿಎ ಟೆನಿಸ್ ಟೂರ್ನಿ: ಕೌಶಿಕ್, ಅರ್ಜಾನ್‌ಗೆ ಪ್ರಶಸ್ತಿ

ಬೆಂಗಳೂರು: ಉತ್ತಮ ಆಟವಾಡಿದ ಕೌಶಿಕ್ ರಾಜೇಶ್ ಮತ್ತು ಅರ್ಜಾನ್ ಖೊರಾಕಿವಾಲ ಅವರು ಎಐಟಿಎ ಸಿಎಸ್7 14 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಮುರುಗನ್ ಟೆನಿಸ್ ಅಕಾಡೆಮಿಯಲ್ಲಿ ನಡೆದ ಟೂರ್ನಿಯ ಬಾಲಕರ ವಿಭಾಗದಲ್ಲಿ ಕೌಶಿಕ್ 4-6, 6-4, 6-4ರಿಂದ ಶ್ರೀಕರ್ ಧೋನಿ ಸವಾಲು ಮೀರಿದರು. ಬಾಲಕಿಯರ ವಿಭಾಗದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಅರ್ಜಾನ್ 6-3, 6-3ರಿಂದ ದಿಶಾ ಕುಮಾರ್ ಅವರನ್ನು ಸೋಲಿಸಿದರು.

ಜೆಮ್ಷೆಡ್‌ಪುರಕ್ಕೆ ಮಣಿದ ಗೋವಾ

ಬ್ಯಾಂಬೊಲಿಮ್: ಡ್ಯಾನಿಯಲ್ ಚುಕುವು ಗಳಿಸಿದ ಏಕೈಕ ಗೋಲಿನ ಬಲದಿಂದ ಜೆಮ್ಷೆಡ್‌ಪುರ ಎಫ್‌ಸಿ ತಂಡ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಶುಕ್ರವಾರ ಎಫ್‌ಸಿ ಗೋವಾ ಎದುರು 1–0ರಿಂದ ಜಯ ಗಳಿಸಿತು.

ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ 49ನೇ ನಿಮಿಷದಲ್ಲಿ ಚುಕುವು ಚೆಂಡನ್ನು ಗುರಿ ಮುಟ್ಟಿಸಿದರು. ಜೆಮ್ಷೆಡ್‌ಪುರ ತಂಡದ ಪರ ಮೊದಲ ಪಂದ್ಯ ಆಡಿದ ಚುಕುವು ಆಕ್ರಮಣಕಾರಿ ಆಟದ ಮೂಲಕ ಆರಂಭದಿಂದಲೇ ಗಮನ ಸೆಳೆದಿದ್ದರು. ರಾಲ್‌ಡಿನ್‌ಲ್ಯಾನ್ ರೆಂಟ್ಲಿ ನೀಡಿದ ಕ್ರಾಸ್‌ನಲ್ಲಿ ಚೆಂಡನ್ನು ನಿಯಂತ್ರಿಸಿದ ಅವರ ಮಿಂಚಿನ ವೇಗದಲ್ಲಿ ಗೋಲುಪೆಟ್ಟಿಗೆಯೊಳಗೆ ಸೇರಿಸಿದರು.

ಎಟಿಕೆಎಂಬಿ–ಈಸ್ಟ್ ಬೆಂಗಾಲ್ ಮುಖಾಮುಖಿ: ಮಡಗಾಂವ್‌ನಲ್ಲಿ ಶನಿವಾರ ನಡೆಯಲಿರುವ ಪಂದ್ಯದಲ್ಲಿ ಎಟಿಕೆ ಮೋಹನ್ ಬಾಗನ್ (ಎಟಿಕೆಎಂಬಿ) ಮತ್ತು ಎಸ್‌ಸಿ ಈಸ್ಟ್ ಬೆಂಗಾಲ್ ಮುಖಾ ಮುಖಿಯಾಗಲಿವೆ.

ಒಂದು ಪಂದ್ಯದ ಅಮಾನತಿಗೆ ಒಳಗಾಗಿದ್ದ ಹ್ಯುಗೊ ಬೌಮೊಸ್ ಈ ಪಂದ್ಯದಲ್ಲಿ ಕಣಕ್ಕಿಳಿಯಲಿದ್ದು, ಎಟಿಕೆಎಂಬಿಯ ಬಲ ವೃದ್ಧಿಸಲಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಅಜರುದ್ದೀನ್ ದೂರು

ಹೈದರಾಬಾದ್ (ಪಿಟಿಐ): ಹೈದರಾಬಾದ್ ಕ್ರಿಕೆಟ್ ಸಂಸ್ಥೆಯಲ್ಲಿ ಅಮಾನತುಗೊಂಡ ಮೂವರು ಸದಸ್ಯರ ವಿರುದ್ಧ ಸಂಸ್ಥೆ ಅಧ್ಯಕ್ಷ ಮೊಹಮ್ಮದ್ ಅಜರುದ್ದೀನ್ ಅವರು ಪೊಲೀಸರಿಗೆ ದೂರು ನೀಡಿದ್ದಾರೆ.

ಈಚೆಗೆ ಅಮಾನತುಗೊಂಡ ಈ ಮೂವರು ಸದಸ್ಯರು ಸಂಸ್ಥೆಯ ಕಚೇರಿ ಸಿಬ್ಬಂದಿಗೆ ಬೆದರಿಕೆ ಒಡ್ಡಿದ್ದರೆನ್ನಲಾಗಿದೆ. ಅದಕ್ಕಾಗಿ ಅಜರುದ್ದೀನ್ ಬೇಗಂಪೇಟ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.